ಸಂವಾದ

ನವೆಂಬರ್ 2003 ರೂ. 20/- ಮಾಸ ಪತ್ರಿಕೆ

- ಮಾರಾಟದ ಸರಕಾಗಿರುವ ಮಾರ್ಟಿನ್, ಮೋಹನ್‌ದಾಸ್, ಮಂಡೇಲಾ



- ಧರ್ಮ ಎಂದರೆ ಕೋಮುವಾದವೇ?
- ಮೀಸಲಾತಿಯಲ್ಲಿ ಬಡ ಬ್ರಾಹ್ಮಣರ ಪ್ರಶ್ನೆ

ಶಾಸ್ತ್ರಗಳ ಗೂಂಡಾಗಿರಿ

ಸಂವಾದ

ಮಾಸ ಪತ್ರಿಕೆ

ಸಂಪುಟ 2 ಸಂಚಿಕೆ 1

ನವೆಂಬರ್ 2003

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮ

ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ಕೆ.ಪಿ. ದೊಡ್ಡಿ ಶಿವರಾಂ

ವಿಳಾಸ : ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ,

ವಿಶ್ವನೀಡಂ ಅಂಚೆ

ಬೆಂಗಳೂರು - 560 091

ದೂರವಾಣಿ : 3287943 / 3281667

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANANAGAR, MAGADI ROAD

VISHWANEEDAM POST

BANGALORE - 560 091

PHONE : 3287932, 3281667

EDITOR :

INDUDHARA HONNAPURA

ಒಳ ಪುಟಗಳಲ್ಲಿ

- ಪತ್ರಗಳು 3
- ಮೇರಾ ಭಾರತ್ ಮಹಾನ್ 4
- ಅಂತರಂಗ 5
- ಸ್ವಾತಂತ್ರ್ಯ ಯಾರಿಗೆ ಸಿಕ್ಕಿದೆ? 6
  - ಜಿ. ಪಾಂಡುನಾಯಕ್
- ಮೀಸಲಾತಿಯಲ್ಲಿ ಬಡ ಬ್ರಾಹ್ಮಣರ ಪ್ರಶ್ನೆ 8
  - ಡಾ॥ ಅಂಬಾರಾವ್ ಉಪಳಾಂವಕರ

- ದಲಿತ್ ಡೈರಿ : ಭೂಸುಧಾರಣೆ ಕಾಣೆಯಾಗುತ್ತಿರುವುದೇಕೆ? 10
  - ಚಂದ್ರಭಾನ್ ಪ್ರಸಾದ್
- ಸರ್ಕಾರಗಳ ಕೋಮು ರಾಜಕಾರಣ 14
  - ವೈ. ಮರಿಸ್ವಾಮಿ
- ಮಾರಾಟದ ಸರಕಾಗಿರುವ ಮಾರ್ಟಿನ್, ಮೋಹನ್‌ದಾಸ್, ಮಂಡೇಲಾ 16
  - ಅರುಂಧತಿ ರಾಯ್
- ದಲಿತವಾದ-ಎಡವಾದಗಳ ತಾತ್ವಿಕತೆ 20
  - ಎಸ್.ಎಸ್. ಹಿರೇಮಠ



- ಅಂಬೇಡ್ಕರ್ ಚಿಂತನೆ ನೆಲೆಯಲ್ಲಿ ಧರ್ಮ, ಶಿಕ್ಷಣ, ಮೀಸಲಾತಿ ಇತ್ಯಾದಿ 22
  - ಬಿ.ವಿ. ವೀರಭದ್ರಪ್ಪ
- ಶಾಸ್ತ್ರಗಳ ಗೂಂಡಾಗಿರಿ ಮತ್ತು ಶ್ರಮಿಕರ ವಿಭಜನೆ 30
  - ಶ್ರೀಶ ಉಡುಪ
- ಮುಸ್ಲಿಂ ದರ್ಬಾರಿನಲ್ಲಿ ಲಾಭ ಪಡೆದವರಾರು? 36
  - ಡಾ॥ ಕೆ. ಜಮನಾದಾಸ್
- ಹೊಸ ಪುಸ್ತಕ 39
- ಧರ್ಮ ಎಂದರೇ ಕೋಮುವಾದವೇ? 40
  - ಸ್ವಾಮಿ ವಿವೇಕಾನಂದ
- ಮನುಷ್ಯನ ಹುಟ್ಟು, ಪುನರ್ಜನ್ಮ ಇತ್ಯಾದಿ 42

ಮುಖಪುಟ ಕಲೆ: ಪಾಕಿಸ್ತಾನದ ಮಾನವ ಹಕ್ಕುಗಳ ಶಿಕ್ಷಣ ಕಾರ್ಯಕ್ರಮ, ವಿನ್ಯಾಸ: ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ರಚನಾತ್ಮಕ ಬದಲಾವಣೆ ಬಯಸುವರೆಲ್ಲರ ಶಕ್ತ ವೇದಿಕೆ

ಪ್ರಿಯ ಬಂಧು ಇಂದೂಧರರವರೇ,

'ಸಂವಾದ'ದ ಎರಡು ಗೌರವ ಪ್ರತಿಗಳು ತಲುಪಿವೆ. ತಮ್ಮ ಸಂಪಾದಕತ್ವದ 'ಸುದ್ದಿಸಂಗಾತಿ' ವಾರಪತ್ರಿಕೆಯ ಹಳೆಯ ಓದುಗ ನಾನು! ದಲಿತ ಸಂಘರ್ಷ ಸಮಿತಿಯ ಚಳುವಳಿಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಂಡಿದ್ದ ಆ ದಿನಗಳಲ್ಲಿ ನಾನು ತುಂಬಾ ಅಭಿಮಾನ ವಿಟ್ಟು ಓದುತ್ತಿದ್ದ 'ಮಾನವ', 'ಪಂಚಮ', 'ಸುದ್ದಿಸಂಗಾತಿ', 'ಲಂಕೇಶ್ ಪತ್ರಿಕೆ' ಹಾಗೊಮ್ಮೆ ಈಗೊಮ್ಮೆ ಸಾಹಿತ್ಯದ ಓದಿನ ಕಾರಣಕ್ಕೆ ಕಾಲೇಜು ಲೈಬ್ರರಿಗಳಲ್ಲಿ

'ಸಂಕ್ರಮಣ', 'ಅನ್ವೇಷಣೆ', 'ಋಜುವಾತು' ಮುಂತಾದ ಪತ್ರಿಕೆಗಳು ನನ್ನನ್ನೂ ಸೇರಿದಂತೆ ಅಪಾರ ಜನರ ಆಲೋಚನೆಯ ಧಾಟಿಯನ್ನೇ ಬದಲಾಯಿಸಿ ನಮ್ಮ ಸಂವೇದನೆಯ ಅವಿಭಾಜ್ಯ ಭಾಗವಾದದ್ದು ಯಾರೂ ಅಲ್ಲಗಳೆಯದ ಸಂಗತಿ.

ಈಗ ಆ ದಿನಗಳನ್ನೊಮ್ಮೆ ನೆನೆದರೆ ನಾವು ಓದುತ್ತಿದ್ದ ಆ 'ಪಂಚಮ', ಆ 'ಮಾನವ', ಆ 'ಸುದ್ದಿಸಂಗಾತಿ', ಆ 'ಲಂಕೇಶ್ ಪತ್ರಿಕೆ' ಇನ್ನೆಲ್ಲಿ? ಅವೆಲ್ಲಾ ಯಾವ ಕತ್ತಲ ಗರ್ಭ ಸೇರಿಕೊಂಡವು? ಎಂಬ ಹತಾಶೆ ಆತಂಕಗಳಿಂದ ತೀರದ 'ಬದನಾಮಿ' ಅನುಭವಿಸುತ್ತಿದ್ದ ನಮಗೆ ಮೇಲಿನ ಎಲ್ಲಾ ಪತ್ರಿಕೆಗಳನ್ನು ಕಡೆದಿಟ್ಟಂತೆ 'ಸಂವಾದ' ಮಾಸ ಪತ್ರಿಕೆ ಬಂದಿದೆ.

ಈ 'ಸಂವಾದ'ವು ನಮ್ಮ ಆಲೋಚನೆಗಳಲ್ಲಿ ರಚನಾತ್ಮಕ ಬದಲಾವಣೆ ತರಬಲ್ಲ ಕನ್ನಡದ ಶ್ರೇಷ್ಠಹಾಗೂ ಉದಯೋನ್ಮುಖ ಲೇಖಕರು, ಹೋರಾಟಗಾರರು ಹಾಗೂ ವಿಶೇಷಜ್ಞರ ವೈಚಾರಿಕ ಚಿಂತನೆ ಗಳ ಮುಕ್ತ ಹಾಗೂ ಶಕ್ತ ವೇದಿಕೆಯಾಗ ಬೇಕೆಂಬುದು ನಮ್ಮೆಲ್ಲರ ಹಾರೈಕೆ.

ಪ್ರೀತಿಯಿಂದ,

ವಡ್ಡಗೆರೆ ನಾಗರಾಜಯ್ಯ, ತುಮಕೂರು

ಸಂವಾದಕ್ಕಾಗಿ ಚಡಪಡಿಕೆ

ಪ್ರಿಯ ಸಂಪಾದಕರೆ,

'ಸಂವಾದ'ದ ಚಂದಾದಾರನಾಗಲು ಇಲ್ಲಿನ ನನ್ನ ಸ್ನೇಹಿತರು ಬಹಳಷ್ಟು ಕೇಳಿಕೊಂಡರು. ಆದರೆ, ನನಗಾಗ ಮನಸ್ಸಿರಲಿಲ್ಲ. ಆದರೆ, ಒತ್ತಾಯಪೂರಕವಾಗಿ 'ಸಂವಾದ'ವನ್ನು ನನಗೆ ಕೊಟ್ಟರು. ನಿಜವಾಗಿಯೂ 'ಸಂವಾದ' ನನ್ನ ಮನ ಸೆಳೆಯಿತು. ವೈಜ್ಞಾನಿಕ ಚಿಂತನೆ ಉಳ್ಳ ಲೇಖನಗಳು ನನಗೆ 'ಸಂವಾದ'ವನ್ನು ಹುಡುಕುವಂತೆ ಮಾಡಿತು. ಈಗ ನಾನು ಸಂವಾದಕ್ಕಾಗಿ ಚಡಪಡಿಸುತ್ತಿದ್ದೇನೆ.

ಮಡಿವಾಳಪ್ಪ ಎಸ್. ಕಟ್ಟಿಮನಿ, ಗುಲ್ಬರ್ಗಾ

ಅರ್ಥಪೂರ್ಣ ಲೇಖನಗಳು

ಪ್ರಿಯ ಸಂಪಾದಕರೆ,

ಸೆಪ್ಟೆಂಬರ್ 'ಸಂವಾದ' ತಲುಪಿತು. ಓದಿದೆ. ಮತ್ತೆ ಓದಬೇಕೆನಿಸುತ್ತದೆ. ಎಲ್ಲಾ ಲೇಖನಗಳು ಅರ್ಥಪೂರ್ಣವಾಗಿವೆ. ವಿಶ್ವಾರಾಧ್ಯ ಸತ್ಯಂಪೇಟೆಯವರ ಲೇಖನ 'ಲಿಂಗಾಯತ ಮಠಾಧೀಶರಿಗೊಂದು ಬಹಿರಂಗ ಪತ್ರ' ತುಂಬಾ ಮೆಚ್ಚುಗೆಯಾಯಿತು. ಪ್ರೊ. ಕೆ.ಎಸ್. ಭಗವಾನರ 'ಬುದ್ಧನ ಅನನ್ಯತೆ', ಚಂದ್ರಬಾನ್ ಪ್ರಸಾದರ 'ದಲಿತ್ ಡೈರಿ' ತುಂಬಾ ಸೊಗಸಾಗಿ ಮೂಡಿ ಬಂದಿದೆ.

ಧನ್ಯವಾದಗಳೊಂದಿಗೆ

ಜಿ.ಬಿ. ಪೂಜಾರಿ, ಗುಲ್ಬರ್ಗಾ

ಸಕಾಲಿಕ ಸಂಪಾದಕೀಯ

ಪ್ರಿಯ ಇಂದೂಧರ,

ಬೌದ್ಧಧರ್ಮ ಜೀವವಿರೋಧಿ ಎನ್ನುವ ಮೂಲಕ ತಾನೊಬ್ಬ ಸನಾತನಧರ್ಮದ ಪ್ರತಿಪಾದಕ ಎಂಬುದನ್ನು ಸಾರಿಕೊಂಡಿರುವ ಎಸ್.ಎಲ್.ಭೈರಪ್ಪನವರನ್ನು 'ಸಂವಾದ'ದ ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ಚೆನ್ನಾಗಿ ಜಾಡಿಸಿದ್ದೀರಿ. ಈ ಸಂಪಾದಕೀಯದ ಮೂಲಕ ಭೈರಪ್ಪನವರ ವಿಕೃತ ಬುದ್ಧಿ ಮತ್ತೆಯನ್ನು ಜಾಲಾಡುವ ಜತೆಗೆ 70-80ರ ದಶಕದ 'ಮುಂಗಾರು' 'ಸುದ್ದಿ ಸಂಗಾತಿ'ಗಳಲ್ಲಿ ನೀವು ಬರೆಯುತ್ತಿದ್ದ ಸಂಪಾದಕೀಯ ಬರಹಗಳ ಕಾವು ನಿಮ್ಮಲ್ಲಿ ಇನ್ನೂ ಆರಿಲ್ಲ ಎಂಬುದನ್ನು ನಿರೂಪಿಸಿದ್ದೀರಿ.

ಒಟ್ಟಿನಲ್ಲಿ ಯಾರು ಏನೇ ಹೇಳಲಿ, ದೇಶದ್ಯಾಂತ ಕೋಮುವಾದಿಗಳ ಉಪಟಳ ಉಲ್ಬಣಗೊಳ್ಳುತ್ತಿರುವ ಈ ದಿನಗಳಲ್ಲಿ ಅದಕ್ಕೆ ತುಪ್ಪ ಸುರಿಯಲು ಮುಂದಾಗಿರುವ ಭೈರಪ್ಪನಂತಹ ಮಾನವ ವಿರೋಧಿಗಳಿಗೆ ನೀಡಿರುವ ನಿಮ್ಮ ಎಚ್ಚರಿಕೆ ಸಕಾಲಿಕವಾಗಿದೆ. ಆ ಮಟ್ಟಿಗೆ 'ಸಂವಾದ' ಎಚ್ಚರವಾಗಿದೆ ಎಂಬುದೇ ನಮ್ಮಂತಹವರಿಗೆ ಖುಷಿ.

ಎಸ್.ಬಿ. ಗೋವಿಂದರಾಜ್, ಮೈಸೂರು

ಸ್ವಾಭಿಮಾನಿ ಭಾಷೆ

ಪ್ರೀತಿಯ ಇಂದೂಧರ ಅವರೆ,

'ಅಂತರಾಳ'ದಲ್ಲಿ ಭೈರಪ್ಪನವರ 'ಬೌದ್ಧಧಮ್ಮ ವಿರೋಧಿ' ಹೇಳಿಕೆಗೆ ಅತ್ಯಂತ ಸಮರ್ಪಕವಾಗಿ ಪ್ರತಿಕ್ರಿಯಿಸಿದ್ದೀರಿ. ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಬರೆಯುವ 'ಮನುವಾದಿ' ಪತ್ರಕರ್ತರ ಭಾಷೆಯನ್ನೂ ಸಂಪೂರ್ಣ ತಿರಸ್ಕರಿಸಿದ ಸ್ವಾಭಿಮಾನಿ ಭಾಷೆ ನಿಮ್ಮದು. ಹೇಳಬೇಕಾದ್ದನ್ನು ಧ್ವನಿಪೂರ್ಣವಾಗಿ, ನಿಖರವಾದ ಶಬ್ದ ಬಳಸಿಯೇ ಹೇಳಬೇಕು. ಭೈರಪ್ಪನವರು ಇನ್ನೂ ಮುಂದಾದರೂ ಸರಿಯಾಗಿ ಮಾತನಾಡಲಿ.

ಡಾ|| ಮಹಾಂತೇಶ ಕಟ್ಟೀಮನಿ, ಗದಗ

ಯುಕ್ತವಲ್ಲ

ಮಾನ್ಯರೆ,

'ಸಂವಾದ'ದಲ್ಲಿ ಹಲವು ವಿಚಾರ ಪೂರ್ಣ ಲೇಖನಗಳು ಪ್ರಕಟವಾಗುತ್ತಿರುವುದು ಅಭಿನಂದನಾರ್ಹ. ಆದರೆ ಕೆಲವೊಮ್ಮೆ ಆಕ್ರೋಶ ಪೂರ್ಣ ಲೇಖನಗಳೂ ಕಾಣಿಸಿಕೊಳ್ಳುತ್ತಿವೆ! ಈ ಬಾರಿಯಾ 'ಸಂವಾದ'ದಲ್ಲಿ 'ವಿಕೃತ ಮನಸ್ಸಿನ ನಸುಗುನ್ನಿ' ಎಂಬ ಲೇಖನ ಸದಭಿರುಚಿಯ ಪರಿಧಿಯನ್ನು ದಾಟಿದೆಯೆಂದೇ ತೋರುತ್ತದೆ. ಡಾ.ಭೈರಪ್ಪನವರ ಧೋರಣೆಯ ಕುರಿತು ನನಗೂ ತುಸು ಭಿನ್ನಾಭಿಪ್ರಾಯವಿದೆ. ಆದರೆ ಕನ್ನಡದ ಮುಖ್ಯ ಲೇಖಕರೊಬ್ಬರನ್ನು ಕಟುವಾದ ಶೈಲಿಯಲ್ಲಿ ಇರಿಯುವುದು ಯುಕ್ತವಲ್ಲ.

ಅಮೃತ ಸೋಮೇಶ್ವರ, ಕೋಟೆಕಾರು

ಸಾಮಾಜಿಕ ಚಿಂತನೆಗೆ ಜತೆಗಾರ

ಪ್ರಿಯ ಸಂಪಾದಕರಿಗೆ ನಮಸ್ಕಾರ,

ಗುಲ್ಬರ್ಗಾದ ನವ ಕರ್ನಾಟಕ ಪುಸ್ತಕ ಮಳಿಗೆಗೆ ಹೋದಾಗ ಅಲ್ಲಿ ತಮ್ಮ 'ಸಂವಾದ' ಕಂಡಿತು. ಎರಡು ಮೂರು ದಿನದಲ್ಲಿ ಪತ್ರಿಕೆಯ ಕೆಲವು ಇಷ್ಟವಾದ ಲೇಖನಗಳನ್ನು ಓದಿದಾಗ ಕನ್ನಡದಲ್ಲಿ ಇಂತಹ ಸಾಹಿತ್ಯಕ, ಸಾಮಾಜಿಕ ಚಿಂತನೆಗೆ ಹಚ್ಚುವ ಕೆಲಸವನ್ನು ಈ ಮೊದಲು 'ಹೊಸತು' ನಿರ್ವಹಿಸುತ್ತಿತ್ತು. ಈಗ ಅದರ ಜೊತೆಗಾರನಾಗಿ 'ಸಂವಾದ' ಬಂದಿದೆ.

ಬುದ್ಧನ ಬಗೆಗೆ ಅನೇಕ ಜನರಿಗೆ ಇನ್ನೂ ಸ್ಪಷ್ಟತೆ ಇರುವುದಿಲ್ಲ. ಅದಕ್ಕಾಗಿಯೇ ಇಂದಿಗೂ ಬುದ್ಧನ ಬಗ್ಗೆ ಗೊಂದಲಗಳಿವೆ. ಬುದ್ಧನ ವಿಚಾರಗಳನ್ನು ಜನರಿಗೆ ಇನ್ನೂ ಮನಮುಟ್ಟುವಲ್ಲಿ ಪತ್ರಿಕೆ ಬೆಳೆಯಲಿ, ಲೇಖನ ಬರಲಿ.

ತಮ್ಮ ಓದುಗ,

ಜಿ. ರಾಮರೆಡ್ಡಿ, ರಾಯಚೂರು

ದಲಿತ್ ಡೈರಿ

'ಸಂವಾದ' ಅದ್ಭುತವಾಗಿ ಬರುತ್ತಿದೆ. ಪ್ರತಿಯೊಂದು ಲೇಖನವೂ ಒಂದಕ್ಕಿಂತ ಒಂದು ಉತ್ತಮವಾಗಿವೆ. ಚಂದ್ರಭಾನ್ ಪ್ರಸಾದ್‌ರ 'ದಲಿತ ಡೈರಿ' ದಲಿತ ಚಿಂತನೆಯ ಹೊಸ ದಿಕ್ಕುಗಳನ್ನು ಅನಾವರಣಗೊಳಿಸುತ್ತಿದೆ. ಅವರ ವಿಚಾರ ಲಹರಿಗಾಗಿ ಕಾತರಿಸುವಂತಾಗಿದೆ.

ಮಧುಮತಿ, ಬೆಂಗಳೂರು

ದುರ್ಗಾ ಪೂಜೆಗೆ ದಲಿತನ ಕೋರಿಕೆ: ಗುಂಡಿಗೆ ಆಹುತಿ

ಪಟ್ನಾ, ಅ.8- ನವರಾತ್ರಿಯ ಅಂಗವಾಗಿ ನಡೆಯುವ ದುರ್ಗಾ ಪೂಜೆಯಲ್ಲಿ ಭಾಗವಹಿಸಲು ಅವಕಾಶ ನಿರಾಕರಿಸಿದ್ದನ್ನು ವಿರೋಧಿಸಿದ ದಲಿತನೊಬ್ಬ, ಅದಕ್ಕಾಗಿ ತನ್ನ ಪ್ರಾಣವನ್ನೇ ಕಳೆದುಕೊಂಡ ದುರ್ಘಟನೆ ಕೈಮೂರ್ ಜಿಲ್ಲೆಯಲ್ಲಿ ವರದಿಯಾಗಿದೆ.

ಬಾಹೇರಿ ಗ್ರಾಮದಲ್ಲಿ ನಡೆಯುವ ದುರ್ಗಾಪೂಜೆಗೆ ದಲಿತರೂ ಸೇರಿದಂತೆ ಎಲ್ಲರಿಂದ ವಂತಿಗೆ ವಸೂಲಿ ಮಾಡಲಾಗುತ್ತಿತ್ತು. ಆದರೆ, ಪೂಜೆ ಸಲ್ಲಿಸಲು ಮಾತ್ರ ದಲಿತರಿಗೆ ಮೇಲ್ವರ್ಗದವರು ಅವಕಾಶ ನೀಡಿರಲಿಲ್ಲ.

ಕಳೆದ ಶನಿವಾರ ಅಲ್ಲಿ ಆಯೋಜಿಸಲಾದ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ದಲಿತರ ಗುಂಪೊಂದು ಇಚ್ಛಿಸಿದಾಗ ಉದ್ವಿಗ್ನ ಸ್ಥಿತಿ ತಲೆದೋರಿತು. ಕೆಲವು ದಲಿತರು ಪೆಂಡಾಲ್‌ನೊಳಗೆ ಪ್ರವೇಶಿಸಲು ಯತ್ನಿಸಿದಾಗ, ಮೇಲ್ವರ್ಗದ ಹಲವಾರು ಮಂದಿ ಅವರ ಮೇಲೆ ಹಲ್ಲೆ ನಡೆಸಿದರು. ಈ ಸಂದರ್ಭದಲ್ಲಿ ದಲಿತರೂ ಪ್ರತಿರೋಧ ತೋರಿದರು. ಅಷ್ಟರಲ್ಲಿ ಒಬ್ಬನು ನಾಡ ರಿವಾಲ್ವರ್‌ನಿಂದ ಹಾರಿಸಿದ ಗುಂಡಿಗೆ ರಾಮ್‌ಲಾಲ್ ರಾಮ್ ಎಂಬ ದಲಿತ ಬಲಿಯಾದ.

ಈ ಹತ್ಯೆಗೆ ಸಂಬಂಧಿಸಿದಂತೆ ಮೇಲ್ವರ್ಗದ 17 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಇದರಲ್ಲಿ ಮೂವರು ಪೊಲೀಸ್ ಸಿಬ್ಬಂದಿಯೂ ಸೇರಿದ್ದಾರೆ.

'ಪ್ರತಿವರ್ಷ ನಮ್ಮಿಂದ ಹಣ ವಸೂಲಿ ಮಾಡುತ್ತಿದ್ದರು. ಆದರೆ ಪೂಜೆಗೆ ಮಾತ್ರ ಅವಕಾಶ ನೀಡುತ್ತಿರಲಿಲ್ಲ. ಈ ಬಾರಿ ಇದನ್ನು ಪ್ರತಿಭಟಿಸಲು ನಾವು ತೀರ್ಮಾನಿಸಿದ್ದೆವು' ಎಂದು ದಲಿತ ಕಾಲೋನಿಯ ಭುಲಾನ್ ರಾಮ್ ಹೇಳುತ್ತಾನೆ. ಇದೆಲ್ಲಕ್ಕೂ ಮೀರಿದ ಸೋಜಿಗದ ಸಂಗತಿಯೆಂದರೆ; ಪೂಜೆಗಾಗಿ ಸಿದ್ಧಗೊಳ್ಳುವ ದುರ್ಗಾ ವಿಗ್ರಹವನ್ನು ದಲಿತರೇ ನಿರ್ಮಿಸುತ್ತಾರೆ! (ಪ್ರಜಾವಾಣಿ)



ದಲಿತ ಯುವಕನ ಮೇಲೆ ಮಾರಕ ಹಲ್ಲೆ

ತುಮಕೂರು, ಅ.18- ದಾಸವಾಳ ಹೂ ಕಿತ್ತನೆಂಬ ಕ್ಷುಲ್ಲಕ ಕಾರಣಕ್ಕಾಗಿ ದಲಿತ ಯುವಕನೊಬ್ಬನನ್ನು ಮರಕ್ಕೆ ಕಟ್ಟಿ ಹಾಕಿ ಕಲ್ಲಿನಿಂದ ತಲೆಗೆ ಮತ್ತು ಎರಡು ಕೈಗಳನ್ನು ಜಜ್ಜಿ ಮಾರಣಾಂತಿಕವಾಗಿ ಹಲ್ಲೆ ನಡೆಸಿದ ಪ್ರಸಂಗ ಇಂದು ಬೆಳಿಗ್ಗೆ ತಾಲೂಕಿನ ಕೆಸರುಮಡು ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಕೆಸರುಮಡು ಗ್ರಾಮದಲ್ಲಿ ಶಶಿಕುಮಾರ್(16) ತನ್ನ ಸ್ನೇಹಿತ ಅವಿನಾಶ್ ಜೊತೆಗೆ ಜ್ಯಾಗಿಂಗ್‌ಗೆ ಹೋದಾಗ ಸವರ್ಣೀಯ ಜನಾಂಗದ ಪ್ರಕಾಶ್ ಎಂಬುವರ ಮನೆಯ ಮುಂಭಾಗ ಬೆಳೆದಿದ್ದ ಒಂದು ದಾಸವಾಳದ ಹೂ ಕಿತ್ತುಕೊಂಡನು.

ವಿಷಯ ತಿಳಿಯುತ್ತಿದ್ದಂತೆಯೇ ಪ್ರಕಾಶ್ ಏಕಾಏಕಿ ಬಂದು ಶಶಿಕುಮಾರ್‌ನನ್ನ ಹೀನಾಯವಾಗಿ ನಿಂದಿಸುತ್ತಿದ್ದಂತೆಯೇ ಬೆಂಬಲವಾಗಿ ಮತ್ತೊಬ್ಬ ಪ್ರಕಾಶ್ ಸೇರಿಕೊಂಡ.

ಈ ಇಬ್ಬರು ಪ್ರಕಾಶ್‌ರು ಶಶಿಕುಮಾರ್‌ನನ್ನು ತೆಂಗಿನ ಮರಕ್ಕೆ ಕಟ್ಟಿ ಹಾಕಿ ಆತನ ತಲೆ ಮತ್ತು ಎರಡು ಕೈಗಳನ್ನು ಕಲ್ಲಿನಿಂದ ಜಜ್ಜಿ ಮಾರಣಾಂತಿಕವಾಗಿ ಹಲ್ಲೆ ನಡೆಸಿ ಚಿತ್ರಹಿಂಸೆ ನೀಡಿದ್ದರು.

(ಕನ್ನಡಪ್ರಭ)

ನಾಯಿ ಕಂಡಿರಾ....? ಅಮಾಯಕರಿಗೆ ಪೊಲೀಸರ ಧರ್ಮದೇಟು

ಬೆಂಗಳೂರು, ಅ.17- 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ' ಇದು ಗಾದೆ ಮಾತಿರಬಹುದು. ಆದರೆ, ಇದನ್ನು ಕೃತಿಗೆ ಇಳಿಸಿದ್ದಾರೆ ಸಂಜಯನಗರದ ಪೊಲೀಸರು.

ಸಂಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಡಾಲರ್ಸ್ ಕಾಲೋನಿಯಲ್ಲಿ ನ್ಯಾಯಾಧೀಶರೊಬ್ಬರು ವಾಸವಿದ್ದು, ಇವರು ಪ್ರವಾಸದಲ್ಲಿದ್ದಾರೆ. ಇದ್ದಕ್ಕಿದ್ದಂತೆ ಶುಕ್ರವಾರ ಇವರ ಅಚ್ಚುಮೆಚ್ಚಿನ ನಾಯಿ ಕಾಣೆಯಾಯಿತು.

ಅದು ಎಲ್ಲಿಗೆ ಹೋಯಿತು ಎಂಬುದು ಯಾರಿಗೂ ತಿಳಿದಿಲ್ಲ.

ಈ ವಿಷಯ ಹೇಗೋ ಪ್ರವಾಸದಲ್ಲಿರುವ ನ್ಯಾಯಾಧೀಶರಿಗೆ ತಿಳಿಯಿತು. ಕೂಡಲೇ ಅವರು ಉನ್ನತ ಪೊಲೀಸ್ ಅಧಿಕಾರಿಯೊಬ್ಬರಿಗೆ ದೂರವಾಣಿ ಕರೆ ಮಾಡಿ, 'ನಮ್ಮ ನಾಯಿಯನ್ನು ಹುಡುಕಿ ಕೊಡಿ' ಎಂದರು. ಉನ್ನತ ಅಧಿಕಾರಿ ನಾಯಿಯ ವಿಚಾರವನ್ನು ಸಂಜಯನಗರದ ಪೊಲೀಸ್ ಠಾಣೆಗೆ ತಿಳಿಸಿ, ಕೂಡಲೇ ಆ ನಾಯಿಯನ್ನು ಪತ್ತೆ ಹಚ್ಚಬೇಕೆಂದರು.

ಪೊಲೀಸರು ತಮ್ಮ 'ಚೀತಾ', 'ಹೊಯ್ಸಳ' ಸಮೇತರಾಗಿ ಡಾಲರ್ಸ್ ಕಾಲೋನಿಗೆ ಹಾಜರಾದರು. ಪೊಲೀಸರು ನೇರವಾಗಿ ಕೊಳಚೆ ಪ್ರದೇಶವೊಂದಕ್ಕೆ ನುಗ್ಗಿ ಅಲ್ಲಿ ಸಿಕ್ಕ ಸಿಕ್ಕವರನ್ನು ಬಡಿದರು. ಬಡಿಯುತ್ತಾ 'ನಾಯಿ ಕಂಡಿರಾ, ನಾಯಿ ಕಂಡಿರಾ' ಎಂದು ಕಿರುಚಾಡುತ್ತಾ ಕೂಗುತ್ತಾ ನಡೆದರು. ಇದನ್ನು ಕಂಡ ಅಲ್ಲಿನ ಜನ ತೀವ್ರ ಗಾಬರಿಗೊಂಡು 'ಎಲ್ಲಿಯ ನಾಯಿ, ಎಲ್ಲಿಯ ಏಟು, ನಮಗೂ ನಾಯಿಗೂ ಸಂಬಂಧವಿಲ್ಲ, ದಯವಿಟ್ಟು ನಮ್ಮನ್ನು ಬಿಡಿಸ್ವಾಮಿ' ಎಂದು ಗೋಗರೆದರು. ಆದರೂ ಪೊಲೀಸರು ಬಿಡಲಿಲ್ಲ, ಏಟಿನ ಮೇಲೆ ಏಟು ಕೊಟ್ಟರು. ನಂತರ ನಾಯಿ ಎಲ್ಲಿಯೂ ಕಾಣದಾದಾಗ ಸುಸ್ತಾಗಿ ಹಿಂದಿರುಗಿದರು.

ಇದಲ್ಲವೆ ಎತ್ತಿಗೆ ಜ್ವರ ಬಂದರೆ, ಎಮ್ಮೆಗೆ ಬರೆ ಎಂದರೆ!

(ಕನ್ನಡ ಪ್ರಭ)

ಅರೇಕುರುಹಟ್ಟಿ ಗ್ರಾಮದಲ್ಲಿ ಘರ್ಷಣೆ, ಉದ್ರಿಕ್ತ ಸ್ಥಿತಿ

ಹುಬ್ಬಳ್ಳಿ, ಅ.21- ನವಲಗುಂದ ತಾಲೂಕಿನ ಅರೇ ಕುರುಹಟ್ಟಿ ಗ್ರಾಮದಲ್ಲಿ ನಿನ್ನೆ ರಾತ್ರಿ ದಲಿತರು ಮತ್ತು ಸವರ್ಣೀಯರ ಮಧ್ಯೆ ಸಂಭವಿಸಿದ ಗುಂಪು ಘರ್ಷಣೆಯಲ್ಲಿ ತೀವ್ರವಾಗಿ ಗಾಯಗೊಂಡ ಆರು ಮಂದಿಯನ್ನು ಕಿಮ್ಸ್ ಆಸ್ಪತ್ರೆಗೆ ಸೇರಿಸಲಾಗಿದೆ.

ಗ್ರಾಮದಲ್ಲಿ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ ಎಂಬ ಆರೋಪದ ಮೇಲೆ ತಾ.ಪಂ. ಮಾಜಿ ಅಧ್ಯಕ್ಷರೊಬ್ಬರನ್ನು ಬಂಧಿಸಿದ ಹಿನ್ನೆಲೆಯಲ್ಲಿ ಈ ಘರ್ಷಣೆ ಸಂಭವಿಸಿದೆ.

(ಉದಯವಾಣಿ)

ಕಳ್ಳತನದ ಆರೋಪ: ಒಂದೇ ಕುಟುಂಬದ ಐವರ ಆತ್ಮಹತ್ಯೆ

ಶಿವಮೊಗ್ಗ, ಅ.17- ವೆನಿಲಾ ಕಳವು ಆರೋಪ ಹೊರಿಸಿ ಮಗನನ್ನು ಪೊಲೀಸ್ ಠಾಣೆಗೆ ಕರೆದೊಯ್ದು ಕಿರುಕುಳ ನೀಡಿದ ಹಿನ್ನೆಲೆಯಲ್ಲಿ ಒಂದೇ ದಲಿತ ಕುಟುಂಬದ ಐವರು ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ತೀರ್ಥಹಳ್ಳಿ ತಾಲೂಕು ಬಸವಾನಿ ಗ್ರಾಮಪಂಚಾಯ್ತಿ ವ್ಯಾಪ್ತಿಯ ಹಳವಾನಿ- ಚಿತ್ಕಲ್‌ನಲ್ಲಿ ಶುಕ್ರವಾರ ಬೆಳಿಗ್ಗೆ ಜರುಗಿದೆ.

ಮನೆಯ ಯಜಮಾನ ಗುರುಮೂರ್ತಿ (49), ಆತನ ಪತ್ನಿ ಯಶೋಧ(38), ಮಗಳು ರೇಖಾ(22), ಮಗ ರಾಘವೇಂದ್ರ(20) ಹಾಗೂ ಸೊಸೆ ಸರಿತ(19) ಮೃತಪಟ್ಟ ದುರ್ದೈವಿಗಳು.

ಈ ಐವರು ಶುಕ್ರವಾರ ಬೆಳಿಗ್ಗೆ 10 ಗಂಟೆಯ ವೇಳೆಗೆ ಮೆಲಾಥಿನ್ ಎಂಬ ಕೀಟನಾಶಕ ಸೇವಿಸಿ ಸಾವಿಗೆ ಶರಣಾಗಿದ್ದಾರೆ. ವಿಷ ಸೇವಿಸಿದ ನಂತರ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದು ಇಬ್ಬರು ಆಸ್ಪತ್ರೆಗೆ ಕೊಂಡೊಯ್ಯುವಾಗ ಕೊನೆಯುಸಿರೆಳೆದಿದ್ದಾರೆ.

ಜಮೀನ್ದಾರ ಪ್ರಸನ್ನ ಎಂಬಾತನು, ಗುರುಮೂರ್ತಿ ಅವರ ಮಗ ರಾಘವೇಂದ್ರನು ವೆನಿಲಾ ಕದ್ದಿದ್ದಾನೆಂದು ಆರೋಪಿಸಿ ಬುಧವಾರ ಹಿಡಿದು ಥಳಿಸಿದ್ದ ನೆನ್ನಲಾಗಿದೆ. ಅಲ್ಲದೇ ರಾಘವೇಂದ್ರನನ್ನು ಇಡೀ ದಿನ ಕತ್ತಲ ಕೋಣೆಯಲ್ಲಿ ಕೂಡಿಟ್ಟಿದ್ದನೆಂದು ಮೃತ ಕುಟುಂಬದ ಸಮೀಪದ ಮೂಲಗಳು ದೂರಿವೆ.

(ಕನ್ನಡಪ್ರಭ)

ಅಂತರಂಗ

ವರ್ಷ ತುಂಬಿದ ಸಡಗರದಲ್ಲಿ...



'ಸಂವಾದ'ಕ್ಕೀಗ ಒಂದು ವರ್ಷ.

ಯಾವುದೇ ಪತ್ರಿಕೆ ಆರಂಭಿಸುವಾಗಿನ ಮನಸ್ಥಿತಿ ನಂತರ ಉಳಿಯುವುದು ಬಹಳ ಕಷ್ಟ ಆರಂಭದ ಉತ್ಸಾಹ-ಕನಸುಗಳು, ಹಲವು ಒತ್ತಡಗಳ ಕಾರಣ ಕ್ರಮೇಣ ಕರಗುವುದುಂಟು. ಅದರಲ್ಲೂ ಪರ್ಯಾಯ ಪತ್ರಿಕೋದ್ಯಮದಲ್ಲಿ ಉಳಿದು-ಬೆಳೆಯುವುದು ಸುಲಭದ ಮಾತಲ್ಲ. ಕಳೆದ ಸುಮಾರು 25-30 ವರ್ಷಗಳಿಂದ ಪತ್ರಿಕಾರಂಗವನ್ನು ಅಳೆದು ಸುರಿದು ನೋಡಿರುವ ನನಗೆ ಈಗಲೂ ಇದು ದೊಡ್ಡ ಸವಾಲೇ ಆಗಿದೆ.

ಪತ್ರಿಕೋದ್ಯಮದ ಆಶಯ ತೀವ್ರಗತಿಯಲ್ಲಿ ಬದಲಾಗುತ್ತಿದೆ. ಸಾಮಾಜಿಕ ಕಾಳಜಿಯೇ ಆದರ್ಶವಾಗಿ ಹುಟ್ಟಿದ ಪತ್ರಿಕೋದ್ಯಮ ಈಗ ವ್ಯಾಪಾರೋದ್ಯಮವಾಗಿ ಮಾರ್ಪಟ್ಟಿದೆ. ಗ್ರಾಹಕ ಸಂಸ್ಕೃತಿಯೇ ಅದರ ಮಾನದಂಡವಾಗಿದೆ. ಹೆಚ್ಚು ಹೆಚ್ಚು ಓದುಗರು ಹಾಗೂ ಜಾಹೀರಾತುದಾರರನ್ನು ಓಲೈಸಿಕೊಳ್ಳಲು ಎಲ್ಲಾ ತಂತ್ರಗಾರಿಕೆಗೂ ಮುಂದಾಗಿದೆ. ಸದಾ ಮಾಲೀಕರ ಮರ್ಜಿಗಾಗಿಯೇ ಹಾತೊರೆಯುವ ಪತ್ರಕರ್ತರ ಬರವಣಿಗೆಗಳೂ ಅಂತಃಸತ್ವ ಕಳೆದುಕೊಳ್ಳುತ್ತಿವೆ. ದೊಡ್ಡ ಪತ್ರಿಕೆಗಳಲ್ಲಿ ಕೆಲಸ ಮಾಡುವ ಬಹಳಷ್ಟು ಪತ್ರಕರ್ತರಂತೂ 'ಮಾರಾಟ ಪ್ರತಿನಿಧಿ'ಗಳ ಮಟ್ಟಕ್ಕೆ ಇಳಿದು ನಿಂತಿದ್ದಾರೆ.

ಇಂಥ ಸಂದರ್ಭದಲ್ಲಿ ವೃತ್ತಿಗೆ ಬದ್ಧನಾದ ಪತ್ರಕರ್ತ ಬದುಕುವುದೇ ದುಸ್ತರವಾಗಿದೆ. ಪತ್ರಿಕೆ ಪ್ರಸಾರ ಸಂಖ್ಯೆ ಮತ್ತು ಜಾಹಿರಾತುಗಳ ಮೇಲೆ ಮಾತ್ರ ಕಣ್ಣಿಟ್ಟಿರುವ ಮಾಲೀಕರು ಪ್ರಸಾರ ಹೆಚ್ಚಿಸಲಾರದ ಪತ್ರಕರ್ತರನ್ನು ನಿರ್ದಾಕ್ಷಿಣ್ಯವಾಗಿ ಮನೆಗೆ ಕಳುಹಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ದೊಡ್ಡ ಪತ್ರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಬಹಳಷ್ಟು ಜನ ಪತ್ರಕರ್ತರು ಎಂಥ ಒತ್ತಡದಲ್ಲಿದ್ದಾರೆಂದರೆ 35-40 ವರ್ಷಕ್ಕೆಲ್ಲ ರಕ್ತದೊತ್ತಡ, ಮಧುಮೇಹಗಳಂಥ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಸೇವಾ ಭದ್ರತೆ ಇರುವ ಯಾವುದೇ ಕೆಲಸ ಸಿಕ್ಕರೂ ಓಡಿ ಹೋಗಬೇಕೆಂಬ ಕಾತುರದಲ್ಲಿದ್ದಾರೆ.

ಈಚೆಗೆ ನಡೆದ 'ದಲಿತರು ಮತ್ತು ಪತ್ರಿಕೋದ್ಯಮ' ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಯುವ ಸಾಮಾಜಿಕ ಕಾರ್ಯಕರ್ತರೊಬ್ಬರು 'ಪತ್ರಿಕೆಗಳು ಯಾಕೆ ನೊಂದವರ-ದಲಿತರ ಪರವಾಗಿ ದನಿ ಎತ್ತುವುದಿಲ್ಲ. ಜನಪರ ಹೋರಾಟಗಳಿಗೇಕೆ ಸರಿಯಾದ ಪ್ರಚಾರ ಕೊಡುವುದಿಲ್ಲ' ಎಂದು ಪ್ರಶ್ನಿಸಿದರು. ದಲಿತ ಚಳುವಳಿಯ ಆರಂಭದ ಕಾಲಕ್ಕೆ ಇದೇ ಪ್ರಶ್ನೆಯನ್ನು ನಾನೂ ಕೇಳುತ್ತಿದ್ದ. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ನಾನು 'ಸಂಗಾತಿ' ಆರಂಭಿಸುವವರೆಗೆ ಕಾಯಬೇಕಾಯಿತು. ಓದುಗರ ಆಶಯಗಳಿಗೆ ತಕ್ಕಂತೆ ಪತ್ರಿಕೆ ಬಂದರೆ ಮಾತ್ರ ಪ್ರಸಾರ ಹೆಚ್ಚಾಗುವುದರಿಂದ ಎಂಥ ಜನ ಪತ್ರಿಕೆ ಕೊಂಡು ಓದುತ್ತಾರೋ ಅಂಥವರ ಆಕಾಂಕ್ಷೆಗಳನ್ನು ಮಾತ್ರ ಪತ್ರಿಕೆಗಳು ಬಿಂಬಿಸುತ್ತವೆ. ದಲಿತರು-ಹಿಂದುಳಿದವರು ಪತ್ರಿಕೆ ಓದುವುದು ಅತೀ ಕಡಿಮೆ. ಈ ಅತೀ ಕಡಿಮೆ ಸಂಖ್ಯೆಯ ಜನರ ಪರವಾಗಿ ಪತ್ರಿಕೆಗಳು ಬರೆದರೆ ಅಂಥ ಪತ್ರಿಕೆಗಳ ಪ್ರಸಾರ ಏನಾಗಬೇಕು? ಜನಪರವಾಗಿ ನಿಂತ ಪತ್ರಿಕೆಗಳೆಲ್ಲ ಸಾಲುಸಾಲಾಗಿ ಮುಚ್ಚಿ ಹೋಗುತ್ತಿರುವುದಕ್ಕೆ ಇದೇ ಕಾರಣ. ಹೆಂಡ-ಬಾಡಿಗಾಗಿ ಪ್ರತಿ ತಿಂಗಳೂ ಸಾವಿರಗಟ್ಟಲೆ ಖರ್ಚು ಮಾಡುವ ದಲಿತರು-ಹಿಂದುಳಿದವರು, ಪತ್ರಿಕೆಗಳಿಗಾಗಿ ನೂರಿನ್ನೂರು ರೂಪಾಯಿ ಖರ್ಚು ಮಾಡಲೂ ಸಿದ್ಧರಿರುವುದಿಲ್ಲ. ಹಾಗಿರುವಾಗ ದಲಿತ-ಹಿಂದುಳಿದವರ ಪರ ಪತ್ರಿಕೆಗಳು ಉಳಿಯುವುದಾದರೂ ಹೇಗೆ?

'ಸಂವಾದ' ಕೂಡ ಇಂಥ ಸಮಸ್ಯೆಯಿಂದ ಪಾರಾಗಿಲ್ಲ. 'ಸಂವಾದ'ವನ್ನು ಹಾಡಿ ಹೊಗಳುವ ಬಹುತೇಕ ಸಾಮಾಜಿಕ ಕಾರ್ಯಕರ್ತರು, ಸಾಹಿತಿ-ಕಲಾವಿದರುಗಳು ಇನ್ನೂ ಅದರ ಚಂದಾ ಕೊಟ್ಟಿಲ್ಲ. ಆದರೂ ಪ್ರತಿ ತಿಂಗಳೂ 'ಗೌರವ ಪ್ರತಿ'ಗಾಗಿ ಕಾತರಿಸುತ್ತಾರೆ. ಪತ್ರಿಕೆ ಹೋಗದಿದ್ದರೆ ಫೋನ್ ಮಾಡಿ ಆಕ್ಷೇಪಿಸುತ್ತಾರೆ! 'ನಾವೂ ಚಂದಾ ಕೊಡಬೇಕಾ?' ಅಂತ ಕೇಳಿದವರೂ ಇದ್ದಾರೆ! ಇಂಥವರ ನಡುವೆ ಕೂಡ 'ಸಂವಾದ', ಕೊಂಡು ಓದುವವರ ದೊಡ್ಡ ಸಮೂಹವನ್ನೇ ಹೊಂದಿದೆ. ಸ್ವಯಂ ಸ್ಫೂರ್ತಿಯಿಂದ ನೂರಾರು ಜನ ಚಂದಾದಾರರಾಗಿದ್ದಾರೆ. ವಿಚಾರ ಶೂನ್ಯತೆಯಿಂದ ಖಿನ್ನರಾಗಿರುವ ಜನಸಮೂಹವನ್ನು ಜಾಗೃತರನ್ನಾಗಿಸುವ ತನ್ನ ಮಹತ್ವಾಕಾಂಕ್ಷೆಯನ್ನು ಪೂರೈಸಿಕೊಳ್ಳುವತ್ತ 'ಸಂವಾದ' ದಾಪುಗಾಲು ಹಾಕಿದೆ. ವಿಶ್ವವಿದ್ಯಾಲಯಗಳಲ್ಲಿ 'ಸಂವಾದ' ಕುರಿತು ಚರ್ಚೆ ನಡೆಯುತ್ತಿದೆ. ಪ್ರಗತಿಪರರು, ಸಾಹಿತಿ-ಕಲಾವಿದರು 'ಸಂವಾದ'ಕ್ಕಾಗಿ ಬರೆಯಲಾರಂಭಿಸುತ್ತಿದ್ದಾರೆ. ಸಮುದಾಯ ಚಳುವಳಿಗಳು - ಚಿಂತಕರು 'ಸಂವಾದ'ದೊಂದಿಗೆ ಗುರುತಿಸಿಕೊಳ್ಳುತ್ತಿದ್ದಾರೆ. ನಮಗೆ ನಿರಂತರವಾಗಿ ಬರುತ್ತಿರುವ ನೂರಾರು ಪತ್ರಗಳೇ ಇದಕ್ಕೆ ಸಾಕ್ಷಿ.

ಆದರೂ 'ಸಂವಾದ'ವನ್ನು ನಾವು ಅಂದುಕೊಂಡಿದ್ದ ರೀತಿಯಲ್ಲಿ ಹೊರತರಲು ಸಾಧ್ಯವಾಗುತ್ತಿಲ್ಲವೆಂಬ ಕೊರಗು ನಮಗಿದೆ. ವಿಚಾರ ಶೂನ್ಯವಾಗುತ್ತಿರುವ ಸಮಾಜಕ್ಕೆ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಮೂಲಕ ಹೊಸ ಬದುಕಿನ ಸಾಧ್ಯತೆಗಳನ್ನು ಆವಿಷ್ಕಾರಗೊಳಿಸುವ ಪ್ರಯತ್ನವನ್ನು 'ಸಂವಾದ' ಪ್ರಾರಂಭದಿಂದಲೂ ಮಾಡುತ್ತಿದೆ. ಆದರೆ ಇತಿಹಾಸ-ಪುರಾಣಗಳ ಪುನರ್ವಿಮರ್ಶೆಯಲ್ಲೇ ಆನಂದ ಕಾಣುತ್ತಿರುವ ನಾವು ಹೊಸ ಇತಿಹಾಸ ಸೃಷ್ಟಿಸುವತ್ತ ಜನತೆಯನ್ನ ಪ್ರೇರೇಪಿಸುವಲ್ಲಿ ಸೋಲುತ್ತಿದ್ದೇವೆ. ಎಲ್ಲ ಚಳುವಳಿಗಳೂ ಭೂತಕಾಲದ ಕ್ರಿಯೆಯಲ್ಲೇ ತಮ್ಮ ಆಯುಷ್ಯವನ್ನು ಕಳೆದುಕೊಳ್ಳುತ್ತಿವೆಯೇ ಹೊರತು, ವರ್ತಮಾನ ಮತ್ತು ಭವಿಷ್ಯದತ್ತ ಮುಖ ಮಾಡುವಲ್ಲಿ ಸಫಲವಾಗುತ್ತಿಲ್ಲ. ನಮ್ಮ ಬಹುತೇಕ ಚಿಂತಕರು, ಹೋರಾಟಗಾರರು, ಸಾಹಿತಿ-ಕಲಾವಿದರು, ಪತ್ರಕರ್ತರು - ಎಲ್ಲರೂ 'ಭೂತ'ದಲ್ಲಿ ಮುಳುಗಿ ಹೋಗಿದ್ದಾರೆ. ವರ್ತಮಾನದ ಆಶಯಗಳನ್ನು ಬಿಂಬಿಸಿ ಭವಿಷ್ಯ ರೂಪಿಸುವತ್ತ ಗಮನ ಹರಿಸುತ್ತಿಲ್ಲ. ಇದು ಎಲ್ಲರ ಸಮಸ್ಯೆಯಾಗಿದೆ. ಈ ವಿಪರ್ಯಾಸದಲ್ಲಿ 'ಸಂವಾದ' ಕೂಡ ಸಿಕ್ಕಿಕೊಂಡಿದೆ.

ಹೊಸ ಕನಸು-ಮುನ್ನೋಟ-ಕಾರ್ಯಕ್ರಮಗಳ ಮೂಲಕ ಸಮಾಜ ಪ್ರಗತಿಮುಖಿಯಾಗಲು 'ಸಂವಾದ' ನೆರವಾಗಬೇಕೆಂಬುದು ನಮ್ಮ ಆಶೆ. ಇಂಥದೇ ಉದ್ದೇಶ ಹೊತ್ತು ಆರಂಭವಾದ 'ಸ್ಫೂರ್ತಿಧಾಮ' ಅದಕ್ಕಾಗೇ 'ಸಂವಾದ'ದ ಬೆನ್ನಿಗೆ ನಿಂತಿದೆ. ಈ ಆಶಯಗಳಿಗೆ ಪೂರಕವಾಗಿ 'ಸಂವಾದ' ಬೆಳೆಯಲು ಪ್ರಯತ್ನಿಸುತ್ತಿದೆ. ಹಾಗಾಗಿ ಸಂಪಾದಕೀಯ ಬಳಗ ಈಗ ಮತ್ತಷ್ಟು ಗೆಳೆಯರನ್ನು ಒಳಗೊಂಡಿದೆ. ವಿವಿಧ ನೆಲೆಗಳಲ್ಲಿ ನಿಂತು ಸಮಾಜವನ್ನು ನೋಡುವ-ವಿಶ್ಲೇಷಿಸುವ ಹಾಗೂ ಆ ಮೂಲಕ ಮುಂದಿನ ಬದುಕನ್ನು ಸಮಾನತೆಯ ನೆಲೆಯ ಮೇಲೆ ಕಟ್ಟುವ ಮುನ್ನೋಟವನ್ನು ಒದಗಿಸಲು, 'ಸಂವಾದ' ಹೆಚ್ಚು ಸಮರ್ಥವಾಗಬಹುದೆಂಬ ಆಶಯ ನಮಗಿದೆ.

'ಸಂವಾದ' ಎಂದಿನಂತೆ ತಮ್ಮೆಲ್ಲರ ಸಹಕಾರವನ್ನು ಬಯಸುತ್ತದೆ.

ಇಂದೂಧರ ಹೊನ್ನಾಪುರ
ಸಂಪಾದಕ

ಸ್ವಾತಂತ್ರ್ಯ ಯಾರಿಗೆ ಸಿಕ್ಕಿದೆ ?

ಭಾರತಕ್ಕೆ ಸ್ವಾತಂತ್ರ್ಯ ಬಂದು ಐವತ್ತಾರು ವರ್ಷಗಳಾಗಿವೆ. ಸಾಮಾಜಿಕ ಸ್ವಾತಂತ್ರ್ಯವಿಲ್ಲದೇ ರಾಜಕೀಯ ಸ್ವಾತಂತ್ರ್ಯದಲ್ಲಿ ಅರ್ಥವಿಲ್ಲ ಎಂದು ನಮಗಾಗಿ ದುಡಿದು ಮಡಿದ ದಲಿತ ಪಿತಾಮಹ ಡಾ॥ ಬಿ.ಆರ್.ಅಂಬೇಡ್ಕರ್ ಮತ್ತೆ ಮತ್ತೆ ಹೇಳುತ್ತಿದ್ದರು. ಈ ಅರ್ಧ ಶತಮಾನದ ನಂತರ ಭಾರತದ ಸ್ವಾತಂತ್ರ್ಯ, ಸಹಸ್ರಾರು ದೀನ ದಲಿತರಿಗೆ ಮಾಡಿದ ಉಪಕಾರವೇನು ಎಂದು ಈ ದಿನ ನೋಡಬೇಕಾಗಿದೆ. ಸ್ವಾತಂತ್ರ್ಯ ಬಂದಾಗ ಸಾಮಾಜಿಕ ಅಸಮಾನತೆಗಳ ಜೊತೆಗೆ ಬಡತನ, ಅನಕ್ಷರತೆ, ಅನಾರೋಗ್ಯಗಳಂತಹ ಸಮಸ್ಯೆಗಳು ಸಹ ದಲಿತರನ್ನು ಕಾಡುತ್ತಿದ್ದವು.

ಸಾಮಾಜಿಕ ಅಸಮಾನತೆಗಳನ್ನು ಹೋಗಲಾಡಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡಲಾಗಿದೆ. ಸಂವಿಧಾನದ ವಿಧಿ 330 ಮತ್ತು 332ರಡಿಯಲ್ಲಿ ನೀಡಿರುವ ರಾಜಕೀಯ ಮೀಸಲಾತಿ ವಿಧಿ 15(4)ರಡಿಯಲ್ಲಿ ನೀಡಿರುವ ಶೈಕ್ಷಣಿಕ ಮತ್ತು ಆರ್ಥಿಕ ಸವಲತ್ತು/ರಿಯಾಯ್ತಿಗಳು ಹಾಗೂ ವಿಧಿ 16(4)ರಡಿಯಲ್ಲಿ ನೀಡಲಾಗಿರುವ ಸರ್ಕಾರಿ ಸೇವಾ ಉದ್ಯೋಗ ಮೀಸಲಾತಿ ಸೌಲಭ್ಯಗಳು ನಮ್ಮ ಆರ್ಥಿಕ ಮತ್ತು ಶೈಕ್ಷಣಿಕ ಮಟ್ಟವನ್ನು ವೃದ್ಧಿಪಡಿಸುವುದರ ಜೊತೆಗೆ ಸಾಮಾಜಿಕ ಸಮಾನತೆಯನ್ನು ಸಹ ಸ್ವಲ್ಪ ಮಟ್ಟಿಗೆ ಕಾಣಲನುವಾಗಿದೆ. 1955ರ ನಾಗರಿಕ ಹಕ್ಕು ರಕ್ಷಣಾ ಕಾಯಿದೆ ಮತ್ತು 1989ರ ಪರಿಶಿಷ್ಟ ಜಾತಿ ಮತ್ತು ಪಂಗಡ ದೌರ್ಜನ್ಯ ತಡೆ ಕಾಯಿದೆಗಳು ದಲಿತರ ಮೇಲಾಗುವ ಅನ್ಯಾಯವನ್ನು ತಡೆಯುವಲ್ಲಿ ಸ್ವಲ್ಪಮಟ್ಟಿಗಾದರೂ ಯಶಸ್ವಿಯಾಗಿ ಇಂದು ದಲಿತರ ಸ್ವಗೌರವಕ್ಕಾಗಿ ಎದ್ದು ನಿಲ್ಲುವಷ್ಟು ಧೈರ್ಯವನ್ನಾದರೂ ತಂದುಕೊಟ್ಟಿದೆ. ಈ ಎರಡು ಕಾಯಿದೆಗಳು ಮೂಲತಃ ಉತ್ತಮವಾಗಿದ್ದು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತಂದಲ್ಲಿ ದಲಿತರ ಮುಂದಿರುವ ಸಾಮಾಜಿಕ ಸಮಸ್ಯೆಗಳು ದೂರಾಗುವಲ್ಲಿ ಸಂಶಯವಿಲ್ಲ ಇದು ಪೂರ್ಣಾನುಷ್ಠಾನವಾಗಬೇಕಾದರೆ ದಲಿತರು ಒಂದಾಗಿ ಸರ್ಕಾರದ ಮೇಲೆ ಒತ್ತಡ ಹೇರಬೇಕಾಗುತ್ತದೆ.

ಸ್ವಾತಂತ್ರ್ಯದ ಪ್ರಾರಂಭದಲ್ಲಿ ಭೂಸುಧಾರಣೆ ಅಥವಾ ದಲಿತರಿಗೆ ಭೂಮಿ ವಿತರಣೆ ಎಂಬ ಕಲ್ಯಾಣ ಕಾರ್ಯಕ್ರಮ ಪ್ರಾರಂಭವಾಯಿತು. ಆದರೆ ಸಾಕಷ್ಟು ರಾಜ್ಯ ಸರ್ಕಾರಗಳು ಈ ಸಿದ್ಧಾಂತಮಯ ಕಾರ್ಯವನ್ನು ಪೂರ್ಣವಾಗಿ ಅನುಷ್ಠಾನಗೊಳಿಸಲಿಲ್ಲ. ಸಾಕಷ್ಟು ಉಳುವ ಭೂಮಿ ಲಭ್ಯವಿಲ್ಲದಿದ್ದರಿಂದಲೂ ಮತ್ತು ಈ ಸುಧಾರಣೆಗಳು ದಲಿತ ಭೂಕಾರ್ಮಿಕ ಹಾಗೂ ಸವರ್ಣೀಯ ಮಾಲೀಕರ ನಡುವೆ ವೈಷಮ್ಯವನ್ನು ಹುಟ್ಟು ಹಾಕಿದ್ದರಿಂದಲೂ ನಿರೀಕ್ಷಿಸಿದಷ್ಟು ಪ್ರಗತಿಯನ್ನು ಭೂಹಂಚಿಕೆ ಸುಧಾರಣೆಯಲ್ಲಿ ಕಾಣಲಾಗಲಿಲ್ಲ. ಈ ಅರೆ ಮುರುಕು

ಸ್ವಾತಂತ್ರ್ಯ ಬಂದು ಐವತ್ತಾರು ವರ್ಷಗಳು ಕಳೆದರೂ ಸ್ವಾತಂತ್ರ್ಯದ ಫಲ ನಾಡಿನ ಬಹುಸಂಖ್ಯಾತರಿಗೆ ಕನಸಿನ ಗಂಟಾಗೇ ಉಳಿದಿದೆ. ಹಲವಾರು ಪಂಚವಾರ್ಷಿಕ ಯೋಜನೆಗಳು ಕಳೆದರೂ ದಲಿತರು ಮತ್ತು ದುರ್ಬಲರ ಬದುಕು ಹಸನಾಗುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಪ್ರತಿ ಸ್ವಾತಂತ್ರ್ಯೋತ್ಸವದಂದು ಪ್ರಕಟವಾಗುವ ಕಾರ್ಯಕ್ರಮಗಳು ಯಾರ ಪಾಲಾಗುತ್ತಿವೆ ಎಂಬುದೂ ನಿಗೂಢವೇನಲ್ಲ. ಸ್ವಾತಂತ್ರ್ಯಾನಂತರದ ದಲಿತರ ಸ್ಥಿತಿ-ಗತಿ ಕುರಿತ ವಿಶ್ಲೇಷಣೆ ಇಲ್ಲಿದೆ.

○ ಜಿ. ಪಾಂಡುನಾಯಕ್

ಭೂಮಿಯನ್ನು ಉಳುಮೆ ಮಾಡಿದ್ದರಿಂದ ದಲಿತನ ಬಡತನವಂತೂ ನಿವಾರಣೆಯಾಗಲಿಲ್ಲ. ಬದಲಿಗೆ ಭೂರಹಿತ ದಲಿತರು ಕಷ್ಟಪಟ್ಟು ಮಕ್ಕಳನ್ನು ಶಾಲೆಗೆ ಕಳುಹಿಸಿದುದರಲ್ಲಿ ಸಾಕಷ್ಟು ಮಂದಿಯ ಪ್ರಗತಿಯಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಶುಲ್ಕ ರಿಯಾಯ್ತಿ, ಸ್ಥಾನಗಳ ಮೀಸಲಾತಿ, ವಸತಿ ಮತ್ತು ಊಟದ ಸೌಲಭ್ಯಗಳು ನಿರ್ಗತಿಕ ದಲಿತರನ್ನೂ ಸಹ ಶಿಕ್ಷಣದತ್ತ ಉತ್ತೇಜಿಸಿವೆ. ಆದರೆ ಈ ಸೌಲಭ್ಯಗಳು ತೀರಾ ಹಿಂದುಳಿದ ಪ್ರದೇಶಗಳಿಗೆ ಸಾಕಷ್ಟು ಮಟ್ಟದಲ್ಲಿ ಲಭಿಸಿಲ್ಲ. ಇದುವರೆವಿಗೆ ಬಹಳಷ್ಟು ವಿದ್ಯಾವಂತರು ಸರ್ಕಾರಿ ಸೇವೆಗಳಿಗಷ್ಟೆ ಸೇರುತ್ತಿದ್ದರಿಂದ ಮಾತೃಭಾಷಾ ಮಾಧ್ಯಮದಲ್ಲಿ ಕಲಿತವರಿಗೇನು ತೊಂದರೆಯಾಗಲಿಲ್ಲ. ಈ ಕಾಲ ಬದಲಾಗಿ ಸರ್ಕಾರಿ ಕ್ಷೇತ್ರದ ಹುದ್ದೆಗಳನ್ನೆಲ್ಲಾ ಯಾಂತ್ರೀಕರಣ ಮತ್ತು ಕಂಪ್ಯೂಟರೀಕರಣ ತಿಂದು ಹಾಕುತ್ತಿರುವಾಗ ಸಾಕಷ್ಟು ದಲಿತರಿಗೆ ಸರ್ಕಾರಿ ಸೇವೆಯ ಮೀಸಲಾತಿ ಹುದ್ದೆಗಳ ಬಯಕೆ ಈಡೇರಿದಂತಾಗಿದೆ. ವಿಶ್ವಾದ್ಯಂತ ವ್ಯಾಪಾರ ಸ್ಪರ್ಧೆ ಮಾಡಬಲ್ಲ ಸಾಫ್ಟ್‌ವೇರ್ ಕಾಲ್‌ಸೆಂಟರ್ ಇತ್ಯಾದಿ ಖಾಸಗಿ ಉದ್ಯಮಗಳು ಲಕ್ಷಾಂತರ ಹುದ್ದೆಗಳನ್ನು ತುಂಬುತ್ತಿವೆ. ಆದರೆ ದಲಿತರು ಮಾತೃಭಾಷಾ ಮಾಧ್ಯಮದಲ್ಲಷ್ಟೆ ಕಲಿಯುತ್ತಿರುವುದರಿಂದ ಖಾಸಗಿ ಉದ್ಯಮದಲ್ಲಿ ನೌಕರಿ ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. ಆದ್ದರಿಂದ ದೀನ ದಲಿತರು ಮಾತೃಭಾಷೆಗಾಗಿ ಪ್ರಾಣವನ್ನೇ ಕೊಡಲು ಮುಂದಾಗುವ ಬದಲು ಉದ್ಯೋಗ ಸಿಗುವಂತಹ ಭಾಷಾ ಮಾಧ್ಯಮದ ಶಿಕ್ಷಣವನ್ನು ಕೇಳಬೇಕಾಗಿದೆ. ಹಾಗೆಯೇ ಒಂದು ಕಾಲದಲ್ಲಿ ಬುದ್ಧಿಜೀವಿಗಳು ಕಲಿಯುವಂತಿದ್ದ ವಿಷಯಗಳಾದ ಇತಿಹಾಸ, ರಾಜ್ಯಶಾಸ್ತ್ರ ಇತ್ಯಾದಿಗಳು ಇಂದಿಗೂ ಉಚಿತವಾಗಿ ಲಭ್ಯವಾಗುತ್ತಿರುವುದರಿಂದ ಬಡ ದಲಿತರು ನೌಕರಿ ಸಿಗಲಾರದಂತಹ ಈ ಬರಡು ವಿಷಯಗಳನ್ನು ಅಭ್ಯಾಸ ಮಾಡಬೇಕಾಗಿದೆ.ಸರ್ಕಾರದ ಕುರುಡು ಶಿಕ್ಷಣ ನೀತಿ ನೌಕರಿ ಸಿಗುವಂತಹ ವೃತ್ತಿನಿರತ, ವ್ಯಾಪಾರ, ವ್ಯವಹಾರ, ತಂತ್ರಜ್ಞಾನ, ವೈದ್ಯಕೀಯ ಶಿಕ್ಷಣಗಳನ್ನು ಬಡ ದಲಿತರ ಕೈಗೆಟುಕದ ಖಾಸಗಿ ಕಾಲೇಜುಗಳಿಗೆ ಅನುದಾನ ರಹಿತವಾಗಿ ಮಂಜೂರು ಮಾಡುತ್ತಿದೆ. ಆದ್ದರಿಂದ ದೀನ ದಲಿತರು ಇಂಗ್ಲೀಷ್ ಮಾಧ್ಯಮದಲ್ಲಿ ವೃತ್ತಿನಿರತ ಶಿಕ್ಷಣ ಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಬೇಕಾಗಿದೆ.

ಬಾಬಾಸಾಹೇಬರು ಹಿಂದು ಧರ್ಮವನ್ನು ತ್ಯಜಿಸಿ ಹೋದ ನಂತರವೂ ಬಹಳಷ್ಟು ದಲಿತರು ಹಿಂದುಗಳಾಗಿಯೆ ಉಳಿದರು. ತಮ್ಮ ಹುಟ್ಟು ಧರ್ಮವನ್ನು ತ್ಯಜಿಸಲಾಗದ ಇವರು ಮನುಸ್ಮೃತಿಯಿಲ್ಲದ ಸಮಾನತಾ ಹಿಂದು ಧರ್ಮವನ್ನು ಕಟ್ಟುವಲ್ಲಿ ಯಾವ ಪ್ರಯತ್ನವನ್ನು ಮಾಡಲಿಲ್ಲ. ಬದಲಿಗೆ ನಮ್ಮ ವಿದ್ಯಾವಂತ ದಲಿತರು ತಮ್ಮ ಮನೆ ದೇವರನ್ನು ಬದಿಗಿಟ್ಟು ಸತ್ಯನಾರಾಯಣ ಪೂಜೆಗೆ ಮುಂದಾಗುತ್ತಿರುವುದು ಶೋಚನೀಯ ಸಂಗತಿ. ದಲಿತರ ಸಾಮಾಜಿಕ ಅಸಮಾನತೆಗೆ ಹಿಂದು ಧರ್ಮದ ಸಿದ್ಧಾಂತಗಳೇ ಮೂಲ ಕಾರಣ. ಆದರೆ ಧರ್ಮ ಸುಧಾರಣೆಯನ್ನು ಕೇಳ ಬಯಸುವ ದಲಿತರಾರು ಕಾಣಸಿಗುತ್ತಿಲ್ಲ. ದಲಿತರ ಮತಾಂತರವನ್ನು ತಡೆಯಲೆತ್ನಿಸುವ ಸವರ್ಣೀಯ ಹಿಂದುಗಳು ಧರ್ಮ ಸುಧಾರಣೆ ಮಾಡಿ ಸಮಾನತೆಯನ್ನು ಜಾರಿಗೆ ತರಬೇಕೆಂಬ ವಾದ ದಲಿತರಲ್ಲಿ ಮೂಡಿಬರಬೇಕಾಗಿದೆ. ಒಂದು ರೀತಿಯಲ್ಲಿ ಮತಾಂತರವಾಗಲು ಅಥವಾ ಧರ್ಮ ಸುಧಾರಿಸಲು ಸವರ್ಣೀಯರು

ದಲಿತರಿಗೆ ಅವಕಾಶ ನೀಡುತ್ತಿಲ್ಲವೆಂದು ಸಹ ಹೇಳಬಹುದು. ಬಹಳಷ್ಟು ಬಾರಿ ಮತಾಂತರವಾದ ನಂತರವೂ ಜಾತಿಯತೆ ಮುಂದುವರೆದಿರುವುದು ದುರಾದೃಷ್ಟಕರ.

ಮೀಸಲಾತಿ ಸೌಲಭ್ಯಗಳಿಂದ ಲಕ್ಷಾಂತರ ಮಂದಿ ದೀನ ದಲಿತರ ಬಾಳಲ್ಲಿ ಬೆಳಕು ಬಂದಿದೆ. ಮೀಸಲಾತಿ ಸೌಲಭ್ಯದಿಂದ ದೇಶದ ಇಪ್ಪತ್ತೈದು ಕೋಟಿ ದಲಿತರ ಕಲ್ಯಾಣವಾಗಲು ಸಾಧ್ಯವಿಲ್ಲ. ಬದಲಾಗಿ ಈ ಸೌಲಭ್ಯಗಳನ್ನು ಸರ್ಕಾರ ಎಂದಾದರೂ ತೆಗೆದುಹಾಕಬಹುದು. ಹೀಗಿರುವಾಗ ಈ ಸೌಲಭ್ಯದ ಸೂಕ್ತ ಉಪಯೋಗಮಾಡಿಕೊಳ್ಳಬೇಕಾಗಿದೆ. ತೀರಾ ಬಡವರಿಗೂ ಸಹ ಈ ಸೌಲಭ್ಯ ದೊರೆಯುವ ನಿಟ್ಟಿನಲ್ಲಿ ಮುಂದುವರೆದ ದಲಿತರು ಮೀಸಲಾತಿ ಸೌಲಭ್ಯಗಳನ್ನು ಬಡವರಿಗಾಗಿ ಬಿಟ್ಟುಕೊಡುವುದು ಸೂಕ್ತವೇ ಹೊರತು ಮೀಸಲಾತಿ ವರ್ಗೀಕರಣಕ್ಕಾಗಿ ಹೊಡೆದಾಡುವುದೇನು ಸರಿ ಎನಿಸದು.

ರಾಜಕೀಯದಲ್ಲಿ ಮೀಸಲಾತಿ ಬಳಸಿ ಮಂತ್ರಿ, ಶಾಸಕರಾದ ದಲಿತರಂತು ತಮ್ಮ ಬಡಜನರ ಕಷ್ಟ ಕಾರ್ಪಣ್ಯಗಳನ್ನು ಬಗೆಹರಿಸುವಲ್ಲಿ ಸಾಕಷ್ಟು ಪ್ರಯತ್ನ ಪಟ್ಟಿಲ್ಲ. ಬದಲಿಗೆ ಸವರ್ಣೀಯರ ಸೇವೆ ಮಾಡಿ ಓಟುಗಳಿಸುವತ್ತಾ ನಡೆಯುತ್ತಿದ್ದಾರೆ. ಇನ್ನು ಮುಂದೆಯಾದರೂ ಬಡಜನರ ಕಷ್ಟಕಾರ್ಪಣ್ಯಗಳನ್ನು ಬಗೆಹರಿಸುವ ಸಹಜ ಗುಣ ನಮ್ಮ ರಾಜಕೀಯ ಮುಖಂಡರಲ್ಲಿ ಬರಬೇಕಾಗಿದೆ. ಸ್ವಾತಂತ್ರ್ಯ ನಮಗೇನು ಕೊಟ್ಟಿದೆ ಎನ್ನುವ ಬದಲು ಸ್ವಾತಂತ್ರ್ಯವನ್ನು ನಮ್ಮ ರಾಜಕಾರಣಿಗಳು ಹೇಗೆ ಬಳಸಿದ್ದಾರೆಂಬುದಕ್ಕೆ ಇದೊಂದು ಸೂಕ್ತ ನಿದರ್ಶನ.

ಶಿಕ್ಷಣ, ಸಂಘಟನೆ ಮತ್ತು ಹೋರಾಟ ಎಂದು ಹೇಳಿಹೋದರು ನಮ್ಮ ಬಾಬಾ ಸಾಹೇಬರು. ಶಿಕ್ಷಣದಲ್ಲಿ ಪದವಿಗಳನ್ನು ಪಡೆಯಲು ನಾವು ಕೊಡುತ್ತಿರುವ ಮಹತ್ವವನ್ನು ಜ್ಞಾನಾರ್ಜನೆಗೆ ಕೊಡುತ್ತಿಲ್ಲವೆಂದು ಕಂಡು ಬರುತ್ತಿದೆ. ಹಾಗಾಗಿ ಇಂದಿಗೂ ನಾವು ಸವರ್ಣೀಯರ ಸಲಹೆ ಕೇಳುವಲ್ಲಿ ಮುಂದಾಗುತ್ತಿದ್ದೇವೆ. ಎಷ್ಟು ಮಂದಿ ವಿದ್ಯಾವಂತರಾದರೆಂಬುದಲ್ಲ ಮುಖ್ಯ, ಎಷ್ಟು ಮಂದಿ ಜ್ಞಾನಾರ್ಜನೆ ಪಡೆದರೆಂಬುದು. ಅಸಮಾನತೆಗಳು ಎಲ್ಲೆಲ್ಲಿಯೂ ಮತ್ತು ಎಂದೆಂದಿಗೂ ಇರುತ್ತದೆ. ಆದರೆ ಜ್ಞಾನಾರ್ಜನೆಯನ್ನು ಗಳಿಸಿ ಉದ್ಯಮಶೀಲತೆಯನ್ನು ಕಲಿತು ತಮ್ಮದೇ ಆದ ಸಂಘ-ಸಂಸ್ಥೆ ಅಥವಾ ಉದ್ಯಮ ಗಳನ್ನು ಪ್ರಾರಂಭಿಸಿ ದೇಶ ವಿದೇಶಗಳಲ್ಲಿ ವ್ಯಾಪಾರ/ವ್ಯವಹಾರಗಳನ್ನು ಮಾಡಲೆತ್ನಿಸಿದಲ್ಲಿ ಅಸಮಾನತೆಗಳು ಅಡ್ಡಿಯಾಗಲಾರವು.

ನಮ್ಮವರಲ್ಲಿ ಹೊಸತನಕ್ಕೆ ಸಾಕಷ್ಟು ಆದ್ಯತೆ ಸಿಗುತ್ತಿಲ್ಲ. ಹುಟ್ಟಿನಿಂದ ಬಂದ ಕಸುಬು, ಊರು, ಸಂಸ್ಕೃತಿ ಮತ್ತು ಹವ್ಯಾಸಗಳು, ನಮ್ಮ ಪ್ರಗತಿಯನ್ನು ಕುಂಠಿತಗೊಳಿಸುತ್ತಿವೆ. ಕುಶಲತೆಗನುಗುಣವಾದ ಕಸುಬು, ನೌಕರಿ ಸಿಗಲನುಕೂಲವಾದ ಊರು, ಪ್ರಗತಿಶೀಲವಾದ ಸಂಸ್ಕೃತಿ ಮತ್ತು ಆರೋಗ್ಯಕರ ಹವ್ಯಾಸಗಳು ನಮ್ಮಲ್ಲಿ ಮೂಡಿಬರಬೇಕಾಗಿದೆ.

ನಮಗಾಗುತ್ತಿರುವ ಅನಾನುಕೂಲಗಳಿಗೆಲ್ಲಾ ಸಮಾಜವೇ ಕಾರಣವೆಂಬುದೇನು ಸರಿಯಲ್ಲ. ಕೆಲವೊಮ್ಮೆ ನಾವೂ ಸಹ ಕಾರಣರೆಂಬ ಪ್ರಾಮಾಣಿಕ ಅರಿವು ಮೂಡಿಬರಬೇಕು. ಉದಾಹರಣೆಗೆ ಹೆಂಡ ಸಾರಾಯಿ ಚಟಕ್ಕೆ ಬಲಿಯಾಗುವವರಲ್ಲಿ ನಮ್ಮವರೇ ಹೆಚ್ಚು ಮಂದಿ. ಕುಡಿಯುವ ಸ್ವಾತಂತ್ರ್ಯ ಎಲ್ಲರಿಗೂ ಇರುವಾಗ ಸವರ್ಣೀಯರಲ್ಲಿ ಕುಡಿತಕ್ಕೆ ಬಲಿಯಾಗುವವರ ಸಂಖ್ಯೆ ಕಡಿಮೆಯಾಗಿರಲು ಕಾರಣವೇನೆಂದು ಯೋಚಿಸುವ ಬದಲು ಸಾರಾಯಿ ಅಂಗಡಿಗೆ ಅನುಮತಿಕೊಟ್ಟ ಸರ್ಕಾರವನ್ನು ದೂಷಿಸುವುದು ನಮ್ಮ ಹವ್ಯಾಸವಾಗಿಬಿಟ್ಟಿದೆ.

ಸಮುದಾಯ ಸೇವಾ ಮನೋಭಾವನೆ ನಮ್ಮಲ್ಲಿ ತೀರಾ ಕಡಿಮೆ. ಪ್ರತಿಯೊಂದಕ್ಕೂ ಸರ್ಕಾರದ ಸಹಾಯ ಕೇಳುವಲ್ಲಿ ಅರ್ಥವಿಲ್ಲ. ಒಂದೆರಡು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದ ದೀನದಲಿತರು ಶಿಕ್ಷಣದ ವ್ಯಾಪಾರೀಕರಣಕ್ಕಿಳಿದು ದಲಿತರ ಶ್ರೇಯಸ್ಸಿಗೇನನ್ನು ಮಾಡುತ್ತಿಲ್ಲ. ಅಂದರೆ ದಲಿತರ ಸ್ವಸೇವಾ ಸಂಸ್ಥೆಗಳು ಹೆಚ್ಚು ಸಂಖ್ಯೆಯಲ್ಲಿ ಹುಟ್ಟಿಬರಬೇಕಾಗಿದೆ. ಅದರಲ್ಲೂ ಮುಖ್ಯವಾಗಿ ಜಾತಿಯ ಲಾಭ ಪಡೆದು ಬಡವರ ಹೆಸರಲ್ಲಿ ಕುರ್ಚಿ ಹಿಡಿವ ನಮ್ಮ ಅಧಿಕಾರಿಗಳು, ಮಂತ್ರಿ ಶಾಸಕರು ಹಾಗೂ ಇತರ ಗಣ್ಯರು ತಮ್ಮ ಬಡ ಬಂಧು ಬಾಂಧವರಿಗೆ ಲಂಚರಹಿತ ಸೇವೆ ನೀಡಬೇಕಾಗಿದೆ. ಪ್ರತಿ ವಿದ್ಯಾವಂತ ದಲಿತ ಅವಿದ್ಯಾವಂತರೊಬ್ಬರಿಗೆ ಪಾಠ ಹೇಳಲಾಗುವುದಿಲ್ಲವೇ? ಹೋರಾಟ ಮಾಡುವುದು ಅಥವಾ ಸಮಾಜವನ್ನು ದೂಷಿಸುವುದರಲ್ಲಿ ಇತಿಮಿತಿಗಳಿವೆ. ಕೆಟ್ಟದ್ದನ್ನಷ್ಟೆ ಹುಡುಕಿ ಸರಿಪಡಿಸಲು ಹೋರಾಡುವ ಬದಲು ಒಳ್ಳೆಯದೇನಿದೆ ಎಂಬುದನ್ನು ನೋಡಿ ಅಭಿವೃದ್ಧಿ ಪಡಿಸುವುದು ಸಹ ಪ್ರಗತಿಗೆ ಮೂಲಾವಶ್ಯಕ. ತೀರಾ ಅಸಮಾನತೆಯ ನಡುವೆಯೂ ಸಹ ಹಲವಾರು ಕ್ಷೇತ್ರಗಳಲ್ಲಿ ಮಹತ್ತರ ಪ್ರಗತಿ ಸಾಧಿಸಿರುವ ಅಮೇರಿಕದ ಕರಿಯರನ್ನು ಮೆಚ್ಚಬೇಕಾಗಿದೆ.

ಇದುವರೆವಿಗೆ ನಾವು ಕಾಣುತ್ತಿರುವ ಕ್ರಾಂತಿ, ಚಳುವಳಿ ಅಥವಾ ಹೋರಾಟಗಳು ಸರ್ಕಾರ, ಸಮುದಾಯ ಮತ್ತು ಗುಂಪುಗಳ ನಡುವೆ. ಈ ಬಾಹ್ಯಕ್ರಾಂತಿಗಳು ವ್ಯಕ್ತಿಯ ಆತ್ಮವನ್ನು ಸಂಪೂರ್ಣವೃದ್ಧಿ ಮಾಡಲಾರವು. ನಮ್ಮ ಆತ್ಮ, ಬುದ್ಧಿ, ಮನಸ್ಸು ಮತ್ತು ವ್ಯಕ್ತಿತ್ವಗಳಲ್ಲಿ ಪ್ರಗತಿಯಾಗಬೇಕಾದರೆ ಪ್ರತಿ ದಲಿತನ ಮನಸ್ಸಿನಲ್ಲಿ ಆಂತರಿಕ ಚರ್ಚೆ, ಸ್ಪರ್ಧೆ ಇತ್ಯಾದಿಗಳು ನಡೆದು, ವ್ಯಕ್ತಿ ವಿಕಾಸವಾಗಬೇಕು.

ಭಾರತದ ಸ್ವಾತಂತ್ರ್ಯ ನಾವು ಬಯಸಿದ್ದನ್ನೆಲ್ಲಾ ಕೊಟ್ಟಿಲ್ಲ ನಿಜ ಆದರೆ ಕೊಟ್ಟಿರುವುದನ್ನೆಲ್ಲಾ ನಾವು ಸೂಕ್ತವಾಗಿ ಬಳಸಿಕೊಂಡಿಲ್ಲವೆಂಬುದು ಸಹ ನಿಜ. ನಮ್ಮ ಹಕ್ಕುಗಳಿಗಾಗಿ ಹೋರಾಡುವ ಜೊತೆಗೆ ನಾವು ಮತ್ತು ನಮ್ಮವರ ಒಳಿತಿಗಾಗಿ ಪ್ರತಿ ಅನುಕೂಲಸ್ಥ ದಲಿತನು ಏನನ್ನು ಮಾಡಬಲ್ಲನೆಂದು ಯೋಚಿಸಿ ಸ್ವಸಹಾಯದಲ್ಲಿ ತೊಡಗಬೇಕಾಗಿದೆ. ಸಂ

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ, ಬೆಂಗಳೂರು - 560 091

ಮೀಸಲಾತಿಯಲ್ಲಿ ಬಡಬ್ರಾಹ್ಮಣರ ಪ್ರಶ್ನೆ

ಬ್ರಾಹ್ಮಣ, ಕ್ಷತ್ರಿಯ, ವೈಶ್ಯಾದಿ ಉತ್ತಮ ಕುಲದವರೆಂದು ಕರೆಯಿಸಿಕೊಳ್ಳುವ ಜನಾಂಗಗಳಲ್ಲಿನ ಆರ್ಥಿಕವಾಗಿ ಹಿಂದುಳಿದಿರುವ ಜನ ಸಮೂಹಗಳಿಗೆ ಶೇಕಡಾ 14ರಷ್ಟಾದರೂ ಸರ್ಕಾರಿ ಉದ್ಯೋಗಗಳನ್ನು ಮೀಸಲಾಗಿಡಬೇಕೆಂದು ರಾಜಸ್ಥಾನದ ಮುಖ್ಯಮಂತ್ರಿ ಶ್ರೀ ಅಶೋಕ ಗೆಲ್ಹೋಟ್ ಅವರು ಪ್ರತಿಪಾದಿಸಿದ ವಿಷಯ ಈಗ ವಾದ-ವಿವಾದಕ್ಕೊಳಗಾಗಿದೆ. ಸ್ವಾರಸ್ಯದ ಸಂಗತಿಯೆಂದರೆ ಪ್ರಬಲ ಪಕ್ಷಗಳೆನಿಸಿರುವ ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷಗಳೆರಡೂ ಈ ವಾದವನ್ನು ಎತ್ತಿ ಹಿಡಿದಿದ್ದು ಅದರ ಸಾಧಕ ಬಾಧಕಗಳನ್ನು ವೀಕ್ಷಿಸಲು ಮತ್ತು ಮುಂದುವರಿದ ಜನಾಂಗಗಳಲ್ಲಿನ ಬಡವರಿಗೆ ಸಹಾಯ ಮಾಡಬಹುದಾದ ಅವಕಾಶ ಇವೆಯೇ ಎಂಬುದನ್ನು ಪರಿಶೀಲಿಸಲು ಒಂದು ರಾಷ್ಟ್ರೀಯ ಮಂಡಳಿಯನ್ನು ರಚಿಸುವ ಆಲೋಚನೆ ಮಾಡಲಾಗುತ್ತಿದೆ.

ಉಚ್ಚ ವರ್ಣಗಳಲ್ಲಿನ ಆರ್ಥಿಕ ಅಶಕ್ತ ಜನ ಸಮುದಾಯಗಳಿಗೆ ಮೀಸಲಾತಿಯ ಲಾಭ ದೊರೆಯಬೇಕೆಂಬ ಉಗ್ರ ಸಮರ್ಥನೆಯನ್ನು ಭಾರತೀಯ ಜನತಾ ಪಕ್ಷದ ಸಾಮಾಜಿಕ ನ್ಯಾಯರಂಗ (Social Justice Front) ಹಾಗೂ ಅಖಿಲ ಭಾರತ ಬ್ರಾಹ್ಮಣರ ಒಕ್ಕೂಟದ ರಾಜಸ್ಥಾನದ ಶಾಖೆಯವರು ಮುಂದಿಡುತ್ತಿದ್ದಾರೆ. ಜನರ ಹಿಂದುಳಿಯುವಿಕೆಗೆ ಆರ್ಥಿಕ ಮುಗ್ಗಟ್ಟುಗಳು ಬಹು ಮಟ್ಟಿಗೆ ಕಾರಣವಾಗುವುದರಿಂದ ಮುಂದುವರಿದ ಜನಾಂಗಗಳಲ್ಲಿನ ಬಡವರಿಗೂ ಉದ್ಯೋಗ ಮೀಸಲಾತಿಗಳು ದೊರೆಯಬೇಕೆಂಬ ವಾದವನ್ನು ಭಾರತೀಯ ಜನತಾ ಪಕ್ಷವು ಮೊದಲಿನಿಂದಲೂ ಎತ್ತಿ ಹಿಡಿಯುತ್ತ ಬಂದಿದೆ.

ಕ್ಷತ್ರಿಯರು ಮತ್ತು ವೈಶ್ಯರು ಈಗಾಗಲೇ ಇತರ ಹಿಂದುಳಿದ ವರ್ಗಗಳು (O.B.C) ಎಂಬ ಪಟ್ಟಿಯಲ್ಲಿ ಸೇರಿರುವುದರಿಂದ ಬ್ರಾಹ್ಮಣರಿಗೆ ಆರ್ಥಿಕ ತಳಹದಿಯ ಮೇಲೆ ಉದ್ಯೋಗ ಮೀಸಲಾತಿ ಕರುಣಿಸಬಹುದೇ ಎಂಬ ಬಗ್ಗೆ ಈ ಲೇಖನವು ಪರಿಶೀಲಿಸಲು ಯತ್ನಿಸುತ್ತಿದೆ.

ಇನ್ನಿತರ ಜಾತಿಗಳಲ್ಲಿಯಂತೆ ಬ್ರಾಹ್ಮಣರಲ್ಲಿಯೂ ಬಡವರಿದ್ದಾರೆ. ಇದರಲ್ಲಿ ಸಂಶಯವಿಲ್ಲ. ಸ್ವಾತಂತ್ರ್ಯ ಬಂದ ಬಳಿಕ ಬ್ರಾಹ್ಮಣರ ಪರಿಸ್ಥಿತಿ ಬಹಳಷ್ಟು ಹದಗೆಟ್ಟಿದೆ ಎಂಬುದು ಕೂಡ ಒಪ್ಪಿಕೊಳ್ಳಬೇಕಾದ ಮಾತೇ. ಬ್ರಾಹ್ಮಣ ನಿರುದ್ಯೋಗಿಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಕಂಡು ಬರುತ್ತಿರುವುದನ್ನು ಯಾರು ಅಲ್ಲಗಳೆಯಲಾಗುವುದಿಲ್ಲ. ಅದಕ್ಕೋಸುಗ ಅರ್ಹ ಮತ್ತು ಅಗತ್ಯ ಉಳ್ಳ ಬ್ರಾಹ್ಮಣ ಪ್ರತಿಭಾವಂತರ ಉದ್ಯೋಗ ಸಂರಕ್ಷಣೆಯಾಗಬೇಕೆಂಬುದರ ಬಗ್ಗೆಯೂ ಎರಡು ಮಾತಿಲ್ಲ. ಆದರೆ ಈಗ ಉದ್ಭವಿಸುವ ಪ್ರಶ್ನೆಯೆಂದರೆ ನಮ್ಮ ಈಗಿನ ರಾಜ್ಯಾಂಗದ ಚೌಕಟ್ಟಿನಲ್ಲಿ ಅವರಿಗೆ ಮೀಸಲಾತಿಯ ಲಾಭಗಳನ್ನು ಹೇಗೆ ದೊರಕಿಸಿಕೊಡಬಹುದೆಂಬುದು.

ಸಾವಿರಾರು ವರ್ಷಗಳಿಂದ ನಿರಂತರ ಶೋಷಣೆಗೆ ಗುರಿಯಾಗಿರುವ ಜನವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡಲು ಜಾರಿಗೆ ತರಲಾದ ಮೀಸಲಾತಿ ಸೌಲಭ್ಯಗಳನ್ನು ಈಗ ಎಲ್ಲರಿಗೂ ವಿಸ್ತರಿಸುವ ಹುನ್ನಾರ ದೇಶದ್ಯಾಂತ ವ್ಯಾಪಕವಾಗಿ ನಡೆಯುತ್ತಿದೆ. ಮೀಸಲಾತಿ ನೀತಿಯನ್ನೇ ಬುಡಮೇಲು ಮಾಡುವ 'ಮೇಲ್ಜಾತಿ ಬಡವರಿಗೆ ಮೀಸಲಾತಿ' ಎಂಬ ಹೊಸ ಸಂಚು ಈಗ ಆರಂಭವಾಗಿದೆ. ಈ ಕುರಿತು ಒಂದು ಚಿಂತನೆ

ಮೂಲ : ಡಾ|| ಅಂಬಾರಾವ ಉಪಳಾಂವಕರ

ಅನು: ಬಿ. ಮಹದೇವಪ್ಪ

ಮೀಸಲಾತಿಯ ಧ್ಯೇಯೋದ್ದೇಶಗಳು:

ತಲೆತಲಾಂತರದಿಂದ ಪಂಚಮ ವರ್ಣದವರೆಂಬ ಹಣೆಪಟ್ಟಿಯ ಕಟ್ಟಿ ಅವರು ಕೀಳು ಕೆಲಸ ಮಾಡುವರೆಂಬ ಕಾರಣದಿಂದ ಹೊಲೆ-ಮಾದಿಗರು, ಡೋಹಾರ-ಸಮಗಾರರು, ಗುಡ್ಡ ಗಾಡಿನ ಆದಿವಾಸಿಗಳು ಮೊದಲಾದವರಿಗೆ ಅಸ್ಪೃಶ್ಯರೆಂಬ ಹಣೆ ಬರಹವನ್ನು ಬರೆದು, ಯಾರನ್ನು ಮೇಲೇಳದಂತೆ ತುಳಿದುಕೊಂಡು ಬರಲಾಗಿತ್ತೋ ಅಂತಹ ನತದೃಷ್ಟ ಜನರು ಶೈಕ್ಷಣಿಕ, ರಾಜಕೀಯ, ಉದ್ಯೋಗ ಕ್ಷೇತ್ರಗಳಲ್ಲಿ ಮುಖ್ಯ ಪ್ರವಾಹದಲ್ಲಿ ಬರಲು ಸಂಕರಕ್ಷಣಾತ್ಮಕವಾದ ಮೀಸಲಾತಿಯ ಅವಶ್ಯಕತೆ ಇದೆಯೆಂಬುದನ್ನು ನಮ್ಮ ಸ್ವತಂತ್ರ ಭಾರತದ ಮುಂದಾಳುಗಳು ಭಾವಿಸಿದರು. ಆಗಿನ ಮುಖ್ಯ ತಿಳುವಳಿಕೆಯೇನಾಗಿತ್ತೆಂದರೆ,

1) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಸಾಂಪ್ರದಾಯಿಕವಾಗಿ ಮೇಲ್ಜಾತಿಯವರಿಂದ ತುಳಿಯಲ್ಪಟ್ಟಿರುವರು.

2) ಸಾವಿರಾರು ವರ್ಷಗಳ ತಲೆಮಾರಿನ ಈ ಮಾರಕ ಭೇದ-ಭಾವವು ಅವರ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಿಂದುಳಿದಿರುವಿಕೆಗೆ ಕಾರಣವಾಗಿರುವುದು.

3) ಇಂಥ ಅವಕಾಶವಂಚಿತ ಜನರು, ಬಹಳ ದಿನಗಳಿಂದ ಸಂಪನ್ಮೂಲಗಳ ಮೇಲೆ ಕಪಿ ಮುಷ್ಟಿಯನ್ನು ಹೊಂದಿ ಸಕಲ ಸುಖ ಭೋಗಭಾಗ್ಯಾದಿಗಳನ್ನು ಪಡೆದ ಉನ್ನತ ವರ್ಣಿಯರೊಂದಿಗೆ ಶೈಕ್ಷಣಿಕ, ಉದ್ಯೋಗ ರಂಗಗಳಲ್ಲಿ ಸ್ಪರ್ಧಿಸುವುದು ಅಸಾಧ್ಯವಾದ ಮಾತೇ ಸೈ.

ವಾಲನ್ಸ್ ಮೆಂಡಲ್ ಸನ್ ಅವರು ಅಭಿಪ್ರಾಯ ವ್ಯಕ್ತಪಡಿಸಿರುವುದೇನೆಂದರೆ ಭಾರತದಲ್ಲಿ ಮೀಸಲಾತಿಯನ್ನು ಯಾಕೆ ಜಾರಿಗೆ ತರಲಾಯಿತೆಂದರೆ ದಲಿತ ಮತ್ತು ಹಿಂದುಳಿದ ಜನಾಂಗದ ಜನರಿಗೆ ಪ್ರತ್ಯೇಕ ಸಹಾಯ ಹಸ್ತ ನೀಡುವವರೆಗೆ ಅವರು ತಲೆತಲಾಂತರದ ಉಚ್ಚ ವರ್ಣಿಯರೊಂದಿಗೆ ಸ್ಪರ್ಧಿಸಬೇಕೆನ್ನುವುದು ಅನ್ಯಾಯ ಮತ್ತು ಅಸಮಾನತೆಯ ಅಂಶವಾಗುತ್ತದೆ.

ಹೊಸ ಕಾಲ ಮಾನಕ್ಕನುಗುಣವಾಗಿ ಭಿನ್ನವಾದ ಸಾಮಾಜಿಕ ಸ್ತರತೆಯನ್ನು ಪುನರ್‌ರಚಿಸಬೇಕಾಗುತ್ತದೆಯಲ್ಲದೆ ಬಹು ದಿನಗಳ ಹಿಂದಿನಿಂದ ಮೇಲು ವರ್ಗದವರು ಮತ್ತು ಕೆಳ ವರ್ಗದವರಲ್ಲಿ ಉಳಿದುಕೊಂಡು ಬಂದಿರುವ ಆರ್ಥಿಕ, ಶೈಕ್ಷಣಿಕ, ಅಂತರಗಳನ್ನು ಬೇರೆ ಬೇರೆ ಮಾರ್ಗಗಳ ಮೂಲಕ ಹೋಗಲಾಡಿಸಲು ಪ್ರಯತ್ನಿಸಬೇಕಾಗುತ್ತದೆ. ಸೂಕ್ತ ಪ್ರಾತಿನಿಧ್ಯದ ಸಾಧ್ಯತೆಯನ್ನು ಕಲ್ಪಿಸಿದಾಗಲೇ ಸರ್ಕಾರವು ಸಮರ್ಪಕವಾದ ಪ್ರಾತಿನಿಧ್ಯದ ಸ್ವರೂಪವನ್ನು ಪಡೆದಂತಾಗುತ್ತದೆ.

ಈ ಸಮರ್ಪಕ ಪ್ರಾತಿನಿಧ್ಯದ ಸ್ವರೂಪ ಪಡೆಯಲು ಸಮಾನಾವಕಾಶಗಳೆಂಬ ತತ್ವಕ್ಕೆ ತಿಲಾಂಜಲಿಯನ್ನು ನೀಡುವುದು ಅನಿವಾರ್ಯವಾಗುತ್ತದೆ. ಇದರಿಂದಾಗಿ ಕೆಲವೊಂದು ಮುಂದುವರಿದ ಜನಾಂಗಗಳಿಗೆ ಅನಾನುಕೂಲ ಮತ್ತು ಅಪಚಾರವಾಗುತ್ತಿದ್ದರೆ ಅವಕ್ಕೆ ಗತ್ಯಂತರವಿಲ್ಲ. ಸರ್ಕಾರದೆದುರು ಎಲ್ಲರೂ ಸಮಾನರೆಂಬ ತತ್ವ ನ್ಯಾಯ ಸರಿದೂಗಿಸುವ ಮಾನವೀಯತೆಯೆದುರು ತಲೆಬಾಗುವುದು ಅತ್ಯಗತ್ಯವಾಗಿರುತ್ತದೆ.

ಹಿಂದುಳಿದ ವರ್ಗಗಳನ್ನು ಗುರುತಿಸುವುದರಲ್ಲಿ ಪ್ರಪ್ರಥಮವಾದ ಹಿಂದುಳಿದ ವರ್ಗಗಳ ಆಯೋಗವು ಈ ಕೆಳಗಿನ ಮಾನದಂಡಗಳನ್ನು ಇಟ್ಟುಕೊಂಡಿದ್ದಿತು.

1) ಹಿಂದೂ ಧರ್ಮದ ಚಾತುರ್ವರ್ಣ ಪದ್ಧತಿಯಲ್ಲಿ ಆ ಸಮುದಾಯ ಶೂದ್ರವರ್ಣಕ್ಕೆ ಸೇರಿದುದಾಗಿರಬೇಕು.

2) ಆ ಸಮುದಾಯದ ಬಹಳಷ್ಟು ಜನರು ಶಿಕ್ಷಣ ಸೌಲಭ್ಯಗಳಿಂದ ವಂಚಿತರಾಗಿರಬೇಕು.

3) ಸರ್ಕಾರಿ ನೌಕರಿಗಳಲ್ಲದೆ ವ್ಯಾಪಾರ, ವಾಣಿಜ್ಯ ಮತ್ತು ಔದ್ಯಮಿಕ ಕ್ಷೇತ್ರಗಳಲ್ಲಿ ಕನಿಷ್ಟ ಪ್ರಾತಿನಿಧ್ಯವನ್ನು ಪಡೆದಿರಬೇಕು.

ಕಾಲಾನುಕಾಲಗಳಲ್ಲಿ ಬ್ರಾಹ್ಮಣ ವರ್ಗ:

ಭಾರತದಲ್ಲಿ ಬ್ರಾಹ್ಮಣರು ಎಲ್ಲ ಜಾತಿಗಳವರಿಗಿಂತ ಜಾಣರು, ಸಮರ್ಥರು, ಜಾಗೃತರು ಮತ್ತು ಚತುರ ಕ್ರಿಯಾಶೀಲರು ಎಂಬ ಅಗ್ಗಳಿಕೆಗೆ ಎಂದಿನಿಂದಲೂ ಪಾತ್ರ ರಾಗಿದ್ದಾರೆ. ಸಾವಿರಾರು ವರ್ಷಗಳಿಂದ ಅವರು ಸಾಮಾಜಿಕ ಶ್ರೇಣಿಯಲ್ಲಿ ಅಗ್ರಮಾನ್ಯರೆಂಬ ಗೌರವಕ್ಕೀನೆ ಭಾಜನರಾಗಿದ್ದಾರೆ. ಈ ಒಂದು ಮೇಲು ವರ್ಣದ ಸುಸಂಸ್ಕೃತ ಪಟ್ಟಭದ್ರ ಹಿತಾಸಕ್ತಿಯಿಂದಾಗಿ (ನ್ಯಾಯದ್ದೋ ಅನ್ಯಾಯದ್ದೋ) ಅವರು ಜ್ಞಾನದ ವಾರಸುದಾರರಾದ ರಲ್ಲದೆ ಧರ್ಮದ, ಧರ್ಮತರದ, ಚಾತುರ್ಯದ, ಪಾಂಡಿತ್ಯದ ಸಾಂಸ್ಕೃತಿಕ ಜೀವನದಲ್ಲಿ ಶ್ರೇಷ್ಠವೆಂದು ಭಾವಿಸಲ್ಪಟ್ಟರು. ಹಿಂದೂ ರಾಜರೇ ಇರಲಿ, ಮುಸಲ್ಮಾನ ರಾಜರೇ ಇರಲಿ ರಾಜಾಸ್ಥಾನಗಳ ಸಲಹಾತ್ಮಕ ಉದ್ಯೋಗಗಳು ಅವರ ವಶದಲ್ಲಿಯೇ ಇರುತ್ತಿದ್ದವು. ವೇದ, ಆಗಮ, ಉಪನಿಷತ್ತುಗಳನ್ನು ಅವರೇ ಓದುತ್ತಿದ್ದ ಕಾರಣದಿಂದ ಇಡೀ ಭಾರತೀಯ ಜನಾಂಗದ ಹಣೆಬರಹವನ್ನು ಬರೆಯುವ ಸಾಮರ್ಥ್ಯ ಅವರಿಗೆ ಮಾತ್ರ ಇತ್ತೆಂದು ಹೇಳಿದರೆ ಅತಿಶಯೋಕ್ತಿಯ ಮಾತಾಗಲಾರದು.

ಸಮೃದ್ಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಪೂರ್ವಾರ್ಜನೆ:

ಬ್ರಾಹ್ಮಣರು ಸಮೃದ್ಧ ಪಿತ್ರಾರ್ಜಿತ ಶೈಕ್ಷಣಿಕ ಮತ್ತು ಧಾರ್ಮಿಕ, ಸಾಂಸ್ಕೃತಿಕ ವಾರಸುದಾರರಾಗಿದ್ದಾರೆ ಅವರು ಹುಟ್ಟಿನಿಂದಲೇ ಜ್ಞಾನ ಮತ್ತು ಶಿಕ್ಷಣದ ಕಡೆಗೆ ಒಲವು ಉಳ್ಳವರಾಗಿರುತ್ತಾರೆ. ಧಾರ್ಮಿಕ ಶ್ರದ್ಧೆ ಮತ್ತು ಶೈಕ್ಷಣಿಕ ಪರಿಪೂರ್ಣತೆಯೇ ತಮ್ಮ ಮೋಕ್ಷದ ಸೋಪಾನಗಳೆಂದು ಅವರು ಸಹಜವಾಗಿಯೇ ತಿಳಿದುಕೊಂಡಿರುತ್ತಾರೆ. ಈ ಆಧುನಿಕಯುಗದಲ್ಲಿ ಬ್ರಾಹ್ಮಣ ವರ್ಗದಲ್ಲಿನ ಸ್ತ್ರೀ-ಪುರುಷರು ಉಭಯರೂ ಸ್ಪರ್ಧಾಭಾವದಿಂದ ಶೈಕ್ಷಣಿಕ ಔನ್ನತ್ಯವನ್ನು ಸಾಧಿಸಲು ಹರಸಾಹಸಗೈಯುತ್ತಿರುತ್ತಾರೆ. ವ್ಯಕ್ತಿಯೇ ಆಗಲಿ ಸಮುದಾಯವೇ ಆಗಲಿ ಈ ವೈಜ್ಞಾನಿಕ ಮತ್ತು ತಾಂತ್ರಿಕ ಯುಗದಲ್ಲಿ ಯಾರು ಆಧುನಿಕ ಶಿಕ್ಷಣವನ್ನು ಹೆಚ್ಚು ಹೆಚ್ಚು ಪ್ರಾಪ್ತ ಮಾಡಿಕೊಂಡಿರುತ್ತಾರೋ ಅವರು ಶಿಕ್ಷಣದ ಗಂಧವಿಲ್ಲದ ಜನರನ್ನು ಹಿಂದಕ್ಕೆ ಹಾಕಿ ಸುಖದ ಸುಪ್ಪತ್ತಿಗೆಯ ಉದ್ಯೋಗಗಳನ್ನು ಸಹಜವಾಗಿಯೇ ಪ್ರಾಪ್ತ ಮಾಡಿಕೊಂಡು ಬಿಡುತ್ತಾರೆ.

ರಾಷ್ಟ್ರ ಸ್ವಾತಂತ್ರ್ಯಾನಂತರ ಬ್ರಾಹ್ಮಣರು ತಮಗೆ ಉದ್ಯೋಗಾವಕಾಶಗಳು ಕಡಿಮೆಯಾದಾಗ ವೈದ್ಯ, ವಕೀಲಿ, ಇಂಜನಿಯರಿಂಗ್, ಆರ್ಕಿಟೆಕ್ಟ್ ಕರ ಸಲಹೆಗಾರರು, ಪತ್ರಿಕೋದ್ಯಮ ಮೊದಲಾದ ಸ್ವತಂತ್ರ ವೃತ್ತಿಗಳನ್ನು ಸುಲಭವಾಗಿ ಕೈಗೊಂಡರು. ತಾವು ಯಾವ ಕ್ಷೇತ್ರ ದಲ್ಲಿಯಾದರೂ ಸ್ವಾವಲಂಬನೆ ಪಡೆದುಕೊಳ್ಳಬಹುದೆಂಬ ಆತ್ಮವಿಶ್ವಾಸ ಹುಟ್ಟಿನ ಹಿನ್ನೆಲೆಯಿಂದಾಗಿ ಅವರಿಗೆ ಇದ್ದಿರುತ್ತದೆ.

> **ಬಡತನವು ಒಬ್ಬ ವ್ಯಕ್ತಿಯ ಅಥವಾ ಜನಾಂಗ ಹಿಂದುಳಿದಿರುವಿಕೆಗೆ ನಿರ್ಣಯಾತ್ಮಕ ಅಂಶವಾಗಲಾರದು. ಒಬ್ಬ ವ್ಯಕ್ತಿಯ ಜಾತಿಯ ಅಂತಸ್ತಿನ ಮೇಲೆ ಆ ವ್ಯಕ್ತಿಯ ಹಿಂದುಳಿದಿರುವಿಕೆ ನಿರ್ಧಾರವಾಗಿರುತ್ತದೆ. ನಿರ್ಧಾರಿತವಾಗಿಯೇ ಹೇಳಬೇಕೆಂದರೆ ಒಂದು ಜಾತಿ ಸಮಗ್ರವಾಗಿ ಹಿಂದುಳಿದಿದ್ದರೆ ಆ ಜಾತಿಯ ವ್ಯಕ್ತಿಯೂ ಹಿಂದುಳಿದಿರುತ್ತಾನೆ. ಸಾಮಾಜಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಕೆಲವೊಂದು ಅಳತೆಗೋಲುಗಳು ಇರುವ ರೀತಿಯಲ್ಲಿ ಆರ್ಥಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಅಂಥ ಅಳತೆಗೋಲುಗಳಿಲ್ಲ.**

ಜಾಗತೀಕರಣದ ಹೊಸಗಾಳಿಯಲ್ಲಿ ಸಾರ್ವಜನಿಕ ಉದ್ಯಮಗಳೆಲ್ಲ ಖಾಸಗೀಕರಣಗೊಳ್ಳುತ್ತಿರುವಾಗ, ಶಿಕ್ಷಣ ರಂಗವೂ ಖಾಸಗಿ ಜನರ ಸೊತ್ತಾಗುತ್ತಿರುವಾಗ ಇನ್ನು ಮುಂದೆ ಪ್ರತಿಭಾವಂತ ಅಭ್ಯರ್ಥಿಗಳಿಗೆ ಆಡಳಿತಾತ್ಮಕ ಹುದ್ದೆಗಳು ಹುಡುಕಿಕೊಂಡು ಬರುವ ಸಾಧ್ಯತೆ ಇದೆ. ಅಲ್ಲದೆ ಅವರು ಇತ್ತೀಚಿಗೆ ನೌಕರಿಗಳತ್ತ ಮುಖ ಮಾಡಿ ನಿಲ್ಲದೆ ವ್ಯಾಪಾರ, ವಾಣಿಜ್ಯ, ಕೈಗಾರಿಕೆಗಳಂಥ ಸ್ವತಂತ್ರ ಉದ್ಯಮಗಳ ಕಡೆಗೆ ಲಕ್ಷ ಹರಿಸುತ್ತಿದ್ದಾರೆ. ಒಟ್ಟಿನಲ್ಲಿ ಹೇಳಬಹುದಾದರೆ ನಮ್ಮ ಭಾರತೀಯ ಸಮಾಜದ ಬ್ರಾಹ್ಮಣ ಜನಾಂಗ ಎಲ್ಲರಿಗಿಂತ ಕ್ರಿಯಾಶೀಲರು, ಸಾಹಸ ಶೀಲರು, ಬುದ್ಧೀಶಾಲಿಗಳು, ಧೈರ್ಯಶಾಲಿಗಳು ಆಗಿದ್ದಾರೆ. ರಾಜ್ಯಾಂಗದ ಮೂಲಕ ನಾವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಉದ್ಯೋಗ ಮೀಸಲಾತಿಯ ಅವಕಾಶವನ್ನು ನೀಡಿದರೂ ಸಹ ಮುಂದೆಯೂ ಬ್ರಾಹ್ಮಣ ಯುವಕರು ನಿರುದ್ಯೋಗಿಗಳಾಗಿ ಅಲೆದಾಡಲಾರರೆಂಬ ಪೂರ್ಣ ನಂಬಿಕೆಯನ್ನು ನಾವು ತಾಳಬಹುದಾಗಿದೆ.

ಆರ್ಥಿಕ ಅಳತೆಗೋಲು ನಂಬಲರ್ಹ ಸೂಚಿಯಾಗಲಾರದು

ಆರ್ಥಿಕ ತಳಹದಿಯ ಮೇಲೆ ಕೆಲವಷ್ಟಾದರೂ ಉದ್ಯೋಗ ಮೀಸಲಾತಿಯನ್ನು ಕಲ್ಪಿಸಬೇಕೆಂಬ ಸದಸ್ಯರ ಸರ್ಕಾರಗಳ ಆಲೋಚನೆ ಸದ್ಯದ ರಾಜ್ಯಾಂಗದ ಚೌಕಟ್ಟಿನಲ್ಲಿ ಸಾಧ್ಯವಾಗಲಾರದೆಂಬ ಭಾವನೆ ನನ್ನದಾಗಿದೆ. ಪ್ರಸ್ತುತ ರಾಜ್ಯಾಂಗದಲ್ಲಿ ಹಿಂದುಳಿದ ಜಾತಿಗಳಿಗೆ ಮತ್ತು ಪಂಗಡಗಳಿಗೆ ಮೀಸಲಾತಿಯ ಸಹಾಯ ಹಸ್ತ ನೀಡಬೇಕೆಂಬ ನಿರ್ದೇಶನವಿದೆಯೇ ಹೊರತು ಆರ್ಥಿಕ ಅಂತಸ್ತು ಎಲ್ಲಿಯೂ ಪ್ರಸ್ತಾಪವಾಗಿಲ್ಲ. ಬಡತನವು ಒಬ್ಬ ವ್ಯಕ್ತಿಯ ಅಥವಾ ಜನಾಂಗ ಹಿಂದುಳಿದಿರುವಿಕೆಗೆ ನಿರ್ಣಯಾತ್ಮಕ ಅಂಶವಾಗಲಾರದು. ಒಬ್ಬ ವ್ಯಕ್ತಿಯ ಜಾತಿಯ ಅಂತಸ್ತಿನ ಮೇಲೆ ಆ ವ್ಯಕ್ತಿಯ ಹಿಂದುಳಿದಿರುವಿಕೆ ನಿರ್ಧಾರವಾಗಿರುತ್ತದೆ. ನಿರ್ಧಾರಿತವಾಗಿಯೇ ಹೇಳಬೇಕೆಂದರೆ, ಒಂದು ಜಾತಿ ಸಮಗ್ರವಾಗಿ ಹಿಂದುಳಿದಿದ್ದರೆ ಆ ಜಾತಿಯ ವ್ಯಕ್ತಿಯೂ ಹಿಂದುಳಿದಿರುತ್ತಾನೆ. ಉದಾಹರಣೆಗೆ ಹೇಳಬೇಕೆಂದರೆ, ಮೇಲ್ವರ್ಗಗಳ ಜಾತಿಯವರು ತಮ್ಮಲ್ಲಿನ ಬಡವಿದ್ಯಾರ್ಥಿಗಳಿಗಾಗಿ ವಸತಿ ಗೃಹಗಳನ್ನು ನಡೆಸುತ್ತಾರೆ. ವಿದ್ಯಾರ್ಥಿ ವೇತನಗಳನ್ನು ಕಲ್ಪಿಸುತ್ತಾರೆ. ವಿದ್ಯಾಭ್ಯಾಸವು ಮುಗಿದರೆ ತಮ್ಮ ಜಾತಿಯ ತರುಣರಿಗೆ ತಮ್ಮ ತಮ್ಮ ಉದ್ಯೋಗ ವ್ಯವಹಾರಗಳಲ್ಲಿ ನೌಕರಿ ಕೊಡುತ್ತಾರೆ. ಇದಲ್ಲದೆ ಸಾಮಾಜಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಕೆಲವೊಂದು ಅಳತೆಗೋಲುಗಳು ಇರುವ ರೀತಿಯಲ್ಲಿ ಆರ್ಥಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಅಂಥ ಅಳತೆಗೋಲುಗಳಿಲ್ಲ. ಇದೊಂದು ಭಾವನಾತ್ಮಕ ಅಂಶ ಅಷ್ಟೇ. ಎಲ್ಲಕ್ಕಿಂತ ಮುಖ್ಯವಾದುದೆಂದರೆ ನಮ್ಮ ರಾಜ್ಯಾಂಗವು ಆರ್ಥಿಕವಾಗಿ ಹಿಂದುಳಿದವರನ್ನು ಮುಂದಕ್ಕೆ ತರುವುದು ಸರ್ಕಾರದ ಕರ್ತವ್ಯ ಎಂದು ಎಲ್ಲಿಯೂ ಹೇಳಿಲ್ಲ.

ಆದರೂ ಸಹ ನಾವು ಮೀಸಲಾತಿಗಾಗಿ, ಆರ್ಥಿಕವಾಗಿ ಹಿಂದುಳಿದವರನ್ನು ಪರಿಗಣಿಸಬಹುದು ಎಂದು ತೀರ್ಮಾನಿಸಿಕೊಂಡರೂ ಆರ್ಥಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸುವುದಾದರೂ ಹೇಗೆ? ಸಾಮಾನ್ಯವಾಗಿ ಆ ಕುಟುಂಬದ ವಾರ್ಷಿಕ ಆದಾಯವನ್ನು ಅವಲಂಬಿಸಬೇಕಾಗುತ್ತದೆ. ವಾರ್ಷಿಕ ಆದಾಯದ ಪ್ರಮಾಣ ಕೊಡಲಿಕ್ಕೆ ಒಬ್ಬ ಸರ್ಕಾರಿ ಅಧಿಕಾರಿಯೇ ಆಗಬೇಕು. ಅವನು ಹೆಚ್ಚಾದರೂ ಹೇಳಬಹುದು, ಕಡಿಮೆಯಾದರೂ ಹೇಳಬಹುದು. ಯಾಕೆಂದರೆ ಆತನ ಹತ್ತಿರ ನಿರ್ದಿಷ್ಟ ಅಳತೆಗೋಲುಗಳಿರುವುದಿಲ್ಲ. ಹಿಂದಿನ ಅನುಭವದಿಂದ ಹೇಳಬೇಕೆಂದರೆ ಬಲಾಢ್ಯ ವ್ಯಕ್ತಿ ಅವಶ್ಯವಾಗಿರುವ ಆದಾಯ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು ಬಡವರಿಗೋಸುಗ ಮೀಸಲಾಗಿಟ್ಟಿರುವ ಸ್ಥಾನಗಳನ್ನು ಕಬಳಿಸುತ್ತಾನೆ.

ಇದರ ಜತೆಗೆ ಪರಮೋಚ್ಚ ನ್ಯಾಯಾಲಯವು ಮೀಸಲಾತಿ ಅರ್ಧಕ್ಕಿಂತ ಹೆಚ್ಚಾಗಬಾರದೆಂದುಗಾಗಲೇ ಸ್ಪಷ್ಟ ನಿರ್ದೇಶನ ನೀಡಿದೆ. ಆರ್ಥಿಕವಾಗಿ ಹಿಂದುಳಿದಿರುವವರಿಗೆ ಮೀಸಲಾತಿಯ ಸೌಲಭ್ಯ ನೀಡಬೇಕಾದರೆ ರಾಜ್ಯಾಂಗದಲ್ಲಿಯೇ ತಿದ್ದುಪಡಿಯಾಗಬೇಕು. ಸಾಧಾರಣವಾದ ಶಾಸನಗಳ ಮೂಲಕ ಅದು ಸಾಧ್ಯವಾಗುವುದಿಲ್ಲವೆಂದು ಅಟಾರ್ನಿ ಜನರಲ್ ಶ್ರೀ ಸೋಲಿ ಸೋರಾಬ್ಜಿಯವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಆರ್ಥಿಕವಾಗಿ ಅಶಕ್ತ ವರ್ಗಗಳಿಗೆ (E.W.S) ಮೀಸಲಾತಿ ಕಲ್ಪಿಸಬೇಕೆಂದು ರಾಜ್ಯಾಂಗ ತಿದ್ದುಪಡಿಗೆ ಕೈ ಹಾಕಿದರೆ ರಾಜ್ಯಾಂಗದ ಮೂಲ ಆಶಯಕ್ಕೇನೆ ಧಕ್ಕೆ ಬರುತ್ತದೆಯೆಂದು ಶ್ರೀ ಎಸ್.ಎಸ್. ಗಿಲ್ ಪ್ರತಿಪಾದಿಸಿದ್ದಾರೆ. (ದಿ ಹಿಂದೂ, 24-6-2003). ✤

ಭೂಸುಧಾರಣೆ ಕಾಣೆಯಾಗುತ್ತಿರುವುದೇಕೆ ?

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಭಾರತದ ಕೆಳಹಂತದ ಶೂದ್ರರು-ದಲಿತರು ಹಾಗೂ ಇತರೆ ಕೃಷಿಕಾರ್ಮಿಕರ ಆಶಾ ಕಿರಣವಾಗಿ ಮೂಡಿ ಬಂದ ಭೂಸುಧಾರಣೆ ಈಗ ತನ್ನ ಅಂತಃಸತ್ವವನ್ನೆಲ್ಲಾ ಕಳೆದುಕೊಂಡು ಸೊರಗಿ ಹೋಗಿದೆ. ಭೂಸುಧಾರಣೆ ಜಾರಿಗೆ ತರುವಾಗ ಇದ್ದ ರಾಜಕೀಯ ಬದ್ಧತೆ ನಂತರ ಆಳುವ ಪಕ್ಷಗಳಿಗೆ ಇಲ್ಲದೆ ಹೋಗಿದ್ದೇ ಇದಕ್ಕೆ ಮೂಲ ಕಾರಣ. ಬೇರೆ ಬೇರೆ ಕಾರಣಗಳಿಗಾಗಿ ಎಲ್ಲಾ ಪಕ್ಷಗಳೂ ಅದನ್ನು ಕಡೆಗಣಿಸುತ್ತಲೇ ಬಂದಿವೆ.

ಅನು: ಡೊಮಿನಿಕ್ ಡಿ.

ಠಾಕೂರರ ಪ್ರಾಬಲ್ಯವನ್ನು ಮುರಿಯಲು ಬ್ರಾಹ್ಮಣ ಮುಂದಾಳತ್ವದ ಕಾಂಗ್ರೆಸ್ ಜಮೀನ್ದಾರಿ ಪದ್ಧತಿಯ ನಿಷೇಧವನ್ನು ಬಳಸಿಕೊಂಡಿತೆಂದು ವಾದಿಸುವುದು ಕಷ್ಟಕರವೆನಿಸುತ್ತದೆ. ಆದರೂ, ಫಲಿತಾಂಶ ತೋರುವ ಹಾಗೆ, ಭೂಸುಧಾರಣೆಯಿಂದ ಮಿಲಿಯಗಟ್ಟಲೆ ಶೂದ್ರರು ಭೂಒಡೆಯರಾದರಲ್ಲದೆ ಠಾಕೂರರ ಪ್ರಾಬಲ್ಯದ ಅವನತಿಗೂ ಕಾರಣವಾಯಿತೆನ್ನಬಹುದು. ಇದರಿಂದ ವಿಶೇಷವಾಗಿ ಉತ್ತರ ಭಾರತದ ದಲಿತರಿಗೂ ಪ್ರಯೋಜನವಾಗಿದೆ. ಅದೇ ವೇಳೆ ಭೂಮಿತಿ ಕಾಯ್ದೆಗಳ ಹಂತಹಂತವಾದ ಜಾರಿಯು ಮೇಲ್ಮುಖಚಲನೆಯ ಶೂದ್ರರಿಗೂ ಪೆಟ್ಟನ್ನು ಕೊಟ್ಟಿತಲ್ಲದೆ, ದಲಿತರು ಸ್ವಲ್ಪ ಗಟ್ಟಿಯಾಗಲು ಸಹಾಯಕವಾಯಿತು. ಭೂಸುಧರಣಾ ಕಾನೂನಿನಲ್ಲಿ ಯಾವುದೇ ಪಿತೂರಿಯಿಲ್ಲವೆಂದು ಬ್ರಾಹ್ಮಣ ಪ್ರಾಬಲ್ಯದ ಸಮಾಜ ವಿಜ್ಞಾನ ಸಂಶೋಧಕರು ಹೇಳುತ್ತಿದ್ದಾರೆ. ಸಾಮಾಜಿಕ ನಡಾವಳಿಯಲ್ಲಿ ರಾಕ್ಷಸೀ ಪ್ರವೃತ್ತಿಯ ಠಾಕೂರರ ಬಗ್ಗೆ ಭಾರತೀಯ ಬುದ್ಧಿಜೀವಿ ವರ್ಗವು ಯಾವುದೇ ರೀತಿಯ ಗಂಭೀರ ಸಂಶೋಧನೆಯನ್ನೇನೂ ಮಾಡಿಲ್ಲ. ಹಾರ್ವರ್ಡ್‌ನ ಮಟ್ಟದಲ್ಲಿ ಸತ್ಯವು ಬಲಿಪಶುವಾಗುತ್ತದೆ. ಅಂದರೆ ಭಾರತೀಯ ಅಕಾಡೆಮಿಯ ಮಟ್ಟ ಪ್ರೌಢಶಾಲಾ ಮಟ್ಟಕ್ಕಿಂತ ಕೆಳಗಿದೆ. ದ್ವಂದ್ವಾತ್ಮಕವೆನಿಸಿದರೂ ತರ್ಕಬದ್ಧವಾಗಿ ಭಾರತೀಯ ಸಮಾಜದಲ್ಲಿ ಚಲನೆ ಆರಂಭವಾಗಿದೆಯೆನ್ನುವುದನ್ನು ಈ ಲೇಖನ ಧ್ವನಿಸುವುದಾದರೂ ಹೇಗೆ?

ಈ ಸನ್ನಿವೇಶದಲ್ಲಿ ಪ್ರೊ. ಶಂಕರ್‌ನಾಡರ್‌ರನ್ನ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ('ಬ್ರಾಹ್ಮಿಣ್ ಗೋಲ್ಡ್-ಸ್ವರ್ಗದ ಅವನತಿ' ಎನ್ನುವ ಅಂತರ್ಜಾಲ ಲೇಖನ ನೋಡಿ). ಪ್ರೊ. ನಾಡರ್ ಪೆರಿಯಾರ್‌ರವರ ಕಟ್ಟಾ ಅನುಯಾಯಿಯಾಗಿದ್ದು ಬರೆಯುವುದೇನೆಂದರೆ, 'ಬ್ರಾಹ್ಮಣರಂತೆ, ಉಚ್ಚ ಸ್ಥಾನವನ್ನು ಪಡೆಯಬಹುದಾಗಿದ್ದ ಕುಲೀನ ರಾಜಪೂತರನ್ನು ಮಟ್ಟಹಾಕಲಾಯಿತು. ಅವರ ಭೂಮಿಯನ್ನು ಕಿತ್ತುಕೊಂಡರಲ್ಲದೆ ಅವರ ಅರಮನೆಗಳನ್ನು ಹೋಟೆಲುಗಳನ್ನಾಗಿಸಿ, ಸರ್ಕಾರಿ ಸ್ವಾಮ್ಯಕ್ಕೆ ಒಳಪಡಿಸಲಾಯಿತು. ಬ್ರಾಹ್ಮಣ ಅಧಿಕಾರಿಗಳು ಈ ಅರಮನೆಗಳನ್ನು ಮತ್ತು ಹೋಟೆಲುಗಳನ್ನು ಆಕ್ರಮಿಸಿ ಕೊಳ್ಳಲಾರಂಭಿಸಿದರು'. ಈ ವಿಶ್ಲೇಷಣೆಯನ್ನು ಪ್ರೊ. ನಾಡರ್ ಕರೆಯುವುದು 'ರಾಜಪೂತ ಅಧಿಕಾರದ ನಿರ್ಮೂಲನೆ' ಯೆಂದು. ಅಲ್ಲದೆ ಅವರು ಮುಂದುವರೆದು, '1970 ಏಪ್ರಿಲ್ 2ರಂದು ಭಾರತೀಯ ರಾಜರಿಗೆ ಸಿಗುತ್ತಿದ್ದ ಸರ್ಕಾರದ ಹಣ ಮತ್ತು ವಿಶೇಷ ಅನುಕೂಲಗಳನ್ನು ನಿಲ್ಲಿಸಿದ್ದು ರಾಜಪೂತರನ್ನು ಹತ್ತಿಕ್ಕಲೆಂದೇ' ಎನ್ನುತ್ತಾರೆ.

ಪ್ರೊ. ನಾಡರ್‌ರವರ ವಿಚಾರಗಳನ್ನು ಸಂಪೂರ್ಣವಾಗಿ ತಳ್ಳಿಹಾಕಲಾಯಿತು. ಏಕೆಂದರೆ ದ್ವಿಜರೊಳಗಿನ ಪೈಪೋಟಿಯೂ ಚಾರಿತ್ರಿಕ ಸಂಗತಿಯೇ ಆಗಿದೆ. ರಾಜಪೂತರು ಮತ್ತು ವೈಶ್ಯರು ಬ್ರಾಹ್ಮಣರ ವಿರುದ್ಧ ಹೋರಾಡಿದ್ದರೂ ಸಹ, ದ್ವಿಜ ಯಾಜಮಾನ್ಯಕ್ಕೆ ಸವಾಲುಗಳು ಬಂದೆರಗಿದಾಗ ಅವರೆಲ್ಲಾ ಒಂದಾಗಿದ್ದಾರೆ. ಸ್ವಾತಂತ್ರ್ಯ ನಂತರ ಬ್ರಾಹ್ಮಣ ನಾಯಕತ್ವ ರಾಜಪೂತರನ್ನು ತಮ್ಮ ಪ್ರತಿಸ್ಪರ್ಧಿಗಳೆಂದು ಭಾವಿಸಿ, ಅವರ ಶಕ್ತಿಯನ್ನು ಮುರಿಯಲು ಜಮೀನ್ದಾರಿ ವ್ಯವಸ್ಥೆ ನಿರ್ಮೂಲನೆ ಕಾಯ್ದೆಯನ್ನು ಬಳಸಿಕೊಂಡರಷ್ಟೆ, ಆನಂತರದಲ್ಲಿ ದಕ್ಷಿಣದ ಕಡೆ ಎದ್ದ ಶೂದ್ರ ಪ್ರಾಬಲ್ಯ ಬ್ರಾಹ್ಮಣ ನಾಯಕತ್ವಕ್ಕೆ ಭಯವೊಡ್ಡಿದಾಗ ಹಲವಾರು ಭೂಮಿತಿ ಕಾಯ್ದೆಗಳನ್ನು ಪ್ರಾರಂಭಿಸುತ್ತಾರೆ. ಹಾಗೆಯೇ ಶ್ರೀಮಂತ ಬನಿಯಾಗಳೂ ಸಹ ಪ್ರತಿಸ್ಪರ್ಧಿಗಳಾಗುವ ಸಾಧ್ಯತೆ ಇತ್ತು. ಗಾಂಧೀಜಿ ಅದಕ್ಕೆ ಅತ್ಯುತ್ತಮ ನಿದರ್ಶನ. ಆದ್ದರಿಂದಲೇ ಪ್ರೊ. ನಾಡರ್‌ರ ಮಾತುಗಳಲ್ಲಿ 'ಮುಂಚೂಣಿಯಲ್ಲಿದ್ದ 14 ಬ್ಯಾಂಕುಗಳನ್ನು ರಾಷ್ಟ್ರೀಕರಿಸುವುದರ ಮುಖ್ಯ ಉದ್ದೇಶ ಬನಿಯಾ ಹಿಡಿತದಲ್ಲಿದ್ದ ಖಾಸಗಿ ಕಂಪನಿಗಳನ್ನು ಸರ್ಕಾರಿ ಸ್ವಾಮ್ಯಕ್ಕೆ ಒಳಪಡಿಸಿ, ಕ್ರಮೇಣ ಬ್ರಾಹ್ಮಣ ಅಧಿಕಾರಿಗಳು ಆ ಕಂಪನಿಗಳ ನಿರ್ವಹಣೆಯನ್ನು ನಿಭಾಯಿಸುವಂತೆ ಮಾಡುವುದೇ ಆಗಿತ್ತು.

ಆದರೆ ಈ ಮೇಲಿನ ನಾಡರ್‌ರ ಸಿದ್ಧಾಂತವನ್ನು ಬಲವಾದ ಸಾಕ್ಷಿಗಳ ಮೂಲಕ ಸಮರ್ಥಿಸಬಹುದೇ? ವಿಶೇಷವಾಗಿ ರಾಜಸ್ಥಾನ, ಬಿಹಾರ್, ಒರಿಸ್ಸಾ ಮತ್ತು ಕರ್ನಾಟಕಗಳಲ್ಲಿ ಮೊದಲ ಹಂತದ ಭೂಮಿತಿ ಕಾನೂನನ್ನು ಜಾರಿಗೆ ತಂದ ಮೇಲೆ ಹೆಚ್ಚುವರಿಯಾದ ಭೂಮಿಯೇನು ಉಳಿದಿಲ್ಲವೆಂಬ ಸಂಗತಿಯನ್ನು ಅನೇಕ ಭೂಸುಧಾರಣಾವಾದಿಗಳು ಗಮನಿಸಿದ್ದಾರೆ. ಇದಕ್ಕೆ ಅಷ್ಟೇನು ಸಂಬಂಧಿಸಿಲ್ಲವೆನಿಸಿದರೂ 60ರ ದಶಕದಲ್ಲಿ ರಾಜಸ್ಥಾನ, ಬಿಹಾರ್ ಹಾಗೂ ಒರಿಸ್ಸಾ ವಿಧಾನಸಭಾ ಚುನಾವಣೆಗಳಲ್ಲಿ 'ಸ್ವತಂತ್ರ' ಪಕ್ಷವು ಮುಖ್ಯವಾದ ವಿರೋಧ ಪಕ್ಷವಾಗಿ, ಅಖಿಲಭಾರತ ಮಟ್ಟದಲ್ಲಿ 207 ಅಸೆಂಬ್ಲಿ ಸ್ಥಾನಗಳನ್ನು ಪಡೆದಿತ್ತು, ಆದರೆ ಕಮ್ಯುನಿಸ್ಟರು 153, ಸೋಷಿಯಲಿಸ್ಟರು 149 ಹಾಗೂ ಜನಸಂಘದವರು 115 ಸ್ಥಾನಗಳಷ್ಟೇ ಗಳಿಸಲು ಶಕ್ತರಾಗಿದ್ದರು. ಈ ಎಲ್ಲದರಲ್ಲೂ ಇರುವ ಸಾಮಾನ್ಯ ಸಂಗತಿ ಯಾವುದು? ಕಾಂಗ್ರೆಸ್ಸಿನ ವಿರೋಧದ ಧ್ವನಿಯಷ್ಟೆ ಅಲ್ಲದೆ ನಮಗೆ ಗೊತ್ತಿರುವಂತೆ ಸೋಷಿಯಲಿಸ್ಟರು ಉನ್ನತಕ್ಕೇರುತ್ತಿರುವ ಶೂದ್ರರನ್ನು ಪ್ರತಿನಿಧಿಸಿದರು, ಜನಸಂಘದವರು ಬನಿಯಾಗಳನ್ನು, ಕಮುನಿಸ್ಟರು ಮಧ್ಯಮಜಾತಿ ರೈತರನ್ನು ಪ್ರತಿನಿಧಿಸಿದ್ದರು. ಆದರೆ ಸ್ವತಂತ್ರ ಪಕ್ಷದ ಸಾಮಾಜಿಕ ತಳಹದಿಯನ್ನು ಅಷ್ಟೇನೂ ಚರ್ಚಿಸಿರಲಿಲ್ಲ ಏಕೆ?

ಸಿ.ರಾಜಗೋಪಾಲಚಾರಿ, ಎನ್.ರಂಗ, ಮಿನೂ ಮಸಾನಿ, ಕೆ.ಎಂ. ಮುನ್ಷಿ ಹಾಗೂ ವಿ.ಪಿ.ಮೆನನ್‌ರಿಂದ ಸ್ಥಾಪಿತವಾದ ಸ್ವತಂತ್ರ ಪಕ್ಷವು ಭಾರತವು ಗಮನಿಸಿದ ಅತ್ಯಂತ ಬಲಪಂಥೀಯ ರಾಜಕೀಯ ಪಕ್ಷವೆಂದು ಪರಿಗಣಿತವಾಗಿತ್ತು. ಈ ಪಕ್ಷದ ಘೋಷಣೆಗಳೆಂದರೆ, 'ಆಸ್ತಿಯ ಸ್ವಾತಂತ್ರ್ಯ' ಮತ್ತು 'ಅತ್ಯುತ್ತಮ ಸರ್ಕಾರವೆಂದರೆ ಅತೀ ಕಮ್ಮಿ ಆಡಳಿತ', 'ರಾಜ್ಯಾಂಗದ ವ್ಯವಹಾರವೆಂದರೆ ಆಡಳಿತ ಮಾತ್ರ',... ಹೀಗೆ ಸಮಾಜದ ಆಂತರಿಕ ವಿಷಯಗಳಲ್ಲಿ ರಾಜ್ಯಾಂಗದ ಹಸ್ತಕ್ಷೇಪ ಇರದಂತೆ, ಅಥವಾ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗದಂತೆ ಸೂಚಿಸಿತ್ತು. ಅಂದರೆ ಸಾಂಪ್ರದಾಯಿಕ ಭಾರತೀಯ ಸಮಾಜ ತನ್ನ ಯಥಾ ಸ್ಥಿತಿಯನ್ನು ಕಾಯ್ದುಕೊಳ್ಳುತ್ತಾ ಪಾರಂಪರಿಕ ಆಸ್ತಿ-ಸಂಬಧಗಳನ್ನು ಏನೇ ಆಗಲಿ ಕಾಯ್ದುಕೊಳ್ಳಬೇಕಿತ್ತು. ಹೀಗೆ ಅದು ಹಳೆಯ ಆಸ್ತಿ ಸಂಬಂಧಗಳನ್ನು ಪುನರುಜ್ಜೀವಗೊಳಿಸಬಯಸುತ್ತದೆಯಲ್ಲದೆ ಆಧುನಿಕ ಪ್ರಜಾತಂತ್ರ ಗಣರಾಜ್ಯ ವ್ಯವಸ್ಥೆ ಸ್ವಾತಂತ್ರ್ಯಕ್ಕೆ ಮಾರಕವೆಂದು ಘೋಷಿಸುತ್ತದೆ. ಈ ಧೋರಣೆಯನ್ನು ಹಿಂದಿನ ರಾಜಮನೆತನಗಳು ಬಹುವಾಗಿ ಒಪ್ಪುವುದಲ್ಲದೆ, ಜಮೀನ್ದಾರಿ ವ್ಯವಸ್ಥೆ ನಿರ್ಮೂಲನೆಯನ್ನು ತಂದ ಬ್ರಾಹ್ಮಣೀಕೃತ ಕಾಂಗ್ರೆಸ್ಸನ್ನು ದ್ವೇಷಿಸಲಾರಂಭಿಸಿದ್ದರು. ರಾಜಾಸ್ಥಾನದ ದುಂಗ್ರಾಪುರದಲ್ಲಿನ ಮಹಾರ್ವಾಲ್, ಜೈಪುರಿನ ಮಹಾರಾಣಿ ಗಾಯತ್ರಿದೇವಿ, ಮಂಕಾಪುರ (ಉತ್ತರ ಪ್ರದೇಶ)ದ ರಾಜಾ, ರಾಮ್‌ಘರ್‌ನ (ಬಿಹಾರ್) ರಾಜಾ ಕಾಮಖ್ಯಾ....ಇವರೆಲ್ಲಾ ರಾಜಪೂತರೇ ಆಗಿದ್ದು ಸ್ವತಂತ್ರ ಪಕ್ಷದ ಬೆನ್ನುಲುಬಾದರು. ಈ ಸ್ವತಂತ್ರ ಪಕ್ಷದೊಡನೆ ಒರಿಸ್ಸಾದ ಗಣತಂತ್ರ ಪರಿಷತ್, ಹಾಗೂ ಗುಜರಾತಿನ ಖೇದುತ್ ಪಕ್ಷ, ಜಮೀನ್ದಾರಿ ಪದ್ಧತಿಯ ನಿರ್ಮೂಲನೆಯನ್ನು ವಿರೋಧಿಸುತ್ತಿದ್ದ ಇತರೆ ಗುಂಪುಗಳು ವಿಲೀನಗೊಂಡವು. ಕಾಂಗ್ರೆಸ್ಸಿನ ವಿರೋಧಿ ಧೋರಣೆಯ ಬ್ರಾಹ್ಮಣ-ವಿರೋಧಿ ಮತ್ತು ಪ್ರಜಾಪ್ರಭುತ್ವ ರಾಜ್ಯಾಂಗ ವ್ಯವಸ್ಥೆ ವಿರೋಧಿ, ಮನೋಭಾವದಿಂದ ಕೂಡಿದೆ. ಇದು ಅವರ ನಡಾವಳಿಯಲ್ಲೇ ಬೇರು ಬಿಟ್ಟದೆಯೆಂದು ಕಾಣುತ್ತದೆ. ಸಾಮಾಜಿಕವಾಗಿ ಒಂಟಿಗರಾದ ಠಾಕೂರರು ಸಾಮಾ

ಜಿಕ ಮೈತ್ರಿಗಾಗಿ ಕಾಯುತ್ತಿದ್ದರು. ಸ್ವತಂತ್ರ ಪಕ್ಷವು ಮೊದಲಿಗೆ ಯಾರೊಡನೆ ಮೈತ್ರಿ ಕೂಟವನ್ನು ರಚಿಸಿಕೊಂಡಿತ್ತೆಂದು ನೀವು ಊಹಿಸಬಲ್ಲಿರಾ; ಅದು ಮೊದಲಿಗೆ ರಾಜ ಸ್ಥಾನದ ಜನಸಂಘದೊಂದಿಗೆ, ಪಂಜಾಬಿನ ಅಕಾಲಿ ದಳ ಮತ್ತು ಮದ್ರಾಸಿನ ಡಿಎಂಕೆಯೊಂದಿಗೆ ಮೈತ್ರಿಯನ್ನು ಬೆಳೆಸಿತ್ತು. ಆದರೆ ಯಾವಾಗ ತನ್ನ ವರ್ಚಸ್ಸು ಕಮ್ಮಿಯಾಗತೊಡಗಿತೋ ಆಗ ಚರಣ್‌ಸಿಂಗ್‌ರ ಬಿಕೆಡಿಯೊಂದಿಗೆ ವಿಲೀನಗೊಂಡಿತು. ಇದೊಂದು ಚಾರಿತ್ರಿಕ ಹಂತವಾಗಿದ್ದು 70ರ ದಶಕದ ಆರಂಭದಲ್ಲಿ ಅಜಗರ್ ಸ್ವರೂಪ ಉದಯಿಸಲಾರಂಭಿಸಿತ್ತು. ಇಂದು ಈ ಅಜಗರ್ ಮೈತ್ರಿಕೂಟ ಉತ್ತರಪ್ರದೇಶದಲ್ಲಿ ಬಂದಿರುವುದು ಮೂರು ದಶಕಗಳ ಸಾಮಾಜಿಕ ಸ್ಥಿತ್ಯಂತರಗಳಿಂದ. ಬ್ರಾಹ್ಮಣರು ಜಮೀನ್ದಾರಿ ಪದ್ಧತಿಯನ್ನು ನಿರ್ಮೂಲನೆ ಮಾಡುವುದರ ಮೂಲಕ ಠಾಕೂರರಿಗೆ ಪಾಠ ಕಲಿಸಿದರು. ಹಾಗೆಯೇ ಬ್ರಾಹ್ಮಣರಿಗೆ ಸವಾಲೊಡ್ಡುತ್ತಿರುವ ಮೇಲ್ವರ್ಗದ ಶೂದ್ರರನ್ನು ನಿಯಂತ್ರಿಸಲು ಭೂಸುಧಾರಣೆಯ ಹೊಸ ಹಂತವನ್ನು ಆರಂಭಿಸಿಲಾಗಿದೆ. ಭೂಸುಧಾರಣಾ ಕ್ರಮಗಳು ಹೆಚ್ಚಾದಂತೆಲ್ಲಾ ಅದು ದಲಿತರಿಗೂ ಪ್ರಯೋಜನವಾಗುವುದಂತೂ ಖಂಡಿತ.

ಭೂಸುಧಾರಣೆಗಾಗಿ ಸಮೀಕ್ಷೆ ನಡೆಸಬೇಕು:

ಜನವರಿ 18, 1943ರಲ್ಲಿ ನ್ಯಾಯಮೂರ್ತಿ ಎಂ.ಜಿ. ರಾನಡೆಯವರ 101ನೇ ಜನ್ಮದಿನಾಚರಣೆಯನ್ನು ಪುಣೆಯಲ್ಲಿ ಹಮ್ಮಿಕೊಂಡಿದ್ದಾಗ ಡಾ.ಅಂಬೇಡ್ಕರವರು ಹೇಳಿದ್ದೇನೆಂದರೆ, 'ಈಗಾಗಲೇ ಅನುಭವ ತೋರಿಸಿರುವಂತೆ, ಕಾನೂನಿನಿಂದ ಹಕ್ಕುಗಳನ್ನು ಸಂರಕ್ಷಿಸಲಾಗದು, ಬದಲು ಸಮಾಜದ ನೈತಿಕ ಅಂತಃಸಾಕ್ಷಿಯಿಂದ ಮಾತ್ರ ಸಾಧ್ಯ. ಇಂಥ ಸಾಮಾಜಿಕ ಅಂತಃಸಾಕ್ಷಿ ಇದ್ದಲ್ಲಿ ಹಕ್ಕುಗಳು ಮಾನ್ಯಗೊಂಡು, ಕಾನೂನಿನಿಂದ ಹಕ್ಕುಗಳು ಸುಭದ್ರವಾಗಿರುತ್ತವೆ'. ಈ ಭಾಷಣವು ಡಾ. ಅಂಬೇಡ್ಕರ್‌ರವರ ತಾತ್ವಿಕತೆಯ ಮೂಲ ಸತ್ವವನ್ನು ಪ್ರತಿನಿಧಿಸುತ್ತದೆ. ಅವರು ಮುಂದುವರಿದು, 'ಒಂದು ಪ್ರಜಾಸತ್ತಾತ್ಮಕ ಸರ್ಕಾರವು, ಒಂದು ಪ್ರಜಾಸತ್ತಾತ್ಮಕ ಸಮಾಜವನ್ನು ಸೂಚಿಸುತ್ತದೆ. ಅಂಥ ಸಾಮಾಜಿಕ ಪ್ರಜಾಪ್ರಭುತ್ವವಿಲ್ಲದೆಡೆ ಕಾನೂನಿನ ಚೌಕಟ್ಟು ಮೌಲ್ಯವಿಲ್ಲದಂತಾಗುತ್ತದೆ ಮತ್ತು ಕೃತಕವೆನಿಸುತ್ತದೆ' ಎನ್ನುತ್ತಾರೆ.

ಅಂಬೇಡ್ಕರವರ ವಿಚಾರಧಾರೆಯ ಮೇರೆಗೆ ಸಾಮಾಜಿಕ ಪ್ರಜಾಪ್ರಭುತ್ವವು ಆರಂಭಿಕ ಹೆಜ್ಜೆಯೆನಿಸುತ್ತದೆ. ಅಗಾಧವಾದ ಪ್ರಜಾಪ್ರಭುತ್ವ ವಿರೋಧಿ, ಕೃಷಿ ಕಾರ್ಮಿಕ ಸಂಬಂಧಗಳಿರುವೆಡೆ ಅದು ಸಾಧ್ಯವಾಗಬಹುದೇ? ದಲಿತ ಅಭಿವ್ಯಕ್ತಿಯಲ್ಲಿ ಕೇಂದ್ರ ಸಂಗತಿಗಳೆಂದರೆ ದೌರ್ಜನ್ಯಗಳು, ಕಗ್ಗೊಲೆಗಳು, ಮಹಿಳಾ ಘನತೆಯ ಮೇಲೆ ಆಕ್ರಮಣಗಳು, ಅಸ್ಪೃಶ್ಯತೆ, ಅನಕ್ಷರತೆ, ಹಸಿವು, ಆದಿವಾಸಿಗಳನ್ನು ಬೇರ್ಪಡಿಸುವುದರಿಂದ ಅವರ ಸಂಪನ್ಮೂಲಗಳನ್ನು ಧ್ವಂಸ ಮಾಡುವುದು... ಇತ್ಯಾದಿ. ಹೀಗೆ ಅಭಿವ್ಯಕ್ತಿ ಮಾಡುವವರೆಂದರೆ ಬರಹಗಾರರು, ಕಾರ್ಯಕರ್ತರು, ರಾಜಕಾರಣಿಗಳು, ಸ್ವಯಂ ಸೇವಾ ಸಂಸ್ಥೆಗಳಲ್ಲಿರುವವರು. ಆದರೆ ಇವರ್‍ಯಾರು

ಈ ಭೂರಹಿತ ಕೃಷಿಕಾರ್ಮಿಗರು ದಲಿತ ಜನಸಂಖ್ಯೆಯಲ್ಲಿ ಅರ್ಧದಷ್ಟು ಇದ್ದಾರೆ. ಅವರ ಮಕ್ಕಳು ಇನ್ನೂ ಅಕ್ಷರ ಬೆಳಕನ್ನು ಕಾಣಬೇಕಿದೆ. ಈ ಕೃಷಿ ಆಸ್ತಿ-ಸಂಬಂಧಗಳು ಸಮಗ್ರವಾಗಿ ಮರುರಚನೆಗೊಳ್ಳಬೇಕಾದರೆ ಭೂಸುಧಾರಣ ಕ್ರಮಗಳು ಪ್ರಮುಖ ಪಾತ್ರವಹಿಸುತ್ತವೆ. ಆಗಲೇ ದಲಿತರ ಮೇಲಾಗುವ ಹಿಂಸೆಯನ್ನು ತಡೆಗಟ್ಟಬಹುದು ಮತ್ತು ಹಸಿವಿನ ಸಮಸ್ಯೆಯನ್ನು ಬಗೆಹರಿಸಬಹುದು. ಈ ವಿಭಾಗದ ದಲಿತರೇ ತಮ್ಮ ಮತದಾನವನ್ನು ತಮಗೆ ಬೇಕಾದ ಗುರುತಿಗೆ ಹಾಕುವುದಿಲ್ಲ. ಅಲ್ಲದೇ ಡಾ. ಅಂಬೇಡ್ಕರವರ ಹೋರಾಟದ ಪ್ರತಿಫಲವನ್ನು ಇನ್ನೂ ಪಡೆಯಬೇಕಿದೆ

ಅಂತಹ ಅಕ್ರಮಗಳ ಬಲಿಪಶುಗಳಲ್ಲ. ಸಾರ್ವಜನಿಕ ನೌಕರರು ಅವಧಿಗೆ ಸರಿಯಾಗಿ ಬಡ್ತಿ ಸಿಗದೆ, ಉತ್ತಮ ಸ್ಥಾನಗಳನ್ನು ಪಡೆಯದಿದ್ದರೂ, ಅವರೂ ಸಹ ಮೇಲೆ ಹೆಸರಿಸಿದ ಅಪರಾಧಗಳಿಗೆ ಸಿಲುಕುವುದಿಲ್ಲ. ಅಂದರೆ ಭೂರಹಿತ ಕೃಷಿ ಕಾರ್ಮಿಕರು ಮಾತ್ರ ವರ್ಣ ವ್ಯವಸ್ಥೆಯಿಂದ ದಮನಕ್ಕೊಳಗಾಗುತ್ತಿರುವುದು. ಅವರು ಅನೇಕ ಸಲ ಅಮಾನವೀಯ ಪರಿಸ್ಥಿತಿಗಳಲ್ಲಿ ಜೀವಿಸುತ್ತಿದ್ದು ದೈನಂದಿನ ಬದುಕಿನಲ್ಲಿ ಅವಮಾನ, ಹಸಿವು, ಅಪೌಷ್ಟಿಕ ಆಹಾರ, ಅಭದ್ರತೆಗಳಿದ್ದು, ಅವುಗಳೇ ಅವರ ಸಾಮಾಜಿಕ ಅಸ್ತಿತ್ವವನ್ನು ಘೋಷಿಸುತ್ತಿರುತ್ತದೆ. ಅಲ್ಲಿ ಮಹಿಳೆಯರ ಘನತೆ ಅಪತ್ತಿನಲ್ಲಿರುತ್ತದೆ. ಸಮುದಾಯವೇ ನಿರಂತರ ಹಿಂಸೆಗೆ ಗುರಿಯಾಗಿರುವುದು. ದೌರ್ಜನ್ಯಗಳು ಮತ್ತು ಕಗ್ಗೊಲೆಗಳು ಅವರ ಮೇಲೆಯೇ ನಡೆಯುತ್ತಿರುವುದು.

ಈ ಭೂರಹಿತ ಕೃಷಿಕಾರ್ಮಿಕರು ದಲಿತ ಜನಸಂಖ್ಯೆಯಲ್ಲಿ ಅರ್ಧದಷ್ಟು ಇದ್ದಾರೆ. ಅವರ ಮಕ್ಕಳು ಇನ್ನೂ ಅಕ್ಷರ ಬೆಳಕನ್ನು ಕಾಣಬೇಕಿದೆ. ಈ ಕೃಷಿ ಆಸ್ತಿ-ಸಂಬಂಧಗಳು ಸಮಗ್ರವಾಗಿ ಮರುರಚನೆಗೊಳ್ಳಬೇಕಾದರೆ ಭೂಸುಧಾರಣ ಕ್ರಮಗಳು ಪ್ರಮುಖ ಪಾತ್ರವಹಿಸುತ್ತವೆ. ಆಗಲೇ ದಲಿತರ ಮೇಲಾಗುವ ಹಿಂಸೆಯನ್ನು ತಡೆಗಟ್ಟಬಹುದು ಮತ್ತು ಹಸಿವಿನ ಸಮಸ್ಯೆಯನ್ನು ಬಗೆಹರಿಸಬಹುದು. ಈ ವಿಭಾಗದ ದಲಿತರೇ ತಮ್ಮ ಮತದಾನವನ್ನು ತಮಗೆ ಬೇಕಾದ ಗುರುತಿಗೆ ಹಾಕುವುದಿಲ್ಲ. ಅಲ್ಲದೇ ಡಾ. ಅಂಬೇಡ್ಕರವರ ಹೋರಾಟದ ಪ್ರತಿಫಲವನ್ನು ಇನ್ನೂ ಪಡೆಯಬೇಕಿದೆ ಮತ್ತು ಆಧುನಿಕ ಪ್ರಜಾಸತ್ತಾತ್ಮಕ ಭಾರತೀಯ ಗಣರಾಜ್ಯದಿಂದ ಇನ್ನೂ ಅವರು ಏನನ್ನಾದರೂ ಪಡೆಯಬೇಕಿದೆ. 'ಅಫ್ಲುವೆಂಟ್ ಸೊಸೈಟಿ' ಕೃತಿಯಲ್ಲಿ ಜಾನ್ ಕೆನೆತ್ ಗಲ್ಬ್ರೈಟ್ ಭಾರತೀಯ ಕೃಷಿಕಾರ್ಮಿಕರನ್ನು ಅತ್ಯಂತ ದುರಾದೃಷ್ಟರೆಂದು ವಿವರಿಸುತ್ತಾರೆ.

ನಮಗಿಂದು ಭೂಸುಧಾರಣೆ ಬೇಕಿದೆ. ಅಸ್ಪೃಶ್ಯ ವ್ಯಕ್ತಿ ಅಥವಾ ಆದಿವಾಸಿ ಯಾರೂ ತಮ್ಮ ಜೀವನೋಪಾಯಕ್ಕಾಗಿ ಜಮೀನ್ದಾರರನ್ನು ಆಶ್ರಯಿಸಬೇಕಿಲ್ಲ. ಅದನ್ನು ಸಾಧಿಸಲು ಹೊಸ ಭೂಸುಧಾರಣಾ ಕ್ರಮಗಳನ್ನು ತರುವಂಥ ರಾಜಕೀಯ ಪಕ್ಷಗಳು ನಮಗಿಂದು ಬೇಕು. ಜಮೀನ್ದಾರಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವುದಾದರೆ ಭೂಮಿತಿ ಕಾಯ್ದೆಗಳನ್ನೇಕೆ ಕ್ರಾಂತಿಕಾರಕವಾಗಿ ಮಾಡಬಾರದು? ಇಂದು ಆ ಪ್ರಶ್ನೆ ಮರೆಯಾಗಿ ಹೋಗಿದೆ. ಈ ವಿಷಯ ಕುರಿತಂತೆ ದಿಗ್ವಿಜಯ ಸಿಂಗ್‌ರ ಹೊಸ ಹೆಜ್ಜೆಯು ಭಾರತೀಯ ರಾಜಕಾರಣದಲ್ಲಿ ಯಾವುದೇ ಪರಿಣಾಮ ಬೀರಲಿಲ್ಲ. ದುರಂತವೆಂದರೆ ದಲಿತ ವಿಚಾರಧಾರೆಯಲ್ಲೂ ಭೂಸುಧಾರಣೆ ಸಂಗತಿ ಅಂತಹ ಮಹತ್ವವನ್ನೇನು ಪಡೆದುಕೊಳ್ಳಲಾಗಿಲ್ಲ.

ಭಾರತೀಯ ಕ್ರಿಯಾಹೀನ ಬೌದ್ಧಿಕವರ್ಗ, ತುರ್ತುಪರಿಸ್ಥಿತಿಯ ನಂತರ ರಾಜಕಾರಣದಲ್ಲಿ ಭೂಸುಧಾರಣೆ ಎನ್ನುವುದು ಏಕೆ ಕಾಣೆಯಾಯ್ತು ಎನ್ನುವುದರ ಬಗ್ಗೆ ಪರಿಶೀಲನೆ ನಡೆಸಲಿಲ್ಲ. ಅಂದರೆ ಹಳ್ಳಿಗಾಡಿನಲ್ಲಿ ಯಾಜಮಾನ್ಯದ ಲಕ್ಷಣವು ನಿರ್ಧಾರಾತ್ಮಕವಾಗಿ ಬದಲಾವಣೆಗೊಂಡು ಭೂ ಸುಧಾರಣೆಯನ್ನು ರಾಜಕೀಯ ಪಟುಗಳು ಕೈಬಿಡುವಂತಾಯಿತೆ? ಅಂತಹ ಬದಲಾವಣೆಯ ಲಕ್ಷಣವಾದರೂ ಏನು? ಯಾವ ಸಾಮಾಜಿಕ ವಿಭಾಗವು ಇಂದು ಭೂಮಿ ಕಬಳಿಸುವುದರಲ್ಲಿ ಮುಳುಗಿದ್ದು ಈ ಹೊಸ ಹಂತದ ಭೂಸುಧಾರಣೆಗೆ ಅಡ್ಡಿಯನ್ನುಂಟು ಮಾಡುತ್ತಿದೆ? ಈ ಸಂಶೋಧನೆಯನ್ನು ಕೈಗೆತ್ತಿಕೊಳ್ಳಲು ಯಾವುದೇ ದಲಿತ ಸಂಘಟನೆಯ ಕೈಯಲ್ಲಿ ಒಂದು ಮಿಲಿಯನ್ ಹಣ ಇರುವುದಿಲ್ಲ. ಹೈದ್ರಾಬಾದ್‌ನಲ್ಲಿರುವ ದಲಿತ ಅಧ್ಯಯನ ಕೇಂದ್ರ ಮುಖಂಡ ದಲಿತ ಪತ್ರಕರ್ತ ಎಂ. ಲಕ್ಷ್ಮಯ್ಯ ಅಥವಾ ಕರ್ನಾಟಕದ ದಸಂಸ ಬಹುದೊಡ್ಡ ಧ್ಯೇಯಗಳನ್ನು ಹೊಂದಿದ್ದರೂ ಸಹ, ಅಂತಹ ಒಂದು ಸಮೀಕ್ಷೆಯನ್ನು ಕೈಗೊಳ್ಳಲು ಹಣ ಮಾತ್ರ ಏನೂ ಇಲ್ಲ. ದಲಿತ ಇಂಟರ್‌ನ್ಯಾಷನಲ್ ಈಗ ತನ್ನ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಅಂತಹ ಸಮೀಕ್ಷೆಯನ್ನು ನಡೆಸುವಂತಾಗಬೇಕು. ಈ ಮೂಲಕ ದಲಿತ ಪ್ರಜ್ಞೆಯನ್ನು ಮರು ಸಂಘಟಿಸಬೇಕಿದೆ. ಸಾಮಾಜಿಕ ನರಕಕ್ಕೆ ದೂಡಲಾಗಿರುವ ಅರ್ಧದಷ್ಟು ದಲಿತ ಜನಾಂಗ

[illegible]ದಿಂದ ಹೊರಬರುವಾಗ, ಅವರನ್ನು ತಡೆಯುವ ಸಾಮಾಜಿಕ ಶಕ್ತಿಗಳನ್ನೂ [illegible]ದನ್ನು ಮರುಶೋಧಿಸಿಕೊಳ್ಳಬೇಕಿದೆ.

ಭೂಸುಧಾರಣೆಯನ್ನು ಯಾವುದೇ ಸಾಮಾಜಿಕ ವಿಭಾಗವೂ ಸಹ ದಲಿತ ವಿರೋಧಿ ಹಾಗೂ ಪ್ರಜಾಪ್ರಭುತ್ವ ವಿರೋಧಿ ಎಂದು ಊಹಿಸಬೇಕಿಲ್ಲ. ಬ್ರಾಹ್ಮಣ/ಬನಿಯಾ, ಕಾಯಸ್ಥರು, ದಲಿತರು ಮತ್ತು ಅಜ್‌ಗರ್ ಹಾಗೂ ಅವರ ಇತರೆಡೆಗಳಲ್ಲಿರುವ ಅವರ ಸಮಾನರು ಇವತ್ತಿನ ಸಂದರ್ಭದ ಮೂರು ಮುಖ್ಯ ಆಟಗಾರರಾಗಿದ್ದಾರೆ. ಈ ಸಮೀಕ್ಷೆಯನ್ನು (ಜಾತಿ ವರ್ಗೀಕರಣದ ಮೂಲಕ ಅನೇಕ ಏಜೆನ್ಸಿಗಳು ಚುನಾವಣಾ ಪೂರ್ವ ಸಮೀಕ್ಷೆಗಳನ್ನು ನಡೆಸುತ್ತವೆ) ಆಯ್ದ ಪ್ರಮುಖ ಗುಂಪುಗಳಲ್ಲಿ ನಡೆಸಿ, ಬ್ರಾಹ್ಮಣ, ದಲಿತ ಮತ್ತು ಅಜ್‌ಗರ್ ನಂತಹ ವಿಭಾಗಗಳಿಗೆ ಕೇಳಬೇಕಾಗಿರುವುದೇನೆಂದರೆ, 'ನೀವು ಭೂಒಡೆತನದಲ್ಲಿ ಶೇ.50ರಷ್ಟು ಮಿತಿಗೊಳಪಡಿಸಲು ಒಪ್ಪಿ ಉಳಿದ ಹೆಚ್ಚುವರಿ ಭೂಮಿಯನ್ನು ಕೃಷಿ ಕಾರ್ಮಿಕರಿಗೆ ವಿಶೇಷವಾಗಿ ದಲಿತರಿಗೆ ಹಂಚಲು ಇಚ್ಛಿಸುವಿರೇನು?' ಯಾವ ಸಾಮಾಜಿಕ ಪಂಗಡ ಭೂಸುಧಾರಣೆಗೆ ಹೆಚ್ಚಿನ ವಿರೋಧವನ್ನುಂಟುಮಾಡುತ್ತದೋ ಅದನ್ನು ಶತ್ರುಪಾಳಯಕ್ಕೆ ಸೇರಿದ್ದೆಂದು ಪರಿಗಣಿಸಬೇಕಾಗುತ್ತದೆ ಮತ್ತು ಯಾವ ರಾಜಕೀಯ ಪಕ್ಷಗಳನ್ನು ಅವರನ್ನು ಪ್ರತಿನಿಧಿಸುತ್ತವೋ, ಆ ಪಕ್ಷಗಳು ದಲಿತ ಶತ್ರುಗಳಲ್ಲಿ ನಂ. 1 ಎಂದಾಗುತ್ತದೆ! ದಲಿತ ಪಂಗಡ ಯಾವಾಗಲೂ ಭೂಸುಧಾರಣೆಯ ಪರವಾಗಿರುತ್ತದೆ. ಬ್ರಾಹ್ಮಣ ಮತ್ತು ಅಜ್‌ಗರ್ ಪಂಗಡದಲ್ಲಿ ಯಾರು ಭೂಸುಧಾರಣೆಯನ್ನು ವಿರೋಧಿಸುತ್ತಾರೋ, ಸಮೀಕ್ಷೆಯಲ್ಲಿ ತೋರಿಸಿದಂತೆ ಆ ಪಂಗಡವನ್ನು ದಲಿತ ವಿರೋಧಿ ನಂ.1 ಎಂದು ತಿಳಿಯಲೇಬೇಕು. ಅಂದರೆ, ಇಂದು ಯಾವ ಸಾಮಾಜಿಕ ಪಂಗಡ ಬ್ರಾಹ್ಮಣ ಅಥವಾ ಅಜ್‌ಗರ್ ದಲಿತ ಶತ್ರು ನಂ. 1 ಎಂದು ತಿಳಿಸುವ ಸಮೀಕ್ಷೆಯು, ದಲಿತ ವಿಚಾರಧಾರೆಯಲ್ಲಿನ ಮುಖ್ಯ ಪ್ರಶ್ನೆಯನ್ನು ನಿರ್ಧರಿಸುವಂತಾಗುತ್ತದೆ.

ಮರು ಹಂಚಿಕೆ ಮಾಡಲು ಸಾಕಷ್ಟು ಭೂಮಿ ಇದೆಯೆ?

ಭೂಸುಧಾರಣೆಯ ಹೊಸ ಹಂತವೇ ಅರ್ಧದಷ್ಟು ದುಡಿಯುವ ದಲಿತರಿಗೆ ಆಶಾಕಿರಣವಾಗುತ್ತದೆ. ಇವರು ತಮ್ಮ ಉಳಿವಿಗಾಗಿ ಬೇರೆಯವರ ಭೂಮಿಯಲ್ಲಿ ದುಡಿಯುತ್ತಿದ್ದಾರೆ. ಆದರೆ ಅವರ ದೈನಂದಿನ ಹಸಿವು ಇಂಗಿಸಲಾಗಿಲ್ಲ. ಅವರ ಘನತೆ ಯಾವಾಗಲೂ ಅಪಾಯದಲ್ಲಿದೆ. ಮಕ್ಕಳು ಕಲಿಯುವ ವ್ಯವಸ್ಥೆಯಿಂದ ದೂರ ಉಳಿಯುತ್ತಾರೆ. ಅವರ್‍ಯಾರು ಪ್ರಜಾಸತ್ತಾತ್ಮಕ ಸಂಸ್ಥೆಗಳಿಗೆ ಹತ್ತಿರ ಸುಳಿಯಲಾಗದು. ಕಳೆದ ಎರಡು ದಶಕಗಳಿಂದೀಚೆಗೆ ಭೂಸುಧಾರಣೆಯ ಪರವಾಗಿದ್ದ ನಿಲುವು ಕಣ್ಮರೆಯಾಗಿಬಿಟ್ಟಿದೆ. ಭಾರತದಲ್ಲಿನ ಕೃಷಿಕಾರ್ಮಿಕ ಸಂಬಂಧಗಳಲ್ಲಿ ಯಾವುದೇ ಬದಲಾವಣೆಯನ್ನು ವಿರೋಧಿಸುವವರು, ಒಂದು ಸರಳವಾದವನ್ನು ಸಾಮಾನ್ಯವಾಗಿ ಎಲ್ಲಾ ದಲಿತರು ಒಪ್ಪುವಂತೆ ಮಂಡಿಸುತ್ತಾರೆ. ಅಂದರೆ 'ಮರುಹಂಚಿಕೆಗೆ ಭೂಮಿ ಎಲ್ಲಿದೆ?' ಸ್ವಲ್ಪ ಅಂಕಿ-ಅಂಶ ಗೊತ್ತಿರುವವರೆಲ್ಲಾ ಒತ್ತಿ ಹೇಳುವುದೇನೆಂದರೆ 'ನೋಡಿ, 1951ರಲ್ಲೇ ಭಾರತದಲ್ಲಿ 361.10ಮಿಲಿಯನ್ ಜನ ನೆಲೆಸಿದ್ದರು. 2001ರ ಹೊತ್ತಿಗೆ ಅವರ ಸಂಖ್ಯೆ 1027.0 ಮಿಲಿಯನ್

ಭಾರತೀಯ ಅಕಾಡೆಮಿಕ್ ಶಿಸ್ತುಗಳು ವಿಶೇಷವಾಗಿ ಅರ್ಥಶಾಸ್ತ್ರವು, ರಾಮಮಂದಿರಕ್ಕಿಂತಲೂ ಹೆಚ್ಚಾದ ಪಾವಿತ್ರ್ಯವನ್ನು ಹೊಂದಿದೆ. ದಲಿತರು ಬೇರ್ಪಟ್ಟವರಾಗಿದ್ದು, ದಲಿತ ಅರ್ಥಶಾಸ್ತ್ರಜ್ಞರು ಪರಿಣಾಮಕಾರಿಯಾಗಿ ಈ ಭೂಸುಧಾರಣಾ ವಿರೋಧಿಗಳನ್ನು ಮೂಲೆಗುಂಪಾಗಿಸುವ ಯಾವುದೇ ಪ್ರಯತ್ನಗಳು ನಡೆಯುವುದಿಲ್ಲ. ನಾನೇನು ಅರ್ಥಶಾಸ್ತ್ರಜ್ಞನಲ್ಲದಿದ್ದರೂ, ಸ್ವಲ್ಪ ಕಾಮನ್ ಸೆನ್ಸ್ ಮೂಲಕ, ಸ್ವಲ್ಪ ಸರಿಯಾದ ಅಂಕಿ-ಅಂಶಗಳ ಮೂಲಕ, ಇಂದು ಖಚಿತವಾಗಿ ನಂಬಿರುವ ಸಂಗತಿಯೆಂದರೆ, ಹಂಚಿಕೆಗಾಗಿ ಇರುವ ಭೂಮಿ 1951ರಲ್ಲಿ ಇದ್ದುದಕ್ಕಿಂತಲೂ ಇಂದು ಹೆಚ್ಚಾಗಿದೆ.

ಆಗಿದೆ. ಆದ್ದರಿಂದ ಹೆಚ್ಚುವರಿ ಭೂಮಿ ಎಲ್ಲಿದೆ?, ಎಷ್ಟೊಂದು ತುಂಡು-ತುಂಡಾಗಿಬಿಟ್ಟಿದೆ. ಕುಟುಂಬಗಳಲ್ಲೇ ಎಷ್ಟೊಂದು ಭಾಗಗಳಾಗಿವೆ... ಇತ್ಯಾದಿ ಒಬ್ಬ ಸರಾಸರಿ ವಿಶ್ಲೇಷಣೆಯನ್ನೂ ಸಹ ಭೂಸುಧಾರಣಾ-ವಿರೋಧಿಗಳ ಗಾಳಕ್ಕೆ ಸಿಲುಕಿಬಿಡುತ್ತಾನೆ.

ಭಾರತೀಯ ಅಕಾಡೆಮಿಕ್ ಶಿಸ್ತುಗಳು ವಿಶೇಷವಾಗಿ ಅರ್ಥಶಾಸ್ತ್ರವು, ರಾಮಮಂದಿರಕ್ಕಿಂತಲೂ ಹೆಚ್ಚಾದ ಪಾವಿತ್ರ್ಯವನ್ನು ಹೊಂದಿದೆ. ದಲಿತರು ಬೇರ್ಪಟ್ಟವರಾಗಿದ್ದು, ದಲಿತ ಅರ್ಥಶಾಸ್ತ್ರಜ್ಞರು ಪರಿಣಾಮಕಾರಿಯಾಗಿ ಈ ಭೂಸುಧಾರಣಾ ವಿರೋಧಿಗಳನ್ನು ಮೂಲೆಗುಂಪಾಗಿಸುವ ಯಾವುದೇ ಪ್ರಯತ್ನಗಳು ನಡೆಯುವುದಿಲ್ಲ. ನಾನೇನು ಅರ್ಥಶಾಸ್ತ್ರಜ್ಞನಲ್ಲದಿದ್ದರೂ, ಸ್ವಲ್ಪ ಕಾಮನ್ ಸೆನ್ಸ್ ಮೂಲಕ, ಸ್ವಲ್ಪ ಸರಿಯಾದ ಅಂಕಿ-ಅಂಶಗಳ ಮೂಲಕ, ಇಂದು ಖಚಿತವಾಗಿ ನಂಬಿರುವ ಸಂಗತಿಯೆಂದರೆ, ಹಂಚಿಕೆಗಾಗಿ ಇರುವ ಭೂಮಿ 1951ರಲ್ಲಿ ಇದ್ದುದಕ್ಕಿಂತಲೂ ಇಂದು ಹೆಚ್ಚಾಗಿದೆ. 1951ರಲ್ಲಿ 361.1 ಮಿಲಿಯನ್ ಜನ ಭಾರತದಲ್ಲಿದ್ದರೆಂಬುದನ್ನು ಒಪ್ಪೋಣ. ಅಂದಿನಿಂದ ಜನಸಂಖ್ಯೆ ಮೂರು ಪಟ್ಟುಹೆಚ್ಚಾಗಿದೆ. ಆದರೆ, 1951ರಲ್ಲಿ ಶೇ. 82.70ರಷ್ಟು ಭಾರತೀಯರು ಮಾತ್ರ ಅಂದರೆ ಶೇ. 298.60 ಮಿಲಿಯನ್ ಜನ ತಮ್ಮ ಜೀವನ ನಿರ್ವಹಣೆಗಾಗಿ ಭೂ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿದ್ದರು. ಇಂದು 1027.0 ಮಿಲಿಯನ್ ಭಾರತೀಯರಲ್ಲಿ ಕೇವಲ ಶೇ. 72.22ರಷ್ಟು ಅಥವಾ 7,41 ಮಿಲಿಯನ್ ಜನ ಭೂಮಿ ಮೇಲೆ ಅವಲಂಬಿತವಾಗಿದ್ದಾರೆ. ಇದರರ್ಥ 1951- 2001ರ ನಡುವೆ, ಒಟ್ಟು ಭಾರತದ ಜನಸಂಖ್ಯೆಯ ಶೇ. 10 ರಷ್ಟು ಜನ ಕೃಷಿ ವಿಭಾಗದಿಂದ ಹೊರಬಂದಿದ್ದಾರೆ. ಅಂದರೆ ಜನಸಂಖ್ಯೆ 1951ರ ನಂತರ ಮೂರು ಪಟ್ಟು ಹೆಚ್ಚಾದರೂ, ಭೂಮಿ ಮೇಲಿನ ಅವಲಂಬನೆ ಅದೇ ರೀತಿ ಬೆಳೆಯಲಿಲ್ಲ. ಹಾಗಾದರೆ, ಜನಸಂಖ್ಯೆಯ ಅಗಾಧ ಹೆಚ್ಚಳ ಮತ್ತು ಕುಟುಂಬಗಳಲ್ಲಿನ ಬೇರ್ಪಡುವಿಕೆ ಭೂ ಸಂಪನ್ಮೂಲಗಳ ಮೇಲೆ ಒತ್ತಡ ಹೆಚ್ಚಿಸಿತು ಎಂಬ ವಾದ ಸಿಲ್ಲುವುದಿಲ್ಲ.

ಆದರೂ, ಕುಯುಕ್ತಿಯ ಜನ ಅಲ್ಲಿಗೆ ಸುಮ್ಮನಿರಲಾರರು. ಅವರ ವಾದ ಮುಂದುವರೆಯುತ್ತದೆ. ಸರಿಯಪ್ಪ ಭೂಮಿ ಮೇಲಿನ ಅವಲಂಬನೆ ಮೂರು ಪಟ್ಟು ಬೆಳೆಯಲಿಲ್ಲವಾದರೂ, 2001ರಲ್ಲಿ 741.7 ಮಿಲಿಯನ್ ಭಾರತೀಯರು ಭೂಮಿ ಮೇಲೆ ಅವಲಂಬಿತರಾಗಿಲ್ಲವೇ? ಎನ್ನುತ್ತಾರೆ ಎಲ್ಲದಕ್ಕೂ ಮಿತಿ ಇದೆ. ತಪ್ಪು ಎಂದಾದರೂ ಬೀಳಲೇಬೇಕು. ಈ ಭೂಸುಧಾರಣಾ-ವಿರೋಧಿಗಳು ಇತರೆ ಸಂಗತಿಗಳನ್ನು ಉಲ್ಲೇಖಿಸಲಾರರು. ಅಂದರೆ 1951ರಲ್ಲಿ ಕೃಷಿ ಯೋಗ್ಯ ಭೂಮಿ 284.32 ಮಿಲಿಯನ್ ಹೆಕ್ಟೇರ್‌ಗಳಾಗಿತ್ತು. ಅದು 1998ರ ವೇಳೆಗೆ 306.08 ಹೆಕ್ಟೇರ್‌ಗಳಿಗೆ ವಿಸ್ತರಿಸಿಕೊಂಡಿತು. ಅಂದರೆ 21.79 ಮಿಲಿಯನ್ ಹೆಕ್ಟೇರ್‌ಗಳು ಅಥವಾ ಶೇ. 7.65ಅಧಿಕವಾದುದನ್ನು ಕಾಣುತ್ತೇವೆ. ಇದು ಭೂ ಸಂಪನ್ಮೂಲಗಳ ಮೇಲೆ ಅವಲಂಬಿತ ಜನರ ಹೆಚ್ಚಳವನ್ನು ಸರಿದೂಗಿಸಲಿಲ್ಲವೇ?

ಆದರೆ ಆ ಜನ ವಾದಿಸುವುದನ್ನು ನಿಲ್ಲಿಸುವುದಿಲ್ಲ ಸರಿಯಪ್ಪ, ಇದು 21.79 ಮಿಲಿಯನ್ ಜನರಿಗೆ ಸಾಲುತ್ತದೆಯಷ್ಟೇ. 1 ಹೆಕ್ಟೇರ್ ಎಂದರೆ 2.40 ಹೆಕ್ಟೇರ್ ಭೂಮಿಗೆ ಸಮ. ಹೀಗಿರುವಲ್ಲಿ ನೀರಾವರಿ ಭೂಮಿಯ ಹೆಚ್ಚಳವನ್ನು ಪರಿಗಣಿಸಬಾರದೇ? 1951ರಲ್ಲಿ ಒಟ್ಟಾರೆ ಭೂಮಿಯಲ್ಲಿ 20.84 ಮಿಲಿಯ ಹೆಕ್ಟೇರ್ ನೀರಾವರಿ ಸೌಲಭ್ಯವನ್ನು ಹೊಂದಿತ್ತು. ಅದು 1998ರ ವೇಳೆಗೆ 75.55 ಮಿಲಿಯನ್ ಹೆಕ್ಟೇರ್‌ಗಳಿಗೆ ವ್ಯಾಪಿಸಿತು. ಅಂದರೆ 4 ಪಟ್ಟು ಹೆಚ್ಚಾಯಿತಲ್ಲವೇ? ಇದು ಭೂ ಸಂಪನ್ಮೂಲಗಳ ಮೇಲೆ ಅವಲಂಬಿತರಾದ ಜನರನ್ನು ಸರಿದೂಗಿಸಲಿಲ್ಲವೇ? ರಾಸಾಯನಿಕ ಗೊಬ್ಬರಗಳ ಬಳಕೆ, ಕ್ರಿಮಿನಾಶಕಗಳ ಬಳಕೆ ಅನೇಕ ಪಟ್ಟು ಹೆಚ್ಚಾಗಿದೆ. ಹಾಗೆಯೇ ಬೀಜದ ಗುಣಮಟ್ಟವೂ ಸಹ ಸುಧಾರಿಸಿದೆ. ಈ ಎಲ್ಲಾ ಸಂಗತಿಗಳನ್ನು ಲೆಕ್ಕಹಾಕುವುದಾದರೆ ಮತ್ತು ಕೃಷಿಯೋಗ್ಯ ಭೂಮಿಯ ಪಟ್ಟಿಯೊಂದನ್ನು ತಯಾರಿಸುವುದಾದರೆ 1951ರಲ್ಲಿದ್ದ ಒಂದು ಹೆಕ್ಟೇರ್, 2001ರ ವೇಳೆಗೆ 6 ಹೆಕ್ಟೇರ್‌ಗಳಿಗೆ ಸಮನಾಗುತ್ತದೆ.

ಅಂದರೆ 1951-2001ನ ನಡುವೆ ಜನಸಂಖ್ಯೆ ಮೂರು ಪಟ್ಟು ಹೆಚ್ಚಾದರೆ, ಕೃಷಿ ಭೂಮಿ 6 ಪಟ್ಟು ವಿಸ್ತರಿಸಿದೆ. ಹಾಗೆಯೇ ಕೃಷಿಯೊಳಗಡೆ ಇರುವ ಇತರ ಚಟುವಟಿಕೆಗಳಾದ ಹಾಲು ಉತ್ಪನ್ನ, ಮೀನುಸಾಕಾಣಿಕೆ, ಇತ್ಯಾದಿಗಳು ಸಹ ಅನೇಕ ಬಾರಿ ಹೆಚ್ಚಳವಾಗಿವೆ. ಇವು ಭೂ ಸಂಪನ್ಮೂಲಗಳ ಮೇಲಿನ ಒತ್ತಡವನ್ನು ತೆಗೆದುಹಾಕಿವೆ. ಹಾಗಾಗಿ ಇಂದು ಬಯಸುವ ಭೂಸುಧಾರಣೆಗೆ ಜನಸಂಖ್ಯೆ ಹೆಚ್ಚಳದ ಗುಮ್ಮ ಕೂರಿಸುವುದು ಸಮಂಜಸ ಎನಿಸುವುದಿಲ್ಲ.

ಭೂಸುಧಾರಣಾ ವಿಷಯವನ್ನು ಮರೆಮಾಚಲು ಇಂದು ಭಾರತೀಯ ರಾಜಕಾರಣ ಅಪಾಯಕಾರಿಯಾಗಿ ಬೆಳೆದಿದೆ. ಇದೊಂದು ಭಯಾನಕ ಸಂಕೇತ. ಬೆಳೆಯುತ್ತಿರುವ ಬಿಕ್ಕಟ್ಟಿಗೆ ದಲಿತರು ತೋರುತ್ತಿರುವ ಪ್ರತಿಕ್ರಿಯೆ ಏನೇನೂ ಸಾಲದು. ಒಂದೆಡೆ ಆರ್ಥಿಕ ಸುಧಾರಣೆಗಳು ಈಗಾಗಲೆ

ನೆಲೆಯೂರಿರುವ ದಲಿತರನ್ನು ಹೆದರಿಸುತ್ತಿದ್ದರೆ, ಭೂ ಸುಧಾರಣಾ ವಿರೋಧಿಗಳು ಹಳ್ಳಿ ಗಾಡಿನ ದಲಿತರನ್ನು ಸದೆಬಡಿಯುವಂತಾಗಿದೆ. ವೈವಿಧ್ಯತೆಯ ನೆಪದಲ್ಲಿ ಶಿಕ್ಷಿತ ದಲಿತರು ಕೈಗಾರಿಕೆ, ವಾಣಿಜ್ಯ ಮತ್ತು ಸಾರ್ವಜನಿಕ ರಂಗಗಳಲ್ಲಿ ತಮ್ಮ ಪ್ರಾತಿನಿಧ್ಯವನ್ನು ಸ್ಥಾಪಿಸುತ್ತಿದ್ದಾರೆ. ಈ ದಲಿತರೆಲ್ಲಾ ಭೂಸುಧಾರಣಾ ಸಂಗತಿಯ ಕಡೆಗೂ ಅದೇ ಗಮನವನ್ನು ನೀಡಬೇಕಿದೆ. ಆರಂಭಿಕ ಹೆಜ್ಜೆಯಾಗಿ ದಲಿತ ಬುದ್ಧಿಜೀವಿಗಳು ತಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು, ಭೂಸುಧಾರಣೆಯ ಹೊಸ ಹಂತದ ಬಗ್ಗೆ ಒಂದು ಕರಡು ನೀತಿಯನ್ನು ಪ್ರಕಟಿಸಬೇಕು. ಏಕೆಂದರೆ ಹಿಂದಿಗಿಂತಲೂ ಇಂದು ಹಂಚಲು ಭೂಮಿ ಹೆಚ್ಚುವರಿಯಾಗಿಯೇ ಇದೆ ಎಂಬುದನ್ನು ಗಮನಿಸಲೇಬೇಕು. ಇದನ್ನು ಸೈದ್ಧಾಂತಿಕವಾಗಿ ಅಭಿವೃದ್ಧಿ ಅರ್ಥಶಾಸ್ತ್ರಜ್ಞರು ಹಿಡಿದುಕೊಂಡು ಭೂ ಸುಧಾರಣೆಯ ಹೊಸ ಹಂತದ ಸಂಗತಿಯನ್ನು ಪ್ರತಿಪಾದಿಸಬೇಕು. ಈ ಸವಾಲನ್ನು ದಲಿತ ಬುದ್ಧಿಜೀವಿವರ್ಗ ತೆಗೆದುಕೊಳ್ಳಬಹುದೇ?

ಸಣ್ಣ ರೈತರೆಂದರೆ ಯಾರು?

ವಿಶ್ವವಾಣಿಜ್ಯ ಸಂಸ್ಥೆಯ ಇತ್ತೀಚಿನ ಕ್ಯಾನಕುನ್ ಸಮಾವೇಶದಲ್ಲಿ ಅಭಿವೃದ್ಧಿ ರಾಷ್ಟ್ರಗಳ ರೈತರನ್ನು ಬಲಿಪಶುಗಳೆಂದು ಬಿಂಬಿಸಲಾಯಿತು. ಅಂದು ಉದ್ಘಾಟನಾ ಸಂದರ್ಭದಲ್ಲಿ ಲೀ ಕ್ಯೂಂಗ್ ಸೈ ಪೊಲೀಸ್ ಅಡ್ಡವನ್ನು ಹತ್ತಿ ಕತ್ತಿಯಿಂದ ತನ್ನ ಹೃದಯವನ್ನು ಸೀಳಿಕೊಂಡಾಗ ಆ ಅಂಶ ಜಗಜ್ಜಾಹೀರವಾಯಿತು. ಯುರೋಪಿನ ಒಕ್ಕೂಟ, ಉತ್ತರ ಅಮೇರಿಕಾ ಮತ್ತು ಜಪಾನ್ ದೇಶಗಳು ತೃತೀಯ ಜಗತ್ತಿನ ರೈತರನ್ನು ನರಕಕ್ಕೆ ನೂಕುವ ತಂತ್ರಗಳನ್ನು ರೂಪಿಸಿದ್ದಾರೆ. ಆದ್ದರಿಂದ ರೈತರಿಗೆ ಅನುಕಂಪ ಮತ್ತು ಬೆಂಬಲ ಖಂಡಿತ ಬೇಕಾಗಿದೆ. ಈ 5ನೇ ಸಚಿವರ ಮಟ್ಟದ ಕ್ಯಾನಕುನ್ ಮಾತುಕತೆ ಮುರಿದುಬಿದ್ದಾಕ್ಷಣ ಬ್ರೆಜಿಲ್, ಚೈನಾ ಮತ್ತು ಭಾರತದಲ್ಲಿ ಉತ್ಸವಗಳು ಕಂಡುಬಂದವು.

ಅಲ್ಲಿ ವಾದಿಸಿದ ಸಂಗತಿ ಸರಿಯಾಗಿಯೇ ಇದೆ. ಶ್ರೀಮಂತ ದೇಶಗಳು ತಮ್ಮ ರೈತರಿಗೆ ಅಧಿಕವಾದ ಸಬ್ಸಿಡಿಯನ್ನು ನೀಡುತ್ತಿವೆ. ಅದನ್ನು ತ್ವರಿತವಾಗಿ ಕಡಿಮೆ ಮಾಡದಿದ್ದಲ್ಲಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಡ ರಾಷ್ಟ್ರಗಳ ರೈತರು ಸ್ಪರ್ಧಿಸಲಾರರು. ಈ ಚರ್ಚೆಯನ್ನು ಇಂಡಿಯಾದ ಮಟ್ಟಿಗೂ ಅನ್ವಯಿಸಬೇಕಾಗಿದೆ. ಪ್ರಜ್ಞಾವಂತ ಬರಹಗಾರರು ಮತ್ತು ಉದಾರೀಕರಣ ನಂತರದ ಪತ್ರಕರ್ತರು ವರದಿಗಾರರು ಭಾರತೀಯ ರೈತರ ದಾರುಣ ಸ್ಥಿತಿಯನ್ನು ಅತ್ಯುತ್ತಮವಾಗಿ ಚಿತ್ರಿಸಲು ಹೆಣಗಿದ್ದರು. ಆದರೆ ಭಾರತೀಯ ರೈತರ ಲಕ್ಷಣಗಳನ್ನು ಅಂದರೆ ಅವರ ಸಂಪತ್ತಿನ ಬಗ್ಗೆಯಾಗಲೀ, ಹಳ್ಳಿಗಾಡಿನಲ್ಲಿ ಅವರು ವಹಿಸುತ್ತಿರುವ ಪಾತ್ರದ ಬಗ್ಗೆ ಯಾಗಲೀ ಏನನ್ನೂ ಹೇಳಿಲ್ಲ. ಭಾರತೀಯ ಗಣರಾಜ್ಯದಲ್ಲಿ ಬಲಿಪಶುಗಳೆಂದು, ಕ್ರೂರವಾಗಿ ನಡೆಸಿ ಕೊಂಡವರೆನ್ನಲಾದ ಮತ್ತು ಆತ್ಮಹತ್ಯೆಗೆ ಸಿಲುಕಿರುವ ಈ ರೈತರು ನಿಜವಾಗಿಯೂ ಯಾರು?

ಇತ್ತೀಚಿನ ಭಾರತೀಯ ಸಾರ್ವಜನಿಕ ವಿಚಾರಧಾರೆಯಲ್ಲಿ ಜಮೀನ್ದಾರ, ಕುಲೀನ, ಊಳಿಗಮಾನ್ಯತೆ, ಭೂರಹಿತ ಕೃಷಿಕಾರ್ಮಿಕ ಎನ್ನುವ ಪರಿಕಲ್ಪನೆಗಳು ಮಾಯವಾಗಿವೆ. ಇಂದು ಜಮೀನ್ದಾರರೆಂದರೆ ಬಂಗಲೆಗಳನ್ನು ಬಾಡಿಗೆಗೆ ನೀಡಿರುವ ಒಡೆಯರೆಂದು ನಾವು ಭಾವಿಸುತ್ತೇವೆ. ಬಡರೈತಾಪಿ ಮತ್ತು ರೈತರ ಮಧ್ಯೆಯಿರುವ ವ್ಯತ್ಯಾಸಗಳೂ ಮಾಯವಾಗಿವೆ. ದೊಡ್ಡ ತೋಟಗಳ ಮಾಲೀಕರನ್ನು ರೈತರೆಂದು ವಿವರಿಸಲಾಗುತ್ತಿದೆ. ಇವರು ಬಿಸಿಲಲ್ಲಿ, ಮಳೆಯಲ್ಲಿ, ರಾತ್ರಿಯಲ್ಲಿ, ಭೂಮಿಯಲ್ಲಿ ದುಡಿದು, ಬೆಳೆಗಳನ್ನು ಬೆಳೆಯುತ್ತಿದ್ದಾರೆಂದು ತೋರಿಸಲಾಗುತ್ತಿದೆ. ಇಲ್ಲಿ ಮೂರು ರೀತಿಯ ಸಾಮಾಜಿಕ ವರ್ಗಗಳು ಭೂ ಹಿತಾಸಕ್ತಿಯನ್ನು ಹೊಂದಿವೆ: ಭೂರಹಿತ ಕೃಷಿಕಾರ್ಮಿಕರು, ರೈತರು ಮತ್ತು ಜಮೀನ್ದಾರರು. ಕೊನೆಯ ವರ್ಗ ಚಿಂತಾಜನಕ ರೈತರೆಂದು ಬಿಂಬಿಸಿಕೊಂಡಿದ್ದು ಅತ್ಯಧಿಕ ಆಹಾರಧಾನ್ಯಗಳನ್ನು ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯುವವರಾಗಿದ್ದಾರೆ. ಈ ಸಾಮಾಜಿಕ ವರ್ಗ ಪದೇ ಪದೇ ಬೆಲೆಗಳು ಏರಬೇಕೆಂದು ಆಶಿಸುತ್ತಾರೆ. ಆದರೆ ಉಳಿದೆರಡು ವರ್ಗಗಳು ಬೆಲೆಗಳು ಕಮ್ಮಿಯಾಗಬೇಕೆಂದು ಇಚ್ಛಿಸುತ್ತವೆ. ಈ ಜಮೀನ್ದಾರರೇ ಕಾನೂನುಬಾಹಿರವಾಗಿ ಅನೇಕ ಎಕರೆ ಭೂಮಿಯನ್ನು ಹೊಂದಿದ್ದು ಇವರೇ ನೇರವಾಗಿ ಕ್ಯಾನ್‌ಕೂನ್‌ಗೆ ಸಂಬಂಧಿಸಿರುವವರು. ಹೆಚ್ಚುವರಿ ಉತ್ಪಾದಿಸುವ ಈ ಜಮೀನ್ದಾರರ ಬಗ್ಗೆ ಹೆಚ್ಚೇನು ಬರೆದಿಲ್ಲ. ಆದರೂ ಉತ್ತರ ಪ್ರದೇಶದ ಮುಝಾಫರ್‌ನಗರ ರೈತನನ್ನು ಪ್ರತಿನಿಧಿಯೆಂದು ಪರಿಗಣಿಸಬಹುದೇ? ಈತನ ಹೆಸರು ಚೌದರಿ ಮಂಡೂಕ್‌ಸಿಂಗ್. 62 ಎಕರೆ ನೀರಾವರಿ ಭೂಮಿ ಈತನಿಗಿದೆ. ಅಂದರೆ ಭೂಮಿತಿ ಕಾಯ್ದೆಯನ್ನು ಮೀರಿ 50 ಎಕರೆ ಹೆಚ್ಚುವರಿ ಜಮೀನು ಈತನಿಗಿದೆ. ಮೂರು ಕೊಳವೆ ಬಾವಿಗಳನ್ನು ಹೊಂದಿರುವ ಈತ, ಎರಡು ಟ್ರಾಕ್ಟರ್‌ಗಳನ್ನು ಹೊಂದಿದ್ದಾನೆ. ಈತ 25 ಟನ್ ಸಕ್ಕರೆ ಕಬ್ಬನ್ನು ಮಾರುತ್ತಾನೆ. ಅಲ್ಲದೆ, 20 ಟನ್ ಗೋಧಿ, 30 ಟನ್ ಆಲೂಗೆಡ್ಡೆಯನ್ನು ಮಾರುತ್ತಾನೆ. ಈತ ಎಂದೂ ಭೂಮಿಯನ್ನು ಉತ್ತಿಲ್ಲ, ಬಿತ್ತಿಲ್ಲ ಆತ ಕೇವಲ ಮೇಲ್ವಿಚಾರಣೆ ಮಾತ್ರ ನೋಡಿಕೊಂಡು ಸ್ಥಳೀಯ ರಾಜಕಾರಣದಲ್ಲಿ ತೊಡಗಲು ಪಟ್ಟಣಕ್ಕೆ ಸಾಗುತ್ತಾನೆ. ಅಲ್ಲಿ ಟೀ ಸ್ಟಾಲ್‌ನಲ್ಲಿ ಚಾ ಹೀರುತ್ತಾ ದಿನಪತ್ರಿಕೆ ಓದುತ್ತಿರುತ್ತಾನೆ. ಆತನು ರೂ. 1.5ಲಕ್ಷ ಬೆಲೆಯ ರೈಫಲ್ ಹಾಗೂ ಒಂದು ಲಕ್ಷಕ್ಕಿಂತ ಹೆಚ್ಚಿನ ಬೆಲೆಯ ಪಿಸ್ತೂಲ್‌ನ್ನು ಹೊಂದಿದ್ದಾನೆ. ಆತನಿಗೊಂದು ಕಾರಿದ್ದು ಆತನೇ ಅದರ ಚಾಲಕ. ಇಷ್ಟೊಂದು ಆದಾಯವಿರುವ ಈತ ಒಂದು ದಿನಪತ್ರಿಕೆಯನ್ನು ಕೊಳ್ಳಲಾಗುತ್ತಿಲ್ಲ, ಮತ್ತು ವಾರ್ಷಿಕ 10ಸಾವಿರದಷ್ಟಿರುವ ವಿದ್ಯುತ್ ಬಿಲ್ಲನ್ನು ಪಾವತಿ ಮಾಡಲಾಗುತ್ತಿಲ್ಲ. ಈ ಮಂಡೂಕ್‌ಸಿಂಗ್‌ಗೆ ಇಬ್ಬರು ಗಂಡುಮಕ್ಕಳು, ಇಬ್ಬರಿಗೂ ಬೈಕುಗಳಿವೆ. ಅವರು ಕೆಲವು ತಾಸುಗಳನ್ನು ತೋಟ ನೋಡಿಕೊಳ್ಳಲು ಕಳೆದು, ಒಬ್ಬ ಹತ್ತಿರದ ಶಾಲೆಗೆ ಹೋಗಿ ಹುಡುಗಿಯರನ್ನು ಚುಡಾಯಿಸುವುದರಲ್ಲಿ ತೊಡಗುತ್ತಾನೆ. ಮತ್ತೊಬ್ಬ ಹಳ್ಳಿಯಲ್ಲಿ ಸುತ್ತಾಡಿ ಬಡ ಹೆಣ್ಣುಮಕ್ಕಳಿಗೆ ಒಳಿತನ್ನು ಬಯಸುತ್ತಾನೆ! ಇತ್ತೀಚೆಗೆ ಈ ಸಿಂಗ್ ತನ್ನ ಮಗಳೊಬ್ಬಳ ಮದುವೆಗೆ 20 ಲಕ್ಷಗಳನ್ನು ಖರ್ಚುಮಾಡಿದ್ದಾನೆ. ಒಬ್ಬ ಕೃಷಿಕಾರ್ಮಿಕನು 30ರೂ ಕೂಲಿಯನ್ನು ಕೇಳಿದಾಗ ಆತನನ್ನು ಚೆನ್ನಾಗಿ ಥಳಿಸಿ, ಕಂಬಕ್ಕೆ ಕಟ್ಟಿದ್ದಾನೆ. ಆದರೂ ಈತ ಭೂಮಿ ಕೂಲಿ ಸಂಬಂಧಗಳನ್ನು ಪ್ರಜಾಸತ್ತಾತ್ಮೀಕರಿಸಿದ್ದಕ್ಕೆ ಸ್ಥಳೀಯ 'ಹೀರೋ' ಎಂದು ಪರಿಗಣಿತನಾಗಿದ್ದಾನೆ. ಅಲ್ಲದೇ, ಆತ ಪ್ರಗತಿಪರನೂ ಹೌದು. ನಿರಂತರ ಬೆಂಬಲ ಬೆಲೆಯನ್ನು ನೀಡಬೇಕೆಂದು ಒತ್ತಾಯಿಸುವ ಸಿಪಿಐ(ಎಂ)ನ ಮಹಾಕಾರ್ಯದರ್ಶಿ ಚೌದುರಿ ಹರಿಕಿಶನ್‌ಸಿಂಗ್ ಸುರ್ಜಿತ್‌ನನ್ನು ಆತ ಮೆಚ್ಚಿಕೊಳ್ಳುತ್ತಾನೆ. ಮಂಡೂಕ್‌ಸಿಂಗ್‌ನು ದುರಾಸೆಯವನಾಗಿದ್ದು ಕೆಳದರ್ಜೆಯ ಗೋದಿಯನ್ನು ಉತ್ಪಾದಿಸಿ, ಕೆಜಿಗೆ 4ರೂನಂತೆ ಮಾರಿದರೂ ಯಾರು ಕೊಂಡುಕೊಳ್ಳಲಾರರು. ಕಲ್ಯಾಣ ರಾಜ್ಯವು ಅದನ್ನು ಕೆಜಿಗೆ 8ರೂ ನಂತೆ ಕೊಟ್ಟು ಖರೀದಿಸಬೇಕು. ಇದು ಈ ಚಿಂತಾಜನಕ ರೈತನಿಗೆ ನೀಡಬೇಕಾದ ಬೆಂಬಲ ಬೆಲೆ. ಇದೇ ಕೊಳೆತು ನಾರುವ ಗೋಧಿಯು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಕೆಜಿಗೆ 5ರೂ.ನಂತೆ ದೊರಕುತ್ತದೆ. ಆತನ ವಿರುದ್ಧ ದಾಖಲಾದ ಎಲ್ಲಾ ಅತ್ಯಾಚಾರ ಮೊಕದ್ದಮೆಗಳಿಂದ ಮುಕ್ತನಾಗಿ ಹೊರಬಂದಿರುವುದರಿಂದ ಆತನನ್ನು ಒಬ್ಬ ಗೌರವಾನ್ವಿತ ನಾಗರೀಕನೆಂದು ಸನ್ಮಾನಿಸಲಾಗಿದೆ.

ಮಂಡೂಕ್‌ಸಿಂಗ್ ಹಾಗೂ ಆತನಂತವರು ಟ್ರಾಕ್ಟರ್ ಕೊಳ್ಳಲು, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ನೀರಾವರಿ, ವಿದ್ಯುತ್‌ಗಳಲ್ಲಿ ಸಬ್ಸಿಡಿಯನ್ನು ಕೇಳುತ್ತಾರೆ ಮತ್ತು ಪಡೆಯುತ್ತಾರೆ. ಅವರು ಉತ್ಪಾದಿಸುವ ಕೆಳದರ್ಜೆಯ ಧಾನ್ಯಗಳಿಗೆ ಬೆಂಬಲ ಬೆಲೆಯನ್ನು ಪಡೆಯುತ್ತಾರೆ. ಈ ಧಾನ್ಯ ಹಂದಿಗಳಿಗೆ ಅಗೌರವವೆಂದು ಶ್ರೀಮಂತ ರಾಷ್ಟ್ರಗಳ ಹಂದಿಗಳೂ ಸಹ ಮೂಸಿ ನೋಡುವುದಿಲ್ಲ. ಹಾಗಾಗಿ ಇವರನ್ನು 'ಬಲಿಪಶು ರೈತ'ರೆಂದು ಬಿಂಬಿಸುವವರು ಒಂದು ವಿವರಣೆಯನ್ನು ಕೊಡಲೇಬೇಕಾಗುತ್ತದೆ. ಈ ರೈತರೇಕೆ ಭೂರಹಿತ ಕೃಷಿಕಾರ್ಮಿಕರಿಗೆ ನಿಗದಿತ ಕೂಲಿಯನ್ನು ಕೊಡುವುದಿಲ್ಲ? ಈ ಎಲ್ಲ ಕೃಷಿಕಾರ್ಮಿಕರು ದಲಿತರು ಇಲ್ಲವೇ ಓಬಿಸಿಗೆ ಸೇರಿದವರಾಗಿದ್ದಾರಲ್ಲವೇ? ಹಾಗಾಗಿ ಯಾರನ್ನು ರೈತರೆಂದು ಬಿಂಬಿಸಲಾಗಿದೆಯೋ ಅವರು ಭಾರತದೊಳಗೆ ಅಪರಾಧಿಗಳೆಂದು ಬಡಜನ ಘೋಷಿಸುತ್ತಿದ್ದಾರೆ.

ಇತ್ತೀಚಿನ ಭಾರತೀಯ ಸಾರ್ವಜನಿಕ ವಿಚಾರಧಾರೆಯಲ್ಲಿ ಜಮೀನ್ದಾರ, ಕುಲೀನ, ಊಳಿಗಮಾನ್ಯತೆ, ಭೂ ರಹಿತ ಕೃಷಿಕಾರ್ಮಿಕ ಎನ್ನುವ ಪರಿಕಲ್ಪನೆಗಳು ಮಾಯವಾಗಿವೆ. ಇಂದು ಜಮೀನ್ದಾರರೆಂದರೆ ಬಂಗಲೆಗಳನ್ನು ಬಾಡಿಗೆಗೆ ನೀಡಿರುವ ಒಡೆಯರೆಂದು ನಾವು ಭಾವಿಸುತ್ತೇವೆ. ಬಡರೈತಾಪಿ ಮತ್ತು ರೈತರ ಮಧ್ಯೆಯಿರುವ ವ್ಯತ್ಯಾಸಗಳೂ ಮಾಯವಾಗಿವೆ. ದೊಡ್ಡ ತೋಟಗಳ ಮಾಲೀಕರನ್ನು ರೈತರೆಂದು ವಿವರಿಸಲಾಗುತ್ತಿದೆ. ಇವರು ಬಿಸಿಲಲ್ಲಿ, ಮಳೆಯಲ್ಲಿ, ರಾತ್ರಿಯಲ್ಲಿ ಭೂಮಿಯಲ್ಲಿ ದುಡಿದು, ಬೆಳೆಗಳನ್ನು ಬೆಳೆಯುತ್ತಿದ್ದಾರೆಂದು ತೋರಿಸಲಾಗುತ್ತಿದೆ.

ಜನವಿರೋಧಿ ಸರ್ಕಾರಗಳ ಕೋಮು ರಾಜಕಾರಣ

ಚಿತ್ರಕೃಪೆ : ಇಂಡಿಯಾ ಟುಡೆ

ರಾಜ್ಯಾಂಗಬದ್ಧವಾಗಿ ಅಧಿಕಾರ ನಡೆಸುವುದಾಗಿ ಪ್ರಮಾಣವಚನ ಸ್ವೀಕರಿಸಿ ಗದ್ದುಗೆ ಏರಿದ ಜನಪ್ರತಿನಿಧಿಗಳು ಇಡೀ ಸಮಾಜದ ಸ್ವಾಸ್ಥ್ಯಕ್ಕಾಗಿ ಕೆಲಸ ಮಾಡದೆ ಪುರೋಹಿತಶಾಹಿಯ ಹಿತರಕ್ಷಣೆಗಾಗಿ ತುದಿಗಾಲ ಮೇಲೆ ನಿಂತಿದ್ದಾರೆ. ಇಡೀ ದೇಶ ಬೂದಿಬಡುಕ ಸಾಧುಗಳ ಹಾಗೂ ಪುರೋಹಿತರ ಕೂಟವಾಗಿ ಮಾರ್ಪಡುವ ಎಲ್ಲಾ ಸೂಚನೆಗಳೂ ಕಾಣುತ್ತಿವೆ. ಜಾತ್ಯಾತೀತವಾಗಿ ನಡೆದುಕೊಳ್ಳಬೇಕಾದ ಸರ್ಕಾರ ಕೋಮುವಾದಿಗಳ ಪರ ವಕಾಲತ್ತು ವಹಿಸಿ ಭಾರತದ ಶಾಂತಿಗೆ ಕೊಳ್ಳಿ ಇಡುತ್ತಿದೆ. ಅಖಂಡ ಭಾರತದ ಏಕತೆಯನ್ನು ನುಚ್ಚುನೂರು ಮಾಡುವ ಸಂಘಪರಿವಾರದ ಹುನ್ನಾರದ ವಿಶ್ಲೇಷಣೆ ಇಲ್ಲಿದೆ.

○ ವೈ. ಮರಿಸ್ವಾಮಿ

ಮಂದಿರ-ಮಸೀದಿ ವಿವಾದವನ್ನೇ ಬಂಡವಾಳವನ್ನಾಗಿ ಬಳಸಿಕೊಂಡು ದಿಲ್ಲಿಯ ಸಿಂಹಾಸನಕ್ಕೆ ವಕ್ಕರಿಸಿರುವ ಘೋಡ್ಸೆಯ ಸಂತಾನದ ಆಳ್ವಿಕೆಯಲ್ಲಿ ಇಡೀ ದೇಶವೇ ಎಕ್ಕುಟ್ಟಿ ಹೋಗಿದೆ. ಬ್ರಾಹ್ಮಣ, ಬನಿಯಾ, ಮಾರ್ವಾಡಿ ಮತ್ತು ಬೂದಿಬಡುಕ ಸಾಧುಗಳ ಹಾಗೂ ಸಂಘ ಪರಿವಾರದ ಕುತಂತ್ರಿಗಳ ಕೂಟವಾಗಿರುವ ಕೇಂದ್ರ ಸರ್ಕಾರವು, ತನ್ನ ಫ್ಯಾಸಿಸ್ಟ್ ಧೋರಣೆಯಿಂದ ಭಾರತದ ದಲಿತ, ಆದಿವಾಸಿ, ಹಿಂದುಳಿದ, ಮುಸ್ಲಿಂ ಮತ್ತು ಕ್ರೈಸ್ತ ಜನಾಂಗಗಳ ಅಸ್ತಿತ್ವವನ್ನೇ ಹೊಸಕಿಹಾಕುತ್ತಿದೆ. ವಿವಿಧ ಜಾತಿ, ಭಾಷೆ ಮತ್ತು ಸಂಸ್ಕೃತಿಗಳನ್ನು ಒಳಗೊಂಡಿರುವ, ಭಾರತದ ವಿವಿಧತೆಯಲ್ಲಿನ ಏಕತೆಯನ್ನು ನುಚ್ಚುನೂರು ಮಾಡಲು ಹಿಂದುತ್ವದ ಭಯೋತ್ಪಾದನೆಗೆ ಚಾಲನೆ ನೀಡಿದೆ. ಆಧುನಿಕ ಮನು ಗುಜರಾತಿನ ಮುಖ್ಯಮಂತ್ರಿ ನರೇಂದ್ರಮೋದಿಯಂಥ ಖದೀಮರು ನಡೆಸಿದ ಮುಸ್ಲಿಮರ ನರಮೇಧಕ್ಕೆ ಪ್ರತೀಕಾರವಾಗಿ ನಡೆದ ಇತ್ತೀಚಿಗಿನ ಮುಂಬೈ ಸ್ಫೋಟದಲ್ಲಿ 52 ಜನ ಮುಗ್ಧರು ಬಲಿಯಾದ ಬರ್ಬರ ಕೃತ್ಯ ನಡೆದಿದೆ. ಹಿಂದುನಾಜಿಗಳು ನಡೆಸುತ್ತಿರುವ ಸರ್ಕಾರಿ ಪ್ರಾಯೋಜಕತ್ವದ ಭಯೋತ್ಪಾದನೆ, ಬಹುಮುಖ್ಯವಾಗಿ ಮುಸಲ್ಮಾನರಲ್ಲಿ ಎದೆನಡುಕ ಹುಟ್ಟಿಸಿದೆ. ಇದಕ್ಕೆ ಪ್ರತ್ಯುತ್ತರವಾಗಿ, 'ಸೇರಿಗೆ ಸವ್ವಾ ಸೇರು' ಎನ್ನುವಂತೆ ಮುಂಬೈ ಸ್ಫೋಟದಂಥ ಘಟನೆಗಳು ದೇಶದಾದ್ಯಂತ ವಿಸ್ತರಿಸಿದರೆ ಅಚ್ಚರಿಪಡಬೇಕಾಗಿಲ್ಲ.

ಪ್ರತಿವರ್ಷ ಒಂದುಕೋಟಿ ಉದ್ಯೋಗಗಳನ್ನು ಸೃಷ್ಟಿಸಿ, ನಿರುದ್ಯೋಗ ನಿರ್ಮೂಲನೆ ಮಾಡುವುದಾಗಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಅಚ್ಚುಹಾಕಿಸಿಕೊಂಡಿದ್ದ ವಾಜಪೇಯಿ ನೇತೃತ್ವದ ಬಿಜೆಪಿ, ಇಂದು ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡು ಸರಕಾರಿ ಸ್ವಾಮ್ಯದ ಉದ್ದಿಮೆಗಳನ್ನು ಕೈಗಾರಿಕೆಗಳನ್ನು ಜಾಗತಿಕ ಮಾರುಕಟ್ಟೆಯಲ್ಲಿ ಹರಾಜು ಹಾಕುತ್ತಿದೆ. ಶೋಷಿತರ ಪಾಲಿಗೆ ಸಂಜೀವಿನಿಯಾಗಿದ್ದ ಮೀಸಲಾತಿಯನ್ನು ನಿರ್ಮೂಲನೆ ಮಾಡಲು ಖಾಸಗೀಕರಣವನ್ನು ಭರದಿಂದ ನಡೆಸುತ್ತಿದೆ. ಕೇಂದ್ರದ ಮೈಗಳ್ಳ ಹಾರುವರ ನೀತಿಯಿಂದ ನಿರುದ್ಯೋಗ ಹಿಮಾಲಯದ ಎತ್ತರವನ್ನೂ ಹಿಂದಿಕ್ಕಿ ಮುಗಿಲೆತ್ತರಕ್ಕೆ ಬೆಳೆಯುತ್ತಿದೆ. ದೇಶದ ಆರ್ಥಿಕ ನರನಾಡಿಯಾಗಿರುವ ಸಾರಿಗೆಗೆ ಬಳಸುವ ಡೀಸಲ್ ಮತ್ತು ಪೆಟ್ರೋಲ್ ದರಗಳನ್ನು ಯದ್ವಾತದ್ವಾ ಏರಿಸಿ, ಇಡೀ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬನ್ನೇ ಮುರಿದು ಬೆಂಡು ಮಾಡಲಾಗಿದೆ. ಸಂತೆಪೇಟೆ-ಷೇರುಪೇಟೆಯಲ್ಲಿನ ಧಾರಣೆಯಂತೆ ಡೀಸಲ್ ಮತ್ತು ಪೆಟ್ರೋಲ್ ಬೆಲೆಗಳ ದರ ವ್ಯತ್ಯಾಸವಾಗುತ್ತಿದೆ! ಸೀಮೆಎಣ್ಣೆ-ಅಡಿಗೆ ಅನಿಲ ಮತ್ತು ಅಂಚೆದರಗಳೂ ಇದಕ್ಕಿಂತ ಭಿನ್ನವಾಗಿಲ್ಲ, ಸಂಪರ್ಕ ಮತ್ತು ಮಾಹಿತಿ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ತರುವುದಾಗಿ ಬೆನ್ನು ತಟ್ಟಿಕೊಳ್ಳುತ್ತಿದ್ದ ಈ ಚಾಣಕ್ಯನ ಕುಡಿಗಳು ಟಾಟಾ ಇಂಡಿಕಾಮ್, ರಿಲಯನ್ಸ್, ಸ್ಪೈಸ್, ಹಚ್, ಏರಟೆಲ್‌ನಂಥ ಖಾಸಗಿ ಕಂಪನಿಗಳಿಗೆ ಭಾರತ ಸಂಚಾರಿ ನಿಗಮವನ್ನೇ (BSNL) ಬಿಕರಿಗಿಟ್ಟಿದ್ದಾರೆ. BSNL ಅಧಿಕಾರಿಗಳು ಟಾಟಾ- ಅಂಬಾನಿಯ ಹೇಸಿಗೆ ತಿನ್ನುವ ಹಂದಿಗಳಾಗಿ ಕೊಬ್ಬಿದ್ದಾರೆ. ಶಿಕ್ಷಣದ ಕೇಸರೀಕರಣ ಹಾಗೂ ಜ್ಯೋತಿಷ್ಯಶಾಸ್ತ್ರದಂಥ ಅಡ್ನಾಡಿ ಸಂಗತಿಗಳ ಬಗ್ಗೆ ಕಾಲಹರಣ-ಹಣದ ಪೋಲು ಮಾಡುತ್ತಿರುವ ಪ್ರತಿಗಾಮಿ ಪುರೋಹಿತರು 'ಗಂಟೆಗೋಪುರ'ದ ಆಳ್ವಿಕೆಯಲ್ಲಿ ರೈತರು ಮಗ್ಗಲು ಮುರಿದುಕೊಂಡು ಬಿದ್ದಿದ್ದಾರೆ. ಕಾರ್ಮಿಕರು ಚಿಂದಿಯಾಗಿದ್ದಾರೆ. ಇದ್ಯಾವುದರ ಬಗ್ಗೆಯೂ ಚಕಾರವೆತ್ತದ ಸನಾತನಿಗಳು ಡೊಳ್ಳು ಹೊಟ್ಟೆಯ ಗಣಪನ ಉತ್ಸವದ ನೆಪದಲ್ಲಿ ಮುಸಲ್ಮಾನರನ್ನು ಹಣಿಯುತ್ತಿದ್ದಾರೆ. ಅವರ ಮನೆ-ಮಠ, ಅಂಗಡಿ-ಹೋಟೆಲ್, ವಾಹನ ಇತ್ಯಾದಿಗಳನ್ನು ಧ್ವಂಸ ಮಾಡಿ ರಣಕೇಕೆ ಹಾಕುತ್ತಿದ್ದಾರೆ. ಕ್ರೈಸ್ತರು ಮತಾಂತರ ಮಾಡುತ್ತಿದ್ದಾರೆಂದು ಗುಲ್ಲೆಬ್ಬಿಸುತ್ತಿದ್ದಾರೆ.

ಚುನಾವಣೆಗಳು ಸಮೀಪಿಸುತ್ತಿರುವುದಿಂದ ರಾಮನಾಮದ ಜಪ ಮತ್ತಷ್ಟು ಜೋರಾಗುತ್ತಿದೆ. ಬಾಬರಿ ಮಸೀದಿಯಿದ್ದ ಜಾಗದಲ್ಲಿಯೇ ರಾಮಮಂದಿರವಿತ್ತು ಎಂದು ನಿರೂಪಿಸಲು ಉತ್ಖನನದ ಹೆಸರಿನಲ್ಲಿ ಕೆಲವು ಬೋಕಿ, ಇಟ್ಟಿಗೆ, ಕಲ್ಲಿನ ಚೂರುಗಳನ್ನು ಸಂಗ್ರಹಿಸಿ, ಅವುಗಳನ್ನು ಮುಂದಿಟ್ಟುಕೊಂಡು ಬಾಯಿಬಡಿದುಕೊಳ್ಳುತ್ತಿದ್ದಾರೆ; ಕೊಲೆಗಡುಕ ಕೋಮುವಾದಿ ರಕ್ತ ರಾಜಕೀಯದ ನೇತಾರರು ಮತ್ತವರ ಚೇಲಾಗಳು! ಹಿಟ್ಲರನ ಆರಾಧಕರ ಸಕಲ ಹಗರಣಗಳಿಗೆ ತೆಲುಗುದೇಶಮ್‌ನ ಚಂದ್ರಬಾಬು ನಾಯ್ಡು ದ್ರಾವಿಡ ಮುನ್ನೇತ್ರ ಕಳಗಮ್‌ನ ಎಂ.ಕರುಣಾನಿಧಿ ಶಿವಸೇನೆಯ ಬಾಳಠಾಕ್ರೆ, ಬಿಜು ಜನತಾ ದಳದ ಪಾಟ್ನಾಯಕ್‌ರಂಥ ಶೂದ್ರರು 'ವಿಭೀಷಣ'ರಾಗಿ ಬೆಂಬಲಕ್ಕೆ ನಿಂತಿದ್ದಾರೆ. ಮನುವಾದಿಗಳ ಪಲ್ಲಕ್ಕಿಯನ್ನು ಹೆಗಲ ಮೇಲೆ ಹೊತ್ತುಕೊಂಡು ಮೆರೆಸುತ್ತಿರುವ ಈ ಶೂದ್ರರದು 'ಅವಕಾಶವಾದಿ' ರಾಜಕಾರಣವಲ್ಲ! ಭಾರತದ ಮನುವಾದಿ ಪತ್ರಿಕೆಗಳ ಪ್ರಕಾರ ಬಹುಜನ ಸಮಾಜ ಪಕ್ಷದ ನಾಯಕರಾದ ದಲಿತ ಜನಾಂಗದ ಕಾನ್ಷಿರಾಮ್ ಮತ್ತು ಮಾಯಾವತಿಯವರ ರಾಜಕಾರಣ ಮಾತ್ರ 'ಅವಕಾಶವಾದಿ ರಾಜಕಾರಣ'!

ಶ್ರೀಮಂತ ಕುಳಗಳು ಮತ್ತು ಮಧ್ಯಮ ವರ್ಗದ ಶೋಕಿಲಾಲರು ತಮ್ಮ ದಾಹವನ್ನು ತಣಿಸಿಕೊಳ್ಳಲು

'ತೋರಿಕೆಗಾಗಿ' ಕುಡಿಯುತ್ತಿದ್ದ ಪೆಪ್ಸಿ-ಕೋಲಾಗಳು ಮನುಷ್ಯನ ದೇಹಕ್ಕೆ ಮಾರಕವಾದ ರಾಸಾಯನಿಕ ಮತ್ತು ಕ್ರಿಮಿನಾಶಕಗಳು ತುಂಬಿರುವ ಗಟಾರದ ಬಣ್ಣದ ನೀರು ಎಂದು ದೆಹಲಿ ಮೂಲದ ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್‌ವಿರಾನ್‌ಮೆಂಟ್ (CSI) ಎಂಬ ಸಂಸ್ಥೆ ರುಜುವಾತು ಪಡಿಸಿದೆ. ಪೆಪ್ಸಿ-ಕೋಲಾಗಳ ಅಸಲಿ ಬಣ್ಣ ಬಯಲಾದ ನಂತರವಾದರೂ, ಬಾಡಿಗೆ ದೇಶಭಕ್ತ ವಾಜಪೇಯಿ ಸರ್ಕಾರ ಸಂಪೂರ್ಣವಾಗಿ ಇವುಗಳ ಮಾರಾಟವನ್ನು ನಿಷೇಧಿಸಬಹುದಿತ್ತು, ಎಳನೀರಿನ ಮಾರುಕಟ್ಟೆಯನ್ನು ಹಿಗ್ಗಿಸಬಹುದಿತ್ತು, ಸ್ಥಳೀಯ ತಂಪು ಪಾನೀಯ ಕೈಗಾರಿಕಾ ಘಟಕಗಳಿಗೆ ಹೊಸಹುರುಪು ತುಂಬಬಹುದಿತ್ತು. ಅದನ್ನು ಬಿಟ್ಟು ಕೇವಲ ಪಾರ್ಲಿಮೆಂಟಿನಲ್ಲಿ ಮಾತ್ರ ಪೆಪ್ಸಿ-ಕೋಲಾಗಳ ಮಾರಾಟವನ್ನು ನಿಷೇಧಿಸಿ ತನ್ನ ಜನವಿರೋಧಿ ನೀತಿಗೆ ಕಟ್ಟುಬಿದ್ದು, ಜನರ ಕಣ್ಣೊರೆಸಲು ಸಿಎಸ್‌ಐ ಸಂಸ್ಥೆಯ ವರದಿಯಲ್ಲಿರುವ ಸತ್ಯಾಸತ್ಯಗಳನ್ನು ಪರಿಶೀಲಿಸಲು ಸಂಸದೀಯ ಸಮಿತಿಯೊಂದನ್ನು ರಚಿಸಿ ಕೈತೊಳೆದುಕೊಂಡಿತು. ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶವನ್ನೇ ಮಾರಾಟಕ್ಕಿಟ್ಟಿರುವ ಈ ಗಾಂಪರಗುಂಪು ಪೆಪ್ಸಿ-ಕೋಲಾಗಳ ಯಜಮಾನರು ಎಸೆಯುವ ಮೂಳೆಗಳನ್ನು ಚಪ್ಪರಿಸಿ, ಅವುಗಳ ಮಾರಾಟಕ್ಕೆ Clean Certificate ಕೊಡುತ್ತಾರೆನ್ನುವುದರಲ್ಲಿ ಸಂದೇಹವಿಲ್ಲ. ಇಡೀ ದೇಶದ ಜನರಿಗೆ ಹಾನಿಕಾರಕ ಬಣ್ಣದ ಗಟಾರದ ನೀರನ್ನು ಕುಡಿಸಿರುವ ಪೆಪ್ಸಿ-ಕೋಲಾಗಳ ಬಾಟಲಿಗಳನ್ನು ಒಡೆದು, ಆಕ್ರೋಶ ವ್ಯಕ್ತ ಪಡಿಸುತ್ತಿರುವ ಜನರ ಸಿಟ್ಟು ತಣ್ಣಗಾಗುವ ಮೊದಲೇ ಭಾರತದ ಕ್ರಿಕೆಟ್ ತಂಡ ಇವುಗಳ ಜಾಹೀರಾತಿಗೆ ಮೂರೂ ಬಿಟ್ಟು ನಿಂತಿದೆ. ವಿದೇಶಿ ಕಂಪನಿಗಳ ಮಲಮೂತ್ರಗಳಿಗೂ ಜಾಹೀರಾತು ನೀಡಲು, ಲಾಭ ಬರುವುದಾದರೆ ಎಲ್ಲೆಂದರಲ್ಲಿ ನಾಲಿಗೆ ಎಟ್ಟಲು ಸದಾ ಸಜ್ಜಾಗಿರುವ ಕ್ರಿಕೆಟಿಗರೊಂದಿಗೆ ಥಳಕುಬಳುಕಿನ ಸಿನಿಮಾ ತಾರೆಯರ ದಂಡೂ ಶಾಮೀಲಾಗಿದೆ. ಇವರೆಲ್ಲರೂ ಸ್ವಘೋಷಿತ ದೇಶಭಕ್ತರು! ಸ್ಥಳೀಯ ಉತ್ಪಾದನೆಗಳಿಗೆ ಕಂಟಕವಾಗಿರುವ ವಿದೇಶಿ ಕಂಪನಿಗಳ ತಲೆ ಹಿಡುಕರು.

ಕೇಂದ್ರ ಸರ್ಕಾರದ ಹಾದಿಯಲ್ಲೇ ಕರ್ನಾಟಕ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಹೆಜ್ಜೆ ಹಾಕುತ್ತಿದೆ. ಒಕ್ಕಲಿಗ ಜನಾಂಗಕ್ಕೆ ಸೇರಿದವರೆಂಬ ಏಕೈಕ ಕಾರಣದಿಂದ 'ರೈತನ ಮಗ'ನೆಂಬ ಆರೋಪಕ್ಕೆ ಒಳಗಾಗಿರುವ ಕೃಷ್ಣರವರು ಯಾವತ್ತೂ ರೈತನ ಮಗನಾಗಿ ನಡೆದುಕೊಂಡಿಲ್ಲ. ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳ ಬೇಕೆಂಬ ಏಕೈಕ ಕಾರಣಕ್ಕೆ, ರಾಜ್ಯದ ಜನತೆಗೆ ಕುಡಿಯಲು ನೀರಿರದಿದ್ದರೂ ಪರರಾಜ್ಯದ ಬೆಳೆಗಳಿಗೆ ನೀರುಬಿಟ್ಟ ಕುಖ್ಯಾತಿ ಅವರದು. ಬೆಂಗಳೂರನ್ನು ಸಿಂಗಾಪುರ ಮಾಡುವ ಭ್ರಮೆಯಲ್ಲಿ ತೇಲಾಡುತ್ತಾ, ಇನ್‌ಫೋಸಿಸ್‌ನ ನೆಲಗಳ್ಳ ನಾರಾಯಣಮೂರ್ತಿ ಮತ್ತು ವಿಪ್ರೋ ಸಂಸ್ಥೆಯ ಭಾರೀಕುಳ ಅಜೀಮ್‌ಪ್ರೇಮ್‌ಜಿಯವರ ಹಿಡಿತಕ್ಕೆ ಸರ್ಕಾರವನ್ನು ಒಪ್ಪಿಸಿ, ಮಾಹಿತಿ ತಂತ್ರಜ್ಞಾನದ ನಾಮಸ್ಮರಣೆಯಲ್ಲಿ ತಲ್ಲೀನರಾಗಿದ್ದಾರೆ. ಸದಾ ಟಾಕು ಟೀಕಾದ ಡ್ರೆಸ್ ಮಾಡಿಕೊಂಡು, ದೇಶದ ನಂ.1 ಮುಖ್ಯ ಮಂತ್ರಿ ಎಂದು ಮಾಧ್ಯಮಗಳಿಂದ ಹೊಗಳಿಸಿಕೊಂಡು, ವೈಯ್ಯಾರದಿಂದ ಮೆರೆಯುತ್ತಿರುವ ಈ ಹೈಟೆಕ್ ಮುಖ್ಯ ಮಂತ್ರಿಗೆ ಬಡರೈತನ ಬಗ್ಗೆ ಸಾಸಿವೆ ಕಾಳಿನಷ್ಟು ಕಾಳಜಿ ಯಿಲ್ಲ. ಮೂರುವರ್ಷದ ಸತತ ಬರಗಾಲದಿಂದ ತತ್ತರಿಸಿ, ಸಾಲಕೊಟ್ಟ ಧಣಿಗಳ ಕಿರುಕುಳವನ್ನು ಸಹಿಸಲಾಗದೇ, ಮನೆಯವರ ಕರುಳಿನ ತುತ್ತಿನ ಚೀಲಗಳನ್ನು ತುಂಬಿಸಲು ದಾರಿ ಕಾಣದೆ ಕಂಗಾಲಗಿರುವ ರೈತ ಆತ್ಮಹತ್ಯೆಗೆ ಶರಣಾಗಿದ್ದಾನೆ. ಸರಣಿಯಲ್ಲಿ ನಡೆಯುತ್ತಿರುವ ರೈತರ ಆತ್ಮಹತ್ಯೆಗಳು ದಿನನಿತ್ಯದ ಸುದ್ದಿಯಾಗುತ್ತಿವೆ. ಇದುವರೆಗೆ 300ಕ್ಕೂ ಹೆಚ್ಚು ರೈತರು ತಮ್ಮ ಅಮೂಲ್ಯವಾದ ಪ್ರಾಣ ಕಳೆದುಕೊಂಡಿದ್ದಾರೆ.

ಕೇಂದ್ರ ಸರ್ಕಾರದ ಹಾದಿಯಲ್ಲೇ ಕರ್ನಾಟಕ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಹೆಜ್ಜೆ ಹಾಕುತ್ತಿದೆ. ಒಕ್ಕಲಿಗ ಜನಾಂಗಕ್ಕೆ ಸೇರಿದವರೆಂಬ ಏಕೈಕ ಕಾರಣದಿಂದ 'ರೈತನ ಮಗ'ನೆಂಬ ಆರೋಪಕ್ಕೆ ಒಳಗಾಗಿರುವ ಕೃಷ್ಣರವರು ಯಾವತ್ತೂ ರೈತನ ಮಗನಾಗಿ ನಡೆದುಕೊಂಡಿಲ್ಲ, ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳಬೇಕೆಂಬ ಏಕೈಕ ಕಾರಣಕ್ಕೆ, ರಾಜ್ಯದ ಜನತೆಗೆ ಕುಡಿಯಲು ನೀರಿರದಿದ್ದರೂ ಪರರಾಜ್ಯದ ಬೆಳೆಗಳಿಗೆ ನೀರುಬಿಟ್ಟ ಕುಖ್ಯಾತಿ ಅವರದು. ಬೆಂಗಳೂರನ್ನು ಸಿಂಗಾಪುರ ಮಾಡುವ ಭ್ರಮೆಯಲ್ಲಿ ತೇಲಾಡುತ್ತಾ, ಇನ್‌ಫೋಸಿಸ್‌ನ ನೆಲಗಳ್ಳ ನಾರಾಯಣಮೂರ್ತಿ ಮತ್ತು ವಿಪ್ರೋ ಸಂಸ್ಥೆಯ ಭಾರೀಕುಳ ಅಜೀಮ್‌ಪ್ರೇಮ್‌ಜಿಯವರ ಹಿಡಿತಕ್ಕೆ ಸರ್ಕಾರವನ್ನು ಒಪ್ಪಿಸಿ, ಮಾಹಿತಿ ತಂತ್ರಜ್ಞಾನದ ನಾಮಸ್ಮರಣೆಯಲ್ಲಿ ತಲ್ಲೀನರಾಗಿದ್ದಾರೆ. ಸದಾ ಟಾಕು ಟೀಕಾದ ಡ್ರೆಸ್ ಮಾಡಿಕೊಂಡು, ದೇಶದ ನಂ.1 ಮುಖ್ಯ ಮಂತ್ರಿ ಎಂದು ಮಾಧ್ಯಮಗಳಿಂದ ಹೊಗಳಿಸಿಕೊಂಡು, ವೈಯ್ಯಾರದಿಂದ ಮೆರೆಯುತ್ತಿರುವ ಈ ಹೈಟೆಕ್ ಮುಖ್ಯ ಮಂತ್ರಿಗೆ ಬಡರೈತನ ಬಗ್ಗೆ ಸಾಸಿವೆ ಕಾಳಿನಷ್ಟು ಕಾಳಜಿ ಯಿಲ್ಲ, ಮೂರುವರ್ಷದ ಸತತ ಬರಗಾಲದಿಂದ ತತ್ತರಿಸಿ, ಸಾಲಕೊಟ್ಟ ಧಣಿಗಳ ಕಿರುಕುಳವನ್ನು ಸಹಿಸಲಾಗದೇ, ಮನೆಯವರ ಕರುಳಿನ ತುತ್ತಿನ ಚೀಲಗಳನ್ನು ತುಂಬಿಸಲು ದಾರಿ ಕಾಣದೆ ಕಂಗಾಲಗಿರುವ ರೈತ ಆತ್ಮಹತ್ಯೆಗೆ ಶರಣಾಗಿದ್ದಾನೆ. ಸರಣಿಯಲ್ಲಿ ನಡೆಯುತ್ತಿರುವ ರೈತರ ಆತ್ಮಹತ್ಯೆಗಳು ದಿನನಿತ್ಯದ ಸುದ್ದಿಯಾಗುತ್ತಿವೆ. ಇದುವರೆಗೆ 300ಕ್ಕೂ ಹೆಚ್ಚು ರೈತರು ತಮ್ಮ ಅಮೂಲ್ಯವಾದ ಪ್ರಾಣ ಕಳೆದುಕೊಂಡಿದ್ದಾರೆ. ಈ ರೀತಿಯಲ್ಲಿ ಸತ್ತವರನ್ನು 'ಮಾನಸಿಕ ರೋಗಿಗಳು' ಎಂದು ಜರಿಯುವ ಭೂಪರು ಕೃಷ್ಣ ಸಂಪುಟದಲ್ಲಿ ಸಚಿವರಾಗಿದ್ದಾರೆ! ಇಂಥ ಅರೆ ಹುಚ್ಚರಿಂದ ರೈತರ ಬದುಕು ಹಸನಾಗಲು ಸಾಧ್ಯವೇ? ಸರ್ಕಾರಿ ಸಾಹಿತಿಗಳನ್ನು ಕಲೆಹಾಕಿ ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ಪೂರಕವಾಗಿ ಕೈಗೊಳ್ಳಬೇಕಾದ ಯೋಜನೆಗಳ ಕುರಿತು ಚಿಂತಿಸಲು, ನೂರಾರು ಜನ ರೈತರು ನೆಗೆದು ಬೀಳುವವರೆಗೆ ಮಾನ್ಯ ಮುಖ್ಯಮಂತ್ರಿಗಳು ಕಾಯ ಬೇಕಿತ್ತೇ? ಮೋಡ ಬಿತ್ತನೆ ಎಂಬ ಕಣ್ಣೊರೆಸುವ ನಾಟಕವಾಡಬೇಕಿತ್ತೇ?

ಆಗಸ್ಟ್ 18ರಂದು ಪ್ರಾರಂಭವಾದ ಮೋಡಬಿತ್ತನೆಯ ಯೋಜನೆಯ ಮೂಲಕ ಕೃತಕ ಮಳೆಯನ್ನು ಸುರಿಸಿ, ಕರ್ನಾಟಕದ ಕೆರೆಕಟ್ಟೆ-ಡ್ಯಾಮ್‌ಗಳನ್ನು ತುಂಬಿಸಿ, ಇಡೀ ಕರ್ನಾಟಕವೇ ಹಸಿರಿನಿಂದ ಕಂಗೊಳಿಸುವಂತೆ ಜಾದೂ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಮತ್ತು ಬೃಹತ್ ನೀರಾವರಿ ಮಂತ್ರಿಗಳು ಪರಸ್ಪರ ಬಹುಪರಾಕ್ ಹಾಕಿಕೊಂಡಿದ್ದರು. ಇವರು ಮೋಡಬಿತ್ತನೆಯ ಮೂಲಕ ಸುರಿಸುವ ಕೃತಕ ಮಳೆಗಾಗಿ ಕಣ್ಣುರೆಪ್ಪೆ ಮಿಟುಕಿಸದೆ ಜಾತಕ ಪಕ್ಷಿಯಂತೆ ರೈತರು ಹಣೆಮೇಲೆ ಕೈಯಿಟ್ಟುಕೊಂಡು ಮುಗಿಲು ನೋಡುತ್ತಾ ನಿಂತಿದ್ದಾರೆ. ಆದರೆ ಮಳೆ ಮಾತ್ರ ಪತ್ತೆಯಿಲ್ಲ. ಆದರೆ, ಸರ್ಕಾರ ಸುರಿಯುತ್ತಿರುವ ಕೋಟಿಗಟ್ಟಲೆ ರೊಕ್ಕ, ಕೃತಕ ಮಳೆಯ ಯೋಜನಾ ವೆಚ್ಚದ ಹೆಸರಿನಲ್ಲಿ ಮಂತ್ರಿಗಳ, ಅಧಿಕಾರಿಗಳ ಖಜಾನೆಗಳಿಗೆ ಹಣದ ಮಳೆಯನ್ನೇ ಸುರಿಸುತ್ತಿದೆ!

ಬರಗಾಲ-ಬರ ಪರಿಹಾರ ಕಾಮಗಾರಿ, ರೈತರ ಆತ್ಮಹತ್ಯೆ ಪರಿಹಾರ, ಮೋಡಬಿತ್ತನೆ ಇತ್ಯಾದಿ ಪ್ರತಿಯೊಂದು ಸಂದರ್ಭವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿರುವ ಮಂತ್ರಿಗಳು ಹಾಗೂ ಅಧಿಕಾರಿಗಳು ವರ್ಷಪೂರ್ತಿ ಸುಗ್ಗಿಯ ಹುಗ್ಗಿಯನ್ನು ಸವಿಯುತ್ತಿದ್ದಾರೆ. ನೋಟಿನ ಕಂತೆಗಳನ್ನು ಎಣಿಸಿಕೊಳ್ಳುತ್ತಿದ್ದಾರೆ. ಬರಗೆಟ್ಟ ರೈತರ ಪಾಲಿಗೆ ಸರ್ಕಾರಿಯಂತ್ರ ಮತ್ತು ಅಧಿಕಾರಶಾಹಿ ಸತ್ತ ಹೆಣವಾಗಿದೆ!

ಉತ್ತರ ಕರ್ನಾಟಕದ ಯಾವ ಭಾಗದಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪಿಸಿದರೆ ಸುಸೂತ್ರವಾಗಿರುತ್ತದೆ ಎಂದು ಹೈಕೋರ್ಟ್ ಮುಖ್ಯನ್ಯಾಯಾಧೀಶರ ಮನವೊಲಿಸಲು ವಿಫಲವಾಗಿರುವ ರಾಜ್ಯ ಸರ್ಕಾರವು, ಆ ಭಾಗದ ಜನರ ಭಾವನೆಗಳೊಂದಿಗೆ ಕಳ್ಳಾಟವಾಡಿಕೊಂಡು ಬರುತ್ತಿದೆ. ಇದರ ಪ್ರತಿಫಲವಾಗಿ ಉತ್ತರ ಕರ್ನಾಟಕವಿಂದು ಹೊತ್ತಿ ಉರಿಯುತ್ತಿದೆ. ಚಿಕ್ಕಮಗಳೂರಿನ ಗಿರಿಜನರನ್ನು ಕುದುರೆ ಮುಖ ರಾಷ್ಟ್ರೀಯ ಉದ್ಯಾನ ನಿರ್ಮಿಸುವ ನೆಪದಲ್ಲಿ ಕಾಡಿನಿಂದ ಹೊರದಬ್ಬಿ, ಪೂರ್ತಿ ಅರಣ್ಯವನ್ನೇ ನಾಟಾ ಕಳ್ಳರಿಗೆ-ಭಜರಂಗಿಗಳಿಗೆ ವಹಿಸಿಕೊಡುವ ಸರ್ಕಾರದ ದಗಲ್ಬಾಜಿತನದ ವಿರುದ್ಧ ಪ್ರಜ್ಞಾವಂತ ಜನ ದಂಗೆ

(19ನೇ ಪುಟಕ್ಕೆ)

ಮಾರಾಟದ ಸರಕಾಗಿರುವ

ಮೋಹನ್‌ದಾಸ್, ಮಾರ್ಟಿನ್, ಮಂಡೇಲಾ





ಯಾವುದೇ ವ್ಯಕ್ತಿ-ಸಿದ್ಧಾಂತ, ಮನುಷ್ಯನ ಸ್ವಾರ್ಥತೆಯಿಂದಾಗಿ ಒಂದು ಕಾಲಘಟ್ಟದ ನಂತರ ಹೇಗೆ ಜನಮನದಾಳದಿಂದ ಮರೆಯಾಗುತ್ತವೆ ಎನ್ನುವುದಕ್ಕೆ ನಮ್ಮ ನಡುವಿನ ಅನೇಕ ಮಹಾನ್ ವ್ಯಕ್ತಿಗಳು, ಅವರ ಚಿಂತನೆಗಳು ಮತ್ತು ಸಿದ್ಧಾಂತಗಳನ್ನು ನೋಡಬಹುದು. ಎಲ್ಲವೂ ಇಂದು ಮಾರಾಟವಾಗುತ್ತಿರುವ ಯುಗದಲ್ಲಿ ಹೋರಾಟದ ಪ್ರತಿಮೆಗಳು ತಪ್ಪಿಸಿಕೊಳ್ಳಲು ಸಾಧ್ಯವೇ? ಯಾವ ಸಮಾಜದ ಜನತೆಯ ಬಿಡುಗಡೆಗೆ ಮೋಹನ್‌ದಾಸ ಕರಂಚಂದ್ ಗಾಂಧಿ, ನೆಲ್ಸನ್ ಮಂಡೇಲಾ ಮತ್ತು ಮಾರ್ಟಿನ್ ಲೂಥರ್ ಕಿಂಗ್ ಜೂ., ಹೋರಾಟ ನಡೆಸಿದರೋ ಅದೇ ಸಮಾಜದ ಗಣ್ಯರು ಹೇಗೆ ಅವರೆಲ್ಲರ ಆದರ್ಶಗಳನ್ನು ಮಾರಾಟಕ್ಕಿಟ್ಟಿದ್ದಾರೆ ಎಂಬುದನ್ನು ಅರುಂಧತಿ ರಾಯ್ ಅವರು ಬಿ.ಬಿ.ಸಿ. ರೇಡಿಯೋಗೆ ಮಂಡಿಸಿದ ಪ್ರಬಂಧದಲ್ಲಿ ವಿಶ್ಲೇಷಿಸಿದ್ದಾರೆ.

ಮೂಲ : ಅರುಂಧತಿ ರಾಯ್, ಅನು : ದು.ಸರಸ್ವತಿ

ವಾಷಿಂಗ್‌ಟನ್ ಮೆರವಣಿಗೆಯಲ್ಲಿ 'ನನಗೊಂದು ಕನಸಿದೆ' ಎಂಬ ಪ್ರಸಿದ್ಧ ಭಾಷಣವನ್ನು ಮಾರ್ಟಿನ್ ಲೂಥರ್‌ಕಿಂಗ್ ಜೂ. ಮಾಡಿ 4 ದಶಕಗಳು ಕಳೆದಿವೆ. ಆ ಕನಸೇನಾಯ್ತು ಎಂದು ಹಿಂತಿರುಗಿ ನೋಡುವ ಸಮಯ ಬಂದಿದೆ.

ಯಾವ ಪೂರ್ವಾಗ್ರಹ, ಮತಾಂಧತೆ ಮತ್ತು ಅಸಮಾನತೆ ವಿರುದ್ಧ ಈ ಪ್ರತಿಮೆಗಳು ಹೋರಾಟ ನಡೆಸಿ ದವೊ ಅವೇ ಪ್ರತಿಮೆಗಳು ಕಾಲಕಳೆದಂತೆ ಸರಕುಗಳಂತೆ ಬಳಕೆಯಾಗು ತ್ತಿರುವುದು (ಸ್ವಯಂ ಸ್ಫೂರ್ತಿ ಇದ್ದೋ, ಇಲ್ಲದೆಯೋ) ಗಮನಿಸಲು ಆಸಕ್ತಿದಾಯಕ ಅಂಶವಾಗಿದೆ. ಎಲ್ಲವೂ ಮಾರಾಟವಾಗುತ್ತಿರುವ ಕಾಲದಲ್ಲಿ ಪ್ರತಿಮೆಗಳೇನೂ ಹೊರತಲ್ಲ. ದೇವರ ಭೂಮಿಯ ಮೇಲಿನ ಪ್ರತಿಯೊಂದು ಜೀವವೂ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಚೆಕ್ ಪುಸ್ತಕ ಮತ್ತು ಅಮೆರಿಕಾದ ಕ್ಷಿಪಣಿಯಾತ್ರೆಯ ನಡುವೆ ಸಿಲುಕಿಕೊಂಡಿರುವಂತಹ ಕಾಲದಲ್ಲಿ ಪ್ರತಿಮೆಗಳು ತಪ್ಪಿಸಿ ಕೊಳ್ಳಲು ಸಾಧ್ಯವೇ?

ಮಾರ್ಟಿನ್ ಲೂಥರ್‌ಕಿಂಗ್ ಜೂ. ತ್ರಿಮೂರ್ತಿಗಳ ಲ್ಲೊಬ್ಬರಾದ್ದರಿಂದ ಅವರ ಬಗ್ಗೆ ಮಂಡೇಲಾ ಮತ್ತು ಮೋಹನದಾಸ್ ಗಾಂಧಿಯವರನ್ನು ಬಿಟ್ಟು ಚಿಂತಿಸಲು ಸಾಧ್ಯವಿಲ್ಲ. ಮೂವರೂ ಅಹಿಂಸಾತ್ಮಕ ಹೋರಾಟದ ಆರಾಧಕರಾಗಿದ್ದರು. ಹೆಚ್ಚೂ ಕಡಿಮೆ ಈ ಮೂವರು, 20ನೇ ಶತಮಾನದ ವಸಾಹತು ಶಾಹಿಗಳ ವಿರುದ್ಧ ಮಾಲೀಕರ ವಿರುದ್ಧ ನಡೆದ ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟಗಳ ಪ್ರತಿನಿಧಿಗಳಾಗಿದ್ದರು. ಯಾವ ಸಮಾಜದ, ಜನತೆಯ ಪರವಾಗಿ ಈ ಮೂವರು ಹೋರಾಟ ನಡೆಸಿದರೂ ಈಗ ಅದೇ ಸಮಾಜದಲ್ಲಿ ಗಣ್ಯರು, ಹೊಸ ಮಾಲೀಕರನ್ನು ಪೂಸಿ ಹೊಡೆಯಲು ಅವರನ್ನೆ ಬಳಸಿಕೊಳ್ಳುತ್ತಿದ್ದಾರೆ

ಛಿದ್ರವಾದ ಕನಸುಗಳು, ವಿಶ್ವಾಸಘಾತುಕತನ, ದುಸ್ವಪ್ನಗಳು ಇಂದಿನ 'ಸ್ವತಂತ್ರ ಜಗತ್ತಿನ' ಮೇಲೆ ಪಕ್ಷಿನೋಟ ಬೀರೋಣ.

ಕಳೆದ ವರ್ಷ ಭಾರತದ ಗುಜರಾತ್‌ನಲ್ಲಿ, ಅದೂ ಗಾಂಧಿಯ ಗುಜರಾತಿನಲ್ಲಿ ಬಲಪಂಥೀಯ ಹಿಂದು ಗುಂಪುಗಳು 2000 ಮುಸಲ್ಮಾನರ ಮಾರಣಹೋಮವನ್ನು ಯಶಸ್ವಿಯಾಗಿ ನಿರ್ವಹಿಸಿದವು. ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಜೀವಂತವಾಗಿ ಸುಡ ಲಾಯಿತು. ಮುಸಲ್ಮಾನರ ಗೋರಿಗಳು, ಪೂಜಾಸ್ಥಳ ಗಳನ್ನು ನೆಲಸಮ ಮಾಡಲಾಯಿತು. ಸುಮಾರು ಒಂದುವರೆ ಲಕ್ಷದಷ್ಟು ಮುಸಲ್ಮಾನರು ಮನೆ ತೊರೆದು ಹೋಗಿದ್ದಾರೆ. ಆ ಸಮುದಾಯದ ಆರ್ಥಿಕ ಆಧಾರವನ್ನೇ ಧ್ವಂಸಗೊಳಿಸಲಾಗಿದೆ. ಪ್ರತ್ಯಕ್ಷಸಾಕ್ಷಿಗಳು, ಹಲವು ಸತ್ಯಶೋಧನ ಸಮಿತಿ ವರದಿಗಳು ಇದೊಂದು ರಾಜ್ಯ ಸರ್ಕಾರ ಹಾಗೂ ಪೊಲೀಸ್ ವ್ಯವಸ್ಥೆ ಜಂಟಿಯಾಗಿ ನಡೆಸಿದ ನರಮೇಧವೆಂದು ಆರೋಪಿಸಿವೆ. ನಾನು ಭಾಗವಹಿಸಿದ್ದ ಸಭೆಯಲ್ಲಿ ಬಲಿಪಶುಗಳಾದ ಗುಂಪೊಂದು 'ಪೊಲೀಸರಿಂದ ನಮ್ಮನ್ನು ರಕ್ಷಿಸಿ! ಅದಷ್ಟೇ ನಾವು ಕೇಳುವುದು....' ಎಂದು ರೋಧಿಸುತ್ತಲೇ ಇತ್ತು.

ಡಿಸೆಂಬರ್ 2002ರಲ್ಲಿ ಮತ್ತೆ ಅದೇ ರಾಜ್ಯ ಸರ್ಕಾರ ಅಧಿ ಕಾರಕ್ಕೆ ಬಂತು. ಇಡೀ ನರಮೇಧವನ್ನು ರೂಪಿಸಿ ಯಶಸ್ವಿಯಾಗಿ ಜಾರಿಗೊಳಿಸಿದ ನರೇಂದ್ರಮೋದಿ ಮತ್ತೆ ಎರಡನೇ ಬಾರಿಗೆ ಗುಜರಾತಿನ ಮುಖ್ಯಮಂತ್ರಿಯಾದರು. ಸಾವಿರಾರು ಜನರ ಹರ್ಷೋದ್ಗಾರದ ನಡುವೆ ಆಗಸ್ಟ್ 15ರಂದು ಭಾರತದ ಧ್ವಜವನ್ನು ಹಾರಿಸಿದರು. ಆ ಸಂದರ್ಭದಲ್ಲಿ ಹಿಟ್ಲರ್ ಮತ್ತವನ ಸಂಗಡಿಗರನ್ನು ಯಾವ ನಾಚಿಕೆಯೂ ಇಲ್ಲದೆ ಹಾಡಿ ಹೊಗಳುವ ಹಿಂದೂ ರಾಷ್ಟ್ರೀಯವಾದಿಗಳ ಗರಡಿಯಾದ ಆರ್‌ಎಸ್‌ಎಸ್ ಟೋಪಿಯನ್ನು ಮೋದಿ ತೊಟ್ಟದ್ದು ಭೀಕರತೆಯ ಸಂಕೇತ ದಂತಿತ್ತು.

ಇತರೆ ಅಲ್ಪಸಂಖ್ಯಾತರಾದ ದಲಿತರು, ಕ್ರಿಶ್ಚಿಯನ್ನರು, ಸಿಖ್ಖರು, ಆದಿವಾಸಿಗಳನ್ನು ಹೊರತು ಪಡಿಸಿ 130ಮಿಲಿಯನ್ ಮುಸಲ್ಮಾನರು ಭಾರತದಲ್ಲಿ ಹಿಂದೂ ರಾಷ್ಟ್ರೀಯತೆಯ ನೆರಳಿನಲ್ಲಿ ಜೀವಿಸುತ್ತಿದ್ದಾರೆ. ನರೇಂದ್ರ ಮೋದಿಗೆ ತನ್ನ ರಾಜಕೀಯ ಭವಿಷ್ಯ ಉಜ್ವಲವೆಂಬ

ದೃಢವಿಶ್ವಾಸವಿದೆ. ರಾಜಕೀಯ ಅಂತರಾಳವನ್ನು ಕಬಳಿಸಿ ಕೊಳ್ಳುವುದರಲ್ಲಿ ಚಾಣಕ್ಷನಾದ ಆತ ಅಕ್ಟೋಬರ್ 2ರ ಗಾಂಧಿ ಜಯಂತಿಗೆ ಮುಖ್ಯ ಅತಿಥಿಯಾಗಿ ಬರಬೇಕೆಂದು ನೆಲ್ಸನ್ ಮಂಡೇಲಾರನ್ನು ಆಹ್ವಾನಿಸಿದ. ಅದೃಷ್ಟವಶಾತ್ ಆ ಆಹ್ವಾನಕ್ಕೆ ಸಮ್ಮತಿ ಸಿಗಲಿಲ್ಲ. ಪುಟ್ಟ ಪವಾಡ, ದೇವರ ಕಾಮನ ಬಿಲ್ಲಿನ ದೇಶವೆನಿಸಿಕೊಳ್ಳುವ, ಮಂಡೇಲಾರ ದ.ಆಫ್ರಿಕಾ ಏನಾಗಿದೆ? ಅಲ್ಲಿನ ಜನರ ಪ್ರಕಾರ ಎಷ್ಟು ತ್ವರಿತವಾಗಿ ಕಾಮನಬಿಲ್ಲನ್ನು ಖಾಸಗೀಕರಣಗೊಳಿಸ ಲಾಗಿದೆ, ಕತ್ತರಿಸಿ ಹೆಚ್ಚಿನ ಬೆಲೆ ನೀಡುವವರಿಗೆ ಹರಾಜು ಹಾಕಲಾಗಿದೆ ಎಂಬುದೊಂದೆ ಪವಾಡ ಜರುಗಿರುವುದು. 1994ರಲ್ಲಿ ಅಧಿಕಾರ ಪಡೆದುಕೊಂಡ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಕೇವಲ ಎರಡೇ ವರ್ಷದಲ್ಲಿ ಯಾವ ಆಕ್ಷೇಪಣೆಯೂ ಇಲ್ಲದೆ, ಮಂಡಿಯೂರಿ ಮಾರುಕಟ್ಟೆ ದೇವರಿಗೆ ಶರಣಾಯಿತು. ನವ-ಉದಾರ ವಾದಿ ಪೋಸ್ಟರ್ ಹುಡುಗನಂತೆ ಅರ್ಜಂಟೀನಿಯಾವನ್ನು ಬದಲಾಯಿಸುವ ಭರದಲ್ಲಿ ಖಾಸಗೀಕರಣದ ಹಾಗೂ ರಾಚನಿಕ ಹೊಂದಾಣಿಕೆಯ ಬೃಹತ್ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡಿದೆ. 26 ಮಿಲಿಯನ್ ಭೂಹೀನ ಜನರಿಗೆ ಕೃಷಿ ಭೂಮಿಯನ್ನು ಮರುವಿತರಣೆ ಮಾಡುವು ದಾಗಿ ಸರ್ಕಾರ ಮಾಡಿದ್ದ ಆಶ್ವಾಸನೆ ಕ್ರೂರ ಜೋಕಾ ಗಿಯೇ ಉಳಿದಿದೆ. ಶೇ. 60ರಷ್ಟು ಜನ ಭೂಹೀನರಾದರೆ, ಎಲ್ಲಾ ಕೃಷಿಕ ಭೂಮಿಯ ಮಾಲೀಕರಾಗಿರುವವರು 60000 ಬಿಳಿಯ ರೈತರು. (ಕೌತುಕವೆಂದರೆ ಬುಷ್ ಇತ್ತೀಚೆಗೆ ದ.ಆಫ್ರಿಕಾಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಹಾಬೊಮೆ ಬಾಕಿಯವರನ್ನು ಜಿಂಬಾಬ್ವೆ ವಿಷಯಕ್ಕೆ ಸಂಬಂಧಪಟ್ಟಂತೆ 'ತಮ್ಮ ಪ್ರಧಾನ ವ್ಯಕ್ತಿ' ಎಂದು ಹೇಳಿರುವುದು). ವರ್ಣಭೇದ ವ್ಯವಸ್ಥೆ ನಂತರದಲ್ಲಿ 40ರಷ್ಟು ಬಡ ಕರಿಯರ ಕುಟುಂಬದ ಆದಾಯವು ಶೇ. 20ರಷ್ಟು ಕಡಿಮೆಯಾಗಿದೆ. 2 ಮಿಲಿಯನ್ ಜನರು ನಿರ್ವಸತಿಗರಾಗಿದ್ದಾರೆ. ಪ್ರತಿನಿತ್ಯ 600 ಜನ ಏಡ್ಸ್‌ನಿಂದ ಸಾಯುತ್ತಿದ್ದಾರೆ. ನಿರುದ್ಯೋಗಿಗಳ ಸಂಖ್ಯೆ ಶೇ. 40ರಷ್ಟು, ಇದು ತ್ವರಿತವಾಗಿ ಹೆಚ್ಚಾಗುತ್ತಿದೆ. ಮೂಲಭೂತ ಸೇವೆ ಒದಗಿಸುವ ಕಾರ್ಪೊರೇಷನ್, ಮಿಲಿಯನ್‌ಗಟ್ಟಲೆ ಜನ ವಿದ್ಯುತ್, ನೀರಿನ ಸಂಪರ್ಕ ಕಡಿದುಕೊಳ್ಳುತ್ತಿದ್ದಾರೆಂದು ಹೇಳಿದೆ.

ಹದಿನೈದು ದಿನಗಳ ಹಿಂದೆ ಡರ್ಬನ್‌ನ ಚಾಟ್ಸ್‌ವರ್ತ್‌ನಲ್ಲಿರುವ ತೆರೆಸಾ ನಾಯ್ಡು ಎಂಬುವರನ್ನು ಭೇಟಿಯಾಗಿದ್ದೆ. ಹಿಂದಿನ ದಿನವಷ್ಟೇ ಆಕೆಯ ಗಂಡ ಏಡ್ಸ್‌ನಿಂದ ತೀರಿಕೊಂಡಿದ್ದ. ಶವಪೆಟ್ಟಿಗೆ ತರಿಸಲು ಆಕೆಯ ಬಳಿ ಹಣವಿರಲಿಲ್ಲ. ಆಕೆ ಮತ್ತು ಆಕೆಯ ಪುಟ್ಟ ಮಕ್ಕಳಿಬ್ಬರು ಏಡ್ಸ್ ಪೀಡಿತರು. ನೀರಿನ ಬಿಲ್ ಮತ್ತು ಇಷ್ಟಗಲದ ಮನೆಯ ಬಾಕಿ ಕಟ್ಟಲಿಲ್ಲವೆಂಬ ಕಾರಣಕ್ಕೆ ಸರ್ಕಾರ ನೀರಿನ ಸಂಪರ್ಕ ನಿಲ್ಲಿಸಿದೆ. ಆಕೆ, ಆಕೆಯಂತಹ ಲಕ್ಷಾಂತರ ಜನರ ತೊಂದರೆಗಳನ್ನು ಸರ್ಕಾರ, ಪಾವತಿ ಸುವ ಸಂಸ್ಕೃತಿ ಇಲ್ಲದವರೆಂದು ಕಡೆಗಣಿಸುತ್ತಿದೆ.

ವರ್ಣಭೇದ ನೀತಿಯಡಿಯಲ್ಲಿವಹಿಸಿದ ಪಾತ್ರಕ್ಕೆ ಕಂಪನಿಗಳೇ ಪರಿಹಾರ ನೀಡಬೇಕೆಂಬ ಒತ್ತಡವನ್ನು

ಅಲ್ಪಸಂಖ್ಯಾತರಾದ ದಲಿತರು, ಕ್ರಿಶ್ಚಿಯನ್ನರು, ಸಿಖ್ಖರು, ಆದಿವಾಸಿಗಳನ್ನು ಹೊರತು ಪಡಿಸಿ 130 ಮಿಲಿಯನ್ ಮುಸಲ್ಮಾನರು ಭಾರತದಲ್ಲಿ ಹಿಂದೂ ರಾಷ್ಟ್ರೀಯತೆಯ ನೆರಳಿನಲ್ಲಿ ಜೀವಿಸುತ್ತಿದ್ದಾರೆ. ನರೇಂದ್ರ ಮೋದಿಗೆ ತನ್ನ ರಾಜಕೀಯ ಭವಿಷ್ಯ ಉಜ್ವಲವೆಂಬ ದೃಢವಿಶ್ವಾಸವಿದೆ. ರಾಜಕೀಯ ಅಂತರಾಳವನ್ನು ಕಬಳಿಸಿ ಕೊಳ್ಳುವುದರಲ್ಲಿ ಚಾಣಕ್ಷನಾದ ಆತ ಅಕ್ಟೋಬರ್ 2ರ ಗಾಂಧಿ ಜಯಂತಿಗೆ ಮುಖ್ಯ ಅತಿಥಿಯಾಗಿ ಬರಬೇಕೆಂದು ನೆಲ್ಸನ್ ಮಂಡೇಲಾರನ್ನು ಆಹ್ವಾನಿಸಿದ. ಅದೃಷ್ಟವಶಾತ್ ಆ ಆಹ್ವಾನಕ್ಕೆ ಸಮ್ಮತಿ ಸಿಗಲಿಲ್ಲ.

ವಿರೋಧಿಸುವ ನಿಯಮವನ್ನು ಇದೇ ಸರ್ಕಾರ ಕೇಳಿದೆ. ಅದೂ ಅಮೆರಿಕಾದ ನ್ಯಾಯಾಧೀಶರನ್ನು ಅಧಿಕೃತವಾಗಿ! ಈ ಪರಿಹಾರ ಅಂದರೆ ಸಿಗಬೇಕಾಗಿರುವ ನ್ಯಾಯವು ವಿದೇಶಿ ಹೂಡಿಕೆಗೆ ಅಡ್ಡಿಯಾಗುತ್ತದೆ ಎಂಬ ಕಾರಣಕ್ಕೆ, ಅಂದರೆ ವರ್ಣಭೇದ ನೀತಿಯಡಿ ನಲುಗಿದ ಕಪ್ಪು ಜನರೇ ಸಾಲದ ಹೊರೆ ಹೊತ್ತುಕೊಂಡು, ಆ ವ್ಯವಸ್ಥೆಯಡಿ ಲಾಭ ಮಾಡಿಕೊಂಡ ಜನರೇ ಇನ್ನು ಹೆಚ್ಚಿನ ಲಾಭವನ್ನು ಲೂಟಿಮಾಡಲು ನೆಲ್ಸನ್ ಮಂಡೇಲಾರ ಕಾಮನ ಬಿಲ್ಲಿನ ನಾಡು ಅನುವು ಮಾಡಿಕೊಟ್ಟಿದೆ. ಅಧ್ಯಕ್ಷ ಥಾಬೋಮೆಬ್ಬಿಯವರನ್ನು ಅವರ ಸರ್ಕಾರದ ಸಹೋದ್ಯೋಗಿಗಳು ಇದನ್ನು 'ಸಂಗಾತಿ' (ಕಾಮ್ರೇಡ್) ಎಂದು ಕರೆಯುತ್ತಾರೆ. ದ.ಆಫ್ರಿಕದಲ್ಲಿ ಆರ್ವೆಲ್‌ನ ಪ್ರಹಸನ ನಿತ್ಯ ಜೀವನದಲ್ಲಿ ಸತ್ಯವಾಗುತ್ತಿದೆ.

ಮಾರ್ಟಿನ್ ಲೂಥರ್‌ಕಿಂಗ್ ಜೂ.ನ ಅಮೆರಿಕ ಬಗ್ಗೆ ಹೇಳಲೇನಿದೆ? ಒಂದು ಸರಳ ಪ್ರಶ್ನೆ ಕೇಳುವುದು ಸೂಕ್ತ

ಪುಟ್ಟ ಪವಾಡ, ದೇವರ ಕಾಮನ ಬಿಲ್ಲಿನ ದೇಶವೆನಿಸಿಕೊಳ್ಳುವ, ಮಂಡೇಲಾರ ದ.ಆಫ್ರಿಕಾ ಏನಾಗಿದೆ? ಅಲ್ಲಿನ ಜನರ ಪ್ರಕಾರ ಎಷ್ಟು ತ್ವರಿತವಾಗಿ ಕಾಮನಬಿಲ್ಲನ್ನು ಖಾಸಗೀಕರಣಗೊಳಿಸಲಾಗಿದೆ, ಕತ್ತರಿಸಿ ಹೆಚ್ಚಿನ ಬೆಲೆ ನೀಡುವವರಿಗೆ ಹರಾಜು ಹಾಕಲಾಗಿದೆ ಎಂಬುದೊಂದೆ ಪವಾಡ ಜರುಗಿರುವುದು. 1994ರಲ್ಲಿ ಅಧಿಕಾರ ಪಡೆದುಕೊಂಡ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಕೇವಲ ಎರಡೇ ವರ್ಷದಲ್ಲಿ ಯಾವ ಆಕ್ಷೇಪಣೆಯೂ ಇಲ್ಲದೆ, ಮಂಡಿಯೂರಿ ಮಾರುಕಟ್ಟೆ ದೇವರಿಗೆ ಶರಣಾಯಿತು.

ವೆನಿಸುತ್ತದೆ. ಅವನೀಗ ಜೀವಂತವಾಗಿದ್ದಿದ್ದರೆ ಶ್ರೇಷ್ಠ ಅಮೆರಿಕನ್ನರ ಮಂದಿರದಲ್ಲಿ ತಾನು ಅವಿವಾಹಿತನಾಗಿ ಪಡೆದುಕೊಂಡ ಸ್ಥಾನದಲ್ಲಿ ಬೆಚ್ಚಗಿರುತ್ತಿದ್ದನೆ? ಅಥವಾ ಪೂಜನೀಯ ಸ್ಥಳವನ್ನು ಧಿಕ್ಕರಿಸಿ, ಹೊಗಳಿಕೆಯ ಅರುಚಾಟವನ್ನು ಕೊಡವಿಕೊಂಡು ಮತ್ತೊಮ್ಮೆ ಬೀದಿ ಯಲ್ಲಿನ ಜನರ ಮೆರವಣಿಗೆ ಸೇರುತ್ತಿದ್ದನೆ?

ಕೊಲೆಯಾಗುವ ಒಂದುವರ್ಷದ ಹಿಂದೆ ಅಂದರೆ ಏಪ್ರಿಲ್ 4, 1967ರಲ್ಲಿ ನ್ಯೂಯಾರ್ಕ್ ನಗರದ ನದಿ ದಂಡೆಯ ಚರ್ಚ್ ಒಂದರಲ್ಲಿ ಮಾರ್ಟಿನ್ ಲೂಥರ್ ಕಿಂಗ್ ಮಾತನಾಡಿದ್ದ. ಆ ಸಂಜೆ ಅವರಾಡಿದ ಮಾತು ಗಳಿವು. (ಕೆಲವೇ ವಾಕ್ಯಗಳನ್ನು ಹೇಳಬೇಕು, ಯಾಕೆಂದರೆ ಅವನ ಸಾರ್ವಜನಿಕ ಭಾಷಣಗಳು ಖಾಸಗಿಯವರ ಸ್ವತ್ತಾಗಿವೆ) 'ಆಧುನಿಕ ಜಗತ್ತಿನಲ್ಲಿ ಹಿಂಸೆಯನ್ನು ಪ್ರತಿ ಪಾದಿಸುವ ಅತಿದೊಡ್ಡ ದೇಶವಾದ ತನ್ನ ದೇಶದ ಸರ್ಕಾರವನ್ನು ಮೊದಲು ವಿರೋಧಿಸಿ ಮಾತನಾಡದೆ, ಗೆಟ್ಟೊಗಳಲ್ಲಿ (ಅಲ್ಪಸಂಖ್ಯಾತರು ಅಮಾನವೀಯ ಪರಿಸ್ಥಿತಿಯಲ್ಲಿ ವಾಸಿಸುವ ಸ್ಥಳಗಳು) ನಡೆಯುವ ಹಿಂಸೆಯನ್ನು ಮತ್ತೆಂದಿಗೂ ಮಾತನಾಡಲಾರೆ'

ಈ 36 ವರ್ಷಗಳ ಅಂದರೆ 1967ರಿಂದ 2003ರವರೆಗೆ ಆತನ ಮನಸ್ಸನ್ನು ಬದಲಾಯಿಸಿರುವಂತಹದೇನಾದರೂ ನಡೆದಿದೆಯೆ? ಅಥವಾ ಅಲ್ಲಿನಿಂದ ಇಲ್ಲಿಯವರೆಗೂ ಬಂದ ಸರ್ಕಾರಗಳು ನಡೆಸಿರುವ ಸಾಮೂಹಿಕ ನರಮೇಧವನ್ನು ಕಂಡು ಆತ ತನ್ನ ಅಭಿಪ್ರಾಯವನ್ನು ಇಮ್ಮಡಿಯಾಗಿ ದೃಢಪಡಿಸಿಕೊಳ್ಳುತ್ತಿದ್ದರೇನೋ?

ಮಾರ್ಟಿನ್ ಲೂಥರ್‌ಕಿಂಗ್ ಜೂ. ತೀವ್ರಗಾಮಿಯಾಗಿ ಹೋರಾಟ ಪ್ರಾರಂಭಿಸಲಿಲ್ಲ ಎಂಬುದನ್ನು ಮರೆಯ ಬಾರದು. ಪರಿವರ್ತಕನಾಗಿ, ಆಸ್ತಿಕನಾಗಿ ಅವನ ಹೋರಾಟ ಪ್ರಾರಂಭವಾಯಿತು. 1964ರಲ್ಲಿ ಅವರಿಗೆ ನೊಬೆಲ್ ಪ್ರಶಸ್ತಿ ದೊರಕಿತು. ಮಾಧ್ಯಮಗಳು ಆತನನ್ನು ಆದರ್ಶನೀಯ ಕರಿಯ ನಾಯಕನೆಂದು ಎತ್ತಿ ಹಿಡಿದವು. ಆತ ಮಾಲ್ಕಂ ಎಕ್ಸ್ ನಷ್ಟು ತೀವ್ರಗಾಮಿಯಲ್ಲ. ಮೂರು ವರ್ಷಗಳ ನಂತರವೇ ಮಾರ್ಟಿನ್ ಲೂಥರ್‌ಕಿಂಗ್ ಜೂ. ವಿಯಟ್ನಾಂನಲ್ಲಿ ಅಮೆರಿಕ ಸರ್ಕಾರ ನಡೆಸಿದ ಜನಾಂಗ ಬೇಧ ಯುದ್ಧಕ್ಕೂ ತನ್ನ ದೇಶದಲ್ಲೆ ಜಾರಿ ಯಲ್ಲಿರುವ ಜನಾಂಗ ಬೇಧ ನೀತಿಗೂ ಇರುವ ಸಂಬಂಧವನ್ನು ಗುರುತಿಸಿದ್ದು 1967, ಯಾವ ಮುಲಾಜಿಗೂ ಒಳಗಾಗದೆ, ತನ್ನ ಧೀರೋದಾತ್ತ ಭಾಷಣದಲ್ಲಿ ವಿಯಾಟ್ನಂ ಮೇಲಿನ ಅಮೆರಿಕ ಆಕ್ರಮಣವನ್ನು ಧಿಕ್ಕರಿಸಿದ. ಯಾವ ದೇಶವು ಒಂದೇ ಮೇಜಿನಲ್ಲಿ ಕುಳಿತು ಕೊಳ್ಳಲು ಕರಿಯರನ್ನು ಬಿಡುವುದಿಲ್ಲವೋ ಆ ದೇಶಕ್ಕಾಗಿ ಕರಿಯ, ಬಿಳಿಯ ಹುಡುಗರು ಕ್ರೂರ ಐಕ್ಯಮತ್ಯದಲ್ಲಿ ಬಡ ಹಳ್ಳಿಗಳ ಗುಡಿಸಲುಗಳನ್ನು ಭಸ್ಮಮಾಡುತ್ತಿರುವ, ಕೊಲೆ ಮಾಡುತ್ತಿರುವ, ಕೊಲೆಯಾಗುತ್ತಿರುವ ಟಿ.ವಿ. ದೃಶ್ಯ ಗಳನ್ನು ಕುರಿತು ಹೃದಯಕರಗುವಂತೆ ನಿರರ್ಗಳವಾಗಿ ಮಾತನಾಡಿದ. ಅವನ ಈ ವಿರೋಧವನ್ನು ವಿಶ್ವಾಸ ಘಾತುಕ ಕ್ರಿಯೆ ಎಂದು ಕರೆಯಲಾಯಿತು. ಮೊದಲಿನ

ಮೈತ್ರಿ ಕೂಟಗಳು, ಅಮೆರಿಕದ ಪತ್ರಿಕೆಗಳು, ಕೆಟ್ಟದಾಗಿ ಖಂಡಿಸಿದವು. ವಾಷಿಂಗ್‌ಟನ್ ಪೋಸ್ಟ್‌ರ್ 'ತನ್ನ ಧ್ಯೇಯ, ದೇಶ, ಜನರ ಕುರಿತ ತನ್ನ ಉಪಯುಕ್ತತೆಯನ್ನು ಆತ ಕಳೆದುಕೊಂಡಿರುವುದಾಗಿ' ಬರೆಯಿತು.

ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಂತೂ ಕರಿಯ ಅಮೆರಿಕನರಲ್ಲಿ ಬೆಳೆಯುತ್ತಿರುವ ಯುದ್ಧವಿರೋಧ ನಿಲುವು ಕುರಿತು ಅದ್ಭುತ ತರ್ಕವೊಂದನ್ನು ಮುಂದಿಟ್ಟಿತು. ವಿಯಾಟ್ನಾಮಿನಲ್ಲಿ ಮೊತ್ತ ಮೊದಲಬಾರಿಗೆ ತನ್ನ ದೇಶಕ್ಕಾಗಿ ಹೋರಾಡುವ ಅವಕಾಶವನ್ನು ನೀಗ್ರೊಗಳಿಗೆ ನೀಡಲಾಗಿದೆ ಎಂದು ಹೇಳಿತು. ಜನಸಂಖ್ಯೆಗನುಗುಣವಾಗಿ ಬಿಳಿಯರಂತೆ ಕರಿಯರೂ ಸಹ ದುಪ್ಪಟ್ಟು ಪ್ರಾಣ ಕಳೆದುಕೊಳ್ಳುತ್ತಿರುವುದು, ಶವದ ಚೀಲಗಳು ಬಂದಿಳಿದಾಗ ಕರಿಯ ಸೈನಿಕರನ್ನು ಬೇರೆಯಾಗಿ ದಕ್ಷಿಣದ ಸ್ಮಶಾನದಲ್ಲಿ ಹೂಳುತ್ತಿದ್ದಾರೆಂದು ಮಾರ್ಟಿನ್ ಲೂಥರ್‌ಕಿಂಗ್ ಜೂ. ಗಮನಿಸಿದ ಅಂಶವನ್ನು ಪತ್ರಿಕೆಯು ಕೈಬಿಟ್ಟಿತು.

ಇಂದಿನ ಅಂಕಿಅಂಶಗಳ ಪ್ರಕಾರ ಆಫ್ರಿಕನ್ ಅಮೆರಿಕದವರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ. 12ರಷ್ಟು ಅವರ ಸಂಖ್ಯೆ ಒಟ್ಟು ಶಸ್ತ್ರಸಜ್ಜಿತ ಪಡೆಗಳಲ್ಲಿ ಶೇ. 21ರಷ್ಟು ಅಮೆರಿಕದ ಸೈನ್ಯದಲ್ಲಿ ಶೇ. 29ರಷ್ಟು ಈ ಅಂಕಿಸಂಖ್ಯೆ ಗಮನಿಸಿ ಮಾರ್ಟಿನ್ ಲೂಥರ್‌ಕಿಂಗ್ ಜೂ. ಏನು ಹೇಳಿರುತ್ತಿದ್ದರು? ಎಂತಹ ಅದ್ಭುತ ಬದಲಾವಣೆ ಎನ್ನುತ್ತಿದ್ದರೇನೊ?

ಕರಿಯರ ಮತ ಚಲಾವಣೆಯ ಹಕ್ಕಿಗಾಗಿ ನಿರಂತರ ಹೋರಾಟ ನಡೆಸಿದ ಆತ ಈಗ ಶೇ. 13ರಷ್ಟು ಅಂದರೆ 1.4ಮಿಲಿಯನ್ ಆಫ್ರಿಕನ್ ಅಮೆರಿಕದವರು ಅಪರಾಧಿಗಳೆಂದು ಮತದಾನದ ಹಕ್ಕನ್ನು ಕಳೆದುಕೊಂಡಿರುವುದನ್ನು ನೋಡಿ ಏನನ್ನುತ್ತಿದ್ದರು?

ಆದರೆ ಎಲ್ಲಕ್ಕಿಂತ ಸಮಂಜಸವಾದ ಪ್ರಶ್ನೆ ಯಾವುದೆಂದರೆ-ಅಮೆರಿಕದ ಶಸ್ತ್ರಸಜ್ಜಿತ ಪಡೆಯ 5ನೇ ಸ್ಥಾನದಲ್ಲಿ ಮತ್ತು ಅಮೆರಿಕದ ಸೇನಾ ಪಡೆಯ 3ನೇ ಸ್ಥಾನದಲ್ಲಿರುವ ಕರಿಯ ಮಹಿಳೆಯರು ಮತ್ತು ಪುರುಷರನ್ನು ಕಂಡು ಮಾರ್ಟಿನ್ ಲೂಥರ್ ಕಿಂಗ್ ಜೂ.ರವರು ಏನು ಹೇಳುತ್ತಿದ್ದರು? ಎಂಬುದು.

ವಿಯಾಟ್ನಾಮಿನಲ್ಲಿ ಹೋರಾಡುತ್ತಿದ್ದ ಸೈನಿಕರನ್ನು ಕುರಿತು ಮಾರ್ಟಿನ್ ಲೂಥರ್ ಕಿಂಗ್ ಜೂ. ಅವರು ಹೇಳಿದ್ದು 'ವಿಯಾಟ್ನಾಮಿನಲ್ಲಿ ಅಮೆರಿಕದ ಪಾತ್ರವನ್ನು ಅರ್ಥ ಮಾಡಿಕೊಳ್ಳಬೇಕು ಮತ್ತು ಆತ್ಮಸಾಕ್ಷಿಯನ್ನು ಪರಿಗಣಿಸಬೇಕೆಂದು'.

1967, ಏಪ್ರಿಲ್‌ನಲ್ಲಿ ಮ್ಯಾನ್‌ಹಟನ್‌ನಲ್ಲಿ ನಡೆದ ಬೃಹತ್ ಯುದ್ಧವಿರೋಧಿ ಪ್ರತಿಭಟನೆಯಲ್ಲಿ ಸ್ಟಾಕ್ಲಿ ಕಾರ್ಮಿಕೇಲ್, ಕರಡನ್ನು ಈ ರೀತಿ ವಿವರಿಸಿದರು. 'ಕೆಂಪು ಜನರಿಂದ ಕದ್ದ ನೆಲವನ್ನು ಸಮರ್ಥಿಸಿಕೊಳ್ಳಲು ಬಿಳಿಯ ಜನರು ಕಪ್ಪು ಜನರನ್ನು ಹಳದಿ ಜನರ ಮೇಲೆ ಯುದ್ಧ ಮಾಡಲು ಕಳುಹಿಸಿದ್ದಾರೆ'.

ಬದಲಾಗಿರುವುದೇನು? ಒಂದಂತೂ ಖಂಡಿತ ಬದಲಾಗಿದೆ. ಕಡ್ಡಾಯ ಕರಡು ದಾರಿದ್ರ್ಯದ ಕರಡಾಗಿ ಮಾರ್ಪಟ್ಟಿದೆ. ಇದೊಂದು ವಿಶೇಷ ರೀತಿಯ ಒತ್ತಾಯ.

ಇರಾಕ್ ಮತ್ತು ಆಫ್‌ಘಾನಿಸ್ತಾನದ ಮೇಲಿನ ಆಕ್ರಮಣ, ಅತಿಕ್ರಮಣವು ವಿಯಾಟ್ನಾಮಿನ ಮೇಲೆ ಅಮೆರಿಕ ನಡೆಸಿದ ಆಕ್ರಮಣಕ್ಕಿಂತ ನೈತಿಕವಾಗಿ ಯಾವ ರೀತಿ ಭಿನ್ನ ಎಂದು ಮಾರ್ಟಿನ್ ಲೂಥರ್ ಕಿಂಗ್ ಜೂ. ಹೇಳಿರುತ್ತಿದ್ದರೆ? ಈ ಯುದ್ಧಗಳಲ್ಲಿ ಭಾಗವಹಿಸುವುದು ನ್ಯಾಯ, ನೈತಿಕ ಎಂದು ಆತ ಹೇಳಿರುತ್ತಿದ್ದರೆ? 1980ರ ಸಂದರ್ಭದಲ್ಲಿ ಇರಾನಿನ ವಿರೋಧಿ ಬಣದಲ್ಲಿದ್ದಾಗ ಕರ್ದರು, ಇರಾನಿಯರು, ಇರಾಕಿಯರ ನರಮೇಧ ನಡೆಸಿದ ಸದ್ದಾಂ ಹುಸೇನನ್ನು ರಾಜಕೀಯವಾಗಿ, ಆರ್ಥಿಕವಾಗಿ ಅಮೆರಿಕ ಬೆಂಬಲಿಸಿದ್ದು ಅದರ ಹಕ್ಕೆಂದು ಹೇಳುತ್ತಿದ್ದರೆ?

> **ಅಂಕಿಅಂಶಗಳ ಪ್ರಕಾರ ಆಫ್ರಿಕನ್ ಅಮೆರಿಕದವರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ. 12ರಷ್ಟು ಅವರ ಸಂಖ್ಯೆ ಒಟ್ಟು ಶಸ್ತ್ರಸಜ್ಜಿತ ಪಡೆಗಳಲ್ಲಿ ಶೇ. 21ರಷ್ಟು ಅಮೆರಿಕದ ಸೈನ್ಯದಲ್ಲಿ ಶೇ. 29ರಷ್ಟು ಈ ಅಂಕಿಸಂಖ್ಯೆ ಗಮನಿಸಿ ಮಾರ್ಟಿನ್ ಲೂಥರ್‌ಕಿಂಗ್ ಜೂ. ಏನು ಹೇಳಿರುತ್ತಿದ್ದರು? ಎಂತಹ ಅದ್ಭುತ ಬದಲಾವಣೆ ಎನ್ನುತ್ತಿದ್ದರೇನೊ?**

ಸದ್ದಾಮನಂತೆ ಸರ್ವಾಧಿಕಾರಿಗೆ ಕೋಪಕೆರಳಿದಾಗ ಇರಾಕಿನ ನೆಲದ ಮೇಲೆ ನೂರಾರು ಟನ್ ಯುರೇನಿಯಂ ಅನ್ನು ಸುರಿಯುವುದನ್ನು, ನೀರು ಸರಬರಾಜು ವ್ಯವಸ್ಥೆಯನ್ನು ಹಾಳು ಮಾಡುವುದನ್ನು, ಅರ್ಧ ಮಿಲಿಯ ಮಕ್ಕಳ ಸಾವಿಗೆ ಕಾರಣವಾಗುವಂತಹ ಆರ್ಥಿಕ ದಿಗ್ಬಂದನವನ್ನು, ನಿಶ್ಶಸ್ತ್ರೀಕರಣಕ್ಕೆ ಒತ್ತಡ ಹೇರಲು ಸಂಯುಕ್ತ ರಾಷ್ಟ್ರಗಳ ಶಸ್ತ್ರ ತಪಾಸಕರನ್ನು ಬಳಸಿಕೊಂಡಿದ್ದನ್ನು, ಕೆಲವೇ ಕ್ಷಣಗಳಲ್ಲಿ ಬಹುಸಂಖ್ಯೆಯಲ್ಲಿ ಜನರನ್ನು ಕೊಲ್ಲುವ ಶಸ್ತ್ರಾಗಾರವನ್ನೇ ಜನರಿಗೆ ವಂಚಿಸಿಸ್ಥಾಪಿಸಿದ್ದನ್ನು, ದೇಶವೇ ಮಂಡಿಯೂರಿ ಕೂತಿದ್ದಾಗ ಆಕ್ರಮಣಮಾಡಿ ಸ್ವಾಧೀನ ಪಡಿಸಿಕೊಳ್ಳಲು ಸೇನೆ ಕಳಿಸಿದ್ದನ್ನು ಅಲ್ಲಿಯ ಜನರನ್ನು ಅವಮಾನಿಸಿ, ಅಲ್ಲಿಯ ಸಂಪನ್ಮೂಲಗಳನ್ನು ನಿಯಂತ್ರಿಸಿ, ಬೆಕ್‌ಟೆಲ್‌ನಂತಹ ಅಮೆರಿಕದ ಕಂಪನಿಗಳಿಗೆ ಕೋಟ್ಯಾಂತರ ಡಾಲರುಗಳ ಗುತ್ತಿಗೆ ನೀಡಿದ್ದನ್ನು ಹಕ್ಕೆಂದು ಅವರು ಹೇಳಿರುತ್ತಿದ್ದರೆ?

ವಿಯಾಟ್ನಾಮಿನ ಯುದ್ಧ ವಿರೋಧಿಸಿ ಮಾತನಾಡಿದಾಗ ಮಾರ್ಟಿನ್ ಲೂಥರ್ ಕಿಂಗ್ ಜೂ. ಅವರು ಗುರುತಿಸಿದ ಸಂಬಂಧವನ್ನು ಈಗ ಗುರುತಿಸಲು ಹಲವರು ಹಿಂಜರಿಯುತ್ತಾರೆ. ಜನಾಂಗ ಬೇಧ, ಆರ್ಥಿಕ ಶೋಷಣೆ ಹಾಗೂ ಯುದ್ಧದ ನಡುವಿರುವ ಸಂಬಂಧವನ್ನು ಅವರು ಸ್ಪಷ್ಟವಾಗಿ ವಿವರಿಸಿದ್ದರು. ಜನಾಂಗ ಬೇಧ, ಆರ್ಥಿಕ ಶೋಷಣೆ, ಯುದ್ಧಾಸ್ತ್ರಗಳಂತಹ ಕ್ರೌರ್ಯವನ್ನು ರಫ್ತು ಮಾಡುವುದು ಅಮೆರಿಕ ಸರ್ಕಾರದ ಹಕ್ಕು ಎಂದು ಅವರು ಇಂದಿನ ಜನರಿಗೆ ಹೇಳಿರುತ್ತಿದ್ದರೆ?

ಅಮೆರಿಕದ ಜೀವನ ಶೈಲಿಗಾಗಿ ಆಫ್ರಿಕ, ಏಷಿಯಾ, ಮಧ್ಯಪೂರ್ವ ಹಾಗೂ ಲ್ಯಾಟಿನ್ ಅಮೆರಿಕನ್ ದೇಶಗಳು ತೆರುತ್ತಿರುವ ಬೆಲೆಯನ್ನು ಲೆಕ್ಕಿಸದೆ, ಅಮೆರಿಕಾದ [illegible]ನಲ್ಲಿ ಹೆಚ್ಚು ಪಾಲುಬೇಕೆಂದು ಅಮೆರಿಕದ [illegible] ಹೊಡೆದಾಡಲೇಬೇಕೆಂದು ಆತ ಹೇಳಿರುತ್ತಿದ್ದರೆ? ತನ್ನದೇ ವಿಶೇಷವಾದ, ಸುಂದರ ಕನಸಿನ ಮೇಲೆ ಶ್ರೇಷ್ಟ ಅಮೆರಿಕಾದ ಕನಸನ್ನು ಕಸಿ ಮಾಡುತ್ತಿರುವುದನ್ನು ಆತ ಬೆಂಬಲಿಸುತ್ತಿದ್ದರೆ? ತನ್ನ ನೆನಪು, ತಾನು ಏನೆಲ್ಲದ್ದಕ್ಕಾಗಿ ಹೋರಾಡಿದನೋ ಅವೆಲ್ಲವೂ ಕಳಂಕಿತಗೊಂಡವೆಂದು ಕೊಳ್ಳುತ್ತಿದ್ದರೆ?

ನಾಗರಿಕ ಹಕ್ಕುಗಳಿಗಾಗಿ ಕರಿಯ ಅಮೆರಿಕನ್ನರು ನಡೆಸಿದ ಹೋರಾಟವು ಹಲವು ಉಜ್ವಲ ರಾಜಕೀಯ ಹೋರಾಟಗಾರರನ್ನು, ಚಿಂತಕರನ್ನು, ವಾಗ್ಮಿಗಳನ್ನು ಬರಹಗಾರರನ್ನು ನಮಗೆ ನೀಡಿದೆ. ಮಾರ್ಟಿನ್ ಲೂಥರ್ ಕಿಂಗ್ ಜೂ., ಮಾಲ್ಕಂ ಎಕ್ಸ್ ಫನ್ನೀಲ್ ಹಾರ್ಮರ್, ಎಲ್ಲಾ ಬೇಕರ್, ಜೇಮ್ಸ್ ಬಾಲ್ಡವಿನ್ ಮತ್ತು ಅದ್ಭುತ ಮಾಂತ್ರಿಕ ಮಹಮದ್ ಅಲಿ!

ಕಾಲಿನ್ ಪಾವೆಲ್? ಕಾಂಡೋಲೀ ಜ್ಹಾರೈಸ್? ಮೈಕೆಲ್ ಪಾವೆಲ್ ಆಗಿರಬಹುದೇ?

ಅವರೆಲ್ಲ ಅನುಕರಣೀಯ ಪ್ರತಿಮೆಗಳ, ಮಾದರಿಗಳ ತದ್ವಿರುದ್ದಗಳು. ಅವು ಕರಿಯ ಜನರ ಬೌತಿಕ ಯಶಸ್ಸಿನ ಕನಸುಗಳ ಸಾಕಾರವೆಂದು ಕಾಣಿಸಿದರೂ ನಿಜ ಅರ್ಥದಲ್ಲಿ ಅವು ಪ್ರತಿನಿಧಿಸುವುದು ಘೋರ ವಿಶ್ವಾಸ ಘಾತುಕತನವನ್ನು. ಇವರಿಗೆ ಕಪ್ಪು ಜನರ ಆಶೋತ್ತರಗಳ ವಿರುದ್ಧ ಗುಲಾಮರ ಸಮವಸ್ತ್ರ ಧರಿಸಿ ಝಗಮಗಿಸುವ ನೈರುತ್ಯ ಕೋಣೆಯ ಮಹಾದ್ವಾರಗಳನ್ನು ಕಾಯುತ್ತಿರುವ ದ್ವಾರಪಾಲಕರು. ತನ್ನ ಜನಾಂಗೀಯ ಯುದ್ಧಗಳಲ್ಲಿ ಆಫ್ರಿಕನ್ ಸಫಾರಿಗಳಲ್ಲಿ ಪಿಶಾಚಿಗಳ ಪಾಯಿಂಟ್‌ಗಳನ್ನು ಹುಡುಕುವ ಬುಷ್ ಆಡಳಿತವು ಅವರ ಪಾತ್ರ ಮತ್ತು ಉದ್ದೇಶವನ್ನು ನಿರ್ಧರಿಸುತ್ತಿದೆ.

ಇವು ಅಮೆರಿಕದ ಹೊಸ ಪ್ರತಿಮೆಗಳಾದರೆ ಹಳೆಯದನ್ನು ವರ್ಜಿಸಲೇಬೇಕಾಗುತ್ತದೆ. ಕಾರಣ ಎರಡೂ ಒಂದೇ ಮಂದಿರದಲ್ಲಿರಲು ಸಾಧ್ಯವಿಲ್ಲ. ಇವರು ಅಮೆರಿಕದ ಹೊಸ ಪ್ರತಿಮೆಗಳೆನ್ನುವುದಾದರೆ ಆಗ ಮೈಕ್ ಮಾಕ್ವೀಸ್ ತನ್ನ ಪುಸ್ತಕ 'ಬಿಡುಗಡೆಯ ಹಾದಿ'ನಲ್ಲಿ ವರ್ಣಿಸುವ ಕಾಡುವ ಪ್ರತಿಮೆ, ಪಾರ್ಕಿಸನ್ ಖಾಯಿಲೆಯಿಂದ ನರಳುತ್ತಿರುವ, ನಿವೃತ್ತಿ ವೇತನದ ಜಾಹೀರಾತಿನಲ್ಲಿ ಬರುವ ಮಹಮದ್ ಅಲಿ ಅಮೆರಿಕವಷ್ಟೇ ಅಲ್ಲ ಜಗತ್ತಿನೆಲ್ಲೆಡೆ ಕರಿಯ ಶಕ್ತಿಗೆ ಏನಾಗಿದೆ ಎಂಬುದರ ಪ್ರತೀಕದಂತಿದ್ದಾನೆ ಎಂಬುದು ಅರಿವಾಗುತ್ತದೆ.

ಕರಿಯ ಅಮೆರಿಕ ತನ್ನ ನಿಜವಾದ ನಾಯಕರುಗಳಿಗೆ ಮತ್ತು ಅವರೊಂದಿಗೆ ಹೋರಾಡಿದ ಅನಾಮಧೇಯ ಜನರಿಗೆ ಪ್ರಾಮಾಣಿಕವಾದ ಶ್ರದ್ಧಾಂಜಲಿ ಅರ್ಪಿಸಲು ಬಯಸಿದರೆ, ಇಡೀ ಜಗತ್ತು ಶ್ರದ್ಧಾಂಜಲಿ ಅರ್ಪಿಸಲು ಬಯಸುವುದಾದರೆ ವಾಷಿಂಗ್‌ಟನ್‌ನತ್ತ ಮೆರವಣಿಗೆ ಹೊರಡುವುದಕ್ಕಿದು ಸಕಾಲ. ಮತ್ತೆ ನಮ್ಮೆಲ್ಲರಿಗಾಗಿ ಭರವಸೆಯನ್ನು ಜೀವಂತವಾಗಿಡುವುದಕ್ಕಾಗಿ.

(ಸೌಜನ್ಯ : ದಿ ಹಿಂದೂ)

ಜನವಿರೋಧಿ ಸರ್ಕಾರಗಳ ಕೋಮು ರಾಜಕಾರಣ

(15ನೇ ಪುಟದಿಂದ)

ಯೆದ್ದಿದ್ದಾರೆ. ಇದೇ ಜಿಲ್ಲೆಗೆ ಸೇರಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಭಜರಂಗಿಗಳ ಕೈಗೆ ತಮ್ಮ ಖಾತೆಯನ್ನು ಒಪ್ಪಿಸಿಬಿಟ್ಟಿದ್ದಾರೆ! ಅವರ ವಕ್ತಾರರಾಗಿರುವ ಈ ಸಚಿವರು, ಬಾಬಾಬುಡನ್‌ಗಿರಿಯಲ್ಲಿ ಭಜರಂಗಿಗಳು ಏರ್ಪಡಿಸುವ ಮಂಗ್ಯಾಟದ ಕಾರ್ಯಕ್ರಮಗಳಿಗೆ ಸರ್ಕಾರದ ಪರವಾಗಿ ಅಧಿಕೃತ ಹಾಜರಿ ಹಾಕುತ್ತಾರೆ! ಬಾಬಾಬುಡನ್‌ಗಿರಿಯನ್ನು ಮತ್ತೊಂದು ಅಯೋಧ್ಯೆಯನ್ನಾಗಿಯೂ, ಕರ್ನಾಟಕವನ್ನು ಇನ್ನೊಂದು ಗುಜರಾತನ್ನಾಗಿಯೂ ಮಾಡುತ್ತೇನೆಂದು ವಿಎಚ್‌ಪಿಯ ಪ್ರವೀಣ್ ತೊಗಾಡಿಯಾನ ಘೋಷಣೆ ಮೊಳಗಲು, ಅವಕಾಶ ಮಾಡಿಕೊಟ್ಟವರು ಬೇರೆ ಯಾರೂ ಅಲ್ಲ ಜಾತ್ಯಾತೀತ ಮುಖವಾಡದ ಸೋಗಲಾಡಿ ಕಾಂಗ್ರೆಸ್ಸಿಗರೇ! ರಾಜ್ಯ ಸರ್ಕಾರದ ಹೇತ್ಲಾಂಡಿತನ, ಅರಣ್ಯಾಧಿಕಾರಿಗಳ ಲೂಟಿ, ನಾಟಾಕಳ್ಳರ ಹಗಲು ದರೋಡೆ ಮತ್ತು ಭಜರಂಗಿಗಳ ಮಂಗ್ಯಾಟಗಳಿಗೆ ಪರ್ಯಾಯ ಉತ್ತರವಾಗಿ ಜಿಲ್ಲೆಯಲ್ಲೀಗ ನಕ್ಸಲೀಯರ ಗುಂಡಿನ ಸದ್ದು ಪ್ರತಿಧ್ವನಿಸುತ್ತಿದೆ.

ಸರ್ಕಾರದ ರೈತ ವಿರೋಧಿ ನೀತಿಯಿಂದ, ರೈತರು ಆತ್ಮಹತ್ಯೆ ಮಾಡಿಕೊಂಡು ಹೆಣಗಳಾಗಿ ಸೊಳ್ಳೆಗಳಂತೆ ಉದುರಿಬೀಳುತ್ತಿದ್ದಾರೆ. ಅವರ ಪತ್ನಿಯರು ವಿಧವೆಯರಾಗುತ್ತಿದ್ದಾರೆ. ಗಂಡನ ಅಗಲಿಕೆಯ ಆಘಾತದ ಜೊತೆಯಲ್ಲಿಯೇ ಕುಟುಂಬದ ನೊಗವನ್ನು ಹೊತ್ತುಕೊಳ್ಳಲೇಬೇಕಾದ ಒತ್ತಡದಲ್ಲಿರುವ ರೈತಮಹಿಳೆಯ ಬಗ್ಗೆ ಅನುಕಂಪ ತೋರದ ಸರ್ಕಾರ, ತನ್ನ ಮಾನಗೆಟ್ಟ 'ಮಹಿಳಾ ಕಾಳಜಿ'ಯನ್ನು ತೋರ್ಪಡಿಸಲು ಗುಡಾಣ ಗಟ್ಟಲೆ ಹಣವನ್ನು ಖರ್ಚುಮಾಡಿ ಸ್ತ್ರೀಶಕ್ತಿ ಸಮಾವೇಶವನ್ನು ಸಂಘಟಿಸುವುದರ ಮೂಲಕ ದಿಲ್ಲಿ ದೊರಸಾನಿ ಸೋನಿಯಾ ಗಾಂಧಿಯ ಶಹಭಾಷ್‌ಗಿರಿ ಗಿಟ್ಟಿಸಲು ತಿಪ್ಪರಲಾಗ ಹಾಕುತ್ತಿದೆ!

ಕೋಮುವಾದಿಗಳ ವಿಷಯದಲ್ಲಂತೂ ಕರ್ನಾಟಕದ ಕೃಷ್ಣ ಸರ್ಕಾರ ಸೋದರಭಾವನೆಯನ್ನು ತಾಳಿದೆ. ಬಾಬರಿ ಮಸೀದಿ ವಿವಾದದಲ್ಲಿ ಅಂದಿನ ಪ್ರಧಾನಮಂತ್ರಿಯಾಗಿದ್ದ ನರಸಿಂಹರಾವ್ ನಡೆದುಕೊಂಡ ರೀತಿಯಲ್ಲೇ, ಇಂದಿನ ಕರ್ನಾಟಕದ ಸಿ.ಎಂ. ಕೃಷ್ಣರವರು ಬಾಬಾಬುಡನ್ ಗಿರಿಯ ದತ್ತಪೀಠದ ವಿವಾದದ ಬಗ್ಗೆ ಮೃದುಧೋರಣೆ ಮೈಗೂಡಿಸಿಕೊಂಡಿದ್ದಾರೆ. ಈ ಸಲ ರಾಜ್ಯಾದ್ಯಾಂತ ಗಣೇಶನ ಉತ್ಸವದ ಸಂದರ್ಭದಲ್ಲಿ ನಡೆದ ದೊಂಬಿ, ಲೂಟಿ, ಹಿಂಸಾಚಾರದಲ್ಲಿ ಆರ್‌ಎಸ್‌ಎಸ್ ಮಾಣಿ ರಾಜ್ಯ ಬಿಜೆಪಿ ಅಧ್ಯಕ್ಷ ಅನಂತಕುಮಾರ್ ಜೊತೆಗೆ ಟೆಕ್ಸಾಸ್ ಕೃಷ್ಣರದೂ ಸಹಭಾಗಿತ್ವ ಇದೆ. ಸಮಾಜದ ನೆಮ್ಮದಿಗೆ ಕಂಟಕಪ್ರಾಯವಾಗಿರುವ ವಿಎಚ್‌ಪಿ, ಆರ್‌ಎಸ್‌ಎಸ್, ಭಜರಂಗದಳ ದಂಥ ತೊಗಾಡಿಯಾನ ಬಾಲಂಗೋಚಿಗಳನ್ನು ಸಾಕಿ ಸಲವುದರಲ್ಲಿ ಇಬ್ಬರೂ ತಮ್ಮದೇ ಶೈಲಿಯ ಸಹಾಯಹಸ್ತವನ್ನು ಚಾಚಿದ್ದಾರೆ. ದಲಿತ ಜನಾಂಗದವರಾದ ಗೃಹ ಸಚಿವ ಖರ್ಗೆಯವರು ಕೂಡ ಸಂಘ ಪರಿವಾರದ ಕಪಿಚೇಷ್ಟೆಗಳನ್ನು ಮಟ್ಟಹಾಕುವುದರಲ್ಲಿ ವಿಫಲರಾಗಿದ್ದಾರೆ. ಡಾ.ಬಾಬಾಸಾಹೇಬ್ ಅಂಬೇಡ್ಕರ್‌ರವರು ರಚಿಸಿರುವ ಸಂವಿಧಾನದ ಮೂಲ ಆಶಯಗಳಿಗೆ ಕೋಮುವಾದಿಗಳಿಂದ ನಡೆಯುತ್ತಿರುವ ಧಕ್ಕೆಯನ್ನು ಗುರುತಿಸಿ, ಕ್ರಮ ಕೈಗೊಳ್ಳಲು ವಿಫಲರಾಗಿದ್ದಾರೆ.

ಕೋಮುವಾದದ ರಕ್ತರಾಜಕಾರಣದ ಮೂಲಕ ಇಡೀ ಭಾರತದ ನೆಲವನ್ನೆ ಸ್ಮಶಾನಭೂಮಿಯನ್ನಾಗಿ ಪರಿವರ್ತಿಸಲು ಹೊರಟಿರುವ ಕೇಂದ್ರ ಸರ್ಕಾರ, ಹಿಂದೂಗಳಲ್ಲದ ದಲಿತ, ಆದಿವಾಸಿ ಮತ್ತು ಹಿಂದುಳಿದ ಜನಾಂಗಗಳ ಬಹುಜನಸಮಾಜವನ್ನು ತನ್ನ ಹಿಂದುತ್ವದ ತೆಕ್ಕೆಯೊಳಗೆ ಸೆಳೆದುಕೊಳ್ಳಲು, ಮುಸಲ್ಮಾನರನ್ನು ಬೆದರುಬೊಂಬೆಯಾಗಿ ಬಳಸುತ್ತಿದೆ. ಮುಸಲ್ಮಾನರ ಅಸ್ತಿತ್ವವೇ ಬಹುಜನರಿಗೆ ಮಾರಕ ಎಂದು ಪ್ರತಿಬಿಂಬಿಸಿ, ಅವರನ್ನು ನಿರ್ನಾಮಗೊಳಿಸಲು ನೆತ್ತರಿನ ರಾಜಕಾರಣಕ್ಕೆ ಕೈಹಾಕಿದೆ. ಇಸ್ರೇಲ್‌ದೇಶದ ಪ್ರಧಾನಮಂತ್ರಿ ಏರಿಯಲ್ ಶಾರೋನ್‌ನಂಥ ಹುಟ್ಟಾ ಮುಸ್ಲಿಂ ವಿರೋಧಿಯನ್ನು ಸ್ವತಃ ಪ್ರಧಾನಿಯೇ ಖುದ್ದಾಗಿ ಆಹ್ವಾನಿಸಿ ಬೀಳ್ಕೊಟ್ಟಿರುವುದರ ಹಿನ್ನೆಲೆ ಭಾರತದ ಮುಸಲ್ಮಾನರನ್ನು ಕೆಣಕಿ, ಅವರಲ್ಲಿ ಭಯವನ್ನು ಬಿತ್ತುವುದಾಗಿದೆ. ಹತ್ತುಮಂದಿ ನರೇಂದ್ರ ಮೋದಿಗಳನ್ನು ಒಂದೆಡೆ ಸೇರಿಸಿದರೆ, ಒಬ್ಬ ಏರಿಯಲ್ ಶಾರೋನ್ ಉದ್ಭವವಾಗುತ್ತಾರೆ! ಇಂಥವನ ಇಸ್ರೇಲ್ ದೇಶದೊಡನೆ ಭಾರತ ಅನೇಕ ವರ್ಷಗಳಿಂದ ಯಾವುದೇ ರೀತಿಯ ಸಂಪರ್ಕ, ಬಾಂಧವ್ಯ, ರಾಯಭಾರತ್ವವನ್ನು ಇಟ್ಟುಕೊಂಡಿರಲಿಲ್ಲ.

ಪ್ಯಾಲೆಸ್ತೇನಿನ ಮುಸಲ್ಮಾನರ ಮೇಲೆ ನಿರಂತರವಾಗಿ ದೌರ್ಜನ್ಯ-ದಬ್ಬಾಳಿಕೆ ನಡೆಸುತ್ತಾ, ಅವರ ಅಸ್ತಿತ್ವ ಮತ್ತು ರಾಷ್ಟ್ರೀಯತೆಯ ಚಳುವಳಿಯನ್ನು ಹತ್ತಿಕ್ಕುತ್ತಿರುವ ಅಂತರರಾಷ್ಟ್ರೀಯ ಭಯೋತ್ಪಾದಕ ಶಾರೋನ್‌ನನ್ನು ದೇಶೀಯ ಭಯೋತ್ಪಾದಕರ ಮುಖಂಡ ವಾಜಪೇಯಿ ಆಹ್ವಾನಿಸಿ-ಸನ್ಮಾನಿಸಿರುವುದು, ಈ ದೇಶಕ್ಕೆ ಮುಂಬರಲಿರುವ ವಿಧ್ವಂಸಕ ಕೃತ್ಯಗಳ ಸೂಚನೆಯಾಗಿದೆ. ಪ್ಯಾಲೆಸ್ತೇನಿನಂತೆ ಭಾರತವೂ ಕೂಡ ಸದಾ ಮುಸಲ್ಮಾನರ ರಕ್ತತರ್ಪಣದಿಂದ ಬೇಯುತ್ತಿರಬೇಕೆಂಬುದು ಮನುವಾದಿಗಳ ಮನದಾಸೆಯ ಪ್ರತೀಕವಾಗಿದೆ. ಇದಕ್ಕೆ ಪ್ರತೀಕಾರವಾಗಿ ಘಟಿಸುವ ಮುಂಬೈ ಸ್ಫೋಟದಂಥ ಕ್ರೂರ ಘಟನಾವಳಿಗಳು ಅದರ ಮುನ್ಸೂಚನೆಯಾಗಿದೆ.

ಈ ಘಟನಾವಳಿಗಳು ಸಂಭವಿಸುವುದಕ್ಕಿಂತ ಮುಂಚೆ ಜನವಿರೋಧಿ, ಜೀವವಿರೋಧಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಕಿತ್ತೊಗೆದು ಕೋಮುವಾದಿ ರಕ್ತರಾಜಕಾರಣಕ್ಕೆ ಕೊನೆಹಾಡಬೇಕಾದ ಜವಾಬ್ದಾರಿ ಪ್ರಗತಿಪರರೆಲ್ಲರ ಹೆಗಲ ಮೇಲಿದೆ.



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ 2 ಪ್ರತಿಗಳನ್ನು ಕಳುಹಿಸಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 328 7943 / 328 1667

ದಲಿತವಾದ-ಎಡವಾದಗಳ ತಾತ್ವಿಕತೆ

ಕರ್ನಾಟಕ ದಲಿತ ಸಂಘರ್ಷ ಸಮಿತಿ ಪ್ರಾರಂಭದಿಂದಲೂ ಶೋಷಿತ ಜನ ಸಮೂಹಗಳನ್ನು ಬಾಧಿಸುತ್ತಿರುವ 1) ಸಾಮಾಜಿಕ 2) ಆರ್ಥಿಕ ಸಮಸ್ಯೆಗಳ ಕುರಿತು ಪ್ರತಿಪಾದಿಸುತ್ತಲೇ ಬಂದಿದೆ. ಕರ್ನಾಟಕದ ದಲಿತರ ಹೋರಾಟಗಳ ಚರಿತ್ರೆಯನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ಈಚಿನ ಸಂಘಟನಾತ್ಮಕ ಹಂತದ ಸಮಸ್ಯೆಗಳು, ಒಟ್ಟಾರೆ ನಾಡಿನ ಶೋಷಿತ ಜನ ಸಮೂಹಗಳ ಐಕ್ಯ ಹೋರಾಟಕ್ಕೆ ಪ್ರಬಲ ಅಡ್ಡಿಯಾದವು. ಹಲವಾರು ಒಡಕುಗಳುಂಟಾದವು. ರಾಜಕೀಯದ ಬಗೆಗಿನ ನಿಲುವುಗಳು, ಸಂಘಟನೆಯನ್ನು ಬೆಳೆಸಿ, ಹೋರಾಟವನ್ನು ಎತ್ತಿಕೊಳ್ಳುವ ಪ್ರಶ್ನೆಗಳು ಸವಾಲಾದವು.

ಈ ಎಲ್ಲ ಹಿನ್ನೆಲೆಯಲ್ಲಿ ಒಂದು ದೊಡ್ಡ ಕೊರತೆ ಇರುವುದು ಕಾಣಿಸುತ್ತದೆ. ಅದು ಸಂಘಟನೆಗಿರಬೇಕಾದ 'ಸಿದ್ಧಾಂತದ'ದ ಕುರಿತಿದೆ. 'ಸಮಾಜವಾದಿ', 'ಅಂಬೇಡ್ಕರ್‌ವಾದಿ' ಮತ್ತು 'ಕಮ್ಯುನಿಷ್ಟ' ಸಂಘಟನೆಗಳ ಹಿನ್ನೆಲೆಯಲ್ಲಿ ಸ್ನೇಹಿತರು ಇರುವಂತೆ ಇವಾವುದೂ ಇಲ್ಲದ ಅಪಾರ ಜನ ಸಮೂಹ ಬೆಂಬಲ 'ದಲಿತ ಚಳುವಳಿ'ಗಿದೆ.

ಒಂದು ಖಂಡಿತವಾದ ಸೈದ್ಧಾಂತಿಕ ಬದ್ಧತೆ ಇಲ್ಲದ ಯಾವ ಸಂಘಟನೆಯೂ ಬಹುಕಾಲ ಬದುಕುಳಿಯಲಾರದು. ದೂರಗಾಮಿ ಪರಿಣಾಮಗಳನ್ನು ಅಂದಾಜಿಸಿಕೊಂಡು, ಸಮಾಜವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿಕೊಂಡು, ದೇಶವ್ಯಾಪಿಯಾದ ತಿಳುವಳಿಕೆಯ ನೆಲೆಯಲ್ಲಿ ಈ ಸಿದ್ಧಾಂತ ಗಟ್ಟಿಗೊಳ್ಳುತ್ತ ಹೋಗಬೇಕಾಗುತ್ತದೆ.

ಈ ದೃಷ್ಟಿಯಿಂದ ಈವರೆಗಿನ ದಲಿತ ಹೋರಾಟಗಳ ಮತ್ತು ತಿಳುವಳಿಕೆಯ ಆಧಾರದಲ್ಲಿ 1) ದಲಿತವಾದ, 2) ಎಡವಾದಗಳ ಜಂಟಿ ತತ್ವ ರೂಪುಗೊಳ್ಳಬೇಕೆಂದು ತೋರುತ್ತದೆ. ಸಾಮಾಜಿಕ ಅಸಮಾನತೆಯ ಮೂಲ ಬೇರುಗಳನ್ನು ಶೋಧಿಸಿ ಈ ಸಮಸ್ಯೆಯನ್ನು ಅಮೂಲಾಗ್ರವಾಗಿ ಬಗೆಹರಿಸುವುದಕ್ಕೆ 'ದಲಿತವಾದ'; ಆರ್ಥಿಕ ಅಸಮಾನತೆಯನ್ನು ತೊಡೆಯುವುದಕ್ಕಾಗಿ 'ಎಡವಾದ'ಗಳ ಕುರಿತು ಇಲ್ಲಿ ಚರ್ಚಿಸಬೇಕಿದೆ.

ಭಾರತೀಯ ಸಂದರ್ಭದಲ್ಲಿ ಈ ಎರಡೂ ತತ್ವಗಳಲ್ಲಿ ಗಾಢವಾದ ನಂಟಿದೆ. ಒಂದನ್ನು ಬಿಟ್ಟು ಮತ್ತೊಂದಿಲ್ಲ. ನಾನಿಲ್ಲಿ ಭಾರತೀಯ ಕಮ್ಯುನಿಷ್ಟರ ಮತ್ತು ಸಮಾಜವಾದಿಗಳ ಕುರಿತು ವಿವರವಾದ ಚರ್ಚೆ ಮಾಡಲಾರೆ. ಅದು ಪ್ರತ್ಯೇಕವಾದ ವಿಷಯ. 'ದಲಿತವಾದ' ಈ ದೇಶದ ಶ್ರಮಿಕ ಸಮೂಹಗಳ ಚರಿತ್ರೆಯ ಮೂಲಚೂಲಗಳನ್ನು ಶೋಧಿಸಿ ಅವರ ಸಂಘಟನೆ ಮತ್ತು ಹೋರಾಟಗಳಿಗೆ ಅಡಿಪಾಯ ಹಾಕುತ್ತದೆ. ಆರ್ಥಿಕ ಅಸಮಾನತೆ ನಾಶವಾಗುವುದರ ವಿವರವನ್ನು 'ಎಡವಾದ' ನೀಡುತ್ತದೆ. ಸಾಮಾಜಿಕ ಅಸಮಾನತೆಗೂ, ಆರ್ಥಿಕ ಅಸಮಾನತೆಗೂ ಇರುವ ಸಂಬಂಧದ ಕುರಿತು ವೈಜ್ಞಾನಿಕವಾಗಿ ಆಲೋಚಿಸುವುದೇ 'ಎಡವಾದ-ದಲಿತವಾದ'ದ ಗುರಿ.

ಡಾ॥ ಬಿ.ಆರ್.ಅಂಬೇಡ್ಕರ್



ಕಾರ್ಲ್‌ಮಾರ್ಕ್ಸ್

ದಲಿತವಾದ ಮತ್ತು ಎಡವಾದ ಸೈದ್ಧಾಂತಿಕತೆ, ಕಾರ್ಯಕ್ರಮಗಳು ಮತ್ತು ಒಟ್ಟು ಆಶಯದ ಕಾರಣದಿಂದಾಗಿ ಒಂದಕ್ಕೊಂದು ಗಾಢ ನಂಟಿನವು. ನಮಗಿಲ್ಲಿ 'ದಲಿತವಾದ ಎಡವಾದ'ದ ತಾತ್ವಿಕತೆಯ ಖಚಿತ ಚಿತ್ರ ಬೇಕಿದೆ. ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಅಮೂಲಾಗ್ರವಾದ ಚರಿತ್ರೆಯನ್ನು ಕಟ್ಟಿಕೊಂಡು ಈ ತಾತ್ವಿಕತೆಯನ್ನು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಭಾರತೀಯ ಎಡವಾದಿ ಪರಂಪರೆಯಲ್ಲಿ ಸಮಗ್ರವಾದ ಸಾಮಾಜಿಕ ಚಿಂತನೆಯ ಕೊರತೆಯಿರುವುದಿಂದ ಅದು ಸಂಘಟನಾತ್ಮಕವಾಗಿ ಎಷ್ಟೊಂದು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತ ಬಂದಿದೆ ಎಂಬುದನ್ನು ಎಡವಾದಿಗಳೇ ಮರುಚಿಂತನೆ ಮಾಡಿಕೊಳ್ಳಬೇಕಿದೆ. ಇನ್ನೊಂದೆಡೆ ಆರ್ಥಿಕ ಶೋಷಣೆಯ ಸಮಗ್ರವಾದ ಮತ್ತು ವೈಜ್ಞಾನಿಕವಾದ ಚಿಂತನೆಯ ಕೊರತೆಯಿಂದ 'ದಲಿತವಾದ' ಹಿನ್ನೆಡೆ ಕಂಡಿರುವುದನ್ನು ಗಮನಿಸಬೇಕಿದೆ.

ಎಸ್.ಎಸ್. ಹಿರೇಮಠ

ಎಲ್ಲ ಜಾತಿಗಳ ಶೋಷಿತ ವರ್ಗವನ್ನು 'ದಲಿತರು' ಎಂದು ಹೇಳಲಾಗುತ್ತದಷ್ಟೇ? ಇಲ್ಲಿ ಸಾಮಾಜಿಕವಾಗಿಯೂ ಕೂಡ ಶೋಷಣೆಗೊಳಗಾದವರು ಎಂಬ ಅಂಶವನ್ನು ತಪ್ಪದಂತೆ ಸೇರಿಸುತ್ತೇವೆ. ಹಾಗೆ ನೋಡಿದರೆ ಮಧ್ಯಮ ಮತ್ತು ಮೇಲ್ಜಾತಿಗಳ ಶೋಷಿತರ ಸಂಖ್ಯೆ, ಉಳಿದ ಶೋಷಿತರ ಜತೆ ಹೋಲಿಸಿದರೆ ಸಣ್ಣದು. ಹಾಗಿದ್ದೂ ಆರ್ಥಿಕ ಶೋಷಣೆಯನ್ನು ನಿವಾರಿಸಬೇಕೆನ್ನುವ (ಎಡವಾದ) ಆಶಯದಲ್ಲಿ ಈ ವರ್ಗಗಳ ಹಿತಾಸಕ್ತಿಗಳೂ ಬೆರೆತಿವೆ ಎಂಬುದನ್ನು ಗಮನಿಸಬೇಕು.

ನಮಗಿಲ್ಲಿ 'ದಲಿತವಾದ ಎಡವಾದ'ದ ತಾತ್ವಿಕತೆಯ ಖಚಿತ ಚಿತ್ರ ಬೇಕಿದೆ. ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಅಮೂಲಾಗ್ರವಾದ ಚರಿತ್ರೆಯನ್ನು ಕಟ್ಟಿಕೊಂಡು ಈ ತಾತ್ವಿಕತೆಯನ್ನು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಭಾರತೀಯ ಎಡವಾದಿ ಪರಂಪರೆಯಲ್ಲಿ ಸಮಗ್ರವಾದ ಸಾಮಾಜಿಕ ಚಿಂತನೆಯ ಕೊರತೆಯಿರುವುದಿಂದ ಅದು ಸಂಘಟನಾತ್ಮಕವಾಗಿ ಎಷ್ಟೊಂದು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತ ಬಂದಿದೆ ಎಂಬುದನ್ನು ಎಡವಾದಿಗಳೇ ಮರುಚಿಂತನೆ ಮಾಡಿಕೊಳ್ಳಬೇಕಿದೆ. ಇನ್ನೊಂದೆಡೆ ಆರ್ಥಿಕ ಶೋಷಣೆಯ ಸಮಗ್ರವಾದ ಮತ್ತು ವೈಜ್ಞಾನಿಕವಾದ ಚಿಂತನೆಯ ಕೊರತೆಯಿಂದ 'ದಲಿತವಾದ' ಹಿನ್ನೆಡೆ ಕಂಡಿರುವುದನ್ನು ಗಮನಿಸಬೇಕಿದೆ.

ಭಾರತೀಯ ಎಡವಾದಿಗಳು ಎಲ್ಲ ಜಾತಿಗಳಲ್ಲಿರುವ 'ಶೋಷಿತರು' ಎಂಬ ವರ್ಗ ಕಲ್ಪನೆಗೆ ಮಾತ್ರ ಒತ್ತು ಕೊಟ್ಟುಕೊಂಡು ಬಂದಿದ್ದಾರೆ. ಹಾಗಾಗಿ ವರ್ಗ ಹೋರಾಟವನ್ನು ಮಾತ್ರ ಅವರು ಪ್ರತಿಪಾದಿಸುವುದು. ಕ್ರಿ.ಪೂ.1500ರ ಸುಮಾರು ಭಾರತಕ್ಕೆ ದಾಳಿಮಾಡಿಕೊಂಡು ಬಂದ 'ಅನಾಗರಿಕ' ಸ್ಥಿತಿಯಲ್ಲಿದ್ದ ಆರ್ಯ ವೈದಿಕರು; ವರ್ಣ ಜಾತಿ ಎಂಬ ಶ್ರೇಣೀಕೃತ ಸಾಮಾಜಿಕ ರಚನೆಯ ಮೂಲಕ ಎಲ್ಲ ಬಗೆಯ ಶೋಷಣೆಯನ್ನು ಸ್ಥಿರೀಕರಿಸಿದರಲ್ಲವೇ?

ಇದಕ್ಕೂ ಮೊದಲು ಈ ದೇಶದಲ್ಲಿದ್ದವರು ಆಸ್ಟ್ರಿಕ್ ಭಾಷೆಗಳನ್ನಾಡುತ್ತಿದ್ದ 'ಮುಂಡಾ' ಬುಡಕಟ್ಟು ಜನ ಸಮುದಾಯ. ಇವರೇ ಮೊಟ್ಟಮೊದಲ ಕೃಷಿಕರು. ಇವರೂ ಕೂಡ ಇಂಡೋ ಚೈನಾ ಪ್ರದೇಶದಿಂದ ಈ ದೇಶಕ್ಕೆ ವಲಸೆ ಬಂದು ನೆಲೆಯೂರಿದವರು. ನಂತರ ಬಹುತೇಕ ಎರಡು ಮಾರ್ಗಗಳ ಮೂಲಕ (ಸಮುದ್ರ ಮಾರ್ಗ ಮತ್ತು ಭೂ ಮಾರ್ಗ) ದ್ರಾವಿಡರು (ಉಬ್ಬೆದಿಯನ್‌ರು) ಭೂಮಧ್ಯ ಸಮುದ್ರ ಪ್ರದೇಶದಿಂದ ಬಂದರು. ಇವರೂ ಪಶುಪಾಲಕರು. ಪಿತೃ ದೈವಾರಾಧಕರು. ಇಂದಿಗೂ ಇವರ ಅವಶೇಷಗಳು ಮ್ಯಾಸ ನಾಯಕರು, ಕಾಡು ಗೊಲ್ಲರು, ಕಾಡುಕುರುಬರು ಮುಂತಾದವರಲ್ಲುಳಿದಿವೆ.

ಮುಂಡಾ ಮತ್ತು ದ್ರಾವಿಡ ಭಾಷಿಕರಿಬ್ಬರೂ 'ಬುಡಕಟ್ಟು' ಸ್ಥಿತಿಯಲ್ಲಿದ್ದುಕೊಂಡೇ ಸಂಘರ್ಷ, ಸಮನ್ವಯಗಳ ಚಾರಿತ್ರಿಕ ಪ್ರಕ್ರಿಯೆಗಿಳಿದರು. ಇವರ ಸಂಕರ ಸಂಸ್ಕೃತಿಯನ್ನೇ ಸಿಂಧೂ ನಾಗರಿಕತೆಯಲ್ಲಿ ಕಾಣುತ್ತೇವೆ. ಸಿಂಧೂ ನಾಗರಿಕ ಕಾಲದಲ್ಲಾಗಲೇ ಯಾವುದೋ ರೂಪದ ಶೋಷಕ ಮತ್ತು ಶೋಷಿತ ಎಂಬ ವರ್ಗಗಳು ಅಸ್ತಿತ್ವದಲ್ಲಿದ್ದುದು ಗೊತ್ತಾಗಿದೆ. ಆದರೆ ಅದು ಜಾತಿ ರೂಪದಲ್ಲಿಯೇ ಇತ್ತೆಂದು ಖಚಿತವಾಗಿ ಹೇಳಲು ಬರದು. ಅಲ್ಲದೇ ಅದು ನಂತರ ಉಳಿದು ಬರಲಿಲ್ಲ.

ಆರ್ಯ ವೈದಿಕರು ದಾಳಿ ಮಾಡಿಕೊಂಡು ಬಂದು ನೆಲೆ ನಿಲ್ಲುವ ಹಂತದಲ್ಲಿ ಶೋಷಕ ಶೋಷಿತ ವರ್ಗಗಳು ಹುಟ್ಟಿದ್ದು 'ವರ್ಣ ಜಾತಿ' ತತ್ವಗಳಲ್ಲಿ ಪ್ರಕಟವಾಗಿದೆ. ಇಲ್ಲಿಯೇ 'ದಲಿತವಾದ-ಎಡವಾದ' ಹೇಗೆ ಮಿಳಿತವಾಗುತ್ತವೆಂಬುದಕ್ಕೆ ಆಧಾರವಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ಮೇಲು ಕೀಳಿನ ಆಧಾರದಲ್ಲಿಯೇ ದೀಕ್ಷೆ ಪಡೆವ ದ್ವಿಜ ಜಾತಿಗಳಾಗಿ ಸ್ಥೂಲವಾಗಿ ಹೇಳುವುದಾದರೆ 'ಮೇಲ್ವರ್ಗ'ವಾಗಿ ಉಳಿದವು. 'ಶೂದ್ರ' ಗುಲಾಮರ, ಶ್ರಮಿಕರ ಗುರುತಾಯಿತು. ಹಾಗಾಗಿ ಬ್ರಿಟಿಷರು ಬರುವವರೆಗೂ ಕೆಳಜಾತಿಯವರು (ಕೆಲಸಲ) ಅಸ್ಪೃಶ್ಯರು ದೊರೆಗಳಾದರೂ ಕೂಡ ಬ್ರಾಹ್ಮಣರು ತಮ್ಮ ಸಾಮಾಜಿಕ ಹಿಡಿತ ಬಿಟ್ಟುಕೊಡಲಿಲ್ಲ. ಆರ್ಥಿಕ ಕಾರಣಕ್ಕಾಗಿ ದೊರೆಗಳು ವೈದಿಕ ಬ್ರಾಹ್ಮಣರ ವಾದಗಳಿಗೆ ಮನಸೋತರೇ ಹೊರತು ಜೈನ, ಬೌದ್ಧ, ಶೈವಾದಿಗಳಿಗೆ ಬೆಂಬಲಿಸಲಿಲ್ಲ, ಅಂದರೇನರ್ಥ?

ಆರ್ಥಿಕ ಅಸಮಾನತೆಯ ವಿರುದ್ಧ ಮೂಲಭೂತ ಹೋರಾಟ ಮಾಡದ ಯಾವ ಸಾಮಾಜಿಕ ಚಳುವಳಿಗಳೂ ಕೂಡ ವಿಫಲವಾಗುತ್ತವೆ. ಹಾಗಾಗಿ ಜೈನ, ಬೌದ್ಧ, ವೀರಶೈವ, ಸಿಖ್, ಮುಸ್ಲಿಂ, ಕ್ರಿಶ್ಚಿಯನ್ ಈ ಎಲ್ಲ 'ಮತಾಂತರ' ಹೇಳುವ ಮತಗಳು ಮೂಲಭೂತ ಬದಲಾವಣೆ ಮಾಡಲು ಸಮರ್ಥವಾಗಲಿಲ್ಲ. ಸಾಮಾಜಿಕ ಹೋರಾಟದ ಮೂಲಕ ಒಂದೊಂದು ಸಣ್ಣ ಸಮೂಹ ಆರ್ಥಿಕವಾಗಿಯೂ ಕೂಡ ಮುಂದೆ ಬಂದಿರುವ ಸಾಧ್ಯತೆ ಇದೆ. ಆದರೆ ಇಡೀ ಶೋಷಿತ ಜನಸಮೂಹಗಳು ವಿಮೋಚನೆಗೊಳ್ಳಲಿಲ್ಲ.

ಭಾರತೀಯ ಎಡವಾದಿಗಳು ಎಲ್ಲ ಜಾತಿಗಳಲ್ಲಿರುವ 'ಶೋಷಿತರು' ಎಂಬ ವರ್ಗ ಕಲ್ಪನೆಗೆ ಮಾತ್ರ ಒತ್ತು ಕೊಟ್ಟುಕೊಂಡು ಬಂದಿದ್ದಾರೆ. ಹಾಗಾಗಿ ವರ್ಗ ಹೋರಾಟವನ್ನು ಮಾತ್ರ ಅವರು ಪ್ರತಿಪಾದಿಸುವುದು. ಕ್ರಿ.ಪೂ.1500ರ ಸುಮಾರು ಭಾರತಕ್ಕೆ ದಾಳಿಮಾಡಿಕೊಂಡು ಬಂದ 'ಅನಾಗರಿಕ' ಸ್ಥಿತಿಯಲ್ಲಿದ್ದ ಆರ್ಯ ವೈದಿಕರು; ವರ್ಣ ಜಾತಿ ಎಂಬ ಶ್ರೇಣೀಕೃತ ಸಾಮಾಜಿಕ ರಚನೆಯ ಮೂಲಕ ಎಲ್ಲ ಬಗೆಯ ಶೋಷಣೆಯನ್ನು ಸ್ಥಿರೀಕರಿಸಿದರಲ್ಲವೇ? ಇದಕ್ಕೂ ಮೊದಲು ಈ ದೇಶದಲ್ಲಿದ್ದವರು ಆಸ್ಟ್ರಿಕ್ ಭಾಷೆಗಳನ್ನಾಡುತ್ತಿದ್ದ 'ಮುಂಡಾ' ಬುಡಕಟ್ಟು ಜನ ಸಮುದಾಯ. ಇವರೇ ಮೊಟ್ಟಮೊದಲ ಕೃಷಿಕರು. ಇವರೂ ಕೂಡ ಇಂಡೋ ಚೈನಾ ಪ್ರದೇಶದಿಂದ ಈ ದೇಶಕ್ಕೆ ವಲಸೆ ಬಂದು ನೆಲೆಯೂರಿದವರು. ನಂತರ ಬಹುತೇಕ ಎರಡು ಮಾರ್ಗಗಳ ಮೂಲಕ (ಸಮುದ್ರ ಮಾರ್ಗ ಮತ್ತು ಭೂ ಮಾರ್ಗ) ದ್ರಾವಿಡರು (ಉಬ್ಬೆದಿಯನ್‌ರು) ಭೂಮಧ್ಯ ಸಮುದ್ರ ಪ್ರದೇಶದಿಂದ ಬಂದರು.

ನಾವಿಂದು ಇಡೀ ಶೋಷಿತ ಸಮೂಹಗಳು ಎಲ್ಲ ಬಗೆಯ ಶೋಷಣೆಗಳಿಂದ ಮುಕ್ತವಾಗುವುದರ ಕುರಿತು ಆಲೋಚಿಸುತ್ತಿದ್ದೇವೆ.

ಭಾಷಿಕ ನೆಲೆಯಿಂದ ಮಾತ್ರ ಮುಂಡಾ, ದ್ರಾವಿಡ, ಆರ್ಯ ವೈದಿಕ ಎಂಬ ಮೂರು ಸಂಸ್ಕೃತಿಗಳನ್ನು ಕುರಿತು ಮಾತನಾಡಬೇಕೆನ್ನುವವರು ಸೂಕ್ಷ್ಮವಾಗಿ ಮೋಸ ಮಾಡುತ್ತಲೇ ಇದ್ದಾರೆ. ಇಂದಿಗೂ ಕೂಡ ಎಷ್ಟೋ ಜನ ಕಮ್ಯುನಿಷ್ಟಗೆಳೆಯರು, ಆರ್ಯ ವೈದಿಕ ದ್ರಾವಿಡ ಎಂಬ ಪದಗಳನ್ನು ಮೈಲಿಗೆಯಂತೆ ನೋಡುತ್ತಾರೆ. ಅಪ್ಪಿತಪ್ಪಿಯೂ ಈ ಪದಗಳನ್ನು ಅವರು ಬಳಸುವುದಿಲ್ಲ. ಪ್ರಖ್ಯಾತ ವಿದ್ವಾಂಸರಾದ ದೇವಿಪ್ರಸಾದ ಚಟ್ಟೋಪಾಧ್ಯಾಯ ತಮ್ಮ ಗ್ರಂಥಗಳಲ್ಲಿ ('ಲೋಕಾಯತ', 'ವಾಟೀಸ್ ಲಿವಿಂಗ್ ಆಂಡ್ ವಾಟೀಸ್ ಡೆಡ್ ಇನ್ ಇಂಡಿಯನ್ ಫಿಲಾಸಫಿ', 'ಇಂಡಿಯನ್ ಅಥೇಯಿಸಂ', 'ಸೈನ್ಸ್ ಎಂಡ್ ಸೊಸೈಟಿ ಇನ್ ಎನ್ಸಿಯೆಂಟ್ ಇಂಡಿಯಾ' ಮುಂತಾದವು) ವೈದಿಕ ಮತ್ತು ಅವೈದಿಕ ಎಂಬ ಪದಗಳನ್ನು ಮಾತ್ರ ಬಳಸುತ್ತಾರೆ. ಅವೈದಿಕರಲ್ಲಿ ಯಾರು ಸೇರುತ್ತಾರೆ ಎಂದೇನು ಅವರು ವಿವರಿಸುವುದಿಲ್ಲ. ಈ ಗಂಭೀರ ಮಿತಿಯ ಮಧ್ಯೆಯೂ ಅವರ 'ಲೋಕಯತ' ದಲಿತವಾದ ಎಡವಾದಗಳ ಗ್ರಹಿಕೆಗೆ ಅಭ್ಯಾಸ ಯೋಗ್ಯ ಕೃತಿ.

ಎಷ್ಟೋ ಕಡೆ ದಲಿತ ನೇತಾರರು ಬುದ್ಧನ ತತ್ವಕ್ಕೆ ನಿಂತು ಬಿಡುತ್ತಾರೆ. ಡಾ.ಅಂಬೇಡ್ಕರ್ ಅವರಂತೆ ಬೌದ್ಧ ಮತಕ್ಕೆ ಸೇರುತ್ತಿದ್ದಾರೆ. ಬುದ್ಧನಿಗೂ ಕೂಡ ತಾತ್ವಿಕ ಅಡಿಪಾಯ ಒದಗಿಸಿದ ದಲಿತ ಮೂಲದ ಜ್ಞಾನಗಳಿಗೆ ಈ ಮಿತ್ರರು ಹೋಗುತ್ತಿಲ್ಲ. 'ತಂತ್ರ', 'ಶಾಕ್ಯ', 'ಸಾಂಖ್ಯ', 'ಯೋಗ', 'ಬೃಹದ್ದೇಸಿ'ಯಂಥ ಮೊಟ್ಟಮೊದಲ ಸಂಗೀತ ಶಾಸ್ತ್ರ ಗ್ರಂಥ, 'ಆಯುರ್ವೇದ', 'ರಸವಿದ್ಯೆ' ಮುಂತಾದ ಬೃಹತ್ ಪರಂಪರೆಗಳು ದಲಿತ ಮೂಲದ ಜ್ಞಾನಧಾರೆಗಳಾಗಿವೆ. ಇಲ್ಲಿ ವಿಜ್ಞಾನ, ಕಲೆ, ತತ್ವಜ್ಞಾನಗಳ ಅದ್ಭುತ ಸಾಧನೆಗಳಿವೆ. ಇದೆಲ್ಲ ಇಂಥ ಸಣ್ಣ ಲೇಖನದಲ್ಲಿ ವಿವರಿಸಲಾಗದ ವಿಷಯ.

ಎಡವಾದಕ್ಕೆ ಸಂಬಂಧಿಸಿ ಹೇಳುವುದಾದರೆ ಇಡೀ ದೇಶದ ಕೃಷಿ ಭೂಮಿಯ ಮೂಲ ಒಡೆಯರಾದ ದಲಿತರನ್ನು ಒಕ್ಕಲೆಬ್ಬಿಸಿ, ಅವರನ್ನು ಅಸ್ಪೃಶ್ಯರನ್ನಾಗಿಸಿ, ದ್ರಾವಿಡ ಮುಂತಾದವರಲ್ಲಿಯ ಮಧ್ಯಮ ಜಾತಿಗಳನ್ನು ರೈತರನ್ನಾಗಿ ಮಾಡಿದ ಸಂದರ್ಭ ಯಾವುದು? ಆರ್.ಎಸ್.ಶರ್ಮ ಒಂದು ಲೇಖನದಲ್ಲಿ ಆರ್ಯಾವರ್ತದ ಆಚೆಯ ಇಡೀ ಭೂಮಿಗೆ, ಪ್ರಭುಗಳು ಅಗ್ರಹಾರಗಳನ್ನಾಗಿ ಮಾಡಿ ಬ್ರಾಹ್ಮಣರನ್ನು ಮರಿದೊರೆಗಳನ್ನಾಗಿ ಹೇಗೆ ಮತ್ತು ಯಾವಾಗ ಮಾಡಿದವರೆಂಬ ಪಟ್ಟಿಕೊಡುತ್ತಾರೆ. ಅವರು 'ತಂತ್ರ'ದ ವಿಷಯದ ಚರ್ಚೆಯ ಸಂದರ್ಭದಲ್ಲಿ ಈ ಮಾತು ಹೇಳುತ್ತಿರುವುದು ಅರ್ಥಪೂರ್ಣ. ಏಕೆಂದರೆ ಇಡೀ ದೇಶ 'ಅಗ್ರಹಾರ'ದ ಮೂಲಕ ಬ್ರಾಹ್ಮಣರ ಹಿಡಿತಕ್ಕೆ ಸೇರುವುದಕ್ಕೂ, ಭೂಮಾಲೀಕರಾಗಿದ್ದ ದಲಿತರನ್ನು ಅಸ್ಪೃಶ್ಯರನ್ನಾಗಿ ಮಾಡಿದ್ದಕ್ಕೂ ನಿಕಟ ಸಂಬಂಧವಿದೆ. ಈ ಅಂಶವನ್ನೇನೂ ಶರ್ಮಾ ಹೇಳುವುದಿಲ್ಲವೆನ್ನಿ. 'ತಂತ್ರ'ಗಳು ಬ್ರಾಹ್ಮಣರ ಕೈಸೇರಿ (ಪರಿಷ್ಕಾರಗೊಂಡು ಎನ್ನುವುದಕ್ಕಿಂತ) ತಿರುಚಲ್ಪಟ್ಟು ಸಂಸ್ಕೃತದಲ್ಲಿ ಅವತರಿಸಿದ್ದೂ ಇದೇ ಕಾಲದಲ್ಲಿ. ಆ ನಂತರದ ಕಾಲಘಟ್ಟದಲ್ಲಿ ರೈತರಾದ ಮಧ್ಯಮ ಜಾತಿಗಳ, ಕರಕುಶಲ ಕರ್ಮಿ ಜಾತಿಗಳ ಪಾತ್ರವೇನಿತ್ತು ಎಂಬ ಚರ್ಚೆ ಕೂಡ ಈ ಲೇಖನದ ವ್ಯಾಪ್ತಿಗೆ ಮೀರಿದ್ದು. 12ನೇ ಶತಮಾನದ ಶರಣರ ಚಳುವಳಿಯನ್ನು ಈ ಹಿನ್ನೆಲೆಯಲ್ಲೇ ಅಧ್ಯಯನ ಮಾಡಬೇಕಾಗುತ್ತದೆ.

ಬ್ರಿಟಿಷರು ಭಾರತವನ್ನು ಸುಲಿಗೆ ಮಾಡಲು ಶುರು ಮಾಡಿದಾಗ ಸಂತಾಲರಂಥ ಮುಂಡಾ ಭಾಷಿಕರೇ ಅವರ ವಿರುದ್ಧ ಬಹುದೊಡ್ಡ ಹೋರಾಟಗಳನ್ನು ಹುಟ್ಟು ಹಾಕಿದವರು ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಬದುಕು, ಬರಹಗಳು 'ದಲಿತವಾದ'ದ ಆಧುನಿಕ ತಿಳುವಳಿಕೆಗೆ ಅಡಿಪಾಯ ಹಾಕುತ್ತವೆ. ಪೆರಿಯಾರ್ ಅವರ ಚಿಂತನೆಗಳು ದಲಿತವಾದದ ಇನ್ನೊಂದು ಆಯಾಮವನ್ನೇ ಒದಗಿಸಬಲ್ಲವು. ಅದೇ ರೀತಿ ಲೋಹಿಯಾ ಅವರ ವಾದಗಳು ಕೂಡ. ಈ ಹಂತದಲ್ಲಿ ಕಮ್ಯುನಿಷ್ಟರ ಆರ್ಥಿಕ ಚಿಂತನೆಗಳನ್ನು, ಸಂಘಟನೆಯ ಶಿಸ್ತನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಹೀಗೆ ದಲಿತವಾದ ಎಡವಾದದ ಸ್ಪಷ್ಟ ತಾತ್ವಿಕತೆಯನ್ನು 'ಬೇಸ್' ಮಾಡಿಕೊಂಡು ಇನ್ನು ಮುಂದಾದರೂ ನಾಡಿನ ಎಲ್ಲ ದಲಿತ ಚಿಂತಕರು, ಹೋರಾಟಗಾರರು, ಸಂಘಟಕರು ಒಂದು ವೇದಿಕೆಯಲ್ಲಿ ಅಣಿನೆರೆಯಬೇಕಿದೆ. ಭಾರತದ ವಿಮೋಚನೆಗೆ ಮುಂದಾಗಬೇಕಿದೆ.

ಅಂಬೇಡ್ಕರ್ ಚಿಂತನೆಯ ನೆಲೆಯಲ್ಲಿ:

ಧರ್ಮ, ಶಿಕ್ಷಣ, ಮೀಸಲಾತಿ ಇತ್ಯಾದಿ

'ಧರ್ಮ' ಕೋಮುವಾದಿಗಳ ಕೈಗೆ ಸಿಕ್ಕು ಅಮಾಯಕರ ಮಾರಣಹೋಮ ನಡೆಯುತ್ತಿದ್ದರೆ, ಶಿಕ್ಷಣ, ಕೇಸರೀಕರಣ ಮತ್ತು ಖಾಸಗೀಕರಣಗೊಂಡು ಬಹುಜನರಿಂದ ದೂರವೇ ಉಳಿಯುವಂತಾಗಿದೆ. ರಾಜಕಾರಣಿಗಳ ರಣನೀತಿ ಮತ್ತು ಮೇಲ್ಜಾತಿ ಜನರ ಹೊಟ್ಟೆಯುರಿ ಕಾರಣದಿಂದಾಗಿ ಮೀಸಲಾತಿ ಮೂಲೆಗುಂಪಾಗುತ್ತಿದೆ. ಪ್ರಮುಖವಾದ ಈ ಮೂರೂ ಸಂಗತಿಗಳನ್ನು ಅಂಬೇಡ್ಕರ್‌ರವರ ದೃಷ್ಟಿಕೋನದಲ್ಲಿ ನೋಡುವ ಪ್ರಯತ್ನವೇ ಈ ಲೇಖನ.

○ ಬಿ.ವಿ. ವೀರಭದ್ರಪ್ಪ

ಧರ್ಮ : ದಲಿತರ ಜೀವನದಲ್ಲಿ ಧರ್ಮ ಯಾವ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ವಿಚಾರ ಮಾಡುವ ಮೊದಲು 'ಧರ್ಮ' ಎಂದರೇನು ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯವಿದೆ. ಧರ್ಮ ಎಂಬ ಪದ ಸಂಸ್ಕೃತದ 'ಧೃ' ಎಂಬ ಧಾತುವಿನಿಂದ ಉಗಮವಾಗಿದೆ. ಧರಿಸು, ಎತ್ತಿಹಿಡಿ, ಪೋಷಿಸು ಇತ್ಯಾದಿ ಅರ್ಥಗಳನ್ನು ಅದು ನೀಡುತ್ತದೆ. ಎತ್ತಿ ಹಿಡಿಯುವಂತಹುದು, ಧರಿಸುವಂತಹುದು ಎಂದರೆ ಸ್ಥಿರವಾಗಿ ನಿಲ್ಲಿಸುವಂತಹ ಸಾಮರ್ಥ್ಯ ಉಳ್ಳದ್ದು ಈ ಎಲ್ಲಾ ಅರ್ಥದ ಛಾಯೆ ಹೊಂದಿದೆ. ಅದು ವ್ಯಕ್ತಿಯನ್ನು ಮತ್ತು ಸಮಾಜವನ್ನು ಒಳ್ಳೆಯ ಸ್ಥಿತಿಯಲ್ಲಿ ಎತ್ತಿಹಿಡಿಯುವ ಶಕ್ತಿ ಎಂದು ಹೇಳಬಹುದು.

ಇನ್ನೂ ಬೇರೆ ಅರ್ಥಗಳಲ್ಲಿ ಧರ್ಮ ಎನ್ನುವ ಪದವನ್ನು ಉಪಯೋಗಿಸುವುದೂ ಉಂಟು. ಕರ್ತವ್ಯ, ಸ್ವಭಾವ, ಆಚಾರ, ದಾನ ಈ ಎಲ್ಲ ಅರ್ಥಗಳೂ ಅದಕ್ಕೆ ಇವೆ. ಭಾರತದಲ್ಲಿ ಕಾಶ್ಯಪ, ಗೌತಮ, ಆಪಸ್ತಂಭ, ಮನು ಮೊದಲಾದ ಪ್ರಾಚೀನ ಋಷಿಗಳಿಂದ ಧರ್ಮಶಾಸ್ತ್ರಗಳು ರಚಿತವಾದವು. ಜೀವನದಲ್ಲಿ ಅನುಸರಿಸಬೇಕಾದ ಕಟ್ಟುಪಾಡುಗಳು, ವಿಧಿ ನಿಷೇಧಗಳು ಅವುಗಳಲ್ಲಿ ದಾಖಲಾಗಿವೆ. ಶ್ರೇಣೀಕೃತ ಚಾತುರ್ವರ್ಣ್ಯಗಳ ತಾರತಮ್ಯ ನೀತಿ ಅವುಗಳಲ್ಲಿ ಎದ್ದುಕಾಣುತ್ತದೆ.

'ಧರ್ಮ' ಎಂಬ ಪದಕ್ಕೆ ಇಂಗ್ಲಿಷಿನ religion ಪದವು ಸಂವಾದಿಯಾಗಿದೆ. ಇಂದ್ರಿಯಗಳಿಗೆ ಮತ್ತು ಬುದ್ಧಿ, ತರ್ಕಗಳಿಗೆ ಅತೀತವಾದ ಮಾರ್ಗದಲ್ಲಿ ಅನಂತತೆಯ ಅನುಭವವನ್ನು ತಂದುಕೊಡುವ ಶಕ್ತಿಯನ್ನು ಪ್ಯಾಶ್ಚಾತ್ಯರು 'ಧರ್ಮ' ಎನ್ನುತ್ತಾರೆ. ಶಾಶ್ವತವಾದ ದೇವರಲ್ಲಿ ನಂಬಿಕೆ ಹೊಂದಿರುವುದೇ ಧರ್ಮ. ಅದು ವಿಶ್ವವನ್ನು ಆಳುತ್ತದೆ ಮತ್ತು ಮಾನವ ಕೋಟಿಯನ್ನು ನೈತಿಕ ಪಥದಲ್ಲಿ ಕೊಂಡೊಯ್ಯುತ್ತದೆ ಎಂದು ನಂಬಲಾಗಿದೆ.

ಯಹೂದಿ, ಕ್ರೈಸ್ತ ಇಸ್ಲಾಂ, ಹಿಂದು ಧರ್ಮಗಳು ಈ ವರ್ಗಕ್ಕೆ ಸೇರುತ್ತವೆ. ಈ ಪರಿಕಲ್ಪನೆಯ ಪ್ರಕಾರ ಜೈನ ಧರ್ಮ, ಆರಂಭದ ಬೌದ್ಧಧರ್ಮ ಮತ್ತು ಶಂಕರರ ಅದ್ವೈತ ವೇದಾಂತ ಇವು ಧರ್ಮಗಳು ಎಂಬ ವರ್ಗಕ್ಕೆ ಸೇರುವುದಿಲ್ಲ. ಮಾನವಾತೀತವಾದ ಶಕ್ತಿಗೆ ಅಥವಾ ದೇವರಿಗೆ ಅಲ್ಲಿ ಸ್ಥಾನವಿಲ್ಲ. ಜೈನ ಮತ್ತು ಆರಂಭದ ಬೌದ್ಧಮತಗಳು ಕೇವಲ ನೈತಿಕ ವ್ಯವಸ್ಥೆಗಳು. ಶಂಕರರ ಅದ್ವೈತ ವೇದಾಂತ ಕೇವಲ ಒಂದು ತಾತ್ವಿಕ ಚಿಂತನೆ ಅಥವಾ ಧರ್ಮದ ಅತಿರೇಕ ಎಂದು ಪಾಶ್ಚಾತ್ಯ ತತ್ವಜ್ಞಾನಿಗಳು ಭಾವಿಸುತ್ತಾರೆ. ಅವುಗಳಲ್ಲಿ ನೈತಿಕ ಅಂಶವಿರುವಂತೆಯೇ ಆಧ್ಯಾತ್ಮದ ಗುರಿಯೂ ಇರುವುದರಿಂದ ಅವುಗಳನ್ನೂ ಸಹ ಧರ್ಮಗಳೆಂದು ಪರಿಗಣಿಸಬಹುದು. ಅಷ್ಟೇ ಅಲ್ಲದೆ ಮಾನವ ಕಲ್ಯಾಣವು ಧರ್ಮದ ಗುರಿಯಾಗಿರುವುದರಿಂದ ಸಮಾಜವಾದ, ಪ್ರಜಾಪ್ರಭುತ್ವ, ಮಾನವತಾವಾದಗಳೂ ಧರ್ಮಗಳಾಗುತ್ತವೆ. ವರ್ಗರಹಿತ ಸಮಾಜವೇ ಸಮಾಜವಾದಿಗಳಿಗೆ ಪರಮ ಗುರಿ. ಮಾನವತಾವಾದಿಗಳಿಗೆ ಮಾನವ ಕುಲವೇ ದೇವರು. ಈ ಧೋರಣೆಯನ್ನು ಒಪ್ಪಿಕೊಂಡರೆ ದೇವರಲ್ಲಿ ನಂಬಿಕೆ ಇರದ ನಾಸ್ತಿಕರೂ ಧಾರ್ಮಿಕರಾಗುತ್ತಾರೆ.

ವೇದಗಳು, ಬ್ರಾಹ್ಮಣಗಳು, ಅರಣ್ಯಕಗಳು, ಉಪನಿಷತ್ತುಗಳು, ಬ್ರಹ್ಮಸೂತ್ರಗಳು, ಭಗವದ್ಗೀತೆ ಹಾಗೂ ಗೌತಮ, ಪರಾಶರ, ಯಾಜ್ಞವಲ್ಕ್ಯ, ಮನು ಮುಂತಾದವರ ಧರ್ಮಶಾಸ್ತ್ರಗ್ರಂಥಗಳು, ಭಾರತೀಯ ಧಾರ್ಮಿಕ ಸಾಹಿತ್ಯದ ಮೈಲಿಗಲ್ಲುಗಳು. ಅಂತೆಯೇ ಋಗ್ವೇದ ಕಾಲದಿಂದಲೇ ಅವುಗಳಲ್ಲಿರುವ ಮೂಢ ಸಂಪ್ರದಾಯಗಳನ್ನು ವಿರೋಧಿಸುವ ಚಾರ್ವಾಕ, ಲೋಕಾಯು ಮುಂತಾದ ಭೌತವಾದಿಗಳು ಸಹ ತಮ್ಮ ತಾತ್ವಿಕ ಚಿಂತನೆಗಳನ್ನು ಹೊರಗೆಡವಿದ್ದಾರೆ. ಆದರೆ ಅವರ ಕೃತಿಗಳು ಮೂಲರೂಪದಲ್ಲಿ ಈಗ ದೊರೆಯುತ್ತಿಲ್ಲ. ಬಹುಶಃ ವೈದಿಕ ಪಂಥದವರ ದಾಳಿಗೀಡಾಗಿ ಅವು ನಾಶವಾಗಿರಬೇಕು. ಅವುಗಳ ಕೆಲವು ಭಾಗಗಳು ವೈದಿಕ ಕೃತಿಗಳಲ್ಲಿ ತೀವ್ರವಾಗಿ ವಿಕೃತಗೊಂಡು ಸಂಕ್ಷಿಪ್ತವಾಗಿ ಕಾಣಿಸಿಕೊಳ್ಳುತ್ತವೆ. ಆ ಭಾಗಗಳಿಂದಲೇ ಪ್ರಾಚೀನ ಭಾರತದಲ್ಲಿ ವೈಚಾರಿಕತೆಯ ಸ್ವರೂಪವನ್ನು ತಿಳಿದು ಕೊಳ್ಳಬಹುದು.

ಹಿಂದು ಧರ್ಮ ಗ್ರಂಥಗಳನ್ನು ಸ್ವಲ್ಪ ಇಣುಕಿನೋಡಿ ಅವುಗಳ ಪ್ರತ್ಯಕ್ಷ ದರ್ಶನವನ್ನು ಪಡೆಯೋಣ. ಹಿಂದುಗಳಿಗೆ ವೇದಗಳು ಪರಮ ಪವಿತ್ರ ಗ್ರಂಥಗಳು. ಅವುಗಳಲ್ಲಿ ಋಗ್ವೇದ ಅತಿ ಪ್ರಾಚೀನವಾದುದು ಮತ್ತು ಅಗ್ರಗಣ್ಯವಾದುದು.

ಋಗ್ವೇದದ ಹತ್ತನೆಯ ಮಂಡಲದ ತೊಂಬತ್ತನೆಯ ಸೂಕ್ತ ಪುರುಷಸೂಕ್ತವೆಂದು ಪ್ರಸಿದ್ಧವಾಗಿದೆ. 'ಪುರುಷನಿಗೆ ಸಾವಿರ ಶಿರಗಳಿವೆ, ಸಾವಿರ ಕಣ್ಣುಗಳಿವೆ, ಸಾವಿರ ಪಾದಗಳಿವೆ' ಎಂದು ಪ್ರಾರಂಭವಾಗುವ ಈ ಸೂಕ್ತದಲ್ಲಿರುವ 16 ಸ್ತೋತ್ರಗಳಲ್ಲಿ ವಿಶ್ವದ ಉಗಮದ ಬಗ್ಗೆ ಒಂದು ಸಿದ್ಧಾಂತವನ್ನು ಪ್ರತಿಪಾದಿಸಲಾಗಿದೆ. ಆ ಸ್ತೋತ್ರಗಳಲ್ಲಿ ಮಧ್ಯದ 11 ಮತ್ತು 12ನೆಯ ಸ್ತೋತ್ರಗಳ ಅಂತರಾರ್ಥವನ್ನು ಬಾಬಾಸಾಹೇಬ್ ಅಂಬೇಡ್ಕರ್ ತಮ್ಮ ಸ್ಪಷ್ಟ ನುಡಿಗಳಿಂದ ಬಹಿರಂಗಗೊಳಿಸಿದ್ದಾರೆ. (ಅಂಬೇಡ್ಕರ್ ಸಂ.7, ಪು.11)

'ಈ ಪುರುಷನನ್ನು ದೇವತೆಗಳು ಎಷ್ಟು ಭಾಗವಾಗಿ ಕತ್ತರಿಸಿದರು? ಈ ಪುರುಷರ ಮುಖ ಯಾವುದು? ಅವನ ಬಾಹುಗಳು ಯಾವುವು? ಅವನ ತೊಡೆಗಳು, ಪಾದಗಳು ಯಾವುವು?' (ಋಗ್ವೇದ 10, 90, 11)

'ಅವನ ಮುಖದಿಂದ ಬ್ರಾಹ್ಮಣ, ತೋಳುಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ ಹಾಗೂ ಪಾದಗಳಿಂದ ಶೂದ್ರ ಜನಿಸಿದರು' (ಋಗ್ವೇದ 10, 90, 12)

ವಿಶ್ವ ಮತ್ತು ಅದರೊಳಗಿನ ಚರಾಚರ ವಸ್ತುಗಳು ಹೇಗೆ ಉಗಮವಾದವು ಎಂಬ ಬಗ್ಗೆ ಪ್ರತಿಯೊಂದು ಧರ್ಮವೂ ತನ್ನದೇ ಆದ ಸೃಷ್ಟಿ ಶಾಸ್ತ್ರವನ್ನು ಹೊಂದಿದೆ. ಅವುಗಳ ತೌಲನಿಕ ಅಧ್ಯಯನದ ಹಿನ್ನೆಲೆಯಲ್ಲಿ ಪುರುಷ ಸೂಕ್ತದೊಳಗಿನ, ಮೇಲೆ ಉಲ್ಲೇಖಿಸಿರುವ ಸ್ತೋತ್ರಗಳ ವೈಶಿಷ್ಟ್ಯವೇನು ಎಂಬುದನ್ನು ಅಂಬೇಡ್ಕರ್ ಪರೀಕ್ಷೆಗೊಳಪಡಿಸಿದ್ದಾರೆ.

ಈಜಿಪ್ಟಿಯನ್ನರಲ್ಲಿಯೂ ಒಂದು ಬಗೆಯ ಸೃಷ್ಟಿ ಶಾಸ್ತ್ರವಿದೆ. ಅದರ ಪ್ರಕಾಶ ಖ್ನುಮು ಅಂದರೆ ಸೃಷ್ಟಿ ಕರ್ತನಾದ ದೇವರು ಕುಂಬಾರನ ಚಕ್ರದ ಮೇಲೆ ಎಲ್ಲ ಜೀವರಾಶಿಗಳನ್ನು ಸೃಷ್ಟಿಸಿದನು. ಅಲ್ಲಿ ಆ ಸೃಷ್ಟಿಕರ್ತನನ್ನು ವರ್ಣಿಸಿರುವ ರೀತಿ ಹೀಗಿದೆ; 'ಅವನು ಜನಕರ ಜನಕ, ಜನನಿಯ ಜನನಿ..ಅವನು ಮನುಷ್ಯರನ್ನು ರೂಪಿಸಿದನು, ದೇವತೆಗಳನ್ನು ಸೃಷ್ಟಿಸಿದನು. ಅವನೆ ಎಲ್ಲ ಪಕ್ಷಿಗಳ ಲ್ಲಿಯೂ, ಎಲ್ಲ ಮೀನುಗಳಲ್ಲಿಯೂ ಹೆಣ್ಣು, ಗಂಡುಗಳನ್ನು ಸೃಷ್ಟಿಸಿದನು' (ಅಂಬೇಡ್ಕರ್ ಸಂ.7, ಪು.28)

ಸೃಷ್ಟಿಯ ಉಗಮದ ಸಿದ್ಧಾಂತಗಳು ಇದೇ ರೀತಿ ಬೈಬಲ್‌ನ ಹಳೆ ಒಡಂಬಡಿಕೆಯಲ್ಲೂ, ಇತರ ಧರ್ಮ ಗಳಲ್ಲೂ ವ್ಯಕ್ತವಾಗಿವೆ. ಈ ಸೃಷ್ಟಿಶಾಸ್ತ್ರದ ವಿವಿಧ ರೂಪ ಗಳು ವಿದ್ವಾಂಸರ ಕುತೂಹಲ ತಣಿಸಲು ಮತ್ತು ಮಕ್ಕಳನ್ನು ರಂಜಿಸಲು ಸಹಾಯಕವಾಗಬಹುದೇ ಹೊರತು ಅದ ಕ್ಕಿಂತ ಹೆಚ್ಚಿನ ಮಹತ್ವ ಅವುಗಳಿಗೆ ಇರುವುದಿಲ್ಲ. ಈ ಮಾತು ಪುರುಷ ಸೂಕ್ತದ ಸೃಷ್ಟಿ ಶಾಸ್ತ್ರಕ್ಕೂ ಅನ್ವಯಿಸುತ್ತದೆ. ಮೇಲು ನೋಟಕ್ಕೆ ಈ ಶ್ಲೋಕಗಳು ನಾಲ್ಕು ವರ್ಣಗಳಾದ 1. ಬ್ರಾಹ್ಮಣರು ಅಂದರೆ ಪುರೋಹಿತರು, 2. ಕ್ಷತ್ರಿಯರು ಅಂದರೆ ಸೈನಿಕರು, 3.ವೈಶ್ಯರು ಅಂದರೆ ವರ್ತಕರು ಮತ್ತು 4. ಶೂದ್ರರು ಅಂದರೆ ಶ್ರಮಜೀವಿಗಳು ಹೇಗೆ ವಿರಾಟ್ ಪುರುಷನ ದೇಹದ ವಿವಿಧ ಭಾಗಗಳಿಂದ ಉದ್ಭವಿಸಿದರು ಎಂಬುದನ್ನು ಸೂತ್ರೀಕರಿಸುತ್ತವೆ. ಇವು ಕೇವಲ ಕವಿ ಕಲ್ಪನೆ ಎಂದು ಅಂದಿನ ಇಂಡೋ ಆರ್ಯರು ಭಾವಿಸಿರಲಿಲ್ಲ. ಈ ಸ್ತುತಿಗಳು ಸೃಷ್ಟಿಶಾಸ್ತ್ರ ಮಾತ್ರವಾಗಿರದೆ ಒಂದು ವಿಶಿಷ್ಟ ರೂಪದ ಸಮಾಜ ರಚನೆಯನ್ನು ನಿಗದಿಪಡಿಸುವ ದೈವಾ ದೇಶಗಳೆಂದು ಅವರು ಭಾವಿಸಿದರು.

'ಪುರುಷ ಸೂಕ್ತ' ಸಮಾಜವನ್ನು 'ಚಾತುರ್ವರ್ಣ' ಗಳನ್ನಾಗಿ ವಿಭಾಗಿಸಿತು. ಈ ವರ್ಣವಿಭಜಿತ ಸೃಷ್ಟಿ ಸಿದ್ಧಾಂತ ವನ್ನು ನಂತರದ ಸ್ಮೃತಿಕಾರರು ಪ್ರಚಾರ ಮಾಡಲು ಮುಂದಾದರು. 'ಆಪಸ್ತಂಭ ಧರ್ಮಸೂತ್ರ' ಚಾತುರ್ವರ್ಣ್ಯವನ್ನು ಈ ರೀತಿ ಪ್ರತಿಪಾದಿಸುತ್ತದೆ.

'ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ'ರೆಂಬ ನಾಲ್ಕು ವರ್ಣಗಳಿವೆ. ಅವುಗಳಲ್ಲಿ ಪ್ರತಿಯೊಂದು ವರ್ಣವೂ ಹುಟ್ಟಿನಿಂದ ಕೆಳವರ್ಣಕ್ಕಿಂತ ಶ್ರೇಷ್ಠವಾದುದು. ಅವರಲ್ಲಿ ಶೂದ್ರರನ್ನು, ಪಾಪಕರ್ಮ ಮಾಡಿದವರನ್ನು ಬಿಟ್ಟರೆ ಉಳಿದವರಿಗೆ 1. ಉಪನಯನ ಅಂದರೆ ಜನಿವಾರ ಧಾರಣೆ, 2. ವೇದಾಧ್ಯಯನ ಮತ್ತು 3. ಯಜ್ಞ ಮಾಡುವ ಹಕ್ಕುಗಳಿವೆ (ಆಪಸ್ತಂಭ ಧರ್ಮಸೂತ್ರ 1.1.1. 4-6)

ಇದನ್ನೆ 'ವಸಿಷ್ಠ ಧರ್ಮಸೂತ್ರ' ಬೇರೆ ಮಾತುಗಳಲ್ಲಿ ಹೇಳುತ್ತದೆ. ಇನ್ನಿತರ ಸ್ಮೃತಿಕಾರರೂ ಇದೇ ಗಿಳಿಪಾಠ ವನ್ನೇ ಒಪ್ಪಿಸುತ್ತಾರೆ. ಪುರುಷಸೂಕ್ತದ ಪಾವಿತ್ರ್ಯದ ವಿರುದ್ಧ ದನಿ ಎತ್ತಿದವರ ಸೊಲ್ಲಡಗಿಸುವಲ್ಲಿ ಮನು ಯಶಸ್ವಿಯಾದ.

'ಶೂದ್ರನಿಗೆ ವಿದ್ಯೆ, ಬುದ್ಧಿ, ಅನ್ನ, ಹವಿಸ್ಸು, ವ್ರತ, ನೇಮಗಳನ್ನು ಎಂದೂ ಹೇಳಬಾರದು ಮತ್ತು ಕೊಡ ಬಾರದು. ಒಂದುವೇಳೆ ಯಾರಾದರೂ ಅವುಗಳನ್ನು ಶೂದ್ರನಿಗೆ ಹೇಳಿದರೆ ಅಥವಾ ಕೊಟ್ಟರೆ, ಹೇಳಿದವನೂ ಮತ್ತು ಕೇಳಿದವನೂ ಇಬ್ಬರೂ ಕೂಡಿಯೇ ನರಕಕ್ಕೆ ಹೋಗುತ್ತಾರೆ' (ಮನು-4.80-81)

ಯಹೂದಿ, ಕ್ರೈಸ್ತ, ಇಸ್ಲಾಂ, ಹಿಂದು ಧರ್ಮಗಳು ಈ ವರ್ಗಕ್ಕೆ ಸೇರುತ್ತವೆ. ಈ ಪರಿಕಲ್ಪನೆಯ ಪ್ರಕಾರ ಜೈನ ಧರ್ಮ, ಆರಂಭದ ಬೌದ್ಧಧರ್ಮ ಮತ್ತು ಶಂಕರರ ಅದ್ವೈತ ವೇದಾಂತ ಇವು ಧರ್ಮಗಳು ಎಂಬ ವರ್ಗಕ್ಕೆ ಸೇರುವುದಿಲ್ಲ. ಮಾನವಾತೀತವಾದ ಶಕ್ತಿಗೆ ಅಥವಾ ದೇವರಿಗೆ ಅಲ್ಲಿ ಸ್ಥಾನವಿಲ್ಲ. ಜೈನ ಮತ್ತು ಆರಂಭದ ಬೌದ್ಧಮತಗಳು ಕೇವಲ ನೈತಿಕ ವ್ಯವಸ್ಥೆಗಳು. ಶಂಕರರ ಅದ್ವೈತ ವೇದಾಂತ ಕೇವಲ ಒಂದು ತಾತ್ವಿಕ ಚಿಂತನೆ ಅಥವಾ ಧರ್ಮದ ಅತಿರೇಕ ಎಂದು ಪಾಶ್ಚಾತ್ಯ ತತ್ವಜ್ಞಾನಿಗಳು ಭಾವಿಸುತ್ತಾರೆ. ಅವುಗಳಲ್ಲಿ ನೈತಿಕ ಅಂಶವಿರುವಂತೆಯೇ ಆಧ್ಯಾತ್ಮದ ಗುರಿಯೂ ಇರುವುದರಿಂದ ಅವುಗಳನ್ನೂ ಸಹ ಧರ್ಮಗಳೆಂದು ಪರಿಗಣಿಸಬಹುದು. ಅಷ್ಟೇ ಅಲ್ಲದೆ ಮಾನವ ಕಲ್ಯಾಣವು ಧರ್ಮದ ಗುರಿಯಾಗಿರುವುದರಿಂದ ಸಮಾಜವಾದ, ಪ್ರಜಾಪ್ರಭುತ್ವ ಮಾನವತಾವಾದಗಳೂ ಧರ್ಮಗಳಾಗುತ್ತವೆ.

'ಶೂದ್ರನಾದವನು ಹಕ್ಕಿನಿಂದ ಬ್ರಾಹ್ಮಣನೊಡನೆ ಧರ್ಮದ ಬಗ್ಗೆ ಚರ್ಚಿಸಲು ಬಂದರೆ, ಕಾಸಿದ ಎಣ್ಣೆ ಯನ್ನು ಅವನ ಮುಖಕ್ಕೆ ಎರಚಿ, ಕಿವಿಯಲ್ಲಿ ಹಾಕಿ, ಮೈಮೇಲೆ ಸುರಿಯಬೇಕು' (ಮನು-8.272)

'ಶೂದ್ರನಾದವನು ಬ್ರಾಹ್ಮಣನನ್ನು ಹೀಯಾಳಿಸಿದರೆ ಅಥವಾ ಬಯ್ದರೆ ಅವನ ನಾಲಿಗೆಯನ್ನು ಸೀಳಬೇಕು, ಜನ ನೇಂದ್ರಿಯವನ್ನು ಕತ್ತರಿಸಿಹಾಕಬೇಕು' (ಮನು-8.279)

'ಶೂದ್ರನಾದವನು ಬ್ರಾಹ್ಮಣನ ಸರಿಸಮಾನ ಕುಳಿತುಕೊಳ್ಳಲು ಬಂದರೆ ಕಬ್ಬಿಣದ ಬರೆಕೊಟ್ಟು ಗುರ್ತು ಹಾಕಬೇಕು, ಅವನ ತಿಕ ಕೆತ್ತಬೇಕು' (ಮನು-8-281)

ಶೂದ್ರರನ್ನು ನರಕ ಯಾತನೆಗೆ ಗುರಿಪಡಿಸಿದ ಮನು ಅಪರಾಧಿಯಾದ ಬ್ರಾಹ್ಮಣನಿಗೆ ವಿಧಿಸುವ ಶಿಕ್ಷೆಯನ್ನು ಗಮನಿಸಿ.

'ಬ್ರಾಹ್ಮಣನಾದವನು ಎಂಥ ಘೋರ ಅಪರಾಧ ಮಾಡಿದರೂ ಅವನಿಗೆ ಮರಣದಂಡನೆ ಕೊಡಬಾರದು. ಅವನನ್ನು ಯಾವುದೇ ರೀತಿಯಿಂದ ಪೀಡಿಸದೆ, ಧನ ಸಹಿತನಾಗಿ ಓಡಿಸುವುದೇ ಅವನಿಗೆ ಕೊಡುವ ಪರಮಾ ವಧಿ ಶಿಕ್ಷೆ' (ಮನು-8.280)

'ಬ್ರಾಹ್ಮಣ ಹತ್ಯೆಯು ಭೂಮಿಯ ಮೇಲೆ ಮಹಾಪಾಪ (ಏಕೆಂದರೆ ಬ್ರಾಹ್ಮಣ ಹತ್ಯೆಯೇ ಬ್ರಹ್ಮಹತ್ಯೆ). ರಾಜನಾದ ವನು ಇದನ್ನು ಕನಸು ಮನಸ್ಸಿನಲ್ಲಿಯೂ ಸಹ ಚಿಂತಿಸ ಕೂಡದು'. (ಮನು-8.281)

'ಬ್ರಾಹ್ಮಣನನ್ನು ಹೊಡೆಯಲು ದೊಣ್ಣೆ ಎತ್ತಿದರೆ ಅವ ನಿಗೆ ನೂರು ವರ್ಷ ನರಕ, ಹೊಡೆದರೆ ಸಾವಿರ ವರ್ಷ ನರಕ. ಹೊಡೆದು ರಕ್ತ ಸುರಿಸಿದರೆ, ಆ ರಕ್ತ ಸುರಿದ ಹನಿಗಳ ಸಾವಿರದಷ್ಟು ವರ್ಷ ನರಕ' (ಮನು-11.209)

'ಶೂದ್ರನ ಹತ್ಯೆಯು ಬೆಕ್ಕು, ಮುಂಗುಸಿ, ಕಪ್ಪೆ, ನಾಯಿ, ಕತ್ತೆ, ಉಡ, ಕಾಗೆ, ಗೂಗೆಗಳ ಹತ್ಯೆಗೆ ಸಮಾನ' (ಮನು-11.131)

ಪುರುಷಸೂಕ್ತ ಅಂಬೇಡ್ಕರರನ್ನು ಗಂಭೀರ ಚಿಂತನೆಗೆ ತೊಡಗಿಸುತ್ತದೆ. ಕತ್ತೆ, ಕುದುರೆ, ಮೇಕೆಗಳಿಂದ ಸೃಷ್ಟಿ ಪ್ರಾರಂಭವಾಯಿತೆಂದು ಹೇಳುವ ಅದು ಮಾನವ ಸೃಷ್ಟಿಯ ಬಗ್ಗೆ ಯಾಕೆ ಏನೂ ಹೇಳುವುದಿಲ್ಲ? ಬದಲಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರ ಉಗಮದ ಬಗ್ಗೆ ಯಾಕೆ ಆಸಕ್ತಿ ತೋರಿಸುತ್ತದೆ? ಎಂದು ಅಂಬೇಡ್ಕರ್ ಉದ್ಗಾರ ತೆಗೆಯುತ್ತಾರೆ.

ಋಗ್ವೇದದಲ್ಲಿ ಮಾನವರನ್ನು ಸಮಾನವಾಗಿ ಕಾಣುವ ಶ್ಲೋಕಗಳು ಬೇಕಾದಷ್ಟಿವೆ. ಋಗ್ವೇದದ ಆರಂಭ ಕಾಲ ದಲ್ಲಿ ಮಾನವರು ಜೀವನೋಪಾಯಕ್ಕಾಗಿ ಭಿನ್ನ ವೃತ್ತಿ ಗಳನ್ನು ಅವಲಂಬಿಸಿದ್ದರೂ ಅವರಲ್ಲಿ ಭೇದ ಭಾವಗಳು ಇರಲಿಲ್ಲ.

ಕವಾಷ ಐಲೂಷ ಎಂಬ ಋಷಿ ಋಗ್ವೇದದ ಐದು ಸೂಕ್ತಗಳನ್ನು ರಚಿಸಿದ್ದಾನೆ. ಅವನೊಬ್ಬ ಶೂದ್ರ ಮತ್ತು ಜೂಜಾಟ ಅವನ ಹವ್ಯಾಸವಾಗಿತ್ತು. ಋಗ್ವೇದದ ಹತ್ತನೆ ಮಂಡಲದ 30ರಿಂದ 34 ಸೂಕ್ತಗಳನ್ನು ಅವನು ರಚಿಸಿ ದ್ದಾನೆ. ಪೀಜವನನ ಮಗನಾದ ಸುದಾಸ ಎಂಬ ಶೂದ್ರ ರಾಜ ಋಗ್ವೇದದ ಹತ್ತನೆ ಮಂಡಲದ 134ನೆ ಸೂಕ್ತವನ್ನು ರಚಿಸಿದ ಎಂದು ಸಾಯಣರೇ ಹೇಳುತ್ತಾರೆ. ಅಲ್ಲದೆ ಅವನು ಅಶ್ವಮೇಧ ಯಜ್ಞ ಮಾಡಿದನೆಂದು ಋಗ್ವೇದ ದಲ್ಲೇ ದಾಖಲಾಗಿದೆ. (ಋಗ್ವೇದ-111-53), ವಸಿಷ್ಠರು ಸುದಾಸನ ಪುರೋಹಿತರಾಗಿದ್ದರು. ಅವನ ಪಟ್ಟಾಭಿಷೇಕ ನೆರವೇರಿಸಿ ಕೊಟ್ಟವರೂ ಅವರೇ.

ಪ್ರಾಚೀನ ವೈದಿಕ ಸಾಹಿತ್ಯವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದ ಡಾ. ಅಂಬೇಡ್ಕರ್ ಅವರು 1. ಆರ್ಯರು, ದಾಸರು ಮತ್ತು ದಸ್ಯುಗಳ ನಡುವೆ ಜನಾಂಗಿಕ ಪ್ರತ್ಯೇಕತೆ ಇತ್ತು ಎಂಬುದಕ್ಕೆ ಯಾವ ಆಧಾರವೂ ಇಲ್ಲ 2. ದಾಸರು ಮತ್ತು ದಸ್ಯುಗಳಿಗಿಂತ ವರ್ಣದಲ್ಲಿ ಆರ್ಯರು ಭಿನ್ನರಾಗಿದ್ದರು ಎಂಬ ವಾದವನ್ನು ವೇದಗಳು ಬೆಂಬಲಿಸುವುದಿಲ್ಲ ಎಂಬ ತೀರ್ಮಾನಕ್ಕೆ ಬರುತ್ತಾರೆ. ಋಗ್ವೇದಕ್ಕೆ ಅನಂತರ ಸೇರ್ಪಡೆಯಾಗಿರ ಬಹುದಾದ ಪುರುಷ ಸೂಕ್ತದಲ್ಲಿ ಮತ್ತು ತದನಂತರ ಕಾಲಕ್ಕೆ ಸೇರಿದ ಧರ್ಮಶಾಸ್ತ್ರ ಗ್ರಂಥಗಳಲ್ಲಿ ಶ್ರೇಣೀಕೃತ ವಾದ ಚತುರ್ವರ್ಣಗಳು ಅಸ್ತಿತ್ವವನ್ನು ಪಡೆದವು ಎಂದು ತಿಳಿಯಬಹುದು. ವೈದಿಕ ಧರ್ಮದ ಸಾರವನ್ನು

ದೈವಾ ಧೀನಂ ಜಗತ್ಸರ್ವ
ದೈವಂ ಮಂತ್ರಾಧೀನಂ ತಥಾ।
ಮಂತ್ರಂ ಬ್ರಾಹ್ಮಣಾಧೀನಂ
ಬ್ರಾಹ್ಮಣೋ ಮಮ ದೇವತಾ॥

ಸಕಲ ಜಗತ್ತು ದೇವರ ಅಧೀನ. ಆ ದೇವರು ಮಂತ್ರಕ್ಕೆ ಅಧೀನ, ಮಂತ್ರವು ಬ್ರಾಹ್ಮಣನ ಅಧೀನ. ಆದ್ದರಿಂದ ಬ್ರಾಹ್ಮಣನೇ ನನ್ನ ದೇವರು. ಇದು ಹಿಂದು ಧರ್ಮ! ಸಾಮಾನ್ಯರಿಗೆ ಪುರೋಹಿತಶಾಹಿಯೇ ದೇವರಾಗಿರುವುದನ್ನು ಹಿಂದು ಧರ್ಮದಲ್ಲಷ್ಟೇ ಅಲ್ಲ ಕ್ರಿಶ್ಚಿಯನ್, ಇಸ್ಲಾಂ ಇತ್ಯಾದಿ ಇತರ ಧರ್ಮಗಳಲ್ಲೂ ಕಾಣಬಹುದು.

ಶಿಕ್ಷಣ : ಜೀವನಕ್ಕೆ ಅತ್ಯವಶ್ಯಕವಾದ ಬೌದ್ಧಿಕ ತರಬೇತಿ ಹಾಗೂ ಭಾವನಾತ್ಮಕ, ಕಲಾತ್ಮಕ ಮತ್ತು ಆಧ್ಯಾತ್ಮಿಕ ವಿಕಾಸಗಳಿಗೆ ಪೋಷಕವಾದ ಕಲಿಕಾ ವಿಧಾನಗಳನ್ನು ಶಿಕ್ಷಣ ಎನ್ನಬಹುದು. ದೇಹಶಕ್ತಿ ಮತ್ತು ಬುದ್ಧಿಶಕ್ತಿಗಳನ್ನು ಅಭಿವೃದ್ಧಿಪಡಿಸಿಕೊಂಡು ಆರ್ಥಿಕ ಸ್ವಾವಲಂಬನೆಗಾಗಿ ಯಾವುದಾದರೂ ಒಂದು ವೃತ್ತಿಯನ್ನು ಗಳಿಸಲು ಶಿಕ್ಷಣ ಸಹಾಯಕವಾಗುತ್ತದೆ. ಅದು ತನ್ನ ಮತ್ತು ತನ್ನ ಕುಟುಂಬದ ಹಾಗೂ ಸಮಾಜದ ನೆಮ್ಮದಿಗೆ ಕಾರಣವಾಗುತ್ತದೆ.

ಹಲವು ಶಿಕ್ಷಣ ತಜ್ಞರು ಮತ್ತು ತತ್ವಜ್ಞಾನಿಗಳು ಈ ದಿಕ್ಕಿನಲ್ಲಿ ತಮ್ಮ ಗಹನವಾದ ಕೊಡುಗೆಗಳನ್ನು ನೀಡಿದ್ದಾರೆ. ರೂಸೋ ಎಂಬ ಫ್ರಾನ್ಸ್ ದೇಶದ ತತ್ವಜ್ಞಾನಿ 'ಅಕ್ಷರ-ಕೇಂದ್ರ'ವಾಗಿದ್ದ ಶಿಕ್ಷಣವನ್ನು 'ಮಗು-ಕೇಂದ್ರಿ'ತವಾಗಿರಬೇಕೆಂದು ಪ್ರತಿಪಾದಿಸಿದ. ಶಿಕ್ಷಣ ಮಗುವಿನ ಮೇಲೆ ಹೇರಲಾದ ಒಂದು ಶಿಕ್ಷೆಯಾಗಬಾರದು. ಮಗು ಆಟವಾಡುತ್ತಾ ಆಡುತ್ತ ತನ್ನ ವಿನೋದಕ್ಕಾಗಿ ವಿದ್ಯೆಯನ್ನು ಕಲಿಯುವಂತಾಗಬೇಕು. ಮಗುವಿನಲ್ಲಿ ಸ್ವಾಭಾವಿಕವಾಗಿ ಹುದುಗಿರುವ ಆಸಕ್ತಿ ಕುತೂಹಲಗಳನ್ನು ತಣಿಸುವ ರೀತಿಯಲ್ಲಿ ಕಲಿಕೆ ಮುಂದುವರಿಯಬೇಕೆಂದು ಶಿಕ್ಷಣ ಪದ್ಧತಿಯನ್ನು ವಿವರಿಸಿದ. ವಯಸ್ಕರ ಆಸೆ ಆಕಾಂಕ್ಷೆಗಳನ್ನು ಮಕ್ಕಳ ಮೇಲೆ ಹೇರಬಾರದು. ಮಕ್ಕಳು ಪ್ರೀತಿಸುವ ಆಟದ ವಸ್ತುಗಳು, ಚಿತ್ರಗಳು, ಪರಿಸರದಲ್ಲಿ ಗೋಚರವಾಗುವ ಪಕ್ಷಿ, ಪ್ರಾಣಿಗಳ ಮೂಲಕ ಅವರ ಜ್ಞಾನ ವಿಕಾಸವಾಗುವಂತೆ ಏರ್ಪಾಟು ಮಾಡುವುದೇ ಶಿಕ್ಷಣ ಎಂದು ಅವನು ಹೇಳಿದ.

ಪೆಸ್ಟೊಲಾಜ್ಜಿ ಎಂಬ ಸ್ವಿಡ್ಜರ್‌ಲ್ಯಾಂಡ್‌ನ ಒಬ್ಬ ಶಿಕ್ಷಣ ತಜ್ಞ ರೂಸೋವಿನಿಂದ ಸ್ಫೂರ್ತಿ ಪಡೆದು ಮಕ್ಕಳ ಸ್ವಾಭಾವಿಕ ವರ್ತನೆಗನುಗುಣವಾಗಿ ಒಂದು ಮಾದರಿ ಶಾಲೆಯನ್ನು ಆರಂಭಿಸಿ, ಹಲವು ಪ್ರಯೋಗಗಳನ್ನು ಮಾಡಿದ. ಮಕ್ಕಳು ಕಣ್ಣು ಕಿವಿ, ಕೈ ಮೊದಲಾದ ಇಂದ್ರಿಯಗಳ ಮೂಲಕ ಹೊಸ ವಿಷಯಗಳನ್ನು ತಾವೇ ತಿಳಿದುಕೊಳ್ಳುವಂತೆ ಮಾಡಿದ. ಅಂದರೆ, ಒಂದು ಗಿಡದ ವಿಷಯವನ್ನು ಕಲಿಯುವಾಗ ತರಗತಿಯಲ್ಲಿ ಉಪಾಧ್ಯಾಯ ಹೇಳುವುದನ್ನು ಕೇಳುತ್ತಾ ಕೂಡದೆ, ಗಿಡದ ಬಳಿಗೆ ಹೋಗಿ ಅದನ್ನು ನೋಡಿ, ಮುಟ್ಟಿ ವಿಷಯವನ್ನು ತಿಳಿದುಕೊಳ್ಳಬೇಕು. ಅವನು ದೈಹಿಕ ಚಟುವಟಿಕೆಗಳು ಮತ್ತು ವಸ್ತುಗಳ ಮೂಲಕ ಇಂದ್ರಿಯಾನುಭವಗಳನ್ನು ಪಡೆಯುವಂತೆ ಮಾಡಿದ.

ಅವನ ಸಂಪರ್ಕದಿಂದ ಪ್ರಭಾವಿತನಾದ ಫ್ರೊಬೆಲ್ ಎಂಬ ಶಿಕ್ಷಣ ತಜ್ಞ 'ಮಕ್ಕಳ ತೋಟ' (ಕಿಂಡರ್ ಗಾರ್ಟನ್) ಎಂಬ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ. ಸಸಿಯನ್ನು ಉತ್ತಮವಾಗಿ ಬೆಳೆಸಿದರೆ, ಒಳ್ಳೆಯ ಗಿಡವಾಗಿ,

ಪ್ರಾಚೀನ ವೈದಿಕ ಸಾಹಿತ್ಯವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದ ಡಾ. ಅಂಬೇಡ್ಕರ್ ಅವರು 1. ಆರ್ಯರು, ದಾಸರು ಮತ್ತು ದಸ್ಯುಗಳ ನಡುವೆ ಜನಾಂಗಿಕ ಪ್ರತ್ಯೇಕತೆ ಇತ್ತು ಎಂಬುದಕ್ಕೆ ಯಾವ ಆಧಾರವೂ ಇಲ್ಲ 2. ದಾಸರು ಮತ್ತು ದಸ್ಯುಗಳಿಗಿಂತ ವರ್ಣದಲ್ಲಿ ಆರ್ಯರು ಭಿನ್ನರಾಗಿದ್ದರು ಎಂಬ ವಾದವನ್ನು ವೇದಗಳು ಬೆಂಬಲಿಸುವುದಿಲ್ಲ ಎಂಬ ತೀರ್ಮಾನಕ್ಕೆ ಬರುತ್ತಾರೆ. ಋಗ್ವೇದಕ್ಕೆ ಅನಂತರ ಸೇರ್ಪಡೆಯಾಗಿರಬಹುದಾದ ಪುರುಷ ಸೂಕ್ತದಲ್ಲಿ ಮತ್ತು ತದನಂತರ ಕಾಲಕ್ಕೆ ಸೇರಿದ ಧರ್ಮಶಾಸ್ತ್ರಗ್ರಂಥಗಳಲ್ಲಿ ಶ್ರೇಣೀಕೃತವಾದ ಚತುರ್ವರ್ಣ್ಯಗಳು ಅಸ್ತಿತ್ವವನ್ನು ಪಡೆದವು ಎಂದು ತಿಳಿಯಬಹುದು. ವೈದಿಕ ಧರ್ಮದ ಸಾರವನ್ನು ಸಕಲ ಜಗತ್ತು ದೇವರ ಅಧೀನ. ಆ ದೇವರು ಮಂತ್ರಕ್ಕೆ ಅಧೀನ, ಮಂತ್ರವು ಬ್ರಾಹ್ಮಣನ ಅಧೀನ. ಆದ್ದರಿಂದ ಬ್ರಾಹ್ಮಣನೇ ನನ್ನ ದೇವರು. ಇದು ಹಿಂದು ಧರ್ಮ! ಸಾಮಾನ್ಯರಿಗೆ ಪುರೋಹಿತಶಾಹಿಯೇ ದೇವರಾಗಿರುವುದನ್ನು ಹಿಂದು ಧರ್ಮದಲ್ಲಷ್ಟೇ ಅಲ್ಲ, ಕ್ರಿಶ್ಚಿಯನ್, ಇಸ್ಲಾಂ ಇತ್ಯಾದಿ ಇತರ ಧರ್ಮಗಳಲ್ಲೂ ಕಾಣಬಹುದು.

ಮರವಾಗಿ, ಹೂವು ಕಾಯಾಗಿ ಫಲಕೊಡುತ್ತದೆ. ಚಿಕ್ಕ ಮಕ್ಕಳ ಶಿಕ್ಷಣವೂ ಹಾಗೆಯೇ ಒಂದು ಅಡಿಗಲ್ಲು ಎಂದು ಅವನು ಸಾರಿದ.

ಜಾನ್ ಡ್ಯೂಯಿ ಎಂಬ ಅಮೇರಿಕದ ತತ್ವಜ್ಞಾನಿ ಮತ್ತು ದಾರ್ಶನಿಕ ಆಧುನಿಕ ಶಿಕ್ಷಣ ಪದ್ಧತಿಗೆ ತನ್ನದೇ ಆದ ಕೊಡುಗೆ ನೀಡಿದ್ದಾನೆ. ಅವನು ವ್ಯಕ್ತಿ ಮತ್ತು ಸಮಾಜದ ನಡುವಿನ ಪರಸ್ಪರ ಅವಲಂಬನೆಯ ಸಂಬಂಧವನ್ನು ಒತ್ತಿ ಹೇಳಿದ. ಶಿಕ್ಷಣದಲ್ಲಿ ಸಾಮಾಜಿಕ ಹೊಣೆಗಾರಿಕೆ, ತಾತ್ವಿಕ ಮತ್ತು ಪ್ರಾಯೋಗಿಕ ಭಾವಗಳ ಸಮತೋಲನಕ್ಕೆ ಪ್ರಾಶಸ್ತ್ಯ ನೀಡಿದ. ಚಟುವಟಿಕೆಯಿಂದ ನೇರವಾದ ಅನುಭವ ಪಡೆದ ಜ್ಞಾನಗಳಿಸುವಂಥ ಶಾಲಾ ವಾತಾವರಣವನ್ನು ನಿರ್ಮಾಣ ಮಾಡಲು ಪ್ರಾಯೋಗಿಕ ಶಾಲೆಯನ್ನು ಏರ್ಪಡಿಸಿದ. ಒಂದು ಉದ್ದೇಶವಿರುವ ಚಟುವಟಿಕೆಯ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಬಹುದು ಎಂದು ವಿವರಿಸಿದ.

ಪ್ರಾಚೀನ ಭಾರತದಲ್ಲಿ ಅರಣ್ಯಗಳ ನಡುವೆ ಇದ್ದ ಗುರುಕುಲಗಳ ಮೂಲಕ ಶಿಕ್ಷಣ ನಡೆಯುತ್ತಿತ್ತು. ಆರಂಭ ಕಾಲದಲ್ಲಿ ಚತುರ್ವರ್ಣ್ಯಗಳು ವ್ಯಕ್ತಿಯ ಗುಣಸ್ವಭಾವಗಳ ಆಧಾರದ ಮೇಲೆ ನಿರ್ಧಾರವಾಗುತ್ತಿದ್ದವು. ಅನಂತರ ಕಾಲದಲ್ಲಿ ಅವು ಜಾತಿಗಳಾಗಿ ಪರಿವರ್ತನೆಗೊಂಡವು. ದೃಷ್ಟಾಂತಕ್ಕಾಗಿ ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ ಸತ್ಯಕಾಮ ಜಾಬಾಲನ ಕಥೆಯನ್ನು ನೋಡಬಹುದು.

ಬಾಲಕ ಸತ್ಯಕಾಮನು ಗುರುವಿನ ಬಳಿ ಹೋಗುವ ಮುನ್ನ ತನ್ನ ತಾಯಿಯಾದ ಜಾಬಾಲಳ ಅನುಮತಿಯನ್ನು ಕೋರಿದ. 'ಅಮ್ಮ, ಬ್ರಹ್ಮಚಾರಿಯಾಗಿ ಗುರುಕುಲ ವಾಸದಲ್ಲಿರಲು ಬಯಸುತ್ತೇನೆ. ನನ್ನ ಗೋತ್ರ ಯಾವುದು' ಎಂದು ಕೇಳಿದ. ಅವಳು ತನ್ನ ಮಗನಿಗೆ ಹೀಗೆ ಹೇಳಿದಳು; 'ಮಗು, ನೀನು ಯಾವ ಗೋತ್ರದವನೆಂಬುದು ನನಗೆ ತಿಳಿಯದು. ಯೌವನಾವಸ್ಥೆಯಲ್ಲಿ ನಾನು ಅನೇಕ ಕಡೆ ಸೇವಾ ವೃತ್ತಿಯನ್ನು ಮಾಡುತ್ತಾ ತಿರುಗುತ್ತಿದ್ದಾಗ ನೀನು ಜನಿಸಿದೆ. ನಿನ್ನ ಗೋತ್ರವೇನೆಂದು ನನಗೆ ತಿಳಿಯದು. ನನ್ನ ಹೆಸರು ಜಾಬಾಲ, ನಿನ್ನ ಹೆಸರು ಸತ್ಯಕಾಮ. ಆದ್ದರಿಂದ ನೀನು ಸತ್ಯಕಾಮ ಜಾಬಾಲ' ಎಂದಳು.

ಅವನು ಹರಿದ್ರುಮತ ಗೌತಮ ಋಷಿಯ ಬಳಿ ಹೋಗಿ 'ಗುರುಗಳೆ, ನಾನು ಬ್ರಹ್ಮಚಾರಿಯಾಗಿ ನಿಮ್ಮಲ್ಲಿ ಶಿಷ್ಯವೃತ್ತಿಯನ್ನು ಸ್ವೀಕರಿಸಲು ಬಂದಿದ್ದೇನೆ' ಎಂದು ವಿಜ್ಞಾಪನೆ ಮಾಡಿಕೊಂಡ.

'ಮಗೂ, ನಿನ್ನ ಗೋತ್ರ ಯಾವುದು' ಎಂದು ಗೌತಮ ಕೇಳಿದಾಗ, 'ಗುರುಗಳೆ, ನನ್ನ ಗೋತ್ರ ಯಾವುದೆಂದು ನನಗೆ ತಿಳಿಯದು', ನನ್ನ ತಾಯಿಯನ್ನು ಕೇಳಿದಾಗ 'ನಿನ್ನ ತಂದೆ ಯಾರೋ ನನಗೆ ತಿಳಿಯದು, ನಾನು ನಿನ್ನ ತಾಯಿ ಎಂಬುದನ್ನು ಮಾತ್ರ ಬಲ್ಲೆ, ನನ್ನ ಹೆಸರು ಜಾಬಾಲ, ನಿನ್ನ ಹೆಸರು ಸತ್ಯಕಾಮ' ಎಂದು ಹೇಳಿದಳು. ಆದ್ದರಿಂದ 'ನಾನು ಸತ್ಯಕಾಮ ಜಾಬಾಲ'ನೆಂದು ಹೇಳಿದನು.

ಸತ್ಯಕಾಮ ತನ್ನ ಹುಟ್ಟಿನ ಬಗ್ಗೆ ನಾಚಿಕೆಪಡುವಂತಹುದೇನೂ ಇಲ್ಲವೆಂದು ಸ್ಪಷ್ಟವಾಗುತ್ತದೆ. ಅವನ ತಾಯಿ ಮೇಲು ಕೀಳುಗಳನ್ನು ಎಣಿಸದೆ ತನ್ನ ಮನೆಗೆ ಬಂದ ಅತಿಥಿಗಳಿಗೆ ಸಮಾನ ಸೇವೆ ಸಲ್ಲಿಸಿದವಳು. ಅವಳ ಮಗನನ್ನು ಉಪನಿಷತ್ತಿನ ಗುರು ಬ್ರಾಹ್ಮಣ ಎಂದು ಹೇಗೆ ಕರೆದ ಎಂಬುದು ಮನುವಿನಿಂದ ಪ್ರಭಾವಿತರಾದ ಆಚಾರ್ಯರಿಗೆ ಅಚ್ಚರಿಯಾಗಿರಬೇಕು. ಅವರು ಜಾಣ್ಮೆಯಿಂದ ಅದಕ್ಕೊಂದು ಉಪಾಯವನ್ನು ಕಂಡುಕೊಂಡರು. ಜಾಬಾಲಳು ದಾಸಿಯಾದರೂ ಬ್ರಾಹ್ಮಣನೊಬ್ಬನ ಸಂಗದಿಂದ ಸತ್ಯಕಾಮನನ್ನು ಪಡೆದಿರಬೇಕು ಎಂದು ತರ್ಕಿಸಿದರು!

ಮೇಲಿನ ವಿವರಣೆಯಿಂದ ಗುಣಸ್ವಭಾವಗಳಿಂದ ತೀರ್ಮಾನವಾಗುವ ಉಪನಿಷತ್ ಕಾಲದ ವರ್ಣಗಳು ಎಂದೋ ನಾಮಾವಶೇಷವಾಗಿ ಹೋಗಿ ಅವುಗಳ ಸ್ಥಾನದಲ್ಲಿ ಹುಟ್ಟಿನಿಂದ ತೀರ್ಮಾನವಾಗುವ ಜಾತಿಗಳು ರೂಢಿಯಲ್ಲಿವೆ ಎಂಬುದು ನಮಗೆ ಮನವರಿಕೆಯಾಗುತ್ತದೆ.

ಭಾರತೀಯ ಸಂಸ್ಕೃತಿ ಪ್ರತಿನಿಧಿಸುವ ಶಿಕ್ಷಣ ನೀತಿಯನ್ನು ಮಹಾಭಾರತದ ಒಂದು ಕಥೆಯ ಮೂಲಕ ತಿಳಿದುಕೊಳ್ಳಬಹುದು. ಮಹಾಭಾರತದ ದ್ರೋಣಾಚಾರ್ಯರ ಮತ್ತು

ಏಕಲವ್ಯರ ಗುರು ಶಿಷ್ಯ ಸಂಬಂಧವನ್ನು ಕುರಿತು ಎಂತಹ ಆದರ್ಶ ಸಂಬಂಧ ಎಂದು ಕೆಲವರು ಉದ್ಗಾರ ತೆಗೆಯುತ್ತಾರೆ. ಸ್ವಲ್ಪ ಒಳಹೊಕ್ಕು ನೋಡಿದರೆ ಆ ಆದರ್ಶ ಎಂತಹುದು, ಅಂತಹ ಆದರ್ಶವನ್ನು ಅಪೇಕ್ಷಿಸುವವರು ಯಾವ ವರ್ಗದ ಜನ ಎಂಬುದು ವೇದ್ಯವಾಗುತ್ತದೆ.

ಒಬ್ಬ ಬೇಡರ ಬಾಲಕ ಬಿಲ್ ವಿದ್ಯೆ ಕಲಿಯುವ ಆಸೆಯಿಂದ ಗುರು ದ್ರೋಣನ ಬಳಿಗೆ ಹೋದ. ಬಾಲಕ ಕ್ಷತ್ರಿಯನಲ್ಲವಾದ್ದರಿಂದ ದ್ರೋಣ ಅವನನ್ನು ಶಿಷ್ಯನೆಂದು ಸ್ವೀಕರಿಸಲು ನಿರಾಕರಿಸಿದ. ಬಿಲ್ ವಿದ್ಯೆಯ ಬಗ್ಗೆ ಗಾಢವಾದ ಆಸಕ್ತಿಯುಳ್ಳ ಏಕಲವ್ಯ ತನಗೆ ತಾನೇ ಅಭ್ಯಾಸ ಮಾಡುತ್ತಾ ಧನುರ್ವಿದ್ಯೆಯಲ್ಲಿ ಪಾರಂಗತನಾದ. ಅವನ ಬಿಲ್ ವಿದ್ಯೆಗೆ ಅಸೂಯೆಗೊಂಡ ಅರ್ಜುನ ತನ್ನ ಗುರುವಿನ ಮೂಲಕ ಅವನ ವಿದ್ಯೆಯನ್ನು ನಾಶಮಾಡಲು ಸಂಚು ಹೂಡಿದ. ದ್ರೋಣ ತಾನು ಕಲಿಸಲು ನಿರಾಕರಿಸಿದ ವಿದ್ಯೆಗಾಗಿ ಏಕಲವ್ಯನಿಂದ ಎಂತಹ' ಗುರುದಕ್ಷಿಣೆ ಪಡೆಯಲು ನಾಚಿಕೆಬಿಟ್ಟು ಮುಂದಾದ. ಅದೂ ಎಂತಹ ದಕ್ಷಣೆ! ತಾನು ಕಲಿಸದೆ ಶಿಷ್ಯನೇ ಸ್ವಯಂ ಪ್ರಯತ್ನದಿಂದ ಕಲಿತ ವಿದ್ಯೆಯ ಪ್ರಕಟಣೆಗೆ ಮೂಲಾಧಾರವಾದ ಹೆಬ್ಬೆರಳ ದಕ್ಷಿಣೆ! ಗುರು ತನಗೆ ವಿದ್ಯೆ ಕಲಿಸಲು ನಿರಾಕರಿಸಿದ್ದರೂ ಮಾನಸಿಕವಾಗಿ ಅವನನ್ನು ಗುರು ಎಂದು ಸ್ವೀಕರಿಸಿದ್ದರೂ ಏಕಲವ್ಯ ತನ್ನ ವಿದ್ಯೆಗೆ ಆಧಾರವಾದ ಹೆಬ್ಬೆರಳನ್ನೇ ಗುರುದಕ್ಷಿಣೆಯಾಗಿ ನೀಡಿದ; ತನ್ನನ್ನೇ ಗುರುವಿಗೆ ಆತ್ಮಾರ್ಪಣೆ ಮಾಡಿಕೊಂಡ.

ಎಂತಹ ನಯವಂಚನೆ! ಬ್ರಾಹ್ಮಣ ಗುರು, ಕ್ಷತ್ರಿಯ ಶಿಷ್ಯ ಸೇರಿ ಒಬ್ಬ ದಲಿತ ಹುಡುಗನಿಗೆ ವಿದ್ಯೆ ದೊರೆಯದಂತೆ ಎಚ್ಚರವಹಿಸಿದ್ದು ಸಾಲದೆ, ಅವನ ಸ್ವಂತ ಪ್ರಯತ್ನದಿಂದ ಕಲಿತ ವಿದ್ಯೆಯನ್ನೂ ಅಪಹರಿಸುವ ರೀತಿ ಅದ್ಭುತವಾದುದು; ಕೂದಲಿನ ಎಳೆಯಿಂದ ಕತ್ತು ಕುಯ್ಯುವಂಥದು. ಆದರೂ ದ್ರೋಣ ಏಕಲವ್ಯರ ಗುರುಶಿಷ್ಯ ಸಂಬಂಧ ಆದರ್ಶವೆಂದು ನಮ್ಮ ಪಂಡಿತರು ವ್ಯಾಖ್ಯಾನ ಮಾಡುತ್ತಾರೆ. ಕೆಳಜಾತಿಯವನಿಗೆ ವಿದ್ಯೆ ಕಲಿಸಬಾರದು. ಒಂದು ಪಕ್ಷ ಹೇಗೋ ಅವನು ವಿದ್ಯೆ ಕಲಿತರೆ ಅದನ್ನು ನಾಶಪಡಿಸುವ ಹಕ್ಕು ಗುರುವಿಗೆ ಇದೆ ಎಂಬುದೇ ಇಲ್ಲಿಯ ಆದರ್ಶವಿರಬೇಕು.

ಮಹಾಭಾರತದ ಈ ಕಥೆಯ ಮೇಲೆ ಸ್ವಲ್ಪ ಕ್ಷ-ಕಿರಣವನ್ನು ಬೀರಬೇಕಾಗಿದೆ. ಯಾವನೇ ಒಬ್ಬ ಶಿಷ್ಯ ತನ್ನನ್ನು ನಿರಾಕರಿಸಿದ ಗುರುವಿಗೆ ತನ್ನ ವಿದ್ಯೆಯ ಸಾಧನವಾದ ಹೆಬ್ಬೆರಳನ್ನು ದಕ್ಷಿಣೆ ಕೊಡಲು ಸಾಧ್ಯವೆ? ತನ್ನನ್ನು ನಿರಾಕರಿಸಿದ ಗುರುವಿಗೆ ಸವಾಲು ಹಾಕಿ ತನ್ನ ಸ್ವಯಂ ಶಿಸ್ತು ಮತ್ತು ಸಾಧನೆಯಿಂದ ಕಲಿತ ವಿದ್ಯೆಯನ್ನು ತನ್ನ ತಿರಸ್ಕಾರಕ್ಕೆ ಪಾತ್ರನಾದ ಗುರುವಿಗೆ ನೀಡಲು ಶಕ್ಯವಲ್ಲ. ಮೂಲದಲ್ಲಿ ಮನುಪ್ರಣೀತ ಧರ್ಮಾಚಾರ್ಯರು ಶೂದ್ರನ ವಿದ್ಯೆಯನ್ನು ಮೊಟಕುಗೊಳಿಸಲು ಅವನ ಹೆಬ್ಬೆರಳನ್ನು ಕತ್ತರಿಸಿರಬೇಕು. ಕಾಲಾನಂತರದಲ್ಲಿ ಶೂದ್ರರ ವಿಶ್ವಾಸವನ್ನು ಗಳಿಸಲು ಕತೆಯನ್ನು ತಿರುಚಿ ಗುರುದಕ್ಷಿಣೆಯ ಪ್ರಸಂಗವನ್ನು ಪ್ರಕ್ಷೇಪಗೊಳಿಸಿರಬೇಕು.



ಯಾವನೇ ಒಬ್ಬ ಶಿಷ್ಯ ತನ್ನನ್ನು ನಿರಾಕರಿಸಿದ ಗುರುವಿಗೆ ತನ್ನ ವಿದ್ಯೆಯ ಸಾಧನವಾದ ಹೆಬ್ಬೆರಳನ್ನು ದಕ್ಷಿಣೆ ಕೊಡಲು ಸಾಧ್ಯವೆ? ತನ್ನನ್ನು ನಿರಾಕರಿಸಿದ ಗುರುವಿಗೆ ಸವಾಲು ಹಾಕಿ ತನ್ನ ಸ್ವಯಂ ಶಿಸ್ತು ಮತ್ತು ಸಾಧನೆಯಿಂದ ಕಲಿತ ವಿದ್ಯೆಯನ್ನು ತನ್ನ ತಿರಸ್ಕಾರಕ್ಕೆ ಪಾತ್ರನಾದ ಗುರುವಿಗೆ ನೀಡಲು ಶಕ್ಯವಲ್ಲ. ಮೂಲದಲ್ಲಿ ಮನುಪ್ರಣೀತ ಧರ್ಮಾಚಾರ್ಯರು ಶೂದ್ರನ ವಿದ್ಯೆ ಯನ್ನು ಮೊಟಕುಗೊಳಿಸಲು ಅವನ ಹೆಬ್ಬೆರಳನ್ನು ಕತ್ತರಿಸಿರಬೇಕು. ಕಾಲಾನಂತರದಲ್ಲಿ ಶೂದ್ರರ ವಿಶ್ವಾಸವನ್ನು ಗಳಿಸಲು ಕತೆಯನ್ನು ತಿರುಚಿ ಗುರುದಕ್ಷಿಣೆಯ ಪ್ರಸಂಗವನ್ನು ಪ್ರಕ್ಷೇಪಗೊಳಿಸಿರಬೇಕು.

ಮಹಾಭಾರತ ಪ್ರತಿಪಾದಿಸುವ ನಯವಂಚನೆಯ ಈ ಮೌಲ್ಯ ಅಪ್ರಜ್ಞಾಪೂರ್ವಕವಾಗಿ ಭಾರತೀಯ ಸಂಸ್ಕೃತಿಯಲ್ಲಿ ಇಂದಿಗೂ ಉಳಿದುಬಂದಿದೆ. ಇಂದು ಭಾರತ ಸರ್ಕಾರ ಅತ್ಯುತ್ತಮ ಕ್ರೀಡಾಪಟುವಿಗೆ ನೀಡುವ ರಾಷ್ಟ್ರೀಯ ಪ್ರಶಸ್ತಿಯನ್ನು ಅರ್ಜುನ ಪ್ರಶಸ್ತಿ ಎಂದು ನಾಮಕರಣ ಮಾಡಿದೆ. ಅತ್ಯುತ್ತಮ ಕೋಚ್‌ಗೆ ನೀಡುವ ಪ್ರಶಸ್ತಿಯನ್ನು ದ್ರೋಣ ಪ್ರಶಸ್ತಿ ಎಂದು ನಾಮಕರಣ ಮಾಡಿದೆ. ಈ ಹೆಸರುಗಳೇ ಹೇಳುತ್ತವೆ ನಾವು ಯಾವ ಬಗೆಯ ಕ್ರೀಡಾ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಿದ್ದೇವೆ ಎಂಬುದನ್ನು.

ಮೀಸಲಾತಿ : ಮೀಸಲಾತಿ ಪದ್ಧತಿಯ ವಿರುದ್ಧ ಅಲ್ಲಲ್ಲಿ ಟೀಕೆಗಳು ಕೇಳಿ ಬರುತ್ತಿವೆ. ಟೀಕಾಕಾರರು ಸಾಮಾನ್ಯವಾಗಿ ಮುಂದಿಡುವ ವಾದಗಳು ಎರಡು; ಒಂದು, ಮೀಸಲಾತಿಯಿಂದ ಪ್ರತಿಭೆಗೆ ಮನ್ನಣೆ ಸಿಗದೆ ಪ್ರತಿಭಾವಂತರಿಗೆ ಅನ್ಯಾಯವಾಗುತ್ತದೆ ಎಂಬುದು. ಎರಡು; ಅದಕ್ಷತೆ ಹೆಚ್ಚಿ ದೇಶದ ಪ್ರಗತಿ ಕಲ್ಪನೆಯಲ್ಲಿ ಪ್ರತಿಭೆ ಎಂಬುದು ಪರೀಕ್ಷೆಯಲ್ಲಿ ಗಳಿಸುವ ಅಂಕಗಳ ಮಟ್ಟವನ್ನು ಮೀರಿ ಮುಂದೆ ಹೋಗುವುದಿಲ್ಲ.

ಅವರಿಗೆ ಪಟ್ಟಣದಲ್ಲಿ ಹುಟ್ಟಿ ಬೆಳೆದು ಮನೆ ಶಾಲೆ ಕಾಲೇಜುಗಳ ನಡುವೆ ಲಾಳಿ ಹಾಕುತ್ತಾ ಪಠ್ಯ ಮತ್ತು ನೋಟ್ಸ್‌ಗಳ ಹುಳುವಾಗಿ ಶೇ. 90-95 ಅಂಕಗಳಿಸುವ ವಿದ್ಯಾರ್ಥಿ ಹಳ್ಳಿಗಾಡಿನಲ್ಲಿ ಹುಟ್ಟಿ ತಂದೆ ತಾಯಿಯರೊಡನೆ ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಾ ಶಿಕ್ಷಕರೆಂಬುವರು ಇದ್ದಾರೋ ಇಲ್ಲವೊ ಎಂಬಂತಹ ಕೊಳಕು ಶಾಲೆಗಳಲ್ಲಿ ಕಲಿತು ಶೇ. 60-65 ಅಂಕಗಳನ್ನು ಗಳಿಸುವ ವಿದ್ಯಾರ್ಥಿಗಿಂತ ಪ್ರತಿಭಾವಂತನಾಗಿ ಕಾಣುತ್ತಾನೆ.

ಮುಂದೆ ಒಂದು ದಿನ ಈ ಪ್ರತಿಭಾವಂತ ಅಧಿಕಾರಿಯಾಗಿ ಯಾರ ಸೇವೆ ಮಾಡಲು ಸನ್ನದ್ಧನಾಗುತ್ತಾನೋ ಅವರ ಪರಿಸರದ ಪರಿಚಯವಾಗಲಿ, ಅವರ ಕಷ್ಟಸುಖಗಳ ಪರಿವೆಯಾಗಲಿ ಆತನಿಗಿರುವುದಿರಲಿ, ಅವರೂ ತನ್ನ ಹಾಗೆ ಮಾನವರು, ಅವರನ್ನು ತನ್ನ ಸ್ಥಿತಿಗೆ ತರಲು ಶ್ರಮಿಸಬೇಕಾದುದು ತನ್ನ ಕರ್ತವ್ಯ ಎಂಬ ಕಳಕಳಿಯಾಗಲಿ, ಅವರೊಡನೆ ಏಕಾತ್ಮತೆಯ ಭಾವವಾಗಲಿ ಆತನಿಗಿರುವುದಿಲ್ಲ. ಆತನ ದೃಷ್ಟಿಯಲ್ಲಿ ಜನ ಎಂದರೆ ತಾನು ಸವಾರಿ ಮಾಡಲು ತಕ್ಕವರು, ಜಾಣ್ಮೆ ಎಂದರೆ ನಯ ನಾಜೂಕಿನಿಂದ ತುಪ್ಪಟ ಸುಲಿಯುವ ಕಲೆ.

ಇನ್ನು ಈ ಪ್ರತಿಭಾವಂತರ ದಕ್ಷತೆಯನ್ನು ಕುರಿತು ಸ್ವಲ್ಪ ವಿಚಾರ ಮಾಡೋಣ. ಪ್ರತಿಭೆ ಇಲ್ಲದವರಿಗೆ ಉನ್ನತ ಸ್ಥಾನಗಳನ್ನು ನೀಡಿದರೆ ಅದಕ್ಷತೆ ಹೆಚ್ಚಿ ದೇಶ ಅಧೋಗತಿಯತ್ತ ಸಾಗುತ್ತದೆಂಬ ಕೂಗು ಈ ವಲಯದಲ್ಲಿ ಮುಂಜಾನೆಯಿಂದ ಸಂಜೆಯವರೆಗೆ ಪ್ರತಿಧ್ವನಿಸುತ್ತಲೇ ಇರುತ್ತದೆ. ಯಾವುದೇ ಕಛೇರಿಯಲ್ಲಿ ಏನೋ ಒಂದು ಪ್ರಮಾದವಾದರೆ ಅದಕ್ಕೆ ಕಾರಣ ಮೀಸಲಾತಿಯಿಂದ ನೇಮಕವಾದ ಬಡಪಾಯಿ ಎಂದು ಅವನ ಬೆನ್ನಹಿಂದೆ ಪಿಸುಮಾತಿನ ಸುತ್ತೋಲೆ ಸಂಚರಿಸುತ್ತಿರುತ್ತದೆ. ಕಛೇರಿಯಲ್ಲಿ ಅನೇಕರು ಕಷ್ಟಪಟ್ಟು ಒಂದು ಒಳ್ಳೆಯ ಕೆಲಸ ಸಾಧಿಸಿದ್ದರೆ ಅದೆಲ್ಲಾ ಪ್ರತಿಭೆಯಿಂದ ನೇಮಕಗೊಂಡವನ ಲೆಕ್ಕಕ್ಕೆ ಜಮಾ ಆಗುತ್ತದೆ.

ದಕ್ಷತೆಯ ಮಾನದಂಡವನ್ನು ಮುಂದಿಟ್ಟುಕೊಂಡು ವಾದ ಮಾಡುವ ಪ್ರತಿಭಾವಂತ ಮಿತ್ರರಿಗೆ ಒಂದು ಪ್ರಶ್ನೆ. ನಮ್ಮ ದೇಶ ಕಳೆದ ನಾಲ್ಕೈದು ಸಾವಿರ ವರ್ಷಗಳ ಇತಿಹಾಸದಲ್ಲಿ ಎಲ್ಲ ಉನ್ನತ ಸ್ಥಾನಗಳೂ ಪ್ರತಿಭಾವಂತರಿಗೇ ಮೀಸಲಾಗಿದ್ದುದಲ್ಲಾ, ಆದರೂ ಈ ದೇಶ ಏಕೆ ಮೌಢ್ಯ, ಅಜ್ಞಾನ ಮತ್ತು ಬಡತನಗಳಿಗೆ ತವರಾಯಿತು? ಏಕೆ ಈ ದೇಶದ ಜನರಲ್ಲಿ ದೇಶಾಭಿಮಾನ, ಒಗ್ಗಟ್ಟುಗಳಿಲ್ಲದೆ ಮೇಲಿಂದ ಮೇಲೆ ಪರಕೀಯರ ದಾಳಿಗೆ ತುತ್ತಾಗ ಬೇಕಾಯಿತು?

ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಅಷ್ಟೇನೂ ಕಷ್ಟವಲ್ಲ. ಮೊಟ್ಟ ಮೊದಲನೆಯದಾಗಿ ನಮ್ಮ ದೇಶದಲ್ಲಿ ಶ್ರಮ ವಿಭಜನೆಯ ತತ್ವವನ್ನು ತಪ್ಪು ತಳಹದಿಯ ಮೇಲೆ ನಿಲ್ಲಿಸಲಾಯಿತು. ಜ್ಞಾನವೆಂಬುದು ಕೇವಲ ಬುದ್ಧಿಯ

ಕೆಲಸ ಎಂದು ಭಾವಿಸಿ ದುಡಿಯುವ ಕೈಗಳಿಂದ ಅದನ್ನು ಬೇರ್ಪಡಿಸಲಾಯಿತು. ವಾಸ್ತವವಾಗಿ ಬುದ್ಧಿಪೂರ್ವಕವಾದ ದುಡಿಮೆಯಿಂದ, ಅಂದರೆ ಪ್ರಯೋಗಗಳಿಂದ ಜ್ಞಾನ ಬೆಳೆಯುತ್ತದೆ. ಒಬ್ಬ ರೈತ ಒಂದು ಬೆಳೆಯನ್ನು ಯಶಸ್ವಿಯಾಗಿ ಬೆಳೆಯಬೇಕಾದರೆ ಯಾವ ಬೀಜವನ್ನು ಆರಿಸಿಕೊಳ್ಳಬೇಕು. ಯಾವ ಭೂಮಿಯಲ್ಲಿ ಯಾವ ಋತುಮಾನದಲ್ಲಿ ಬಿತ್ತಿ ಎಷ್ಟು ನೀರು, ಎಂತಹ ಗೊಬ್ಬರವನ್ನು ಯಾವ ಕಾಲದಲ್ಲಿ ನೀಡಬೇಕು ಎಂದು ಸತತವಾಗಿ ಪ್ರಯೋಗ ಮಾಡುತ್ತಾ ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾನೆ. ಹೀಗೆಯೇ ಪ್ರತಿಯೊಂದು ಶಾಖೆಯ ಜ್ಞಾನವೂ ದೈಹಿಕ ಪರಿಶ್ರಮದಿಂದ ಬೆಳೆಯುತ್ತದೆ.

ಪ್ರಪಂಚದ ಉಳಿದೆಡೆಗಳಲ್ಲಿ ಅದು ಬೆಳೆದುದು ಹಾಗೆ. ಆದರೆ ನಮ್ಮ ಪವಿತ್ರ ಭಾರತದಲ್ಲಿ ದೈಹಿಕ ಶ್ರಮ ಪಾಪಿಗಳಿಗೆ ಮಾತ್ರ ಮೀಸಲಾದ ಕೆಲಸ ಎಂದು ಬೋಧಿಸ ಲಾಯಿತು. ನಶ್ವರವಾದ ಜಗತ್ತು ಮೆದುಳು ಚಿಂತಿಸಬೇಕಾ ಗಿಲ್ಲ, ಶಾಶ್ವತವಾದ ಆತ್ಮ ಮತ್ತು ಮಾನವನ ಪರಮೋನ್ನತ ಗುರಿಯಾದ ಮೋಕ್ಷವನ್ನು ಕುರಿತು ಚಿಂತಿಸುವುದೇ ಬುದ್ಧಿವಂತರ ಕೆಲಸ ಎಂದು ಭಾವಿಸಲಾಯಿತು. ಬುದ್ಧಿಯನ್ನು ದುಡಿಮೆಯಿಂದ ಯಾವಾಗ ಬೇರ್ಪಡಿಸಲಾಯಿತೋ ಆಗಲೇ ಅತ್ತ ಬುದ್ಧಿಯೂ, ಇತ್ತ ದುಡಿಮೆಯೂ ತಮ್ಮ ಸತ್ವವನ್ನು ಕಳೆದುಕೊಂಡು ದುರ್ಬಲವಾದುವು.

ಬೇರೆ ಬೇರೆ ವೃತ್ತಿಗಳನ್ನು ಅವಲಂಬಸಿರುವವರು ಎಲ್ಲ ಸಮಾಜಗಳಲ್ಲೂ ಇರುತ್ತಾರೆ. ಕುಂಬಾರ, ಬಡಗಿ, ಶಿಲ್ಪಿ ರೈತ, ಶಿಕ್ಷಕ, ವೈದ್ಯ, ಅಗಸ, ಕ್ಷೌರಿಕ ಇತ್ಯಾದಿ ಕಸುಬುದಾರರಿಲ್ಲದ ಸಮಾಜ ಯಾವ ದೇಶದಲ್ಲಿದೆ? ಆದರೆ ಕಸುಬುಗಳು ಜಾತಿಗಳಾಗಿ ಮಾರ್ಪಟ್ಟಿರುವುದೇ ತಮ್ಮ ದೇಶದ ಒಂದು ವಿಶೇಷ. ಇಂತಹ ಕಸುಬು ಇಂತಹ ಜಾತಿಯವರಿಗೆ ಮೀಸಲು-ಎಂದು ಯಾವಾಗ ರೂಢಿಗೆ ಬಂತೋ ಆಗಿನಿಂದಲೇ ನಮ್ಮ ದೇಶದಲ್ಲಿ ಮೀಸಲಾತಿ ಪದ್ಧತಿ ಜಾರಿಗೆ ಬಂತು. ಆದ್ದರಿಂದ ಇಂತಹ ಕಸುಬು ಇಂತಹ ಜಾತಿಗೆ ಮೀಸಲು ಎಂದು ಶಾಸನ ಮಾಡಿದ ಮನುವೇ ಮುಂತಾದ ಸ್ಮೃತಿಕಾರರನ್ನು ಮೀಸಲಾತಿಯ ಜನಕರೆಂದು ಕರೆಯಬಹುದು.

ಆದು ಮನುವೇ ಮೊದಲಾದ ಧರ್ಮಶಾಸ್ತ್ರಕಾರರು ಕಸುಬುಗಳನ್ನು ಜಾತಿಗಳನ್ನಾಗಿ ರೂಪಾಂತರಿಸಿ ಒಂದು ಜಾತಿ ಇನ್ನೊಂದಕ್ಕಿಂತ ಕಡಿಮೆ ಎಂದು ಒಂದು ಶ್ರೇಣೀಕೃತ ಸಮಾಜವನ್ನು ನಿರ್ಮಿಸದಿದ್ದರೆ ಇಂದು ಅಂಬೇಡ್ಕರ್ ಅಥವಾ ಇನ್ನೊಬ್ಬರು ಆ ಅಸಮಾನತೆಯನ್ನು ತೊಡೆದು ಹಾಕಲು 'ಪರಿಹಾರ ರೂಪದ ತಾರತಮ್ಯ' (Compensatory discrimination) ತತ್ವಕ್ಕೆ ಶರಣಾಗಬೇಕಾಗಿರಲಿಲ್ಲ. ಸಂವಿಧಾನದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯ ವಿಶೇಷ ಸೌಲಭ್ಯವನ್ನೂ ಒದಗಿಸುವ ಅಗತ್ಯವಿರಲಿಲ್ಲ.

ಸಾವಿರಾರು ವರ್ಷಗಳ ಬೋಧನೆ ಮತ್ತು ಅನುಸರಣೆಯಿಂದ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿರುವ ಈ ತಾರತಮ್ಯವನ್ನು ಕಳೆದ ಐವತ್ತು ವರ್ಷಗಳಲ್ಲಿ ಪೂರ್ಣ ಅಳಿಸಿ ಹಾಕುವುದಿರಲಿ, ಆ ಕೆಲಸದ ಬಾಹುಳ್ಯವನ್ನೂ ಸಹ ಪೂರ್ಣವಾಗಿ ಅಂದಾಜು ಮಾಡಲಾಗಿಲ್ಲ.

ಸಂವಿಧಾನದ 15(4) ಮತ್ತು 16(4) ವಿಧಿಗಳಲ್ಲಿ ಪರಿಶಿಷ್ಟಜಾತಿ ಮತ್ತು ಬುಡಕಟ್ಟುಗಳು ಹಾಗೂ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಸರ್ಕಾರಿ ಸೇವೆಗಳಲ್ಲಿ ವಿಶೇಷ ಸೌಲಭ್ಯಗಳನ್ನು ಒದಗಿಸುವ ಅವಕಾಶ ಕಲ್ಪಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳನ್ನು ಸ್ವಾತಂತ್ರ್ಯಕ್ಕೆ ಮೊದಲೇ ಬ್ರಿಟಿಷರು ಗುರುತಿಸಿ ಪಟ್ಟಿಮಾಡಿದ್ದರು. ಆದರೆ ಅವುಗಳಲ್ಲೇ ಕೆಲವು ಅತ್ಯಂತ ಹಿಂದುಳಿದ ಗುಂಪುಗಳಿರುವುದು ಇತ್ತೀಚೆಗೆ ಬೆಳಕಿಗೆ ಬಂದಿದೆ. ಇತರ ಹಿಂದುಳಿದ ವರ್ಗಗಳನ್ನು ಗುರುತಿಸುವ ಕೆಲಸವೇ ಇನ್ನೂ ಪೂರ್ಣವಾಗಿಲ್ಲ. ವಾಸ್ತವವಾಗಿ ಕೆಲವು ಹಿಂದುಳಿದ ವರ್ಗಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ಜನರಿಗಿಂತ ಯಾವ ರೀತಿಯಿಂದಲೂ ಉತ್ತಮವಾಗಿಲ್ಲ. ಉದಾಹರಣೆಗೆ ಅಗಸ, ಕ್ಷೌರಿಕ, ಕುಂಬಾರ, ನೇಕಾರ ಇತ್ಯಾದಿ ಜನರ ಸ್ಥಿತಿ ಪರಿಶಿಷ್ಟ ಜಾತಿಯವರಷ್ಟೇ ಚಿಂತಾಜನಕವಾಗಿದೆ.

ಸಂವಿಧಾನದ 15(4) ಮತ್ತು 16(4) ವಿಧಿಗಳಲ್ಲಿ ಪರಿಶಿಷ್ಟಜಾತಿ ಮತ್ತು ಬುಡಕಟ್ಟುಗಳು ಹಾಗೂ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಸರ್ಕಾರಿ ಸೇವೆಗಳಲ್ಲಿ ವಿಶೇಷ ಸೌಲಭ್ಯಗಳನ್ನು ಒದಗಿಸುವ ಅವಕಾಶ ಕಲ್ಪಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳನ್ನು ಸ್ವಾತಂತ್ರ್ಯಕ್ಕೆ ಮೊದಲೇ ಬ್ರಿಟಿಷರು ಗುರುತಿಸಿ ಪಟ್ಟಿಮಾಡಿದ್ದರು. ಆದರೆ ಅವುಗಳಲ್ಲೇ ಕೆಲವು ಅತ್ಯಂತ ಹಿಂದುಳಿದ ಗುಂಪುಗಳಿರುವುದು ಇತ್ತೀಚೆಗೆ ಬೆಳಕಿಗೆ ಬಂದಿದೆ. ಇತರ ಹಿಂದುಳಿದ ವರ್ಗಗಳನ್ನು ಗುರುತಿಸುವ ಕೆಲಸವೇ ಇನ್ನೂ ಪೂರ್ಣವಾಗಿಲ್ಲ. ವಾಸ್ತವವಾಗಿ ಕೆಲವು ಹಿಂದುಳಿದ ವರ್ಗಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ಜನರಿಗಿಂತ ಯಾವ ರೀತಿಯಿಂದಲೂ ಉತ್ತಮವಾಗಿಲ್ಲ. ಉದಾಹರಣೆಗೆ ಅಗಸ, ಕ್ಷೌರಿಕ, ಕುಂಬಾರ, ನೇಕಾರ ಇತ್ಯಾದಿ ಜನರ ಸ್ಥಿತಿ ಪರಿಶಿಷ್ಟ ಜಾತಿಯವರಷ್ಟೇ ಚಿಂತಾಜನಕವಾಗಿದೆ.

ಸ್ವಾತಂತ್ರ್ಯಾನಂತರ ಅವರ ಸ್ಥಿತಿಗತಿಗಳನ್ನು ಗುರುತಿಸಲು ಮಾಹಿತಿ ಸಹ ನಮಗೆ ಸಿಗದಂತಾಗಿದೆ. ಯಾವ ಯಾವ ಜಾತಿಗಳಲ್ಲಿ ಎಸ್ಸೆಸ್ಸೆಲ್ಸಿ ಪಾಸಾದವರೆಷ್ಟು, ಪದವೀಧರರೆಷ್ಟು, ಸರ್ಕಾರಿ ನೌಕರಿಯಲ್ಲಿರುವವರೆಷ್ಟು ಇತ್ಯಾದಿ ಮಾಹಿತಿ 1941ರವರೆಗೂ ಜನಗಣತಿಯಲ್ಲಿ ಸಿಗುತ್ತಿತ್ತು. ಸ್ವಾತಂತ್ರ್ಯಾನಂತರ ನಯವಾಗಿ ಜಾತಿಯ ಅಂಕಿ ಸಂಖ್ಯೆಗಳನ್ನು ಕೈಬಿಡಲಾಗಿದೆ. ನ್ಯಾಯಾಲಯಗಳು ಸಹಾ ಒಂದು ವರ್ಗದ ಹಿಂದುಳಿದಿರುವಿಕೆಯನ್ನು ಗುರುತಿಸಲು ಇತರ ಆಧಾರಗಳ ಜೊತೆಗೆ, ಜಾತಿ ಒಂದು ಮುಖ್ಯ ಆಧಾರವಾಗಿದೆ ಎಂದು ಘೋಷಿಸಿದೆ. ಕಸುಬು, ವಾಸಸ್ಥಳ, ಆದಾಯ ಇತ್ಯಾದಿಗಳು ಇತರ ಆಧಾರಗಳು.

ಹೀಗಿದ್ದೂ ಜನಗಣತಿಯಲ್ಲಿ ಜಾತಿಯ ಅಂಕಣವನ್ನು ಬಿಟ್ಟಿದ್ದೇಕೆ ಎಂಬುದಕ್ಕೆ ಕೆಲವರು ನೀಡುವ ವಿವರಣೆ ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತಿದೆ. ನಮ್ಮ ದೇಶ 'ಸೆಕ್ಯೂಲರ್' ಅಂದರೆ 'ಜಾತ್ಯಾತೀತ' ಆದ್ದರಿಂದ ಜನಗಣತಿಯಲ್ಲಿ ಜಾತಿ ಅಂಕಣ ಬೇಡವಂತೆ! Secular ಎಂದರೆ 'ಧರ್ಮಾತೀತ'ವಾಗುತ್ತದೆಯೇ ಹೊರತು 'ಜಾತ್ಯಾತೀತ' ಎಂಬುದು ಸರಿಯಾದ ಅನುವಾದವಾಗುವುದಿಲ್ಲ. ವಾಸ್ತವಸಾಗಿ ಧರ್ಮಗಳಿಗೆ ಸಂಬಂಧಿಸಿದ ಎಲ್ಲ ಅಂಕಿಸಂಖ್ಯೆಗಳನ್ನೂ ಜನಗಣತಿಯಲ್ಲಿ ಸಂಗ್ರಹಿಸಲಾಗುತ್ತಿದೆ. ಸಂವಿಧಾನದಲ್ಲಿ ಹಿಂದುಳಿದ ವರ್ಗಗಳಿಗೆ ವಿಶೇಷ ಸೌಲಭ್ಯವನ್ನು ಕಲ್ಪಿಸುವ ಅಗತ್ಯವನ್ನು ಒತ್ತಿ ಹೇಳಿದ್ದರೂ ಅವನ್ನು ಗುರುತಿಸಲು ಅಗತ್ಯವಾದ ಜಾತಿವಾದ ಅಂಕಿಸಂಖ್ಯೆಗಳನ್ನು ಜನಗಣತಿಯಲ್ಲಿ ದಾಖಲು ಮಾಡುತ್ತಿಲ್ಲ.

ಕೆಲವು ಮೇಲ್ಜಾತಿಗಳು ಶಿಕ್ಷಣ ಮತ್ತು ಸರ್ಕಾರಿ ಸೇವೆಯಲ್ಲಿ ತಮ್ಮ ಸಂಖ್ಯಾಗಾತ್ರಕ್ಕೆ ಮೀರಿದ ಪ್ರಮಾಣದಲ್ಲಿ ಆಧಿಪತ್ಯ ವಹಿಸಿರುವುದನ್ನು ಮತ್ತು ಕೆಲವು ಸಂಖ್ಯಾಬಾಹುಳ್ಯದ ಜಾತಿಗಳಿಗೆ ಪ್ರಾತಿನಿಧ್ಯವೇ ಇಲ್ಲದಿರುವುದನ್ನು ಮುಚ್ಚಿಡುವ ಉದ್ದೇಶದಿಂದಲೇ ಹಾಗೆ ಮಾಡಲಾಗಿದೆ. ಹಾಗಲ್ಲದೆ ಮತ್ತಾವ ಘನ ಉದ್ದೇಶಕ್ಕಾಗಿ ಜಾತಿವಾರು ಮಾಹಿತಿಯನ್ನು ಕೈಬಿಡಲಾಗಿದೆ ಎಂಬುದನ್ನು ಯಾರಾದರೂ ತಿಳಿಸುತ್ತಾರೆಯೆ?

ಬ್ರಿಟೀಷರು ಜಾತಿವಾರು ಜನಗಣತಿಯನ್ನು ತೆಗೆದುಕೊಳ್ಳುತ್ತಿದ್ದುದರಿಂದಲೇ ನಮ್ಮ ಸಮಾಜದಲ್ಲಿ ಅಸಮಾನತೆ ಯಾವ ಪ್ರಮಾಣದಲ್ಲಿದೆ ಎಂಬುದು ಬೆಳಕಿಗೆ ಬಂದುದು. ಈಗಲೂ ಹಿಂದುಳಿದ ವರ್ಗಗಳ ಸಮಿತಿಗಳು 1941ರ ಜನಗಣತಿಯ ಜಾತಿವಾರು ಅಂಕಿ- ಸಂಖ್ಯೆಗಳನ್ನೆ ಮುಂದಕ್ಕೆ ಚಾಚಿ (Projection) ಈಗಿನ ಅಂಕಿ-ಸಂಖ್ಯೆಗಳನ್ನು ಅಂದಾಜು ಮಾಡುತ್ತಿವೆ. ಮುಂದಕ್ಕೆ

ಚಾಚಿ ಅಂದಾಜು ಮಾಡುವುದಕ್ಕಿಂತ ವಾಸ್ತವಿಕ ಅಂಕಿ-ಸಂಖ್ಯೆಗಳನ್ನೇ ಏಕೆ ಸಂಗ್ರಹಿಸಬಾರದು?

ದಕ್ಷತೆಯನ್ನು ಕುರಿತು ಇಷ್ಟು ವಿಸ್ತಾರವಾಗಿ ಹೇಳುವ ಉದ್ದೇಶವಿಷ್ಟೆ, ಒಂದು ದೇಶದ ಜನರಿಗೆ ನಮ್ಮ ದೇಶದ ಭವಿಷ್ಯದ ನಿರ್ಧಾರಗಳಲ್ಲಿ ಸಮಾನ ತಳಹದಿಯ ಸಹ ಭಾಗಿಗಳಾಗುವ ಅವಕಾಶ ಎಲ್ಲಿಯವರೆಗೆ ಇರುವುದಿಲ್ಲವೋ ಅಲ್ಲಿಯವರೆಗೆ ಆ ದೇಶದ ಏಳಿಗೆ ಕೇವಲ ಕನಸಿನ ಮಾತಾಗುತ್ತದೆ. ನಾವು ಬ್ರಿಟೀಷರ ವಿರುದ್ಧ ಹೋರಾಡಿ ಅವರಿಂದ ಸ್ವಾತಂತ್ರ್ಯ ಪಡೆದದ್ದಾರೂ ಏಕೆ? ಅವರಲ್ಲಿ ದಕ್ಷತೆಯ ಅಭಾವವಿತ್ತು ಎಂಬ ಕಾರಣಕ್ಕಾಗಿಯೇ? ಖಂಡಿತ ಅಲ್ಲ, ನಮ್ಮ ಆಗು ಹೋಗುಗಳನ್ನು ನಾವೇ ತೀರ್ಮಾನಿಸಿಕೊಳ್ಳಬೇಕು ಎಂಬ ಹಂಬಲದಿಂದ ನಾವು ಸ್ವಾತಂತ್ರ್ಯ ಬಯಸಿದೆವು.

ಸಾವಿರಾರು ವರ್ಷಗಳು ನಮ್ಮನ್ನು ಗುಲಾಮರನ್ನಾಗಿ ಮಾಡಿದ ಪ್ರತಿಭಾವಂತರ ದಕ್ಷತೆಯಾಗಲಿ, ನಮ್ಮನ್ನಾಳಿದ ಪರಕೀಯರ ದಕ್ಷತೆಯಾಗಲಿ ನಮ್ಮನ್ನು ಪ್ರಗತಿಯತ್ತ ಕೊಂಡೊಯ್ಯಲಿಲ್ಲ. ನಮ್ಮ ನಿಜವಾದ ಪ್ರಗತಿ ಸಮಾನತೆಯ ಪಾತಳಿಯ ಮೇಲೆ ನಿಂತ ನಮ್ಮೆಲ್ಲರ ಸಹ ಭಾಗಿತ್ವದಿಂದ ಮಾತ್ರ ಸಾಧ್ಯ. ಅದಕ್ಕಾಗಿಯೇ ನಾವು ಸಂಪತ್ತನ್ನು ದೋಚುವುದರಲ್ಲಿ ದಕ್ಷರಾದ ಬ್ರಿಟಿಷರಿಂದ ಬಿಡುಗಡೆ ಪಡೆದುದು. ಅದಕ್ಕಾಗಿಯೇ ನಾವು ದುಡಿಯುವ ಜನರನ್ನು ಎರಡನೆಯ ದರ್ಜೆಯ ಪ್ರಜೆಗಳನ್ನಾಗಿ ಕಂಡು, ಸದಾ ಅವರನ್ನು ಸುಲಿಯುವುದರಲ್ಲಿ ನಿಷ್ಣಾತರಾದ ಪ್ರತಿಭಾವಂತರಿಂದ ಬಿಡುಗಡೆ ಪಡೆಯಬೇಕಾಗಿರುವುದು.

1914ರಷ್ಟು ಹಿಂದೆಯೇ ಮೈಸೂರು ಸರ್ಕಾರದ ಸೇವೆಯಲ್ಲಿ ಹಿಂದುಳಿದ ವರ್ಗಗಳಿಗೆ ಪ್ರಾತಿನಿಧ್ಯವಿಲ್ಲದಿರುವುದನ್ನು ಗಮನಿಸಿ ಆ ಬಗ್ಗೆ ವರದಿ ಸಲ್ಲಿಸಲು ಆಗ ಮುಖ್ಯ ನ್ಯಾಯಾಧೀಶರಾಗಿದ್ದ ಸರ್ ಲೆಸ್ಲೀ ಮಿಲ್ಲರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. ಮಿಲ್ಲರ್ ವರದಿಯನ್ನು ಬ್ರಾಹ್ಮಣ ವರ್ಗ ಹೊರತುಪಡಿಸಿ ಉಳಿದವರೆಲ್ಲಾ ಸ್ವಾಗತಿಸಿದರು. ಆಗ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯ ಅವರು ಆ ವರದಿಯನ್ನು ವಿರೋಧಿಸಿ ತಮ್ಮ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿದರು. ಸ್ವಾತಂತ್ರ್ಯ ನಂತರ ಕರ್ನಾಟಕದಲ್ಲಿ ಡಾ.ಆರ್.ನಾಗನ ಗೌಡ ಸಮಿತಿ (1960), ಎಲ್.ಜಿ.ಹಾವನೂರು ಆಯೋಗ (1972), ಟಿ. ವೆಂಕಟಸ್ವಾಮಿ ಆಯೋಗ (1983), ಓ.ಚಿನ್ನಪ್ಪ ರೆಡ್ಡಿ ಆಯೋಗ (1988) ಮತ್ತು ಪ್ರೊ. ರವಿವರ್ಮಕುಮಾರ್ ಆಯೋಗ ಇತ್ಯಾದಿ ಆಯೋಗಗಳು ವರದಿಗಳನ್ನು ಸಲ್ಲಿಸಿವೆ.

(ಮುಂದಿನ ಸಂಚಿಕೆಯಲ್ಲಿ:
ಸಾಮಾಜಿಕ ನ್ಯಾಯ, ಸಮಾನತೆ, ಆರ್ಥಿಕ ಹಕ್ಕು ಇತ್ಯಾದಿ)

ಸಂ

ಸಂವಾದ

ಚಂದಾ ವಿವರ

'ಸಂವಾದ' ಚಂದಾ ದರವನ್ನು ಅಕ್ಟೋಬರ್ 2003ರಿಂದ ಅನ್ವಯಿಸುವಂತೆ ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ. ಚಂದಾ ವಿಶೇಷಾಂಕಗಳನ್ನು ಒಳಗೊಂಡಿರುತ್ತದೆ.

ಬಿಡಿ ಪ್ರತಿ ರೂ. 20/-	ಒಂದು ವರ್ಷಕ್ಕೆ	ಮೂರು ವರ್ಷಕ್ಕೆ	ಐದು ವರ್ಷಕ್ಕೆ
1. ವಿದ್ಯಾರ್ಥಿಗಳು ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರಿಗೆ	ರೂ. 100/-	ರೂ. 300/-	ರೂ. 500/-
2. ನೌಕರರು ಮತ್ತು ಇತರೆ ವೃತ್ತಿಪರರಿಗೆ	ರೂ. 200/-	ರೂ. 500/-	ರೂ. 800/-
3. ಸಂಘ-ಸಂಸ್ಥೆಗಳು, ಅಧಿಕಾರಿಗಳು ಹಾಗೂ ಉದ್ಯಮಿಗಳಿಗೆ	ರೂ. 240/-	ರೂ. 600/-	ರೂ. 1000/-
4. ವಿಶೇಷ ಹಿತೈಷಿ ಚಂದಾದಾರರಿಗೆ	ರೂ. 500/-	ರೂ. 1500/-	ರೂ. 2500/-

ಅಜೀವ ಚಂದಾ ರೂ. 5,000/- (ಒಂದು ಬಾರಿ ನೀಡಿಕೆ)
ಪೋಷಕ ಚಂದಾ ರೂ.10,000/- (ಒಂದು ಬಾರಿ ನೀಡಿಕೆ)

ವಿ.ಸೂ.: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಅಂಚೆ ಮೂಲಕ ನೇರವಾಗಿ ಚಂದಾ ಕಳಿಸುವವರು ಎಂ.ಓ ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಎಂ. ಓ ಅಥವಾ ಡಿ.ಡಿ.ಯನ್ನು **'ಸಂಪಾದಕರು, ಸಂವಾದ'** ಹೆಸರಿಗೆ ಮಾತ್ರ ಕಳುಹಿಸಬೇಕು. ಯಾವುದೇ ಕಾರಣಕ್ಕೂ ವೈಯಕ್ತಿಕ ಹೆಸರಿನಲ್ಲಿ ಕಳುಹಿಸಬಾರದು.

ಚಂದಾ ಕಳುಹಿಸಬೇಕಾದ ವಿಳಾಸ:
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - **560 091**

ಚಂದಾದಾರರಲ್ಲಿ ಮನವಿ

'ಸಂವಾದ'ವನ್ನು ಪ್ರತಿ ತಿಂಗಳ 13ರಂದು ಅಂಚೆಗೆ ಹಾಕಲಾಗುತ್ತದೆ. ಎಷ್ಟೇ ತಡವಾದರೂ ಆಯಾ ತಿಂಗಳ 20ನೇ ತಾರೀಖಿನ ಒಳಗೆ ಅದು ತಮಗೆ ತಲುಪುತ್ತದೆ. ಹಾಗೇನಾದರೂ 20ರ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ-ಸಾಧ್ಯವಾದರೆ ಪತ್ರಿಕೆ ತಲುಪದಿರುವ ಬಗೆಗೆ ಲಿಖಿತ ದೂರು ನೀಡಿ, ಪ್ರತಿಯೊಂದನ್ನು ನಮಗೆ ಕಳುಹಿಸಿ. ಅದರ ಆಧಾರದ ಮೇಲೆ ಇಲ್ಲಿನ ಅಂಚೆ ಕಚೇರಿಯಲ್ಲಿ ನಾವು ವಿಚಾರಿಸಿ, ಪತ್ರಿಕೆ ಸಕಾಲಕ್ಕೆ ತಲುಪುವಂತೆ ವ್ಯವಸ್ಥೆ ಮಾಡುತ್ತೇವೆ.

\- ಸಂಪಾದಕ

ಬೌದ್ಧಧರ್ಮ ಸ್ವೀಕಾರ ಸಮಾವೇಶ :

ದಲಿತ ಸಂಘಟನೆಗಳ ಮರು ಏಕೀಕರಣ ?

ಕಳೆದ ಅಕ್ಟೋಬರ್ 14ರಂದು ಬೆಂಗಳೂರಿನಲ್ಲಿ ನಡೆದ 'ಬೌದ್ಧಧರ್ಮ ಸ್ವೀಕಾರ ಸಮಾವೇಶ'ದಲ್ಲಿ ದಲಿತರು ಬೃಹತ್ ಸಂಖ್ಯೆಯಲ್ಲಿ ಧರ್ಮಾಂತರ ಮಾಡಿದ ಸನ್ನಿವೇಶ ಕರ್ನಾಟಕದ ದಲಿತ ಚಳುವಳಿಯ ಮುಖ್ಯ ಘಟ್ಟವೊಂದನ್ನು ಸೂಚಿಸುವಂತಿದೆ. ಅಸ್ಪೃಶ್ಯತೆಯಿಂದ ಪಾರಾಗಲು ಅಂಬೇಡ್ಕರ್ ಸೂಚಿಸಿದ ಅಂತಿಮ ಪರಿಹಾರ ಕುರಿತು ಎಲ್ಲ ದಲಿತ ಸಂಘಟನೆಗಳ ನಾಯಕರೂ ಸಮಾವೇಶದ ಮೂಲಕ ಒಟ್ಟಾಗಿ ಯೋಚಿಸಿದರು ಎಂಬ ಕಾರಣಕ್ಕಾಗಿಯೇ ಇದು ಮಹತ್ವದ ಘಟ್ಟ. ಆದ್ದರಿಂದಲೇ ಈ ಸಮಾವೇಶವನ್ನು ಕರ್ನಾಟಕ ಈಚೆಗೆ ಕಂಡ ಬಹುದೊಡ್ಡ ರಾಜಕೀಯ-ಧಾರ್ಮಿಕ ಘಟನೆಯನ್ನಾಗಿ ನೋಡಬೇಕು. ಹಾಗೆಯೇ ಇದನ್ನು ದಲಿತ ಸಂಘಟನೆಗಳು ಮರು ಏಕೀಕರಣದತ್ತ ಇಟ್ಟ ದೊಡ್ಡ ನಡಿಗೆಯೆಂಬಂತೆಯೂ ನೋಡಬೇಕು. ಪರಸ್ಪರ ಮಾತುಕತೆ ಕೂಡ ಇಲ್ಲದ ಸ್ಥಿತಿ ತಲುಪಿರಬಹುದಾದ ನಾಯಕರು ಅವತ್ತು ಸಮಾರಂಭದ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರು. ಈ ದೃಶ್ಯ ಕಂಡ ನಾನು, 'ಬೌದ್ಧಧರ್ಮಕ್ಕೆ ನಡೆದಿರುವ ಮತಾಂತರಕ್ಕಿಂತ, ದಲಿತ ನಾಯಕರು ತಮ್ಮ ಹಳೆಯ ಗೆಳೆತನಗಳಿಗೆ ಮರಳಿರುವುದೇ ನಿಜವಾಗಿ ಮತಾಂತರ' ಎಂದು ಮಿತ್ರರಿಗೆ ತಮಾಷೆಯಾಗಿ ಹೇಳಿದೆ. ಈ ತಮಾಷೆಯಲ್ಲಿದ್ದ ಅರ್ಧ ಸತ್ಯವನ್ನು ಕಾರ್ಯಕ್ರಮದ ಸಂಘಟಕರಲ್ಲೊಬ್ಬರಾದ ಮಾವಳ್ಳಿ ಶಂಕರ್ ನಗುತ್ತಲೇ ಒಪ್ಪಿದಂತಿತ್ತು.

ದಲಿತ ಸಂಘಟನೆಗಳು ಕವಲಾದ ಕೆಲವು ವರ್ಷಗಳ ನಂತರ ನಡೆದಿರುವ ಈ ಧರ್ಮಸ್ವೀಕಾರ ಸಮಾವೇಶಕ್ಕೆ ಕಂಡುಬಂದ ಜನಬೆಂಬಲವನ್ನು ಈಚೆಗೆ ಎಲ್ಲ ದಲಿತ ಸಂಘಟನೆಗಳಿಗೂ ಜನಬೆಂಬಲ ಹೆಚ್ಚುತ್ತಿರುವುದರ ಹಿನ್ನೆಲೆಯಲ್ಲೂ ನೋಡಬೇಕು. ಈಚೆಗೆ ವಿವಿಧ ದಲಿತ ಸಂಘರ್ಷ ಸಮಿತಿಗಳ ಸಭೆಯಲ್ಲಿ ನಾನೇ ಖುದ್ದು ಗಮನಿಸಿರುವಂತೆ ನೂರಾರು ಹೊಸ ಮುಖಗಳು ಕಾಣತೊಡಗಿವೆ. ಒಂದು ಸಂಘಟನೆಯ ಸಭೆಯಲ್ಲಿದ್ದ ಜನರಿಗಿಂತ ಇನ್ನೊಂದು ಸಂಘಟನೆಯ ಸಭೆಯಲ್ಲಿರುವ ಜನ ಬೇರೆಯವರೇ ಆಗಿರುವಂತೆ ಕೂಡ ಕಾಣುತ್ತಿದೆ. ಇನ್ನೊಂದು ವಿಶೇಷವೆಂದರೆ, ಈ ಎಲ್ಲ ಸಭೆಗಳಲ್ಲಿ ಸಭಾಂಗಣಗಳು ತುಂಬಿರುತ್ತವೆ. ಇದರ ಅರ್ಥವೇನು? ಸಂಘಟನೆಗಳು ಒಡೆದ ನಂತರ ಜನರನ್ನು ಸಂಘಟಿಸುವುದನ್ನು ದೊಡ್ಡ ಸವಾಲಾಗಿ ತೆಗೆದುಕೊಂಡಿರುವ ನಾಯಕರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರನ್ನು, ಅನುಯಾಯಿಗಳನ್ನು ರೂಪಿಸುತ್ತಿದ್ದಾರೆ ಎಂಬುದೇ ಇದರ ಅರ್ಥ. ಜೊತೆಗೆ, ಈಚೆಗೆ ಕಾರ್ಯಕರ್ತರಿಗಾಗಿ ಹೆಚ್ಚು ಹೆಚ್ಚು ಶಿಬಿರಗಳು ನಡೆಯುತ್ತಿರುವುದು ಕೂಡ ಹೊಸ ಸಿದ್ಧತೆಯ ಕಾತುರವನ್ನು ಸೂಚಿಸುವಂತಿದೆ.

ಸಂಘಟನೆಗಳು ಒಡೆದಿದ್ದರಿಂದ ಇಷ್ಟೆಲ್ಲ ಲಾಭವಾಯಿತು ಎಂಬ ಧಾಟಿಯಲ್ಲಿ ಈ ಮಾತುಗಳನ್ನು ನಾನು ಹೇಳುತ್ತಿಲ್ಲ. ಬದಲಿಗೆ, ಅವು ಒಡೆದ ನಂತರದ ಬೆಳವಣಿಗೆಗಳನ್ನು ಸಾಧ್ಯವಾದಷ್ಟೂ ವಸ್ತುನಿಷ್ಠವಾಗಿ ನೋಡಲೆತ್ನಿಸುತ್ತಿರುವೆ. ದಲಿತ ಸಂಘಟನೆಗಳ ನಾಯಕರು ಕವಲಾದ ನಂತರ ಅವರಿಗೆ ಎದುರಾದ ಸವಾಲು, ಕೆಚ್ಚು ವಿಷಾದ, ತಮ್ಮ ಸಂಘಟನಾ ಸಾಮರ್ಥ್ಯವನ್ನು ಒರೆಗೆ ಹಚ್ಚಬೇಕಾದ ಒತ್ತಡ, ಅಸ್ಥಿರತೆ-ಇವೆಲ್ಲ ಸೇರಿ ದಲಿತ ಸಂಘಟನೆಗಳ ಅನುಯಾಯಿಗಳ ಸಂಖ್ಯೆ ಹೆಚ್ಚಾಗಿದೆ ಎಂದು ನನಗೆ ತೀವ್ರವಾಗಿ ಅನ್ನಿಸಿದೆ.

ಮೊನ್ನೆ ನಡೆದ ಬೌದ್ಧಧರ್ಮ ಸ್ವೀಕಾರ ಸಮಾವೇಶ ಈ ಎಲ್ಲ ಸಂಘಟನೆಗಳು ಆಗಾಗ್ಗೆಯಾದರೂ ಒಂದೆಡೆ ಸೇರಬಹುದಾದ ಹಾಗೂ ಸೇರಬೇಕಾದ ಒಂದು ಖಚಿತ ದಿಕ್ಕನ್ನಂತೂ ತೋರಿದೆ. ಈ ಬಗ್ಗೆ ಹೆಚ್ಚಿನ ಚರ್ಚೆ ನಡೆಯಲಿ ಎಂಬ ಉದ್ದೇಶದಿಂದ ಈ ಟಿಪ್ಪಣಿ ಬರೆದಿರುವೆ.

○ ಡಾ|| ನಟರಾಜ್ ಹುಳಿಯಾರ್

> ನಟರಾಜ್ ಹುಳಿಯಾರ್‌ರವರ ಆಶಯ 'ಸಂವಾದ'ದ ಆಶಯವೂ ಆಗಿದೆ. ದಲಿತರು ಸಂಘಟಿತರಾಗಿದ್ದರೂ ವಿಘಟಿತರಾಗಿ ಪರಿತಪಿಸುತ್ತಿರುವುದಕ್ಕೆ ಅವರು ಧರ್ಮರಹಿತವಾಗಿ ಬದುಕುತ್ತಿರುವುದೂ ಕಾರಣವಿರಬಹುದೇ? ಹಿಂದೂ ಧರ್ಮದ ವಿಕಾರಗಳಲ್ಲಿ ಸಿಲುಕಿ ಹೋಗಿರುವ ಅವರಿಗೆ ಧಾರ್ಮಿಕ ವ್ಯಕ್ತಿತ್ವ ಸಾಮಾಜಿಕ ಘನತೆಯನ್ನು ತಂದುಕೊಡಬಲ್ಲುದೇ? ಆ ಮೂಲಕ ಅವರು ತಮ್ಮೆಲ್ಲಾ ಕೀಳರಿಮೆಗಳನ್ನು ಮೀರಿ ಸಮಾಜದ ಮುಖ್ಯವಾಹಿನಿಗೆ ಬರಬಹುದೇ? ಈ ಎಲ್ಲ ಪ್ರಶ್ನೆಗಳೂ 'ಸಂವಾದ'ದ ಮುಂದಿವೆ. ಚಿಂತಕರು, ಬರಹಗಾರರು-ಸಾಮಾಜಿಕ ಕಾರ್ಯಕರ್ತರು ಹಾಗೂ ಓದುಗರಿಂದ ಈ ಕುರಿತು ಅಭಿಪ್ರಾಯಗಳನ್ನು 'ಸಂವಾದ' ಆಹ್ವಾನಿಸುತ್ತಿದೆ. ನಿಮ್ಮ ಬರಹ 400 ಪದಗಳ ಮಿತಿಯಲ್ಲಿದ್ದರೆ ಒಳ್ಳೆಯದು.
>
> –ಸಂಪಾದಕ

ಕ್ರಾಂತಿ ಕರೆ

ರೈತರ ಮನೆಮನೆಗಳಲ್ಲೂ ನಿತ್ಯಸೂತಕ
ಕ್ರಿಯಾಕರ್ಮ ಶಾಂತಿಹೋಮ ಮಂತ್ರ
ಪಠಣ, ಸ್ವರ್ಗದಲ್ಲಿ ಮೃತರ ಮನ-
ತಣಿಸುವ ಕೆಲಸ ಸಾಗಿದೆ ಅವ್ಯಾಹತ.

'ವಸಾಹತುಗಳಿಗೆ ಸೇತುವೆ ಕಟ್ಟುವಾಗ
ಜುಜುಬಿ ಕಪಿಗಳ ಪ್ರಾಣ ಬಲಿ
ದೊಡ್ಡ ಮಾತಲ್ಲ ಬಿಡಿ'- ಎಂಬ ಅಟ್ಟಹಾಸ ಬೇರೆ

ರಣಬಿಸಿಲು ನುಂಗಿ ಎದೆಯೊಡೆದು
ನಿಂತ ಭೂಮಿ ತಾಯಿಯ ಒಡಲಿಗೆ
ಪೆಪ್ಸಿ-ಕೋಲಾ ಸುರಿಸಿ ತಣಿಸುವ ಸಡಗರ.

ಕುಡಿವ ನೀರಿಗೂ ಮರುಭೂಮಿಯಲ್ಲಿ
'ಓಯಾಸಿಸ್' ಹುಡುಕಿ ಗುಳ ಹೊರಟಿರುವ
ದನಕರು ಜನಪರಿವಾರ.

ಖರ್ಚಿಲಂಪಟರು ಮಹಲು ಮಾಳಿಗೆ
ಏರಿ ಕುಳಿತಿದ್ದಾರೆ, ಮೂಡುದಿಕ್ಕಿಗೆ ಬೆನ್ನು ಮಾಡಿ;
ಕಂತುದಿಕ್ಕಿನ ಮುಳುಗುವ ಸಾಮ್ರಾಜ್ಯ
ಸೂರ್ಯನ ಕೆಂಪು ಮೂತಿಯ
ಅಣಕಿಸಿ ಹಲ್ಲುಕಿರಿಯುತ್ತ.

'ನಮ್ಮ ತೋಟದ ಬಾಳೆಗೊನೆಗಳ
ಹಿಸಿಕೆಗಳ ಕಿತ್ತು ಮಹಡಿ ಮೇಲೆ
ಕೂತು ಮುಕ್ಕುತ್ತಿರುವ ಕೋತಿಗಳ
ಬಡಿದೋಡಿಸೋಣ ಬನ್ನಿ' - ಎಂದು
ಓಯಾಸಿಸ್ ಜನ ಕ್ರಾಂತಿ ಕರೆ ನೀಡುತ್ತಿದ್ದಾರೆ
ಗುಳ ಹೊರಟಿರುವ ಜನಕ್ಕೆ

○ ಎ.ಜೆ.ನಾಯಕ್

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ,
ಡಾ।। ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001

ಕನ್ನಡ ಪ್ರಕಟಣೆಗಳು

ಕಾದಂಬರಿಗಳು

1) **ಕಾಡಿನ ದಾವೇದಾರ** ರೂ. 150/-
(ಬಂಗಾಳಿ ಮೂಲ : ಮಹಾಶ್ವೇತಾ ದೇವಿ, ಅನುವಾದ : ಜಿ. ಕುಮಾರಪ್ಪ)

2) **ಉಮರಾವ್ ಜಾನ್ ಅದಾ** ರೂ. 100/-
(ಉರ್ದು ಮೂಲ : ಮಿರ್ಜಾ ರುಸ್ವಾ, ಅನುವಾದ : ಶಾಂತರಸ)

3) **ಹಾವಿನ ಡೊಂಕು** ರೂ. 50/-
(ಸ್ವೀಡಿಸ್ ಮೂಲ : ಟೋರ್‌ಗ್ನಿ ಲಿಂಡ್‌ಗ್ರೆಯನ್)

4) **ಕಾರ್ಮೆಲೀನ** ರೂ. 100/-
(ಕೊಂಕಣಿ ಮೂಲ: ದಾಮೋದರ ಮಾವಜೊ, ಅನುವಾದ : ಶಾ.ಮಂ. ಕೃಷ್ಣರಾಯ)

ಕಥೆಗಳು

1) **ಕೊಂಕಣಿ ಕಥಾ ಸಂಗ್ರಹ** ರೂ. 125/-
(ಸಂಪಾದಕ : ಚಂದ್ರಕಾಂತ ಶ್ರೇಣಿ, ಅನುವಾದ : ಶಾ.ಮಂ. ಕೃಷ್ಣರಾಯ)

2) **ಒಂದು ಪೀಳಿಗೆಯ ತೆಲುಗು ಕಥೆಗಳು** ರೂ. 150/-
(ಸಂಪಾದಕ : ಡಿ. ರಾಮಲಿಂಗಂ, ಅನುವಾದ : ಕುಂ. ವೀರಭದ್ರಪ್ಪ)

3) **ಕೃಷ್ಣನ್ ಚಂದರ್ ಆಯ್ದ ಸಣ್ಣ ಕಥೆಗಳು** ರೂ. 150/-
(ಸಂಪಾದಕ : ಗೋಪಿ ಚಂದ್ ನಾರಂಗ್, ಅನುವಾದ : ಡಿ.ಎ. ಶಂಕರ್)

4) **ಮಧುರಾಂತಕಂ ರಾಜಾರಾಂ ಕಥೆಗಳು** ರೂ. 150/-
(ತೆಲುಗು ಮೂಲ : ಮಧುರಾಂತಕಂ ರಾಜಾರಾಂ
ಅನುವಾದ : ಲಕ್ಷ್ಮೀಪತಿ, ಕೋಲಾರ)

5) **ದಕ್ಷಿಣ ಕಾಮರೂಪದ ಒಂದು ಕಥಾನಕ** ರೂ. 180/-
(ಅಸ್ಸಾಮಿ ಮೂಲ : ಇಂದಿರಾ ಗೋಸ್ವಾಮಿ,
ಅನುವಾದ : ಆರ್.ಎಲ್. ಅನಂತರಾಮಯ್ಯ)

ನಾಟಕಗಳು

1) **ಯಕೃತ್ತು** ರೂ. 50/-
(ಮರಾಠಿ ಮೂಲ : ಶ್ಯಾಮ ಮನೋಹರ, ಅನುವಾದ : ವೀಣಾ ಶಾಂತೇಶ್ವರ)

2) **ರವೀಂದ್ರನಾಥ್ ಟಾಗೋರ್ : ಎರಡು ನಾಟಕಗಳು** ರೂ. 50/-
(ಬಂಗಾಳಿ ಮೂಲ : ರವೀಂದ್ರನಾಥ್ ಟಾಗೋರ್,
ಅನುವಾದ : ಶ್ರೀನಿವಾಸ್ ವಿ. ಸುತ್ರಾವೆ)

ಕಾವ್ಯ

1) **ಆಡು ಹಾವೇ** ರೂ. 80/-
(ತಮಿಳು ಮೂಲ : ಡಾ. ಕಾರ್ಲೋಸ್ , ಅನುವಾದ : ಡಾ. ಬಸವರಾಜ ಕಲ್ಗುಡಿ)

2) **ಶ್ರೀರಾಧಾ** ರೂ. 60/-
(ಒಡಿಯಾ ಮೂಲ : ಶ್ರೀ ರಮಾಕಾಂತ ರಥ, ಅನುವಾದ : ಸಂಧ್ಯಾ ಎಸ್.)

3) **ಶ್ರೀ ಬಸವಣ್ಣನವರ ವಚನ ಸಂಗ್ರಹ** ರೂ. 65/-
(ಸಂಪಾದಕ : ಸ.ಸ. ಮಾಳವಾಡ)

4) **ಎರಡು ದಶಕದ ಕವಿತೆ** ರೂ. 65/-
(ಸಂಪಾದಕ : ಜಿ.ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ)

5) **ತೆಲುಗು ಕಾವ್ಯಮಾಲೆ** ರೂ. 125/-
(ಸಂಪಾದಕ : ದೇವುಲಪಲ್ಲಿ ರಾಮಾನುಜರಾವ್,
ಅನುವಾದ : ಗುರುಮೂರ್ತಿ ಪೆಂಡಕೂರು)

ಭಾರತೀಯ ಸಾಹಿತ್ಯ ನಿರ್ಮಾಪಕರು

1) **ಗೊರೂರು ರಾಮಸ್ವಾಮಿ ಅಯ್ಯಂಗಾರ್** ರೂ. 25/-
(ಲೇಖಕರು : ಸಿ.ಜಿ. ವೆಂಕಟಯ್ಯ)

2) **ಶಂಬಾ ಜೋಶಿ** ರೂ. 25/-
(ಲೇಖಕರು : ಮಲ್ಲೇಪುರಂ ಜಿ. ವೆಂಕಟೇಶ್)

3) **ಭೀಮಾಜಿಯಿ** ರೂ. 25/-
(ಲೇಖಕರು : ಸೀತಾಕಾಂತ ಮಹಾಪಾತ್ರ, ಅನುವಾದ : ಶ್ರೀಧರ್ ಪಿಸ್ಸೆ)

4) **ಮೋಹನ್ ರಾಕೇಶ್** ರೂ. 25/-
(ಲೇಖಕರು : ಪ್ರತಿಭಾ ಅಗರ್‌ವಾಲ್, ಅನುವಾದ : ಎಸ್.ಜಿ. ಶ್ರೀಮತಿ)

5) **ಚಿಲಕಮುರ್ತಿ ಲಕ್ಷ್ಮಿನರಸಿಂಹಮ್** ರೂ. 25/-
(ಲೇಖಕರು : ವಿ.ವಿ.ಎಲ್. ನರಸಿಂಹರಾವ್, ಅನುವಾದ : ಕೆ.ಮರುಳಸಿದ್ದಪ್ಪ)

6) **ಅನ್ನಮಾಚಾರ್ಯ** ರೂ. 25/-
(ಲೇಖಕರು : ಅಡಪ ರಾಮಕೃಷ್ಣರಾವ್, ಅನುವಾದ : ಭಾಗ್ಯಲಕ್ಷ್ಮಿ ಪದಕಿ)

7) **ಶಾಂತಿನಾಥ ದೇಸಾಯಿ** ರೂ. 25/-
(ಲೇಖಕರು : ಜಿ.ಎಸ್. ಆಮೂರ್)

8) **ಎಂ.ಎಸ್. ಪುಟ್ಟಣ್ಣ** ರೂ. 25/-
(ಲೇಖಕರು : ಎಸ್.ಎಸ್. ಸುಜಾತ)

9) **ದೇವುಡು** ರೂ. 25/-
(ಲೇಖಕರು : ಡಾ. ಸಿ.ಎಸ್. ಶಿವಕುಮಾರಸ್ವಾಮಿ (ಕುಮಾರಚಲ್ಯ))

10) **ಕುಮಾರವ್ಯಾಸ** ರೂ. 25/-
(ಲೇಖಕರು : ಕೀರ್ತಿನಾಥ ಕುರ್ತುಕೋಟಿ)

11) **ಸಂ.ಶಿ. ಭೂಸನೂರಮಠ** ರೂ. 25/-
(ಲೇಖಕರು : ಶಾಂತಾ ಇಮ್ರಾಪುರ)

12) **ಸೇಡಿಯಾಪು ಕೃಷ್ಣಭಟ್ಟ** ರೂ. 25/-
(ಲೇಖಕರು : ಎಂ. ರಾಮಚಂದ್ರ)

13) **ಅಭಿನವಗುಪ್ತ** ರೂ. 25/-
(ಲೇಖಕರು : ಜಿ.ಟಿ. ದೇಶಪಾಂಡೆ, ಅನುವಾದ : ಎನ್. ಬಾಲಸುಬ್ರಹ್ಮಣ್ಯ)

ಇತರೆ

1) **ಮಂದಾರ ರಾಮಾಯಣ** ರೂ. 150/-
(ತುಳು ಮೂಲ : ಮಂದಾರ ಕೇಶವಭಟ್ಟ)

2) **ಕಲಾಪೂರ್ಣೋದಯ** ರೂ. 100/-
(ಅನುವಾದ : ಆರ್. ಶೇಷಶಾಸ್ತ್ರಿ, ಜಿ. ಸದಾನಂದ)

3) **ನನ್ನ ಜೀವಾವಧಿಯ ಶಿಕ್ಷೆ** ರೂ. 200/-
(ಮರಾಠಿ ಮೂಲ : ವಿನಾಯಕ ದಾಮೋದರ ಸಾವರಕರ,
ಅನುವಾದ : ವಿರೂಪಾಕ್ಷ ಕುಲಕರ್ಣಿ)

4) **ವನದೇವತೆ** ರೂ. 25/-
(ಲೇಖಕರು : 'ಕಲ್ಕಿ' ಗೋಪಾಲಕೃಷ್ಣನ್, ಅನುವಾದ : ಎ. ಚಂದ್ರಮ್ಮ)

ಪ್ರತಿಗಳು ಹಾಗೂ ವಿವರಕ್ಕಾಗಿ ಸಂಪರ್ಕಿಸಿ:

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ,
ಡಾ।। ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ: 2245152

ಶಾಸ್ತ್ರಗಳ ಗೂಂಡಾಗಿರಿ ಮತ್ತು ಶ್ರಮಿಕರ ವಿಭಜನೆ

ಮೊನಿಯರ್-ಮಿಲಿಯಮ್ಸ್ ಎಂಬ ಪಾಶ್ಚಾತ್ಯ ತನ್ನ 'ಬ್ರಾಹ್ಮನಿಸಮ್ ಆ್ಯಂಡ್ ಹಿಂದೂಯಿಸಮ್ ಆರ್ ರಿಲೀಜಿಯನ್ ಥಾಟ್ ಆ್ಯಂಡ್ ಲೈಫ್ ಇನ್ ಇಂಡಿಯಾ ಆ್ಯಸ್ ಬೇಸ್‌ಡ್ ಆನ್ ದಿ ವೇದ ಆ್ಯಂಡ್ ಅದರ್ ಸೇಕ್ರೆಡ್ ಬುಕ್ಸ್ ಆಫ್ ಹಿಂದೂಸ್' (1891) ಎಂಬ ಕೃತಿಯಲ್ಲಿ ಬ್ರಾಹ್ಮನಿಸಮ್ ಮತ್ತು ಹಿಂದೂಯಿಸಮ್ ಎಂಬೆರಡು ವಿಭಾಗ ಮಾಡಿ ವಿಷಯವನ್ನು ವಿವರಿಸುತ್ತಾನೆ. ವಾಸ್ತವವಾಗಿ ವಿಲಿಯಮ್ಸ್ ತನ್ನ ವಿರ್ವಚನದಲ್ಲಿ 'The higher, cultured and thoughtful' classesಗಳನ್ನು ಬ್ರಾಹ್ಮನಿಸಮ್ ಎಂದೂ 'The lower, uncultured and unthinking' classಗಳನ್ನು ಹಿಂದೂಯಿಸಮ್ ಎಂದೂ ವಿವರಿಸಿರುವುದನ್ನು ಗಮನಿಸಬೇಕು. ಇದರ ಬಗ್ಗೆ ಏನೇ ಇರಲಿ, ಹಿಂದೂ ಧರ್ಮದಲ್ಲಿ ಪುರೋಹಿತಶಾಹಿಯ ಪ್ರಾಬಲ್ಯವನ್ನು ವಿವರಿಸಲು ನಿದರ್ಶನವನ್ನೊದಗಿಸುವುದಂತೂ ಖಂಡಿತ.

ಹಿಂದೂ ಧರ್ಮದ ಇತಿಹಾಸದುದ್ದಕ್ಕೂ ಪುರೋಹಿತಶಾಹಿ ನಿರ್ವಹಿಸಿದ ಪಾತ್ರದ ಬಗ್ಗೆ ವಿವೇಕಾನಂದರು ಆಕ್ರೋಶಭರಿತ ಮಾತುಗಳಲ್ಲಿ ಹೀಗೆ ವಿವರಿಸುತ್ತಾರೆ- ಧೂರ್ತರೂ ವಂಚಕರೂ ಆದ ಪುರೋಹಿತರು ಎಲ್ಲಾ ಬಗೆಯ ಮೂಢನಂಬಿಕೆಗಳನ್ನು ವೇದ ಮತ್ತು ಹಿಂದೂ ಧರ್ಮದ ಸಾರ ಎಂದು ಜನರಿಗೆ ಬೋಧಿಸುತ್ತಾರೆ. ಈ ಖದೀಮ ಪುರೋಹಿತರಾಗಲಿ ಅವರ ತಾತ ಮುತ್ತಾತಂದಿರಾಗಲೀ ಕಳೆದ ನಾನೂರು ತಲೆಮಾರುಗಳಿಂದಲೂ ವೇದದ ಒಂದು ಭಾಗವನ್ನು ಕೂಡಾ ನೋಡಿಲ್ಲ. ಇವರು ಕಂದಾಚಾರಗಳನ್ನು ಅನುಸರಿಸಿ ತಮ್ಮನ್ನೇ ಹೀನಸ್ಥಿತಿಗೆ ತಂದುಕೊಳ್ಳುತ್ತಾರೆ. (Mind you, neither these rascals of priests nor their fore-fathers have so much as seen a volume of vedas for the last 400 generations) ಕಲಿಯುಗದಲ್ಲಿ ಬ್ರಾಹ್ಮಣ ವೇಷದಲ್ಲಿರುವ ಈ ರಾಕ್ಷಸರಿಂದ ಜನರನ್ನು ಆ ದೇವರೇ ರಕ್ಷಿಸಬೇಕು. (Vivekananda: The Complete Works ಸಂ.8, ಪು. 290).

ಹಿಂದೂ ಧರ್ಮದ ನಿಚಾತಿನೀಚ ಇತಿಹಾಸಕ್ಕೆ ಚಾಲಕ ಶಕ್ತಿಯಾಗಿರುವುದು ವರ್ಣಧರ್ಮ ಅಥವಾ ಚಾತುರ್ವರ್ಣ್ಯ ವ್ಯವಸ್ಥೆ. ಇದರ ಮೂಲದ ಬಗ್ಗೆ ಏನೇ ಇರಲಿ, ಪುರೋಹಿತಶಾಹಿಗೆ ಆರ್ಥಿಕ, ರಾಜಕೀಯ, ಸಾಮಾಜಿಕ ಸ್ಥಾನಮಾನಗಳನ್ನು, ಪ್ರಾಬಲ್ಯವನ್ನು ಒದಗಿಸಿತು. ಸಂಪತ್ತಿನ ಮೇಲ್ಮುಖ ಚಲನೆಗೆ ಮತ್ತು ಮೇಲ್ವರ್ಗದಲ್ಲಿ ಮಿಗುತಾಯ ಮೌಲ್ಯದ ಶೇಖರಣೆಗೆ ಕಾರಣೀಭೂತವಾದ ಏಕೈಕ ಅಂಶ ಈ ವರ್ಣ ವ್ಯವಸ್ಥೆ ಎಂಬುದರಲ್ಲಿ ಎರಡು ಮಾತಿರಲಾರದು. ಶ್ರಮ ವಿಭಜನೆಯೆಂದು ಇಂದು ಯಾವುದಕ್ಕೆ ಹಣೆಪಟ್ಟಿ ಕಟ್ಟುತ್ತಾರೊ, ಅದು ಶ್ರಮಿಕರ ವಿಭಜನೆ ಎಂದು ನಿಷ್ಪಕ್ಷವಾಗಿ ಆಲೋಚಿಸುವ ಯಾವನೇ ಆದರೂ ತಿಳಿದುಕೊಂಡಾನು.



ಹಿಂದೂಧರ್ಮ ಅರ್ಥವಿಲ್ಲದ ವ್ಯರ್ಥ ಸಂಪ್ರದಾಯಗಳ ಆಗರ. ಸನಾತನವಾದಿಗಳ ಪ್ರಕಾರ ಈ ಧರ್ಮಕ್ಕೆ ಆಧಾರವಾಗಿರುವುವು ಅಪ್ರಸ್ತುತ ಮತ್ತು ಜನವಿರೋಧಿ ಶಾಸ್ತ್ರ-ಪುರಾಣಗಳು. ಬ್ರಾಹ್ಮಣರ ಕೈಗೆ ಸಿಕ್ಕ ಇಂತಹ ಶಾಸ್ತ್ರಪುರಾಣಗಳೂ ಇತರ ವರ್ಗಗಳ ಶೋಷಣೆಯ ಸಾಧನಗಳಾದವು. ಹಿಂದೂ ಧರ್ಮದ ನಿಚಾತಿನೀಚ ಇತಿಹಾಸಕ್ಕೆ ಚಾಲಕ ಶಕ್ತಿಯಾಗಿರುವುದು ವರ್ಣಧರ್ಮ ಅಥವಾ ಚಾತುರ್ವರ್ಣ್ಯ ವ್ಯವಸ್ಥೆ. ಇದರ ಮೂಲದ ಬಗ್ಗೆ ಏನೇ ಇರಲಿ, ಪುರೋಹಿತಶಾಹಿಗೆ ಆರ್ಥಿಕ, ರಾಜಕೀಯ, ಸಾಮಾಜಿಕ ಸ್ಥಾನಮಾನಗಳನ್ನು, ಪ್ರಾಬಲ್ಯವನ್ನು ಒದಗಿಸಿತು ಹಾಗೂ ಶ್ರಮಿಕರನ್ನು ಶಾಶ್ವತವಾಗಿ ಹತೋಟಿಯಲ್ಲಿಟ್ಟುಕೊಂಡಿತು.

❍ ಶ್ರೀಶ ಉಡುಪ

ಈ ವಿಭಜನೆ ಮೇಲ್ವರ್ಗ-ಕೆಳವರ್ಗವನ್ನು ಶಾಶ್ವತವಾಗಿ ಹತೋಟಿಯಲ್ಲಿಡಲು ರೂಪಿಸಿಕೊಂಡ ಕುತಂತ್ರ. ಇದು ಋಗ್ವೇದದಲ್ಲೇ ತನ್ನ ಉಗಮವನ್ನು ಕಂಡುಕೊಳ್ಳುತ್ತದೆ.

ಋಗ್ವೇದದ 10ನೆಯ ಮಂಡಲದ 90ನೆಯ ಸೂಕ್ತ 'ಪುರುಷ ಸೂಕ್ತ' ಯೆಂದು ಪ್ರಸಿದ್ಧ. ಇದನ್ನು ಸೃಷ್ಟಿಶಾಸ್ತ್ರವೆಂದೂ ಕರೆಯುತ್ತಾರೆ. ಅದು ವರ್ಣಪದ್ಧತಿಯ ಉಗಮದ ಕುರಿತು ವಿವರಿಸುವುದಿಂದ ಗಮನಾರ್ಹವಾಗಿದೆ. ''ಪುರುಷನನ್ನು ದೇವತೆಗಳು ಎಷ್ಟು ಭಾಗವಾಗಿ ಕತ್ತರಿಸಿದರು? ಈ ಪುರುಷರ ಮುಖ ಯಾವುದು? ಅವನ ಬಾಹುಗಳು ಯಾವುವು? ಅವನ ತೊಡೆಗಳು, ಪಾದಗಳು ಯಾವುವು? ಈ ಪುರುಷನ ಮುಖದಿಂದ ಬ್ರಾಹ್ಮಣ, ತೋಳುಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ ಹಾಗೂ ಪಾದಗಳಿಂದ ಶೂದ್ರ ಜನಿಸಿದರು' (ಋಗ್ವೇದ-10: 90,11 ಮತ್ತು 12)

ಗಣವ್ಯವಸ್ಥೆಯ ಬದಲಾಗಿ ಅಸ್ತಿತ್ವಕ್ಕೆ ಬಂದ ರಾಜ್ಯವ್ಯವಸ್ಥೆಯಲ್ಲಿ ಅದನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ ವರ್ಣವ್ಯವಸ್ಥೆಯ ಉಗಮದ ಬಗ್ಗೆ ಬೃಹದಾರಣ್ಯಕ ಉಪನಿಷತ್ತು ವಿವರಿಸುವುದು ಹೀಗೆ: 'ಆದಿಯಲ್ಲಿ ಸಮಾಜವು ಅವಿಭಕ್ತವಾಗಿ ಒಂದೇ ಆಗಿದ್ದಿತು. ಅಂದರೆ ಒಂದೇ ಆಗಿದ್ದುದರಿಂದ ಅಭಿವೃದ್ಧಿ ಹೊಂದಲಿಲ್ಲ. (ತದೇಕಮ್ ಸನ್‌ನ ವೈಭವತ್) ಹೀಗಾಗಿ ಕ್ಷತ್ರಿಯ ಎಂಬ ಒಂದು ಶ್ರೇಯಸ್ಕರವಾದ ಜನವಿಭಾಗ ಸೃಷ್ಟಿಯಾಯಿತು...ಆದರೂ ಅದು (ಸಮಾಜ) ಅಭಿವೃದ್ಧಿ ಹೊಂದಲಿಲ್ಲ...ಆದ್ದರಿಂದ ವೈಶ್ಯ ಎಂಬ ವಿಭಾಗ ಸೃಷ್ಟಿಸಲ್ಪಟ್ಟಿತು..ಅದು ಅಭಿವೃದ್ಧಿಯಾಗಲಿಲ್ಲ, ಅದಕ್ಕಾಗಿ (ಇತರರನ್ನು) ಪೋಷಿಸುವ ಶೂದ್ರ ಎಂಬ ವರ್ಣವನ್ನು (ಪೂಷಣಂ ವರ್ಣಂ) ಅದು ಸೃಷ್ಟಿಸಿತು. ಆದರೂ ಅದು ಅಭಿವೃದ್ಧಿಯಾಗಲಿಲ್ಲ, ಆದ್ದರಿಂದ ಶ್ರೇಯೋರೂಪದ ಧರ್ಮವನ್ನು ಸೃಷ್ಟಿಸಿತು. ಹೀಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು (ತದೇತದ್ ಬ್ರಹ್ಮಕ್ಷತ್ರಂ ವಿಟ್ ಶೂದ್ರ:). (ಬೃಹದಾರಣ್ಯಕ - 2, 4,11,15).

ಈ ಉಗಮದ ಕುರಿತು !ಆಪಸ್ತಂಭ ಧರ್ಮಸೂತ್ರ', 'ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ'ರೆಂಬ ನಾಲ್ಕು ವರ್ಣಗಳಿವೆ. ಪ್ರತಿಯೊಂದು ವರ್ಣವೂ ಹುಟ್ಟಿನಿಂದಲೇ ಕೆಳವರ್ಣಕ್ಕಿಂತ ಶ್ರೇಷ್ಠವಾದದು. ಇವರಲ್ಲಿ ಶೂದ್ರರನ್ನು ಬಿಟ್ಟರೆ ಇತರರಿಗೆ ಹಕ್ಕುಗಳಿವೆ (ಆ.ಸೂತ್ರ-1.1-1-4-6) ಎನ್ನುವುದರ ಮೂಲಕ ಸೃಷ್ಟಿಶಾಸ್ತ್ರ ಮತ್ತು ಚಾತುರ್ವರ್ಣ್ಯ ಮೇಲುಕೀಳನ್ನು ವಿಧಿಸುವುದಿಲ್ಲ ಎಂಬ ಕೆಲವು ವಿದ್ವಾಂಸರ ವಿತಂಡವಾದವನ್ನು ತೊಡೆದುಹಾಕಿಬಿಡುತ್ತದೆ. ಅದೇ ರೀತಿ ಮನುಸ್ಮೃತಿಯೂ ಇದರ ಸೃಷ್ಟಿಯ ಕುರಿತು ಹೇಳುತ್ತದೆ. (10:4).

ಈ ವಿವರಗಳು ಜಾತುರ್ವರ್ಣ್ಯ ವ್ಯವಸ್ಥೆ ಹುಟ್ಟಿನ ಮೂಲಕವೇ ಆ ಕಾಲದ ಸಮಾಜದಲ್ಲಿ ಗುರುತಿಸಲ್ಪಡುತ್ತಿದ್ದವು ಎಂದು ಸ್ಪಷ್ಟಮಾತುಗಳಲ್ಲೇ ಹೇಳುವ ಮೂಲಕ ಗೀತೆಯ ಕೃಷ್ಣನ 'ಚಾತುರ್ವರ್ಣ್ಯಂ ಮಯಾ ಸೃಷ್ಟಂ' ಗುಣಕರ್ಮ ವಿಭಾಗಶಃ (ಭಗವದ್ಗೀತೆ-4.13) ಎಂಬ ಮಾತಿನ ಪೊಳ್ಳುತನವನ್ನು ಬೀದಿಗಿಳಿಯುತ್ತದೆ. ಹುಟ್ಟಿನ ಮೂಲವೇ ಅಂತಿಮವೆಂದಾದ ಮೇಲೆ ಗುಣ ಇತ್ಯಾದಿಗಳಿಗೆ ಎಲ್ಲಿಯ ಪ್ರಾಶಸ್ತ್ಯ?

ಋಗ್ವೇದದ ಪುರುಷಸೂಕ್ತದ ಬಗ್ಗೆ ಡಾ. ಅಂಬೇಡ್ಕರರು ಬಹಳಷ್ಟು ಚರ್ಚಿಸಿದ್ದಾರೆ (ನೋಡಿ: ಡಾ.ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂ.7)

ಇತಿಹಾಸದಲ್ಲಿ ಬಹಳಷ್ಟು ದಬ್ಬಾಳಿಕೆಗೆ ತುತ್ತಾದವರು ಈ ನಾಲ್ಕನೆ ವರ್ಣದವರು-ಶೂದ್ರರು; ಶ್ರಮಜೀವಿಗಳು ಬಹುಷಃ ಚಾಂಡಾಲರೂ ನಾಲ್ಕನೇ ವರ್ಣಕ್ಕೇ ಸೇರಿದವರು. ಏಕೆಂದರೆ ಮನು ಒಂದೆಡೆ 'ನಾಸ್ತಿ ಪಂಚಮ' ಎಂದು ಹೇಳಿರುವುದನ್ನು ಗಮನಿಸಬಹುದು. ಇವರೆಲ್ಲರ ರಕ್ತಹೀರಿ ಕೊಬ್ಬಿದ ಹಲವು ಶಾಹಿಗಳು ಇವರನ್ನು ಕಂಡದ್ದು ಮಾತ್ರ ಕಾಲಕಸವಾಗಿ ಎಂಬ ಅಂಶ ಇತಿಹಾಸದ ಬಹುದೊಡ್ಡ ಆದರೆ ಆಶ್ಚರ್ಯಕರವಲ್ಲದ ದುರಂತ. ದುರಾದೃಷ್ಟವಶಾತ್ ಭಾರತದ ಸಾಂಸ್ಕೃತಿಕ ಇತಿಹಾಸದ ಯಾವ ಪುಟದಲ್ಲೂ ಶಿಷ್ಟ ಇತಿಹಾಸಕಾರರು ಇದನ್ನು ಗುರುತಿಸಿಯೇ ಇಲ್ಲ. ಇಲ್ಲಿ ಡಿ.ಡಿ. ಕೊಸಾಂಬಿಯವರ ಮಾತನ್ನು ನೆನೆದರೆ ಅಪ್ರಸ್ತುತವಾಗಲಾರದು ಎನಿಸುತ್ತದೆ. –Some people regard culture as purely a matter of intellectual and spiritual values in the sense of religion, philosophy legal systems, literature, art, music and the like. Some times this is extended to include refinements in manners of the ruling class. History according to these intelectuals is based upon and should deal only with such culture nothing else matters. (The culture and Civilization of ancient India in Historarical Outline: D.D. Kosambi) ಇಂಥವನ್ನೇ ಇತಿಹಾಸದ main springನ್ನಾಗಿ ಪರಿಗಣಿಸಿದಾಗ ಇನ್ನೂ ಅನೇಕ ಕರಾಳ ಅಧ್ಯಾಯಗಳು ಕತ್ತಲೆಯಲ್ಲೇ ಉಳಿಯುತ್ತವೆ.

ಶೂದ್ರರ ಕರ್ತವ್ಯವನ್ನು ಹಲವಾರು ಗ್ರಂಥಗಳು ಸ್ಪಷ್ಟಪಡಿಸುತ್ತವೆ. ಶೂದ್ರರದು 'ಪೂಷಣಂ ವರ್ಣಂ' ಎಂಬುದನ್ನು ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ. ಐತರೇಯ ಬ್ರಾಹ್ಮಣವು ಶೂದ್ರನು ಇತರ ವರ್ಣದವರ ಸೇವಕನು ಎನ್ನುತ್ತದೆ. (ಐ.ಬ್ರಾ.8, 29) ದ್ವಿಜರ ಸೇವೆಯೇ ಶೂದ್ರನ ಪರಮ ಕರ್ತವ್ಯ ಎಂದು ಯಾಜ್ಞವಲ್ಕಸ್ಮೃತಿ ವಿವರಿಸುತ್ತದೆ. (ಯಾ.ಸ್ಮೃತಿ: 1:5:121) ದಾಸ್ಯಂ ಶೂದ್ರಂ ದ್ವಿಜನ್ಮಾಂನಾಂ ಎನ್ನುತ್ತದೆ ಮನುಸ್ಮೃತಿ (8.410) ಅಂದರೆ ಶೂದ್ರರು ದ್ವಿಜರ ದಾಸ್ಯತನದಲ್ಲಿರುವವನು. ಇನ್ನೂ ಹಲವು ಕಡೆ (11-235; 10-122; 8.413 ಇತ್ಯಾದಿ) ಮನುಸ್ಮೃತಿ ಇದನ್ನೇ ಒತ್ತಿ ಒತ್ತಿ ಹೇಳುತ್ತದೆ. (ಮೇಲಿನ ಮೂರು ವರ್ಣಗಳ) ಪರಿಚರ್ಯೆಯೇ ಶೂದ್ರನ ಸ್ವಾಭಾವಿಕ ಕರ್ಮ ಎಂದು ಅಪ್ಪಣೆಕೊಡಿಸಿಬಿಟ್ಟಿದ್ದಾನೆ. ಭಗವದ್ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣ (18.44) ಇದೇ ಕೃಷ್ಣ 'ಸ್ವಧರ್ಮೇ ನಿಧನಂ ಶೇರಯ' ಎನ್ನುತ್ತಾನೆ. (3.35) ಗೀತೆಯಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಿದರೆ ಇಲ್ಲಿ 'ಧರ್ಮ'ವನ್ನು religion ಅಥವಾ ಮತ ಎಂಬ ಅರ್ಥದಲ್ಲಿ ಬಳಸಲಾಗಿಲ್ಲ ಎಂದು ಸ್ಪಷ್ಟವಾಗುತ್ತದೆ. ಹಾಗಾದರೆ ಇನ್ನು ಯಾವ ಅರ್ಥದಲ್ಲಿ? ಇದನ್ನು ವರ್ಣಕರ್ತವ್ಯದ ಪರಿಪಾಲನೆ ಎಂಬಂರ್ಥದಲ್ಲಿ ಬಳಸಲಾಗಿದೆ ಎಂದು ದಿಲೀಪ್ ಬೋಸ್ ಸಾಧಿಸಿ

ಶೂದ್ರರ ಆರ್ಥಿಕ ಅಭದ್ರತೆಯ ನಿರಂತತೆಯನ್ನು ಚಾತುರ್ವರ್ಣ್ಯ ವ್ಯವಸ್ಥೆ ಕಾಯ್ದುಕೊಂಡಿತ್ತು. ಹೊಟ್ಟೆ ತುಂಬಿದರಲ್ಲವೇ ಯೋಚನೆಗೆ ಪುರುಸೊತ್ತು? ಹಾಗಾಗಿ ಇತಿಹಾಸದುದ್ದಕ್ಕೂ ಶೂದ್ರರು ಅರೆಹೊಟ್ಟೆಯಲ್ಲೇ ಇದ್ದರು. ಉಂಡುಳಿದ ಅನ್ನವನ್ನು ಶೂದ್ರ ತಿನ್ನಬಹುದಾಗಿತ್ತು. ಇದು ಹಲವು ಶಾಸ್ತ್ರಗ್ರಂಥಗಳ ಕಟ್ಟಪ್ಪಣೆ ಅಲ್ಲದೆ ಶೂದ್ರರಿಗೆ ಸಂಪತ್ತು ಶೇಖರಿಸಲು ಅವಕಾಶವೇ ಇರಲಿಲ್ಲ. ಹಾಗೆಲ್ಲಾದರೂ ಆತ ಶೇಖರಿಸಿಟ್ಟದ್ದೇ ಆದರೆ ಬ್ರಾಹ್ಮಣರು ನಿರ್ದಾಕ್ಷಿಣ್ಯವಾಗಿ ಕಿತ್ತುಕೊಳ್ಳುವುದು ಅವರ ಧರ್ಮವಾಗಿತ್ತು. ಶೂದ್ರನದಾದ ಶ್ರಮ ಸಂಪತ್ತನ್ನು ಮೇಲ್ವರ್ಗವೇ ಕಿತ್ತುಕೊಂಡಿತ್ತು.

ತೋರಿಸಿದ್ದಾರೆ. ಹಾಗಾಗಿ ತನ್ನ ವರ್ಣ ನಿಯಮಕ್ಕನುಸಾರವಾಗಿ ನಿಯಮಿತ ಕರ್ತವ್ಯವನ್ನು ಮಾಡುವುದು ಕರ್ಮ. ಇತರ ವರ್ಣದ ಕರ್ತವ್ಯಗಳನ್ನು ಮಾಡುವುದು, ತನ್ನ ವರ್ಣದ ಕರ್ತವ್ಯವನ್ನು ಮಾಡದೇ ಇರುವುದು ಅಧರ್ಮ. ಅಂದರೆ ಇತರ ವರ್ಣದ ಕರ್ತವ್ಯಗಳು ಪರಧರ್ಮ. ಇವು ನಿಷಿದ್ಧ. ಈ ರೀತಿಯಾಗಿ ಚಾತುರ್ವರ್ಣ್ಯದ ನಿಯಮಗಳ ಉಲ್ಲಂಘನೆಗಿಂತ ಹೆಚ್ಚು ಪಾಪದಾಯಕವಾದುದು ಯಾವುದೂ ಇಲ್ಲ ಎಂಬುದು ಇಲ್ಲಿ ಕೃಷ್ಣನ ಅಭಿಪ್ರಾಯ ಎಂದು ದಿಲೀಪ್ ಬೋಸ್ ನಿರ್ವಹಿಸುತ್ತಾರೆ. ಅಂದರೆ ಈ ಶ್ರೇಣೀಕೃತ ಸಮಾಜದ ವ್ಯವಸ್ಥೆಯಲ್ಲಿ ಶೂದ್ರ ವರ್ಗವನ್ನು ಕೆಳಹಂತದಲ್ಲೇ ಶಾಶ್ವತವಾಗಿ ಇರಿಸುವಂತೆ ವ್ಯವಸ್ಥೆ ಮಾಡುವುದೇ ಭಗವದ್ಗೀತೆಯ ಗುರಿಯೇ? ಹಾಗೇ ವೈಭವದಲ್ಲಿ ಬ್ರಾಹ್ಮಣ ಶಾಹಿಯನ್ನು... ಕ್ಷತ್ರಿಯರು ಬಲಿಷ್ಠರಾದಾಗ ಅವರ ಮುಂದೆ ಯುದ್ಧವನ್ನು....

ಈ ರೀತಿಯಾಗಿ ಅಮೇರಿಕಾದಲ್ಲಿ ಅಲ್ಲಿನ ಮೂಲನಿವಾಸಿಗಳು ಗುಲಾಮರಾಗಿದ್ದಂತೆ, ಆಫ್ರಿಕಾದ ನಿಗ್ರೋ ಬುಡಕಟ್ಟು ಬಿಳಿಯರ ದಾಸ್ಯದಲ್ಲಿದ್ದಂತೆ ಭಾರತದಲ್ಲಿ ನಾಲ್ಕನೇ ವರ್ಣ ಮೇಲ್ವರ್ಗದ ದಾಸ್ಯತನದಲ್ಲಿ ನರಳುತ್ತಿತ್ತು. ಅದೇ ರೀತಿ ಬ್ರಿಟಿಷ್ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್‌ರು ಗುಲಾಮಗಿರಿಯನ್ನು ಸಮರ್ಥಿಸಿಕೊಂಡಂತೆ (ಗಮನಿಸಿ ಒಂದು 'ಉತ್ತಮ ದರ್ಜೆ'ಯ ಮಾನವ ಜನಾಂಗ ಮೂಲನಿವಾಸಿಗಳನ್ನು ಆಕ್ರಮಿಸಿಕೊಂಡರೆ ಯಾವುದೇ ಅನ್ಯಾಯವಾಗದು ಎಂದಿದ್ದಾರೆ ಚರ್ಚಿಲ್) ಭಾರತದಲ್ಲಿಯೂ ಶಿಷ್ಟವರ್ಗ ವಿದ್ವಾಂಸರೆಂದು ಪರಿಗಣಿಸುವಂಥ ಧೂರ್ತರು ತಮ್ಮನ್ನು ಸಮರ್ಥಿಸಿಕೊಂಡಿದ್ದಾರೆ. ಏಕೆಂದರೆ ಶೂದ್ರರಿಗೆ ಒದಗಿದ ದಾಸ್ಯತನ ಅವರ ಪೂರ್ವಜನ್ಮದ ಕರ್ಮದ ಫಲ! ಅದು ದೈವೇಚ್ಛೆ! ಆಕಸ್ಮಾತ್ ಒಬ್ಬ ಶೂದ್ರ, 'ವಿದ್ವಾಂಸ'ರ ಜ್ಞಾನವನ್ನು ತಿಳಿದುಕೊಂಡನೆಂದರೆ ಅದಕ್ಕೆ ಕಾರಣ ಆತ ಪೂರ್ವಜನ್ಮದಲ್ಲಿ ವಿಪ್ರನಾಗಿದ್ದದ್ದು! ಶಂಕರಾಚಾರ್ಯನಂತಹ ಪುಢಾರಿಗಳೆಲ್ಲ ವಾದಿಸಿದ್ದು ಹೀಗೆ. ಒಂದು ವೇಳೆ ಶೂದ್ರ, ಸ್ತ್ರೀಯರು, ವಿದ್ಯೆಗಳಿಗೆ ಹಣ ಶೇಖರಿಸಿದ್ದೇ ಆದರೆ ಈ ಕುತಂತ್ರಗಳ ವಿರುದ್ಧ ಹೋರಾಡುತ್ತಾರೆ. ಹಾಗಾಗಿ 'ನ ಶೂದ್ರಾಯ ಮತಿಂ ದದ್ಯಾತ್' ಎಂದು ಮನು ಅಪ್ಪಣೆ ಕೊಡಿಸಿದ್ದಾನೆ. ಋಗ್ವೇದ ಇದನ್ನ ಬೇರೆ ಧಾಟಿಯಲ್ಲಿ ಸ್ತ್ರೀಯೆಗೆ ಅನ್ವಯಿಸಿ ಹೇಳುತ್ತದೆ. ಸ್ತ್ರೀಗೆ ಬುದ್ಧಿಕಡಿಮೆ ಎಂದು ಇಂದ್ರನೇ ಹೇಳಿದ್ದಾನೆ. ಹೀಗಾಗಿ ಆಕೆಗೆ ಬೋಧನೆ ನೀಡುವುದು ಶಕ್ಯವಲ್ಲ (8:33:17). ಮೌರ್ಯರ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ ಪ್ರವಾಸಿ ಮೆಗಾಸ್ತನೀಸ್ ಇದನ್ನು ಈ ರೀತಿಯಾಗಿ ದಾಖಲಿಸುತ್ತಾನೆ. 'ಭಾರತದಲ್ಲಿ ದ್ವಿಜರು ಬಹಳ ಹೆಂಡತಿಯರನ್ನು ಹೊಂದಿರುತ್ತಾರೆ. ಅವರು ಎಲ್ಲ ವಿದ್ಯೆಗಳಿಂದಲೂ ವಂಚಿತರಾಗಿರುತ್ತಾರೆ. ಅವರು ಜ್ಞಾನವನ್ನು ಸಂಪಾದಿಸಿ ನೋವು-ನಲಿವನ್ನು, ಸಾವು ಮತ್ತು ಜೀವನವನ್ನು ತಾತ್ತ್ವಿಕವಾಗಿ ಅರಿಯಲು ಪ್ರಾರಂಭಿಸಿದರೆ ಮುಂದೆ ಅವರನ್ನು ದಾಸ್ಯದಲ್ಲಿ ತಳ್ಳಲಾಗುವುದಿಲ್ಲ ಎಂಬ ಕಾರಣಕ್ಕಾಗಿಯೇ ಭಾರತೀಯ ಮಹಿಳೆಯರನ್ನು ವಿದ್ಯಾಭ್ಯಾಸದಿಂದ ದೂರವಿರಿಸುತ್ತಾರೆ. ಇನ್ನೊಂದು ಕಡೆ ಶೂದ್ರರು, ಶ್ವಾನಗಳು ಮತ್ತು ಕಾಗೆಗಳ ಗುಂಪಿಗೆ ಮಹಿಳೆಯರೂ ಸೇರುತ್ತಾರೆ. ಸುಳ್ಳು, ಪಾಪ ಕತ್ತಲೆಗಳು ಅವರಲ್ಲಿ ಮನೆಮಾಡಿಕೊಂಡಿರುತ್ತವೆ: (ಯಜುರ್ವೇದ-14:1:1:31) ಕಿಟಕಿ ತೆರೆಯಲು ಅವಕಾಶ ಮಾಡಿಕೊಟ್ಟರಲ್ಲವೇ ಕತ್ತಲೆ ಹೋಗುವುದು? ಹೇಗಿದೆ ತಾವೇ ಕಾರಣಕರ್ತರಾದ ಪರಿಣಾಮಗಳತ್ತ ಬೆರಳು ತೋರಿ ನಿಕೃಷ್ಟರಾಗಿಸುವ ತಂತ್ರ?

ಶೂದ್ರರ ಆರ್ಥಿಕ ಅಭದ್ರತೆಯ ನಿರಂತತೆಯನ್ನು ಚಾತುರ್ವರ್ಣ್ಯ ವ್ಯವಸ್ಥೆ ಕಾಯ್ದುಕೊಂಡಿತ್ತು. ಹೊಟ್ಟೆ ತುಂಬಿದರಲ್ಲವೇ ಯೋಚನೆಗೆ ಪುರುಸೊತ್ತು? ಹಾಗಾಗಿ ಇತಿಹಾಸದುದ್ದಕ್ಕೂ ಶೂದ್ರರು ಅರೆಹೊಟ್ಟೆಯಲ್ಲೇ ಇದ್ದರು. ಉಂಡುಳಿದ ಅನ್ನವನ್ನು ಶೂದ್ರ ತಿನ್ನಬಹುದಾಗಿತ್ತು. ಇದು ಹಲವು ಶಾಸ್ತ್ರಗ್ರಂಥಗಳ ಕಟ್ಟಪ್ಪಣೆ (ಉದಾ: ಮನುಸ್ಮೃತಿ : 10.125) ಅಲ್ಲದೆ ಶೂದ್ರರಿಗೆ ಸಂಪತ್ತು ಶೇಖರಿಸಲು ಅವಕಾಶವೇ ಇರಲಿಲ್ಲ. ಹಾಗೆಲ್ಲಾದರೂ ಆತ ಶೇಖರಿಸಿಟ್ಟದ್ದೇ ಆದರೆ ಬ್ರಾಹ್ಮಣರು ನಿರ್ದಾಕ್ಷಿಣ್ಯವಾಗಿ ಕಿತ್ತುಕೊಳ್ಳುವುದು ಅವರ ಧರ್ಮವಾಗಿತ್ತು (ಮನುಸ್ಮೃತಿ : 8.417) ಶೂದ್ರನದಾದ ಶ್ರಮಸಂಪತ್ತನ್ನು ಮೇಲ್ವರ್ಗವೇ ಕಿತ್ತುಕೊಂಡಿತ್ತು.

'ಶೂದ್ರನು ಬೇಕಾದಾಗ ತೆಗೆದು ಹಾಕಬಹುದಾದವನು ಮತ್ತು ಇಚ್ಛಾನುಸಾರ ಕೊಲ್ಲಬಹುದಾದವನು' ಎನ್ನುತ್ತದೆ ಐತರೇಯ ಬ್ರಾಹ್ಮಣ (7:29) ಶೂದ್ರಾದಿಗಳು ಬ್ರಾಹ್ಮಣರ ಕಟ್ಟುಪಾಡುಗಳನ್ನು ಪಾಲಿಸದೇ ಇದ್ದಲ್ಲಿ ರಾಜನು ಅವರನ್ನು ನಿರ್ದಾಕ್ಷಿಣ್ಯವಾಗಿ ಗಲ್ಲಿಗೇರಿಸಬೇಕು ಅಥವಾ ಗಡೀಪಾರು ಮಾಡಬೇಕು ಎನ್ನುತ್ತದೆ ಯಾಜ್ಞವಲ್ಕಸ್ಮೃತಿ. ಆಕಸ್ಮಾತ್ ರಾಜ ಅದನ್ನು ಮೀರಿದರೆ? ಇದ್ದೇ ಇದೆಯಲ್ಲ- ಪುರೋಹಿತರು ಮಹಾರಾಜನನ್ನು ತಪಃಶಕ್ತಿಯಿಂದ ನಾಶಗೊಳಿಸಿದ ರೀತಿ ಮಹಾಭಾರತದಲ್ಲಿ (ಮಹಾಭಾರತ:

ಶಾಂತಿಪರ್ವ:28:58) ವರ್ಣಧರ್ಮವನ್ನು ಉಲ್ಲಂಘಿಸುವ ಶೂದ್ರ ತಪಸ್ವಿ ಶಂಭೂತನನ್ನು ವಧಿಸಿದ ರಾಮನಿದ್ದಾನಲ್ಲ- ಆದರ್ಶಪುರುಷ! (ರಾಮಾಯಣ: ಉತ್ತರಕಾಂಡ, ಸರ್ಗ:73-36) ಇದು ಯಾವುದೂ ಪಾಪವಲ್ಲ; ಭಗವಂತನ ಅನುಜ್ಞೆ! ಸ್ತ್ರೀಯರನ್ನೂ ಶೂದ್ರರನ್ನೂ ಕೊಲ್ಲುವುದು ಪಾಪವಲ್ಲ ಎಂದು ಮಹರ್ಷಿ ಮನುವೇ ಹೇಳಿದ್ದಾನಲ್ಲ!(11:66) ಅದಲ್ಲದೇ ಶ್ರೀಕೃಷ್ಣ ಪರಮಾತ್ಮನೂ ಸ್ತ್ರೀ-ಶೂದ್ರರನ್ನು ಪಾಪಯೋನಿಗಳೆಂದು ಗೌರವಿಸಿದ್ದಾನೆ! (9.32) ಈ ಯಾವ ಗೂಂಡಾಗಿರಿಯೂ ಪಾಪವಲ್ಲ ಯಾಕೆ?

ಆತ್ಮಜ್ಞಾನಿಯು ಕಳ್ಳತನ, ತಾಯಿಯ ಕೊಲೆ, ತಂದೆಯ ಕೊಲೆ, ಯಾವುದೇ ಕೃತ್ಯಗಳನ್ನು ಮಾಡಲಿ, ಆದರಿಂದ ಜಗತ್ತಿಗೆ ಕೆಡುಕಾಗುವುದಿಲ್ಲ... (ಕೌಶೀತಕೀ ಉಪನಿಷತ್ತು 3:1) ದಿವ್ಯಜ್ಞಾನಿಯು ಏನೇ ಕೆಲಸ ಮಾಡಿದರೂ... ಶುದ್ಧ ನಿಷ್ಕಳಂಕ ಮತ್ತು ಅಮರನಾಗುತ್ತಾನೆ (ಬೃಹದಾರಣ್ಯಕ ಉಪನಿಷತ್ತು 4:4:22 ಮತ್ತು 5:14:8) ಬೆಂಕಿಯ ಮೇಲಿನ ಹುಲ್ಲುಸುಟ್ಟು ಹೋಗುವಂತೆ ಅಗ್ನಿಹೋತ್ರವನ್ನು ಮಾಡುವವನ ಕೆಟ್ಟ ಕೆಲಸಗಳು ಸುಟ್ಟು ಹೋಗುತ್ತವೆ. (ಛಾಂದ್ಯೋಗ್ಯ ಉಪನಿಷತ್ತು 5:24:3)

ಅರಿ ನಿನದನು ವನಿತೆಯರೊಳು ಮೈತ್ರ ಎಂಬುದು ತಾನಿಲ್ಲ! ಹೃದಯುವೆಂಬುದದೇನೂ ಅವರೆದೆಯಲಿ ತಾನಿಲ್ಲ! ಇಹುದಾದರದು ನಿಶ್ಚಯವೂ ಕಿರುಬದ ಹೃದಯವು ತಾನೆಂದೂ! ಎಂದಿದೆ ಋಗ್ವೇದ (10:95:15) ವೇದದ ಅತ್ಯುಗ್ರ ಅಭಿಮಾನಿ ಮತ್ತು ವ್ಯಾಖ್ಯಾನಕಾರರಾದ ದಯಾನಂದ ಸರಸ್ವತಿಯವರ ಪ್ರಕಾರ ಓರ್ವಹೆಣ್ಣು ಸಂತಾನಪ್ರಾಪ್ತಿಗಾಗಿ ಒಬ್ಬರಾದ ಮೇಲೆ ಒಬ್ಬರಂತೆ ಹನ್ನೊಂದು ಜನ ಪರ ಪುರುಷರೊಡನೆ ಸಂಭೋಗ ನಡೆಸಬಹುದು (ಋಗ್ವೇದ, ದಯಾನಂದ ಭಾಷ್ಯ 10:85:45) ಹಿಂದೂ ಧರ್ಮದಲ್ಲಿ ಸ್ತ್ರೀಯ ಸ್ಥಾನಮಾನದ ಒಂದು ಸ್ಥೂಲ ಚಿತ್ರಣ ಪಡೆದುಕೊಳ್ಳಲು ಇವಿಷ್ಟು ಸಾಕು.

ಹಾಗೇ ಯಜುರ್ವೇದದಲ್ಲಿ ಅಶ್ವಮೇಧಯಾಗದ ಪ್ರಸಂಗವೊಂದರಲ್ಲಿ ನಮಗೆ ಹೇಸಿಗೆ ಹುಟ್ಟಿಸುವಂತಹ ನಿರೂಪಣೆಯಿದೆ. ಅಶ್ವಮೇಧಯಾಗದ ಕುದುರೆ ಸತ್ತು ಬಿದ್ದ ಬಳಿಕ ಅಲ್ಲಿಗೆ ರಾಜಪತ್ನಿಯನ್ನು ಕರೆತರುತ್ತಿದ್ದರು. ಪಟ್ಟಮಹಿಷಿಯು ಸತ್ತು ಬಿದ್ದ ಕುದುರೆಯೊಂದಿಗೆ ಸಂಭೋಗ ನಡೆಸುವುದು ಇತ್ಯಾದಿಗಳ ವಿವರಣೆ ಅಲ್ಲಿದೆ. ಇವನ್ನು ಎಷ್ಟೇ ಸಾಂಕೇತಿಕವಾಗಿ ತೆಗೆದುಕೊಂಡರೂ ಇವು ಸ್ತ್ರೀಯನ್ನು ಪ್ರಾಣಿಗಿಂತಲೂ ಕೀಳಾಗಿ ಕಾಣುವ ಅಸತ್ಯ ಕೃತ್ಯಗಳಾಗಿವೆ. ಅಲ್ಲದೇ ಇದು ಪುರುಷರ ಲೈಂಗಿಕ ಆಸಕ್ತಿ ಎಷ್ಟು ಕೆಳಮಟ್ಟದಲ್ಲಿತ್ತು ಎಂಬುದಕ್ಕೆ ಸಾಕ್ಷಿಯಾಗುತ್ತದೆ. ವೇದಗಳನ್ನು ಅಪೌರುಷಯವೆಂದು ಸ್ವೀಕರಿಸಿದಾಗ, ಇಲ್ಲಿರುವುದೆಲ್ಲಾ ಧರ್ಮ ಸಮ್ಮತವೆಂಬ ಭ್ರಮೆಯಲ್ಲಿ ಅದನ್ನೇ ಧಾರ್ಮಿಕ ಜೀವನ ಎಂದುಕೊಳ್ಳುವಾಗ ಇಂಥ ಕ್ರೂರ ನಡವಳಿಕೆಗಳನ್ನು ಸಹ ಆದರ್ಶವೆಂದು ಪರಿಗಣಿಸಬೇಕಾಗುತ್ತದೆ. ಯಾವನೇ ಸ್ವಸ್ಥ ಮನಸ್ಸಿನವ,

ಯಜುರ್ವೇದದಲ್ಲಿ ಅಶ್ವಮೇಧಯಾಗದ ಪ್ರಸಂಗವೊಂದರಲ್ಲಿ ನಮಗೆ ಹೇಸಿಗೆ ಹುಟ್ಟಿಸುವಂತಹ ನಿರೂಪಣೆಯಿದೆ. ಅಶ್ವಮೇಧಯಾಗದ ಕುದುರೆ ಸತ್ತು ಬಿದ್ದ ಬಳಿಕ ಅಲ್ಲಿಗೆ ರಾಜಪತ್ನಿಯನ್ನು ಕರೆತರುತ್ತಿದ್ದರು. ಪಟ್ಟಮಹಿಷಿಯು ಸತ್ತು ಬಿದ್ದ ಕುದುರೆಯೊಂದಿಗೆ ಸಂಭೋಗ ನಡೆಸುವುದು ಇತ್ಯಾದಿಗಳ ವಿವರಣೆ ಅಲ್ಲಿದೆ. ಇವನ್ನು ಎಷ್ಟೇ ಸಾಂಕೇತಿಕವಾಗಿ ತೆಗೆದುಕೊಂಡರೂ ಇವು ಸ್ತ್ರೀಯನ್ನು ಪ್ರಾಣಿಗಿಂತಲೂ ಕೀಳಾಗಿ ಕಾಣುವ ಅಸತ್ಯ ಕೃತ್ಯಗಳಾಗಿವೆ. ಅಲ್ಲದೇ ಇದು ಪುರುಷರ ಲೈಂಗಿಕ ಆಸಕ್ತಿ ಎಷ್ಟು ಕೆಳಮಟ್ಟದಲ್ಲಿತ್ತು ಎಂಬುದಕ್ಕೆ ಸಾಕ್ಷಿಯಾಗುತ್ತದೆ

ಆತ ಎಷ್ಟೇ ಸಂಪ್ರದಾಯಸ್ಥನಾಗಲಿ, ಇದನ್ನು ಒಪ್ಪಿಕೊಳ್ಳುವುದು ಸಾಧ್ಯವೇ? ಈ ಸನ್ನಿವೇಶವನ್ನು ಕುರಿತು ಅರವಿಂದ ಚೊಕ್ಕಾಡಿಯವರು ಬಹಳ ವಿಷಯಗಳನ್ನು ಚರ್ಚಿಸಿದ್ದಾರೆ. (ಸಂಕಲನ-6)

ಇವನ್ನೆಲ್ಲಾ ಗಮನಿಸಿದಾಗ ಕಾಲಸರಿದಂತೆಲ್ಲಾ ಈ ಕಟ್ಟುಪಾಡುಗಳು ಕಟುವಾಗುತ್ತ ಹೋಗಿರುವುದು ಸ್ಪಷ್ಟವಾಗುತ್ತದೆ. ಯಾವುದೇ ಕಾರಣವಿಲ್ಲದೇ ಇವು ಕಟುವಾಗುತ್ತಾ ಹೋಗುವುದು ಸಾಧ್ಯವಿಲ್ಲ. ಇಲ್ಲಿ ಮೂರು ಕಾರಣಗಳು ಗೋಚರಿಸುತ್ತದೆ.

ಒಂದನೆಯದಾಗಿ ಧರ್ಮದೊಂದಿಗೇ ಬೆಳೆದು ಬಂದ ವಿಜ್ಞಾನ, ಈ ಧರ್ಮ ಮತ್ತು ವಿಜ್ಞಾನಗಳ ಮೂಲ ಒಂದೇ. ಅದು ಮನುಷ್ಯನ ಸ್ಪಂದನ. ಪ್ರಕೃತಿಯಲ್ಲಿ ಅಥವಾ ಸುತ್ತಲಿನ ಸಮಾಜದಲ್ಲಿ ಉಂಟಾಗುವ ಪ್ರತಿಯೊಂದು ಸ್ಥಿತ್ಯಂತರಗಳಿಗೂ ಮನುಷ್ಯನ ಸ್ಪಂದನ ಸ್ಪಂದಿಸುತ್ತದೆ. ಈ ರೀತಿಯ ಮಾನವ ಸಂವೇದನೆಗಳು ಪ್ರಶ್ನೆ, ಚಿಂತನೆ, ಜಿಜ್ಞಾಸೆಗಳತ್ತ ಒಲವು ತೋರಿದಾಗ ಮಂಥನದ ಈ ರೀತಿಯ ಮಾನವ ಸಂವೇದನೆಗಳು, ಪ್ರಶ್ನೆ, ಚಿಂತನೆ, ಜಿಜ್ಞಾಸೆಗಳತ್ತ ಒಲವು ತೋರಿದಾಗ ಪರಿಣಾಮವಾಗಿ ಉತ್ಪನ್ನವಾಗುವ ವಿಚಾರಜ್ಞಾನ. ಈ ವಿಚಾರ ಸತತ ಪ್ರಯೋಗ, ಪರಿಣಾಮಗಳ ಸಾಮಾನ್ಯೀಕರಣ, ಸ್ಪಷ್ಟವಾದ ನಿರೂಪಣೆ ಮತ್ತು ಸತತ ಪರಿಷ್ಕಾರದ ನಂತರ ವಿಜ್ಞಾನವಾಗುತ್ತದೆ. ಅದಲ್ಲದೇ ಈ ಪ್ರಶ್ನೆ ಜಿಜ್ಞಾಸೆಗಳು ಚಿಂತನೆಯ ನೆಲೆಯಲ್ಲೇ ಅಭಿವೃದ್ಧಿ ಹೊಂದಿದಾಗ ಅವು ಭೌತಿಕ-ಮಾನವಿಕ (Materialiatic-humanistic) ಸಿದ್ಧಾಂತಗಳಾಗುತ್ತವೆ. ಸತತ ಚರ್ಚೆ, ಪರಿಷ್ಕರಣೆ ನಡದೇ ಇರುತ್ತದೆ. ಈ ಎರಡು ನೆಲೆಗಳ-ವಿಜ್ಞಾನ ಮತ್ತು ಭೌತಿಕ-ಮಾನವಿಕ ಸಿದ್ಧಾಂತಗಳ ಸಮನ್ವಯವೇ ತತ್ವಜ್ಞಾನ.

ಸ್ಪಂದನಗಳು ಈ ರೀತಿಯಲ್ಲದೇ ಬೇರೊಂದು ರೀತಿಯಲ್ಲಿ ಸಾಗಬಹುದು. ಇವು ಆಶ್ಚರ್ಯ, ಭಯ, ನಿಗೂಢತೆಯ ಭಾವನೆಗಳನ್ನು ಹುಟ್ಟಿಸಬಹುದು. ಇವು ಹಾಗೇ ಬೆಳೆದು ಒಂದು ಅಪ್ರಾಕೃತ ಹಂತದ ಭಾವನಾವಾದವಾಗಿವೆ. ಇವುಗಳಿಂದ ಮನುಷ್ಯ ಪ್ರಕೃತಿಯ ಪ್ರತಿಯೊಂದು ವಸ್ತುವಿನಲ್ಲೂ- ಅದು ಸಚೇತನವಿರಲಿ ಅಥವಾ ಅಚೇತನವಿರಲಿ- ದೈವಿಕತೆಯನ್ನು ಕಾಣುವಂತಾದ. ಅವುಗಳೂ ತನ್ನಂತೆಯೇ ಎಂದು ಭಾವಿಸಿ, ಅವುಗಳ ಮೇಲೆ ಜೀವವನ್ನು, ತನ್ನ ಗುಣಗಳನ್ನು ಆರೋಪಿಸಿದ.(Personified) ಕೃತಜ್ಞಾ ಭಾವನೆಯಿಂದ ಹಲವಾರು ವಿಧಿಗಳನ್ನು ಹಮ್ಮಿಕೊಂಡ. ಕಾಲ ಸರಿದಂತೆ ಇದು ಹೀಗೇ ಮುಂದುವರಿಯುತ್ತಿತ್ತು. ಈ ಮಧ್ಯದಲ್ಲಿ ಇನ್ನಿತರ ಬೆಳವಣಿಗೆಗಳಿಂದಾಗಿ ಒಂದು ವರ್ಗ ಈ ನಿಗೂಢತೆಯನ್ನು ಭೇದಿಸಿದರೂ ಇತರರಿಗೆ ಅದು ರಹಸ್ಯಮಯವಾಗಿಯೇ ಇತ್ತು. ಹಾಗಾಗಿ ಪವಿತ್ರವಾಗಿತ್ತು. ಎಲ್ಲಿ Secrecy ಇರುತ್ತದೋ ಅಲ್ಲಿ ಮಾತ್ರ Sacredness ಇರುತ್ತದೆ ಎಂಬುದನ್ನು ಗಮನಿಸಬೇಕು. ಇದನ್ನೇ ಬಂಡವಾಳವಾಗಿಸಿಕೊಂಡ ಆ ವರ್ಗ ತಾನು ಕೊಬ್ಬಿತು. ಈ ಸಮಯದಲ್ಲೇ ಗಣವ್ಯವಸ್ಥೆ ರಾಜ್ಯವ್ಯವಸ್ಥೆಗೆ ದಾರಿಮಾಡಿಕೊಡುತ್ತಿತ್ತು. ಹಲವಾರು ಶಾಸ್ತ್ರಶಾಸನಗಳು ರಚಿತವಾದುವು. ಇಲ್ಲೇ ಧರ್ಮ ಸೂಕ್ಷ್ಮವಾಗಿ ಸ್ಥಾಪಿತವಾಗುತ್ತಿತ್ತು. ಈ ಬೆಳವಣಿಗೆಗಳು ಸಂವೇದನೆಗಳ ಪರಿಧಿಯಿಂದ ಹೊರಬಂದು ಗ್ರಂಥಪ್ರಾಮಣ್ಯವನ್ನು ವ್ಯವಸ್ಥೆಯ ತಳಪಾಯವನ್ನಾಗಿಸಿದವು.

ಮೇಲ್ವರ್ಗ ಶಾಸನಗಳ ಮೇಲೆ ಬಿಗಿ ಹಿಡಿತವನ್ನು ಸ್ಥಾಪಿಸಿತು. ಈ ದಾರಿಯಾಗಿ ಸಾಗಿಬಂದ ಭಾವನಾವಾದದ ಚಿಂತನೆಗಳು ಇಲ್ಲಿ ಎರಡನೆಯ ಮಜಲನ್ನು ಪ್ರವೇಶಿಸಿದವು. ಇಲ್ಲಿ ಧರ್ಮ ಸಾಂಸ್ಥಿಕ ಸ್ವರೂಪವನ್ನು ಪಡೆದುಕೊಂಡು ಸ್ಪಷ್ಟವಾದ ರೂಪದೊಂದಿಗೆ ಹೊರಬಂದಿತು. ಈ ಸಾಂಸ್ಥಿಕ ಸ್ವರೂಪ ಧರ್ಮ ಮತ್ತು ಅಧಿಕಾರವನ್ನು, ಸಂಪ್ರದಾಯ ಮತ್ತು ಆಡಳಿತವನ್ನು ಪುರೋಹಿತಶಾಹಿ ಮತ್ತು ಅಧಿಕಾರಶಾಹಿಯನ್ನು ಬೆಸೆಯಿತು. ಇದು ಧರ್ಮದ ಬಗ್ಗೆ ಒಂದು ಸ್ಪಷ್ಟ ಚಿತ್ರಣವನ್ನು ಒದಗಿಸಿದ್ದರಿಂದ ಮತ್ತು ಈ ಸಮಯಕ್ಕಾಗಲೇ ವಿಜ್ಞಾನ ಸಾಕಷ್ಟು ವಿಕಾಸ ಹೊಂದಿದ ಕಾರಣದಿಂದ ಎರಡು ಪಂಥಗಳು ಹುಟ್ಟಿಕೊಂಡವು. ಧರ್ಮ ತನ್ನನ್ನು ಸಾಂಸ್ಥಿಕತೆಯ ಮಿತಿಗೊಳಪಡಿಸಿದ್ದರಿಂದ 'ಸಂಸ್ಕೃತಿ'ಯ ಪರಿಕಲ್ಪನೆ ಉಂಟಾಯಿತು. ಒಂದು ಪಂಥ ಸಂಸ್ಕೃತಿಗೆ ಧರ್ಮವನ್ನೇ ಆಧಾರವಾಗಿಸಿದರೆ ಇನ್ನೊಂದು ಪಂಥ ಬದುಕನ್ನು ಅಡಿಪಾಯವಾಗಿಸಿತು. ಈ ಪಂಥ ವಿಜ್ಞಾನವು ಬದುಕಿಗೆ ಸಂಬಂಧ ಪಟ್ಟಿರುವುದಿಂದ ಅದನ್ನು ಸ್ವೀಕರಿಸಿ ಈ ಮೊದಲಿನ ಧಾರ್ಮಿಕ ಶಾಸ್ತ್ರಗಳ ಶಾಸನದ ಕಡೆಗೆ ತನ್ನ ವಿರತಿಯನ್ನು ವ್ಯಕ್ತಪಡಿಸಿತು. ಆದರೆ ಇನ್ನೊಂದು ಪಂಥ, ವಿಜ್ಞಾನ ರಹಸ್ಯವನ್ನು ಭೇದಿಸಿ ಧರ್ಮದ ಅಡಿಪಾಯವಾಗಿರುವ ಪವಿತ್ರತೆಯನ್ನು ನಶಿಸುವಂತೆ ಮಾಡುವುದರಿಂದ, ಧರ್ಮದ ಪೊಳ್ಳುತನವನ್ನು ಬಯಲು ಮಾಡುವ ವಿಜ್ಞಾನವನ್ನು ತಿರಸ್ಕರಿಸಿತು. ಭೌತವಾದೀ ಪಂಥ ಧರ್ಮ ನಿರಪೇಕ್ಷತೆಯ ಅಥವಾ ಸಮಾನತೆಯ ಶಾಸನ ರೂಪಿಸಿದರೆ ಭಾವನಾವಾದೀ

ಪಂಥ ಧರ್ಮಾಂಧ ಶಾಸನವನ್ನು ಬಿಗಿ ಹಿಡಿತದ ಕಟ್ಟು ಕಟ್ಟಳೆಯೊಂದಿಗೆ ವಿಜ್ಞಾನದ ಬೆಳವಣಿಗೆಗೆ ತೀವ್ರವಾದ ಅಡ್ಡಿಯನ್ನುಂಟುಮಾಡುವ ರೀತಿಯಲ್ಲಿ ರೂಪಿಸಿತು.

ವಿಜ್ಞಾನದ ವಿಕಾಸ ಸಮಾಜದಲ್ಲಿ 'ಯಾತು' ಮನೋಧರ್ಮದ ಬೆಳವಣಿಗೆಗೆ ಕಾರಣವಾಯಿತು. ಈ 'ಯಾತು' ಅಂದರೆ ನಿರೀಶ್ವರತೆ, ಶಕ್ತಿಯ ನಿರಾಕರಣೆ, ನಿರೀಶ್ವರವಾದ ಹಾಗೂ ಅನುಭವೈಕವಾದ. ಇದು ಗುಪ್ತ ಸೆಲೆಯಾಗಿ ಜನರಿಂದ ಜನರಿಗೆ ಚಲಿಸುತ್ತಿತ್ತು. ಇದು ಭಾರತದಲ್ಲಿ ಯುರೋಪಿನಂತೆ ರಕ್ತಕ್ರಾಂತಿಗಳಲ್ಲದಿದ್ದರೂ ದೀರ್ಘಕಾಲೀನ ಸುಪ್ತ ಕ್ರಾಂತಿಗೆ ಕಿಡಿಯನ್ನು ಹಚ್ಚಿತ್ತು. ಇದು ಮುಖ್ಯವಾಗಿ ಬುದ್ಧ-ಚಾರ್ವಾಕ ಪಂಥ ಮತ್ತು ಬಸವೇಶ್ವರರ ನಾಯಕತ್ವದಲ್ಲಿ ಪ್ರಕಟಗೊಂಡಿತು. ಬುದ್ಧ ವೇದ ಪ್ರಾಮಾಣ್ಯವನ್ನು ಸಾರಾಸಗಟಾಗಿ ನಿರಾಕರಿಸಿದ. ಸಮಾಜ ತನ್ನ ಮೇಲೆ ಮುಚ್ಚಿಕೊಂಡ ಮುಚ್ಚಿಗೆಯನ್ನು ಒಡೆದು ಹೊರಬಂದ. ಸಾಂಪ್ರದಾಯಿಕ ನಂಬಿಕೆಗಳನ್ನು ಧಿಕ್ಕರಿಸಿದ. ಸಿದ್ಧಾರ್ಥ ಬುದ್ಧನಾಗಲು ಕಾರಣವಾದ ನಾಲ್ಕು ವಿಷಯಗಳನ್ನೇ ತೆಗೆದುಕೊಳ್ಳೋಣ. ಚೆನ್ನನೊಂದಿಗೆ ಆತ ಹೋಗುತ್ತಿದ್ದಾಗ ನೋಡಿದ್ದು ಹೆಣವನ್ನು, ರೋಗಿಯನ್ನು, ಮುದುಕನನ್ನು, ಮತ್ತು ಭಿಕ್ಷುಕ. ಆ ಕಾಲಕ್ಕೆ ಪ್ರಚಲಿತವಿದ್ದ ನಂಬಿಕೆ ಯಾವ ರೀತಿ ಚಿಂತಿಸುತ್ತಿತ್ತು? ಹೆಣ ಇದು ಅಂಗಿಯಿದ್ದಂತೆ. ಆತ್ಮ ಒಂದು ದೇಹ ಶಿಥಿಲವಾದ ಅದನ್ನು ತ್ಯಜಿಸಿ ಇನ್ನೊಂದು ದೇಹಕ್ಕೆ ಹೋಗುತ್ತಿತ್ತು ಎಂಬುದು ಅದರ ನಂಬಿಕೆ. ಹೀಗಾಗಿ ಹೆಣಕ್ಕೆ ಕಾಸುಮಾತ್ರದ ಪ್ರಾಮುಖ್ಯವೂ ಇರಲಿಲ್ಲ. ಆದರೆ ಬುದ್ಧನಿಗೆ ಅದು ಮಾನವ ಬದುಕಿನ ಸಮಸ್ಯೆಯಾಗಿ ತೋರಿತು. ಹೀಗಿಯೇ ರೋಗಿ ಈತ ತನ್ನ ಪೂರ್ವ ಜನ್ಮದ ಪಾಪ ಫಲದಿಂದ ಹೀಗೆ ನರಳುತ್ತಿದ್ದಾನೆ ಎಂದು ಸಂಪ್ರದಾಯ ಚಿಂತಿಸುತ್ತಿತ್ತು. ಆದರೆ ಬುದ್ಧನಿಗೆ ಅದು ಕಂಡದ್ದು ಮನುಷ್ಯ ಬಾಳಿನ ದುರಂತವಾಗಿ. ಅದೇ ರೀತಿ ಸಾಂಪ್ರದಾಯಿಕ ದೃಷ್ಟಿಯಲ್ಲಿ ಭಿಕ್ಷುಕ ಅನುಭವಿಸುತ್ತಿರುವುದೂ ಪೂರ್ವ ಜನ್ಮದ ಫಲ. ಮುಪ್ಪೂ ಸಹ ಇದಕ್ಕೆ ಸರ್ವಥಾ ಅಪ್ರಾಮುಖ್ಯ. ಆದರೆ ಇವು ಆತನ ವ್ಯಕ್ತಿತ್ವವನ್ನೇ ಅಲ್ಲಾಡಿಸಿ ಆತ ಪ್ರಜಾ ಬದ್ಧತೆಯಿಂದ ಸಮಾಜ ಬದ್ಧತೆಯತ್ತ ಚಲಿಸುವಂತೆ ಮಾಡಿದವು. ನಂತರ ಬುದ್ಧ ತನ್ನ ಸಂಘಟನೆಯನ್ನು ಮಾಡಿದ್ದು ಗಣವ್ಯವಸ್ಥೆಯನ್ನು ಆಧಾರ ಆದರ್ಶವಾಗಿರಿಸಿ ಕೊಂಡು. (ಮುಂದೆ ಇದೇ ಗಣ ವ್ಯವಸ್ಥೆಯನ್ನು ಮಹಾ ಭಾರತದ ಶಾಂತಿ ಪರ್ವದಲ್ಲಿ ಭೀಷ್ಮ ತುಚ್ಛವಾಗಿ ನಿಂದಿಸಿ ದ್ದಾನೆ) ಸಮಾಜದ ಹೊರಗೆ ಸನ್ಯಾಸಿಗಳು ವಾಸಿಸುತ್ತಿದ್ದ ಆ ಸಮಯದಲ್ಲಿ ಜ್ಞಾನೋದಯದ ನಂತರ ಬುದ್ಧ ಮರಳಿದ್ದು ಜನರ ಮಧ್ಯೆಗೆ.

ಬುದ್ಧನದು ಈ ರೀತಿಯಾಗಿ ತತ್ವಕ್ಕೆ ಪ್ರತಿ ತತ್ವದ ಕ್ರಾಂತಿಯಾದರೆ, ಮುಂದೆ ಆತನಿಂದ ಅಹಿಂಸಾಪಾಲಕ ನಾಗುವ ಅಂಗುಲೀಮಾಲನದ್ದು ಕ್ರೌರ್ಯಕ್ಕೆ ಪ್ರತಿಕ್ರೌರ್ಯದ ಕ್ರಾಂತಿ. ಪುರೋಹಿತ-ಕ್ಷತ್ರಿಯ ಶಾಹಿಯ ವಿರುದ್ಧ ರಣ ರಂಗಕ್ಕಿಳಿದು ಕದನ ಘೋಷಿಸಿದ ಮೊಟ್ಟ ಮೊದಲನೆ ಯವನೀತ. ದಲಿತ ವರ್ಗದ ಮೊದಲ ಬಂಡಾಯಗಾರ. ಯಜಮಾನ ತಿಳಿಸಿದ ಕೆಲಸವನ್ನು ಮುಗಿಸಿ ಈತ

ಪ್ರಾಚೀನ ಭಾರತದಲ್ಲಿ ವೈದಿಕರಿಗೆ ಪ್ರಬಲ ವಿರೋಧ ಎದುರಾಗಿರುವುದು ಚಾರ್ವಾಕರಿಂದ ಅಥವಾ ಲೋಕಾಯತರಿಂದ.. ಚರ್ಚಾ ವೇದಿಕೆಯಲ್ಲಿ ಭಾವನಾವಾದಿಗಳ ನಿಲುವೆಲ್ಲ ಧೂಳೀಪಟವಾಗುತ್ತಿದ್ದುದ್ದು ಈ ವಾದ ಪ್ರವೀಣ ಸ್ವಭಾವವಾದಿಗಳಿಂದ. ಈ ಚಾರ್ವಾಕರ ನಿಲುವು ಅತ್ಯಂತ ತರ್ಕಶುದ್ಧವಾಗಿತ್ತು; ಅನುಭವಸಿದ್ಧವಾಗಿತ್ತು. ಪ್ರಾಚೀನ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಇವರು ಸಮಾಜದ ವರ್ಗಸ್ವರೂಪವನ್ನು ಮತ್ತು ಅನ್ಯೋನ್ಯತೆಗೆ ವಿರುದ್ಧವಾದ ವರ್ಗಹಿತಾಸಕ್ತಿಗಳನ್ನು ಮತ್ತು ಇವುಗಳ ಸಂಬಂಧಗಳನ್ನು ತಮ್ಮ ತತ್ವವಿವೇಚನೆಯಿಂದ ಸಾಧಿಸಿ ತೋರಿಸಿದರು. ಬುದ್ಧ ಮಹಾವೀರರ ಸಾಮಾಜಿಕ ಕ್ರಾಂತಿಗೆ ಸಮಾಜವನ್ನು ಹದಗೊಳಿಸಿದ್ದು ಇದೇ ಚಾರ್ವಾಕರ ವಿಚಾರಕ್ರಾಂತಿ. ಬಹುಪಾಲು ಚಾರ್ವಾಕರ ಸಾಮರ್ಥ್ಯದಲ್ಲಿ ವೈದಿಕ ಕರ್ಮಕಾಂಡ ಮತ್ತು ವೇದಗಳ ಖಂಡನೆಯಲ್ಲೆ ಕಳೆದಿದ್ದರಿಂದ ಅವರ ಸಿದ್ಧಾಂತಗಳ ಸುಸಂಘಟಿತ ಮಂಡನೆಗೆ ಮತ್ತು ಪ್ರತಿಷ್ಠಾಪನೆಗೆ ಅವಕಾಶವೇ ಸಿಕ್ಕಂತಿಲ್ಲ. ಚಾರ್ವಾಕರ ತತ್ವ ಒಂದು ವಿಷಯವೂ ಸರ್ವರ ಅನುಭವಕ್ಕೆ ಒಂದೇ ಬಗೆಯಾಗಿ ತಿಳಿದು ಬಂದ ಸಾಮಾನ್ಯ ಸರ್ವಮಾನ್ಯ ಸತ್ಯ.

ಮರಳಿದಾಗ ಮನೆಯಲ್ಲಿ ಯಜಮಾನನಿಂದ ನಡೆಯುತ್ತಿರುವ ಅತ್ಯಾಚಾರ ಕಂಡು ಆತ ಅಂಗುಲಿ ಧಾರಣೆಯ ವ್ರತ ಕೈಗೊಳ್ಳುತ್ತಾನೆ. ಮೊಟ್ಟಮೊದಲ ಬೆರಳು ಆ ಯಜಮಾನನದೇ- ಚಾತುರ್ವರ್ಣ್ಯದ ಪ್ರತಿನಿಧಿ. ಬುದ್ಧನದು ಮೂಲ ತತ್ವದ ವಿರುದ್ಧ ಕ್ರಾಂತಿಯಾದರೆ ಈತನದು ತತ್ವಕ್ಕಿಂತ ಭಿನ್ನವಾದ ಆಚರಣೆಗಳ ವಿರುದ್ಧದ ಆ ಮೂಲಕ ತತ್ವದ ವಿರುದ್ಧದ ಕ್ರಾಂತಿ.

ಬುದ್ಧನಿಗೆ ದೇವರ ಕಲ್ಪನೆ ಅಗತ್ಯವೆನಿಸಲಿಲ್ಲ. ಬೌದ್ಧ ಸಂಸ್ಕೃತಿಗೆ ಧರ್ಮದ (ಸಾಂಸ್ಥಿಕ) ಅಡಿಪಾಯಬೇಕೆನಿಸಲಿಲ್ಲ. ಇಲ್ಲಿ ಗುಡಿ, ಶಿಲೆಗಳೂ ಅನಾವಶ್ಯಕ. ಪರಲೋಕ, ಸ್ವರ್ಗಗಳ ರಮ್ಯಕಲ್ಪನೆಗಳೂ ಅನಗತ್ಯ. ದುರದೃಷ್ಟವತಾಶ್ ಆತನ ಅನುಯಾಯಿಗಳೇ ಆತನನ್ನು ದೇವರನ್ನಾಗಿಸಿದರು. ಆತನ ಸಿದ್ಧಾಂತಗಳನ್ನು ವಿಕೃತಗೊಳಿಸಿದರು. ತಾನೇ ಬುದ್ಧನ ಗೋರಿಯನ್ನು ಕೈಯಾರೆ ನಿರ್ಮಿಸಿದರು.

ಜಗತ್ತಿನಲ್ಲೇ ಮೊಟ್ಟಮೊದಲ ಬಾರಿಗೆ ಖಾಸಗೀ ಆಸ್ತಿಯ ಸಂಚಯನವನ್ನು ಶಿಸ್ತುಬದ್ಧವಾಗಿ ವಿರೋಧಿಸಿದ ಈ ಕಮ್ಯುನಿಷ್ಟನನ್ನು ಇಪ್ಪತ್ತನೇ ಶತಮಾನದವರೆಗೂ ಗುರುತಿಸಲೇ ಇಲ್ಲ.

ಪ್ರಾಚೀನ ಭಾರತದಲ್ಲಿ ವೈದಿಕರಿಗೆ ಪ್ರಬಲ ವಿರೋಧ ಎದುರಾಗಿರುವುದು ಚಾರ್ವಾಕರಿಂದ ಅಥವಾ ಲೋಕಾಯತರಿಂದ.. ಚರ್ಚಾ ವೇದಿಕೆಯಲ್ಲಿ ಭಾವನಾವಾದಿಗಳ ನಿಲುವೆಲ್ಲ ಧೂಳೀಪಟವಾಗುತ್ತಿದ್ದುದ್ದು ಈ ವಾದ ಪ್ರವೀಣ ಸ್ವಭಾವವಾದಿಗಳಿಂದ. ಈ ಚಾರ್ವಾಕರ ನಿಲುವು ಅತ್ಯಂತ ತರ್ಕಶುದ್ಧವಾಗಿತ್ತು; ಅನುಭವಸಿದ್ಧವಾಗಿತ್ತು. ಪ್ರಾಚೀನ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಇವರು ಸಮಾಜದ ವರ್ಗಸ್ವರೂಪವನ್ನು ಮತ್ತು ಅನ್ಯೋನ್ಯತೆಗೆ ವಿರುದ್ಧವಾದ ವರ್ಗಹಿತಾಸಕ್ತಿಗಳನ್ನು ಮತ್ತು ಇವುಗಳ ಸಂಬಂಧಗಳನ್ನು ತಮ್ಮ ತತ್ವವಿವೇಚನೆಯಿಂದ ಸಾಧಿಸಿ ತೋರಿಸಿದರು. ಬುದ್ಧ ಮಹಾವೀರರ ಸಾಮಾಜಿಕ ಕ್ರಾಂತಿಗೆ ಸಮಾಜವನ್ನು ಹದಗೊಳಿಸಿದ್ದು ಇದೇ ಚಾರ್ವಾಕರ ವಿಚಾರಕ್ರಾಂತಿ. ಬಹುಪಾಲು ಚಾರ್ವಾಕರ ಸಾಮರ್ಥ್ಯದಲ್ಲಿ ವೈದಿಕ ಕರ್ಮಕಾಂಡ ಮತ್ತು ವೇದಗಳ ಖಂಡನೆಯಲ್ಲೆ ಕಳೆದಿದ್ದರಿಂದ ಅವರ ಸಿದ್ಧಾಂತಗಳ ಸುಸಂಘಟಿತ ಮಂಡನೆಗೆ ಮತ್ತು ಪ್ರತಿಷ್ಠಾಪನೆಗೆ ಅವಕಾಶವೇ ಸಿಕ್ಕಂತಿಲ್ಲ. ಚಾರ್ವಾಕರ ತತ್ವ ಒಂದು ವಿಷಯವೂ ಸರ್ವರ ಅನುಭವಕ್ಕೆ ಒಂದೇ ಬಗೆಯಾಗಿ ತಿಳಿದು ಬಂದ ಸಾಮಾನ್ಯ ಸರ್ವಮಾನ್ಯ ಸತ್ಯ.

ಚಾರ್ವಾಕರ ಕೃತಿಗಳೆಲ್ಲ ವೈದಿಕಶಾಹಿಯ ಧಾಳಿಯಿಂದ ಲುಪ್ತವಾಗಿವೆ. ಆದಾಗ್ಯೂ ಮಾಧವಚಾರ್ಯರು 'ಸರ್ವ ದರ್ಶನ ಸಂಗ್ರಹ'ದಲ್ಲಿ ಜನಪ್ರಿಯ ಲೋಕಗಾಥಗಳನ್ನು ಪೂರ್ವ ಪಕ್ಷವೆಂದು ಎತ್ತಿಕೊಂಡರೂ ಉದ್ಧರಿಸಿದ್ದಾರೆ.

ಅಗ್ನಿ ಹೋತ್ರ, ಮೂರು ವೇದಗಳು,
ಸಾಧುವಿನ ದಂಡಗಳು,
ಬೂದಿಯಿಂದ ಮುಚ್ಚಿದ ಮೈ;
-ಬೃಹಸ್ಪತಿ ಅನ್ನುತ್ತಾರೆ: ಪೌರುಷ, ಬುದ್ಧಿ ಇಲ್ಲದ
ಮಂದಿ ಬದುಕುವ ಬರಡು ದಾರಿಗಳವು.
ಮೂರು ವೇದಗಳ ಕರ್ತೃಗಳು ನಿಜವಾಗಿ
ಕೋಡಂಗಿಗಳು, ಮೋಸಗಾರರು, ಠಕ್ಕರು ನೋಡು!
ಪಂಡಿತರ ಜರ್ಘರಿ, ತುಷಾರಿಗಳ ಅಬ್ಬರ...
ದಾನ, ದಕ್ಷಿಣೆಗಳ ಸೃಷ್ಟಿ ಅವರದೇ
ರಾತ್ರಿ ಕತ್ತಲೆಯಲ್ಲಿ ಮನೆನುಗ್ಗಿ ಕದಿವ ಕಳ್ಳರ ದಂಡು.
ಮಾಂಸ ಭಕ್ಷಣವನ್ನು ಖಂಡಿಸಿದ ತೆರದವರು.
ಸ್ವರ್ಗವೆಂಬುದು ಇಲ್ಲ, ಮೋಕ್ಷವೆಂಬುದು ಇಲ್ಲ
ಆತ್ಮವೆಂಬುದು ಇಲ್ಲವೇ ಇಲ್ಲ ಪರಲೋಕದಲ್ಲಿ
ವರ್ಣಾಶ್ರಮವೆಂಬ ನಾಲ್ಕು ಜಾತಿಗಳು
ನಾಲ್ಕು ಶ್ರೇಣಿಗಳ ಕರ್ಮ ನೀಡುವುದೇ ನಿಜದ ಪರಿಣಾಮ!
ಇಹದಲ್ಲಿ ಬ್ರಾಹ್ಮಣನು ಶ್ರಾದ್ಧಾನ್ನ ಉಂಡಾಗ
ಮೇಲೆ ಸ್ವರ್ಗದಲ್ಲಿರುವ ಪಿತೃಳಿಗೆ ಸಂತೃಪ್ತಿ
ಹಾಗಿದ್ದರೆ ಮಹಡಿಯಲ್ಲಿ ಕುಳಿತವನಿಗೇಕೆ
ಊಟನೀಡಬಾರದು ಮನೆಯೊಳಗೆ ಪಿಂಡವಿಟ್ಟು?

ಸತ್ತವನಿಗೆ ಶ್ರಾದ್ಧಾನ್ನದಿಂದ ಸಂತೃಪ್ತಿ ಸಿಗುವುದಾದರೆ
ಪಯಣಿಗನಿಗೆ ಕೊಡಬೇಕೇಕೆ ಬುತ್ತಿಯ ಗಂಟು?
ಜ್ಯೋತಿಷ್ಟೋಮ ಯಾಗದಲಿ ಬಲಿಯಿತ್ತ ಪಶುವು
ಸ್ವರ್ಗಕ್ಕೆ ಹೋಗುವುದು ನಿಜವಾದ ಪಕ್ಷದಲಿ ಯಜ್ಞ
ಮಾಡಿಸುವಾತ ಅಪ್ಪನನ್ನೇ ಏಕೆ
ಬಲಿಕೊಡುವುದಿಲ್ಲ ಸ್ವರ್ಗಕ್ಕೆ ಕಳುಹಿಸಲು?

(ಆಕರ: ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ : ಡಾ. ಜಿ. ರಾಮಕೃಷ್ಣ ನವಕರ್ನಾಟಕ, 1994)

ಚಾಟಿ ಏಟಿನಂತಹ ಮಾತಿನ ಈ ದರ್ಶನವನ್ನು ಶಂಕರಾಚಾರ್ಯರು 'ಪ್ರಧಾನಮಲ್ಲ' (ಪ್ರಮುಖ ಕುಸ್ತಿಪಟು) ಎಂದು ಬಗೆದಿರುವುದು ಇವರ ಕ್ರಾಂತಿಕಾರೀ ಸಾಮರ್ಥ್ಯಕ್ಕೆ ನಿದರ್ಶನ.

ಇವರನ್ನು ವೈದಿಕಶಾಹಿ ಹಿಂಸಾಮಾರ್ಗವನ್ನೂ ಕೂಡಿ ಎಲ್ಲಾ ರೀತಿಯಲ್ಲೂ ನಿರ್ನಾಮ ಮಾಡಿತು. ಮಹಾಭಾರತದ ಸಂದರ್ಭವೊಂದು ಇಲ್ಲಿ ಪ್ರಸ್ತುತ; ಯುಧಿಷ್ಠಿರ ಕೌರವರನ್ನೆಲ್ಲ ಸಂಹರಿಸಿ ಪುರಪ್ರವೇಶ ಮಾಡುವ ಸಂದರ್ಭ. ಆಗ ಚಾರ್ವಾಕನು ಆತನನ್ನು ಪ್ರಶ್ನಿಸುತ್ತಾನೆ- 'ನೀನು ನಿನ್ನ ಅಣ್ಣತಮ್ಮಂದಿರನ್ನು, ಅನೇಕ ಅಮಾಯಕರನ್ನು ಕೊಂದು ರಾಜ್ಯವನ್ನು ಪಡೆದಿದ್ದೀಯೆ. ನೀನು ಧರ್ಮರಾಜ; ಕುರುಕ್ಷೇತ್ರದಲ್ಲಿ ಅಷ್ಟು ರಕ್ತಹರಿಸಿ ನೀನು ಸಾಧಿಸಿದ್ದೇನು?' ಇಲ್ಲೀಗ ಯುಧಿಷ್ಠಿರ ನಿರುತ್ತರನು. ಭಗವದ್ಗೀತೆಯ ಕೃಷ್ಣನ ಯಾವ ಮಾಯಾವಾದವೂ ಇಲ್ಲಿ ನಡೆಯುವುದೆಲ್ಲ ದೈವೇಚ್ಛೆ; ಇಲ್ಲಿ ಸಾಯುವವರೂ ಇಲ್ಲ, ಸಾಯಿಸಿದವರೂ ಕೂಡಾ ಇಲ್ಲ; ಆತ್ಮ ಅವಿನಾಶಿ, ದೇಹ ಅದು ಬದಲಿಸುವ ಅಂಗಿಯಂತೆ-ಇತ್ಯಾದಿ ಯಾವ ವಾದವೂ ಬಹುಶಃ ನೆನಪಿಗೆ ಬರುವುದಿಲ್ಲ. ಅರ್ಜುನನ ಇದೇ ಪ್ರಶ್ನೆಗೆ ಕೃಷ್ಣ ಈ ಉತ್ತರ ನೀಡಿದ್ದ; ಅಲ್ಲಿ ಅರ್ಜುನ ಕೃಷ್ಣನ ಹಂಗಿಗೆ ಬಿದ್ದ ಗೊಂದಲಿತ ಪ್ರಾಣಿ. ಆದರೆ ಇಲ್ಲಿ ಚಾರ್ವಾಕ ತನ್ನದೇ ಆದ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಜೀವಪರತೆಗೆ ಬದ್ಧನಾಗಿರುವವ. ಈ ಮೂಲ ಪ್ರಶ್ನೆಗೆ, ಬದುಕಿನ ಪ್ರಶ್ನೆಗೆ ಈತ ಯಾವ ಹಾರಿಕೆಯ ಉತ್ತರವನ್ನೂ ಸ್ವೀಕರಿಸಲಾರ ಎಂದು ತಿಳಿದೇ ಯುಧಿಷ್ಠಿರನು ಮಿತ್ರನೆಂದೂ ರಾಕ್ಷಸನೆಂದೂ ಕರೆದು ತಮ್ಮ 'ಮಂತ್ರಶಕ್ತಿ'ಯಿಂದ ಸುಟ್ಟು ಬೂದಿಮಾಡುತ್ತಾರೆ....ಆದರೆ...ಚಾರ್ವಾಕನೆತ್ತಿದ ಪ್ರಶ್ನೆ ಅವನೊಂದಿಗೇ ಬೂದಿಯಾಗಲಿಲ್ಲ; ಚಿರಂಜೀವಿಯಾಗಿದೆ. ಚರಿತ್ರೆಯಲ್ಲಿ ಆಗಾಗ ಮೈಕೊಡವಿ ಮೇಲೆದ್ದು ನಿಂತಿದೆ; ನಿಲ್ಲುತ್ತಿದೆ. ಈ ಪ್ರಶ್ನೆ ಮತ್ತೆ ಗರಿಗೆದರಿ ಮುಗಿಲಿಗೇರಿದ್ದು ಮುಖ್ಯವಾಗಿ 12ನೆಯ ಶತಮಾನದಲ್ಲಿ- ಬಸವಣ್ಣನ ಅನುಭವ ಮಂಟಪದಲ್ಲಿ.

ಸುಮಾರು ಹನ್ನೆರಡನೇ ಶತಮಾನದ ಹೊತ್ತಿಗೆ ಭಾರತದಲ್ಲಿ ವೈದಿಕವಿರೋಧಿ ಪ್ರಜ್ಞೆ ಹಲವೆಡೆ ಮೂಡಿತ್ತು. ಇದರ ವ್ಯಾಪಕತೆ ಮತ್ತು ಕ್ರಾಂತಿಕಾರೀ ಗುಣದಲ್ಲಿ ಉಳಿದವೆಲ್ಲವನ್ನೂ ಮೀರುವುದು ಕರ್ನಾಟಕದ ಶರಣ ಚಳುವಳಿ. ಯಾವಾಗ ತಮ್ಮ ಸುತ್ತಲಿನ ಅಗ್ರಹಾರದ ಪುರೋಹಿತರು ಸಾವಿನೊಡನೆ ಕದನ ಹೂಡಿದ್ದ ದಲಿತ ಹುಡುಗನನ್ನು ನೋಡಿ ಮದ್ದಿಗೆ ಬಂದಷ್ಟು ಕಾಸು ಕೊಟ್ಟದ್ದನ್ನು ವಿರೋಧಿಸಿದರೋ ಆಗಲೇ ಮನುಷ್ಯತ್ವಕ್ಕೆ ತಡೆಯೊಡ್ಡುವ 'ಪವಿತ್ರ' ದಾರವನ್ನು ಕಿತ್ತೊಗೆದರು.

ಸುಮಾರು ಹನ್ನೆರಡನೇ ಶತಮಾನದ ಹೊತ್ತಿಗೆ ಭಾರತದಲ್ಲಿ ವೈದಿಕವಿರೋಧಿ ಪ್ರಜ್ಞೆ ಹಲವೆಡೆ ಮೂಡಿತ್ತು. ಇದರ ವ್ಯಾಪಕತೆ ಮತ್ತು ಕ್ರಾಂತಿಕಾರೀ ಗುಣದಲ್ಲಿ ಉಳಿದವೆಲ್ಲವನ್ನೂ ಮೀರುವುದು ಕರ್ನಾಟಕದ ಶರಣ ಚಳುವಳಿ. ಯಾವಾಗ ತಮ್ಮ ಸುತ್ತಲಿನ ಅಗ್ರಹಾರದ ಪುರೋಹಿತರು ಸಾವಿನೊಡನೆ ಕದನ ಹೂಡಿದ್ದ ದಲಿತ ಹುಡುಗನನ್ನು ನೋಡಿ ಮದ್ದಿಗೆ ಬಂದಷ್ಟು ಕಾಸು ಕೊಟ್ಟದ್ದನ್ನು ವಿರೋಧಿಸಿದರೋ ಆಗಲೇ ಮನುಷ್ಯತ್ವಕ್ಕೆ ತಡೆಯೊಡ್ಡುವ 'ಪವಿತ್ರ' ದಾರವನ್ನು ಕಿತ್ತೊಗೆದರು.

ಶೋಷಣೆಯ ಅಸ್ತ್ರಗಳನ್ನು ಒಂದೊಂದನ್ನಾಗಿ ಅವರು ಬಿಚ್ಚಿಡುತ್ತಾರೆ- 'ಶಾಸ್ತ್ರ ಘನವೆಂಬೆನೆ? ಕರ್ಮವ ಭಾಜಿಸುತ್ತಿದೆ/ ವೇದ ಘನವೆಂಬೆನೆ? ಪ್ರಾಣವಧೆಯ ಹೇಳುತ್ತಿದೆ/ ಶ್ರುತಿ ಘಲವೆಂಬೆನೇ? ಮುಂದಿಟ್ಟು ಅರಸುತ್ತಿದೆ/ ಅಲ್ಲೇಲ್ಲಿಯೂ ನೀವಿಲ್ಲದ ಕಾರಣ. ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲಸಂಗಮದೇವಾ' (ಗುರು, ಲಿಂಗ, ಜಂಗಮ (ತ್ರಿವಿಧ ದಾಸೋಹ) ಗಳನ್ನು ಬೌದ್ಧಧರ್ಮದ ಬುದ್ಧ, ಧಮ್ಮ, ಸಂಘದೊಡನೆ ಹೋಲಿಸಿ ಎಂಥ ಸಾಮ್ಯತೆ) ಬಸವಯ್ಯ ಕಲ್ಯಾಣವನ್ನು ಬಿಟ್ಟು ಹೊರಡುವ ಮೊದಲು ಬ್ರಾಹ್ಮಣ ಮಧುವರಸನ ಮಗಳನ್ನು ಹೊಲೆಯ ಹರಳಯ್ಯನ ಮಗನೊಂದಿಗೆ ಮದುವೆ ಮಾಡಿಸಿಯೇ ತೀರಿದನು. ಇಂತಹ ವಿವಾಹಗಳಿಗೆ ಇಂದೇ ಒಪ್ಪಿಗೆ ದೊರೆವುದು ಕಷ್ಟವಾಗಿರುವಾಗ, 8ನೇ ಶತಮಾನದ ಹಿಂದೆಯೇ ಬಸವಣ್ಣ ಅದನ್ನು ಸಾಧಿಸಿದಾಗ ಕಟ್ಟೆ ಜುಟ್ಟುಗಳಿಗೆ ಹೇಗಾಗಿರಬೇಡ? ಬಸವಣ್ಣ ಅದನ್ನು ವಿವರಿಸುವುದು ಹೀಗೆ:

ವೇದ ನಡು ನಡುಗಿತ್ತು,ಶಾಸ್ತ್ರವಗಲಿ ಕೆಲಕ್ಕೆಸಾರಿದ್ದಿತಯ್ಯಾ!
ತರ್ಕ ತರ್ಕಿಸಲ್ಗೆಯ್ಯದೆ ಮೂಗುವಟ್ಟೆದ್ದಿತ್ತಯ್ಯಾ!
ಆಗಮ ಹೊರ ತೊಲಗಿ ಅಗಲಿದ್ದಿತಯ್ಯ!
ನಮ್ಮ ಕೂಡಲ ಸಂಗಯ್ಯನು
ಮಾದಾರ ಚೆನ್ನಯ್ಯನ
ಮನೆಯಲಿ ಉಂಡ ಕಾರಣ.

ಈ ರೀತಿಯಾಗಿ ಕರ್ಮ ಸಿದ್ಧಾಂತ, ವರ್ಣ ಧರ್ಮಗಳನ್ನು ಖಂಡಿಸುವುದು ಹೆಚ್ಚಾದಾಗ ಆ ಕಿಡಿಗಳು ಕೆಳವರ್ಗವನ್ನು ತಲುಪದಂತೆ ಪುರೋಹಿತಶಾಹಿ ಎಚ್ಚರ ವಹಿಸಬೇಕಿತ್ತು. ವೇದಗಳ ಅಪ್ರಶ್ನಾರ್ಹ ಎಂಬಂತಹ ಉಪದೇಶಗಳು ಹಳಸಲಾಗಿದ್ದವು. ಹೀಗಾಗಿ 'ನಿಷೇಧ'ಗಳನ್ನೇ ಅಸ್ತ್ರಗಳನ್ನಾಗಿಸಿ ಮುತ್ತಿಗೆ ಹಾಕುವುದು ಒಳ್ಳೆಯದು ಎನಿಸಿತು. ಹೀಗಾಗಿ ಹೊಸ ಹೊಸ ಕಟ್ಟುಕಟ್ಟಳೆಗಳು ಉಕ್ಕಿನ ಕಟುತ್ವದೊಂದಿಗೆ ಮೈದಳೆದವು. ಈ ರೀತಿಯಾಗಿ ಶೂದ್ರ-ವಿಮೋಚನಾ ಪ್ರಜ್ಞೆಯ ಉದಯ ತಾತ್ಕಾಲಿಕವಾಗಿಯಾದರೂ ಶೂದ್ರರ ಸ್ಥಿತಿ ಶೋಚನೀಯವಾಗಲು ಮೂರನೆಯ ಕಾರಣ. ಬಹುಶಃ ಪ್ರತಿ ಹಂತದ ಕಟು ಸತ್ಯವೂ ಲಾಲಾಜಿಯವರು ಬೇರೊಂದು ಸನ್ನಿವೇಶದಲ್ಲಿ ಉಪಯೋಗಿಸಿದ ಮಾತಿನಂತೆ, ವೈದಿಕಶಾಹಿಯು ಕರ್ಮ ಸಿದ್ಧಾಂತ, ವರ್ಣವ್ಯವಸ್ಥೆಗಳ ಶವಪೆಟ್ಟಿಗೆಗೆ ಬೀಳುತ್ತಿದ್ದ ಒಂದೊಂದು ಮೊಳೆಗಳು ಎಂಬ ಅಂಶ ಅಂದು ಹೊಳೆದಿರಲೇ ಇಲ್ಲ!

ಕರ್ಮ ಸಿದ್ಧಾಂತ, ವರ್ಣ ಧರ್ಮಗಳನ್ನು ಖಂಡಿಸುವುದು ಹೆಚ್ಚಾದಾಗ ಆ ಕಿಡಿಗಳು ಕೆಳವರ್ಗವನ್ನು ತಲುಪದಂತೆ ಪುರೋಹಿತಶಾಹಿ ಎಚ್ಚರ ವಹಿಸಬೇಕಿತ್ತು. ವೇದಗಳ ಅಪ್ರಶ್ನಾರ್ಹ ಎಂಬಂತಹ ಉಪದೇಶಗಳು ಹಳಸಲಾಗಿದ್ದವು.

ಈ ಶೋಷಣೆಯನ್ನು ವಿರೋಧಿಸಿದವರು 'ಶಿಷ್ಟ' ಗ್ರಂಥಗಳು ಯಾರನ್ನು 'ಪಾಖಂಡಿ', 'ಪಾಷಂಡಿ'ಗಳೆಂದು ಬರೆಯುತ್ತದೋ! ಆ ನಾಸ್ತಿಕರು ಭಾರತೀಯ ಸಂದರ್ಭದಲ್ಲಿ ಇದನ್ನು ಈಗಾಗಲೇ ಗಮನಿಸಿದ್ದೇವೆ. ಹಾಗೇ ಅಮೆರಿಕಾದಲ್ಲಿ ಗುಲಾಮಗಿರಿಯ ವಿರುದ್ಧ ಮೊಟ್ಟಮೊದಲ ಕಹಳೆ ಮೊಳಗಿಸಿದವನು ಕಟ್ಟಾ ನಾಸ್ತಿಕ ಥಾಮಸ್ ಪೇಯ್ನ್, ಅದೇ ರೀತಿ ಯುರೋಪಿನಲ್ಲಿ ಊಳಿಗ ಮಾನ್ಯ ಪದ್ಧತಿಯ ಪಳೆಯುಳಿಕೆಗಳ ಮೇಲೆ ಚಿಗುರೊಡೆದು ಬೆಳೆದ ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಇನ್ನೊಂದು ರೀತಿಯಲ್ಲಿ ಗುಲಾಮರಾದ ಜನರಿಗೆ ಸಶಕ್ತನಾಗಿ ದನಿ ಕೊಟ್ಟವನು ಮಾರ್ಕ್ಸ್. ಅದೇ ರೀತಿ ಅಮೆರಿಕಾದಲ್ಲಿ ಪಕ್ಕದ ಕ್ಯೂಬಾದಲ್ಲಿ ಅಂತರರಾಷ್ಟ್ರೀಯ ಬ್ರಾಹ್ಮಣರ ದಬ್ಬಾಳಿಕೆಗೆ ಒಳಗಾಗುತ್ತಿದ್ದ ದೇಶೀಯ ಶೂದ್ರರ ಪರವಾಗಿ ಕದನ ಘೋಷಿಸಿ 'ಬಂಡವಾಳ'ದ ಸೊಕ್ಕನ್ನಡಗಿಸಿದವನು ಫಿಡಲ್‌ಕ್ಯಾಸ್ಟ್ರೋ.

ಶಿಷ್ಟ ಪರಂಪರೆಯ ಕೆಡುಕಗಳನ್ನು ಎತ್ತಿ ತೋರಿಸಿದವರನ್ನೆಲ್ಲಾ ಇತಿಹಾಸ ಖಳನಾಯಕರನ್ನಾಗಿ ಬಿಂಬಿಸುತ್ತಾ ಬಂದಿದೆ. ಇಲ್ಲಿ ಸಮಾಜ ಸುಧಾರಣೆಗೆ ತಿಲ ಮಾತ್ರದ ಸಮಯವನ್ನೂ ವ್ಯಯಿಸಿದ ಪ್ರತಿಗಾಮಿ ಶಂಕರಾಚಾರ್ಯ 'ಸಮಾಜ ಸುಧಾರಕ'ನಾಗುತ್ತಾನೆ! ಬ್ರಿಟಿಷರ ಕಾಲು ಹಿಡಿದು ಜೈಲಿನಿಂದ ಹೊರಬಂದ ಸಾವರ್ಕರ್ 'ವೀರ' ನಾಗುತ್ತಾನೆ! 'ಅಪ್ರತಿಮ ದೇಶಭಕ್ತನು' ಈತ! ಆರ್‌ಎಸ್‌ಎಸ್‌ನ ಕೋಮುಗಲಭೆ 'ಸ್ವಾತಂತ್ರ್ಯ ಹೋರಾಟ'ವಾಗುತ್ತದೆ. ಇಲ್ಲಿ ನಾವು ಭಯೋತ್ಪಾದಕ ಏರಿಯಲ್ ಶಿರೋನ್‌ನಿಂದ ಸ್ಲೇಟು ಬಳಪ ಹಿಡಿದು ಪಾಠ ಹೇಳಿಸಿಕೊಳ್ಳುತ್ತೇವೆ. ಇನ್ನೂ ಎಷ್ಟೋ....

ಇನ್ನು ಮಾನ್ಯ ಸಚಿವ ಮುರಳಿ ಮನೋಹರ ಜೋಶಿ ಪ್ರಣೀತ (ಸಂಘ ಪರಿವಾರ?!) ಪರಿಷ್ಕೃತ (ಕೇಸರೀಕೃತ) ಇತಿಹಾಸದಲ್ಲೆಷ್ಟು? ಈ ಇತಿಹಾಸವನ್ನೇನನ್ನಬಹುದು? ಶಾಸ್ತ್ರಗಳ ಗೂಂಡಾಗಿರಿಗೊಂದು ಹೊಸ ಮಚ್ಚು!!!?

ಝೆನ್

ಅನಾಲೋಕಿತ ಕಥೆ ಪ್ರಸಂಗ ಸಂವಾದ ಒಗಟು ಮುಂಡಿಗೆಗಳು

○ಕೆ.ವಿ. ಸುಬ್ಬಣ್ಣ



ಆಗಂತುಕ ಪತ್ತೆದಾರಿ



ಶಿಕ್ಷಣಾರ್ಥಿಯೊಬ್ಬ ಗುರು ಬೆಂಕೆಯಿ ಬಳಿಗೆ ಬಂದ. 'ನನ್ನಲ್ಲಿರುವ ಕ್ರೋಧ ಗುಣವನ್ನು ನಿವಾರಿಸಿಕೊಳ್ಳಲು ನೆರವಾಗಿ ಗುರುವೇ' ಎಂದು ಬೇಡಿಕೊಂಡ.

'ಅಪ್ಪಾ, ನಿನ್ನ ಮಾತು ಕೇಳಿ ನನ್ನ ಕುತೂಹಲ ಕೆರಳುತ್ತಿದೆ. ಎಲ್ಲಿ, ಆ ನಿನ್ನ ಕ್ರೋಧಗುಣವನ್ನು ತೋರಿಸಿಕೊಡು' ಎಂದ, ಗುರು ಬೆಂಕೆಯಿ.

'ಅದು ಈ ಹೊತ್ತಲ್ಲಿ ಇಲ್ಲವಲ್ಲ, ಗುರುವೇ, ಹೇಗೆ ಅದನ್ನು ತಂದು ತೋರಿಸಲಿ?' ಎಂದ ಆತ.

'ಒಳ್ಳೆಯದಪ್ಪಾ, ಇರುವಾಗಲೇ ನನಗೆ ಅದನ್ನು ತಂದು ತೋರಿಸು' ಎಂದ ಬೆಂಕೆಯಿ.

'ಅದೂ ಆಗಲಾರದು, ಗುರುವೇ, ನನ್ನಲ್ಲಿ ಕ್ರೋಧಗುಣ ಕಂಡಾಗ, ನಾನು ಇಲ್ಲಿಗೆ ಬಂದು ಅದನ್ನು ತಮಗೆ ತೋರಿಸಿಕೊಡಬೇಕೆಂದರೆ, ಅಷ್ಟರಲ್ಲೇ ಅದು ಮಾಯವಾಗಿ ಬಿಟ್ಟಿರುತ್ತದೆ' ಎಂದ, ಆತ.

ಬೆಂಕೆಯಿ ಹೇಳಿದ-

'ಹಾಗಿದ್ದರೆ ಈ ಕ್ರೋಧ, ನಿನ್ನ ಪ್ರಕೃತಿಯ ಅಂಶವಲ್ಲ ಎನ್ನಿಸುತ್ತದೆ. ಅದು ನಿನ್ನ ಪ್ರಕೃತಿಯ ಅಂಶವಲ್ಲ ಎಂದಮೇಲೆ, ಹೊರಗಿನಿಂದ ಬಂದು ನಿನ್ನೊಳಕ್ಕೆ ಸೇರಿಕೊಳ್ಳಬೇಕಷ್ಟೇ. ನಿನಗೆ ಒಂದು ಉಪಾಯ ಹೇಳುತ್ತೇನೆ-ಯಾವುದೇ ಹೊತ್ತಿನಲ್ಲಿ ಅದು ನಿನ್ನೊಳಕ್ಕೆ ಬಂದಿತೆಂದರೆ, ಆಗ, ಒಂದು ಕೋಲು ತೆಗೆದುಕೊಂಡು ನಿನ್ನನ್ನೇ ನೀನು ಚೆನ್ನಾಗಿ ಬಡಿದಿಕೋ. ಆಗ, ಆ ಆಗಂತುಕ ಕ್ರೋಧ, ಏಟು ತಡೆಯಲಿಕ್ಕಾಗದೆ ನಿನ್ನನ್ನು ಬಿಟ್ಟು ಓಡಿಹೋಗುತ್ತದೆ'.

ನಿಂತಿರುತ್ತೀಯೆ

ಒಂದು ಸಲ ಜೊಶು, ಗುರು ನನ್‌ಸೆನ್‌ನ ಹತ್ತಿರ ಹೋಗಿ 'ಸತ್ಯದ ದಾರಿ ಯಾವುದು?' ಎಂದು ಪ್ರಶ್ನೆ ಮಾಡಿದ.

'ನಿತ್ಯದ ದಾರಿಯಿಲ್ಲವೆ, ಅದೇ ಸತ್ಯದ ದಾರಿ' ಎಂದ ನನ್‌ಸೆನ್.

'ನಾನು ಅದರ ಅಧ್ಯಯನ ಮಾಡಬಹುದೇ?' ಎಂದು ಕೇಳಿದ, ಜೊಶು.

'ನೀನು ಅಧ್ಯಯನ ಮಾಡಿದಷ್ಟು ದಾರಿಯಿಂದ ದೂರ ಹೋಗುತ್ತೀಯೆ' ಎಂದ ನನ್‌ಸೆನ್.

'ಅಧ್ಯಯನ ಮಾಡದೆ ನಾನು ಅದನ್ನು ಅರಿತುಕೊಳ್ಳುವುದಾದರೂ ಹೇಗೆ?' ಎಂದು ಜೊಶು ಮತ್ತೆ ಪ್ರಶ್ನೆ ಮಾಡಿದ.

ನನ್‌ಸೆನ್ ಹೀಗೆ ಉತ್ತರಿಸಿದ-

'ಆ ದಾರಿ,ದೃಶ್ಯವಸ್ತುಗಳಿಗೆ ಸಂಬಂಧಿಸಿದ್ದಲ್ಲ; ಅದೃಶ್ಯವಸ್ತುಗಳಿಗೆ ಸಂಬಂಧಿಸಿದ್ದೂ ಅಲ್ಲ; ಅದಕ್ಕಾಗಿ ಹಂಬಲಿಸಿ ಹುಡುಕಬೇಡ; ಅದರ ಅಧ್ಯಯನಕ್ಕೆ ಹೋಗಬೇಡ; ಅದಕ್ಕೆ ಹೆಸರು ಕೊಡಲು ಯತ್ನಿಸಬೇಡ. ನಿನ್ನನ್ನು ಆಕಾಶದಷ್ಟೇ ವಿಶಾಲವಾಗಿ ಬಿಚ್ಚಿಕೋ; ಆಗ ನೀನು ಆ ದಾರಿಯ ಮೇಲೆ ನಿಂತಿರುತ್ತೀಯೆ'.

ಬರೀ ಒಂದು

ಗುರು ಬೆಂಕೆಯಿ ವಾಸಮಾಡಿಕೊಂಡಿದ್ದ ದೇವಾಲಯದ ಸಮೀಪದಲ್ಲಿ ಒಬ್ಬ ಕುರುಡನೂ ವಾಸಮಾಡಿಕೊಂಡಿದ್ದ. ಬಂಕೆಯಿ ತೀರಿಕೊಂಡ ಮೇಲೆ, ಆ ಕುರುಡ ತನ್ನ ಹಳೇ ಸ್ನೇಹಿತನೊಬ್ಬನಿಗೆ ಈ ಮಾತುಗಳನ್ನು ಹೇಳಿದನಂತೆ:

ನೋಡಪ್ಪಾ, ನಾನು ಕುರುಡನಾಗಿದ್ದು ಜನರ ಮುಖ ನೋಡಲಿಕ್ಕೇ ಆಗದಿರುವ ಕಾರಣ, ಯಾರು ಯಾವ ಥರದವರು ಅನ್ನುವುದನ್ನು ಅವರ ಧ್ವನಿಯಿಂದಲೇ ತಿಳಿದು ಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ನಾನು ಕಂಡದ್ದೇನು ಗೊತ್ತೋ? ಒಬ್ಬನಿಗೆ ಸುಖವೋ ಸಂಪತ್ತೋ ಕೀರ್ತಿಯೋ ದೊರಕಿದಾಗ ಅದಕ್ಕಾಗಿ ಇನ್ನೊಬ್ಬ ಆತನನ್ನು ಅಭಿನಂದಿಸುತ್ತಿದ್ದರೆ, ಆ ಧ್ವನಿಯಲ್ಲಿ ಗುಪ್ತವಾದ ಒಂದು ಅಸೂಯೆಯ ಸ್ವರವೂ ಬೆರೆತು ಕೊಂಡಿರುತ್ತದೆ. ಒಬ್ಬನಿಗೆ ಕಷ್ಟ ಒದಗಿ ಇನ್ನೊಬ್ಬ ಆತನ ಬಗ್ಗೆ ಸಹಾನುಭೂತಿಯ ಮಾತನಾಡುತ್ತಿದ್ದರೆ, ಅದರಲ್ಲಿ ಖುಷಿಯ ಒಂದು ಒಳದನಿ ಸೇರಿಕೊಂಡುಬಿಟ್ಟಿರುತ್ತದೆ. ನನ್ನ ಅನುಭವದಲ್ಲಿ ನಾನು ಕೇಳಿದ ಮಾತುಗಳೆಲ್ಲವೂ ಹೀಗೆ ಎರಡು ಧ್ವನಿಯ ಮಾತುಗಳೇ. ಆದರೆ ಬೆಂಕೆಯಿಯ ವಿಚಾರ ಬೇರೆಯೇ. ಆತ ಸಂತೋಷ ವ್ಯಕ್ತಪಡಿಸಿದಾಗ ಅದರಲ್ಲಿ ಸಂತೋಷವಲ್ಲದೆ ಮತ್ತೇನೂ ಇರುತ್ತಿರಲಿಲ್ಲ. ದುಃಖ ವ್ಯಕ್ತಪಡಿಸಿದಾಗ ದುಃಖವಲ್ಲದೆ ಮತ್ತೊಂದು ಕೇಳುತ್ತಿರಲಿಲ್ಲ.

ಉತ್ತರ-ನಕ್ಷತ್ರ

ಫೂಸೊ ಹೊಯೆನ್ ಎಂಬ ಗುರು, ತನ್ನ ಎದುರಿನಲ್ಲಿ ಕುಳಿತಿದ್ದ ಶಿಷ್ಯರಿಗೆ ಹೀಗೆ ಹೇಳಿದ-

'ಬುದ್ಧ ಬದುಕಿದ್ದಾಗ, ಐದು ಸಾವಿರದ ನಲವತ್ತೆಂಟು ಪ್ರತ್ಯೇಕ ಸತ್ಯಗಳನ್ನು ಉಚ್ಚರಿಸಿದ ಎನ್ನುತ್ತಾರೆ. ಅವುಗಳಲ್ಲಿ ಶೂನ್ಯದ ಸತ್ಯವೂ ಸೇರಿಕೊಂಡಿದೆ; ಅಸ್ತಿತ್ವದ ಸತ್ಯವೂ ಸೇರಿಕೊಂಡಿದೆ. ಅವುಗಳಲ್ಲಿ ತತ್‌ಕ್ಷಣ-ಜ್ಞಾನೋದಯದ ಸತ್ಯವೂ ಉಂಟು; ಕ್ರಮೇಣ- ಜ್ಞಾನೋದಯದ ಸತ್ಯವೂ ಉಂಟು. ಇವೆಲ್ಲವೂ ಆಸ್ತಿಕ ಹೇಳಿಕೆಗಳಲ್ಲವೆ?'

ಇದಕ್ಕೆ ಪ್ರತಿಯಾಗಿ, ಯೊಕ, ತನ್ನ ಜ್ಞಾನೋದಯ ಗೀತದಲ್ಲಿ ಸತ್ ಎನ್ನುವಂಥ ಅಸ್ತಿತ್ವವೇ ಇಲ್ಲ ಎನ್ನುತ್ತಾನೆ; ಬುದ್ಧರು ಇಲ್ಲ ಎನ್ನುತ್ತಾನೆ. ಸಾಧುಗಳೆಂದರೆ ಸಮುದ್ರದ ತೆರೆನೊರೆಗಳು, ಮಹಾನ್ ಮನಸ್ಕರೆಂದರೆ ಚಂಚಲ ಮಿಂಚುಗಳು ಎನ್ನುತ್ತಾನೆ. ಇವೆಲ್ಲವೂ ನಾಸ್ತಿಕ ಹೇಳಿಕೆಗಳಲ್ಲವೆ?

ಎಲೈ ನನ್ನ ಶಿಷ್ಯರುಗಳಿರಾ, ನೀವು ಅಸ್ತಿ ಎಂದರೆ ಯೊಕನನ್ನು ಅಲ್ಲಗಳೆಯುತ್ತೀರಿ; ನಾಸ್ತಿ ಎಂದರೆ ಬುದ್ಧನನ್ನು ವಿರೋಧಿಸುತ್ತೀರಿ. ಒಂದು ಪಕ್ಷ ಈಗ ಬುದ್ಧ ಇಲ್ಲೇ ನಿಮ್ಮ ಜೊತೆಯಲ್ಲೇ ಇದ್ದಿದ್ದರೆ, ಆತ ಈ ಸಮಸ್ಯೆಯನ್ನು ಹೇಗೆ ಪರಿಹರಿಸುತ್ತಿದ್ದ?

ನಾವು ಎಲ್ಲಿ ನಿಂತಿದ್ದೇವೆ ಎಂಬುದು ನಮಗೆ ಅರಿವಾಗಿದ್ದಿತೆಂದರೆ, ನಾವು ನಿತ್ಯ ಬೆಳಗಿನಲ್ಲಿ ಬುದ್ಧನನ್ನು ಪ್ರಶ್ನಿಸಬಹುದಿತ್ತು; ನಿತ್ಯ ಸಂಜೆ ಅಭಿವಾದನ ಮಾಡಬಹುದಿತ್ತು.

ಈಗ ನಾನು ನಿಮಗೊಂದು ರಹಸ್ಯವನ್ನು ಕೊಡುತ್ತೇನೆ-

ಇದು ಹೀಗಿದೆ ಎಂದು ನಾನು ಹೇಳಿದರೆ, ಪ್ರಾಯಃ, ಅದು ಆಸ್ತಿವಾದವಲ್ಲ; ಇದು ಹೀಗಿಲ್ಲ ಎಂದು ನಾನು ಹೇಳಿದರೆ, ಪ್ರಾಯಃ, ಅದು ನಾಸ್ತಿವಾದವಲ್ಲ. ಪೂರ್ವಕ್ಕೆ ತಿರುಗಿ ಪವಿತ್ರವಾದ ಪಶ್ಚಿಮಭೂಮಿಯನ್ನು ನೋಡಿ, ದಕ್ಷಿಣಾಭಿಮುಖವಾಗಿ ನಿಂತು ಉತ್ತರ ನಕ್ಷತ್ರವನ್ನು ವೀಕ್ಷಿಸಿ.

ಮುಸ್ಲಿಮರ ದರ್ಬಾರಿನಲ್ಲಿ ಲಾಭ ಪಡೆದವರಾರು?

ಮುಸಲ್ಮಾನರ ಕಾಲ ಭಾರತೀಯ ಜನರ ಮೇಲೆ ವಿದೇಶಿ ಆಳ್ವಿಕೆಯ ಕಾಲವಾಗಿತ್ತು. ವಿದೇಶಿ ಆಳ್ವಿಕೆಯ ಅಡಿಯಲ್ಲಿ ಭಾರತೀಯರನ್ನು ಬಗ್ಗು ಬಡಿಯಲಾಯಿತು ಎಂಬ ಅಪಾರವಾದ ಪ್ರಚಾರವಿದೆ. ಇದೆಲ್ಲ ಬ್ರಾಹ್ಮಣ ವಿದ್ವಾಂಸರಿಂದ ನಡೆದ ಸುಳ್ಳು ಪ್ರಚಾರ. ವಾಸ್ತವವಾಗಿ ಮುಸಲ್ಮಾನರ ಆಳ್ವಿಕೆಯಲ್ಲಿ ಅತಿ ಹೆಚ್ಚಿನ ಆದಾಯ ಪಡೆದವರೆಂದರೆ ಈ ವರ್ಗದ ಜನರೆ. ಇಲ್ಲಿ ನಾವು ಸ್ಮರಿಸಬೇಕಾಗಿರುವ ವಿಷಯವೆಂದರೆ ಭಾರತದಲ್ಲಿ ಮೂರು ರೀತಿಯ ಆಡಳಿತವಿದೆ(ಆಡಳಿತವಿರುವುದು). ಹಳ್ಳಿ ಮತ್ತು ಪಟ್ಟಣ ಮಟ್ಟದ ಆಡಳಿತ, ಎರಡನೇಯದು ವಿಭಾಗೀಯ ಮಟ್ಟದ್ದು ಮತ್ತು ತುಟ್ಟತುದಿಯಲ್ಲಿ ರಾಷ್ಟ್ರ ಮಟ್ಟದ ಆಡಳಿತ. ಸ್ಥಳೀಯ ಮಟ್ಟದ ಆಡಳಿತವೇ ನಿಜವಾದ ಆಡಳಿತ. ಭಾರತದಲ್ಲಿ ಯಾರು ಆಡಳಿತ ನಡೆಸಿದರೂ ವ್ಯತ್ಯಾಸವಾಗೋಲ್ಲ. ಸ್ಥಳೀಯ ಮಟ್ಟದಲ್ಲಿ ಯಾವಾಗಲೂ ಬ್ರಾಹ್ಮಣರೇ ಆಳ್ವಿಕೆ ನಡೆಸಿದ್ದಾರೆ. ಬ್ರಾಹ್ಮಣರ ಆಡಳಿತ ಜಾತಿ ಪದ್ಧತಿಯ ನಿಯಮಕ್ಕನುವಾಗಿತ್ತು. ಸ್ವಾಮಿ ಧರ್ಮತೀರ್ಥ ಹೀಗೆ ಹೇಳುತ್ತಾರೆ.

'ಬೌದ್ಧ ಧರ್ಮ ಅಳಿಸಿ ಹೋದದ್ದು ಮತ್ತು ರಾಜಕೀಯ ಶಕ್ತಿ ಮಹಮದೀಯರ ಕೈಸೇರಿದ್ದು ಒಂದು ಅರ್ಥದಲ್ಲಿ ರಾಷ್ಟ್ರೀಯ ಜೀವನದ ಅವನತಿಯೇ ಆದರೂ ಬ್ರಾಹ್ಮಣತ್ವಕ್ಕೆ ಸಂದ ಜಯವಾಗಿದೆ...ಕ್ರಿಸ್ತನ ನಂತರ ಸುಮಾರು 8ರಿಂದ 12ನೇ ಶತಮಾನದವರೆಗೆ ಬುಡ ಮೇಲಾದ ರಾಷ್ಟ್ರೀಯ ಜೀವನ ಮತ್ತು ರಾಜಕೀಯ ಅಸ್ಥಿರತೆ ಕಾಲದಲ್ಲಿ ಬ್ರಾಹ್ಮಣರ ಧಾರ್ಮಿಕ ದಬ್ಬಾಳಿಕೆಯು ಗುರುತರವಾದ, ಪುನಶ್ಚೇತನ, ವಿಸ್ತರಣೆ ಮತ್ತು ಸುಭದ್ರಗೊಂಡಿತು. ಮಹಮದೀಯರು ಭಾರತವನ್ನು ಆಕ್ರಮಿಸಿಕೊಂಡುದರ ಬಹು ದೊಡ್ಡ ಪರಿಣಾಮವೆಂದರೆ, ಹಿಂದು ಸಮಾಜಕ್ಕೆ ಸಂಬಂಧ ಪಟ್ಟಂತೆ, ಬ್ರಾಹ್ಮಣರ ನಿರ್ವಿವಾದಿತ ನಾಯಕರಾದರು ಮತ್ತು ನ್ಯಾಯಕೊಡುವರಾದರು.

'ಮಹಮದೀಯರು ಹಿಂದು ರಾಜರುಗಳನ್ನು ಕಿತ್ತೊಗೆದ ನಂತರ ಹಿಂದು ರಾಜಕುಮಾರರು ಮತ್ತು ಪಾಳೆಗಾರರು ಬಹುತೇಕ ಮಟ್ಟಿಗೆ ತಮ್ಮ ಗೌರವ ಸ್ಥಾನಮಾನ ಕಳೆದು ಕೊಂಡರು. ಆದರೆ ಹಿಂದೂಗಳ ನಾಯಕತ್ವ ಹೊಸ ರಾಜಕೀಯ ವ್ಯವಸ್ಥೆಗೆ ಅಂದರೆ ಮಹಮದೀಯರಲ್ಲೇ ಆಳುವವರ ಕೈಗೆ ಸೇರುವ ಬದಲಾಗಿ, ಸಂಪೂರ್ಣವಾಗಿ ಬ್ರಾಹ್ಮಣರ ಕೈವಶವಾಯಿತು' (ಕೇಲ್ಕರ್ ಎಸ್. ವಿ., ಯನ್‌ಎಸ್ಸೇ ಆನ್ ಹಿಂದುಯಿಸಂ, ಪು.149)

'ಜನರ ಧರ್ಮ ಯಾವುದಾಗಿರಬೇಕು ಅಥವಾ ಯಾವುದಾಗಿರಬಾರದೆಂದು ತೀರ್ಮಾನಿಸಲು ಮತ್ತು ಯಾವ ತತ್ವಗಳು ಅವರ ಸಾಮಾಜಿಕ ಜೀವನವನ್ನು ಅವಲಂಬಿಸಿರಬೇಕು ಎಂಬ ಪ್ರಶ್ನೆಗಳನ್ನು ಕೇಳಲು ಸಮರ್ಥ ಭಾರತೀಯ ಆಳ್ವಿಕೆದಾರರು ಯಾರು ಇಲ್ಲವಾದರು. ಎಲ್ಲಾ ವಿರೋಧಿಗಳನ್ನು ಸಂಹರಿಸಿ ಮಹಮದೀಯರು ಆಳ್ವಿಕೆ ಆರಂಭಿಸಿದಾಗ, ಅವರಲ್ಲಿ ಯಾರೋ ಕೆಲವರು ಕೋಮುವಾದಿಗಳಾಗಿ ಬಲವಂತವಾಗಿ ಮತಾಂತರ ಮಾಡಿದವರನ್ನು ಬಿಟ್ಟರೆ, ಹಿಂದುಗಳನ್ನು ಅವರ ಧಾರ್ಮಿಕ ನಾಯಕರು ಹತೋಟಿಯಲ್ಲಿಯೇ ಉಳಿಸಿದರು ಮತ್ತು ಹಿಂದೂಗಳನ್ನು ಶಾಂತಿಯುತ ವಾದ ಮಾರ್ಗಗಳಿಂದ ಸಮಾಧಾನಗೊಳಿಸ ಬೇಕಾದ ಸಂದರ್ಭ ಬಂದಾಗಲೆಲ್ಲ ಬ್ರಾಹ್ಮಣರನ್ನು ಹಿಂದೂಗಳ ಗೊತ್ತುಪಡಿಸಿದ ನಾಯಕರಂತೆ ಬಳಸಿ ಕೊಂಡರು.

ಬ್ರಾಹ್ಮಣರು ಅಧಿಕಾರದಲ್ಲಿರಲಿ, ಇಲ್ಲದಿರಲಿ, ತಮಗೆ, ತಮ್ಮ ಜನರಿಗೆ ದಕ್ಕುವ ಲಾಭ ಮಾತ್ರ ದಕ್ಕಲೇಬೇಕು. ಅದಕ್ಕಾಗಿ ಎಂತಹ ನೀಚ ಕೃತ್ಯಗಳಿಗೂ ಹಿಂದೆ-ಮುಂದೆ ನೋಡರು. ತಮ್ಮ ಜನ್ಮಾಂತರದ ಶತೃಗಳೆಂಬಂತೆ ನೋಡುತ್ತಿರುವ ಮುಸ್ಲಿಮರಿಂದಲೂ ಕೂಡ ಹೇಗೆ ಮೋಸದಿಂದ ಲಾಭ ದಕ್ಕಿಸಿಕೊಂಡಿದ್ದಾರೆ ಎಂಬುದಕ್ಕೆ ಈ ಲೇಖನವೇ ಸಾಕ್ಷಿ.

ಮೂಲ : ಡಾ|| ಕೆ. ಜಮುನಾ ದಾಸ್
ಅನು : ಡಾ|| ಮಹಾದೇವ

'ಮತ್ತೊಂದು ಪ್ರಮುಖ ಅನುಕೂಲವೆಂದರೆ, ಭಾರತ ಇತಿಹಾಸದಲ್ಲಿ ಪ್ರಥಮಬಾರಿಗೆ, ಎಲ್ಲಾ ಧಾರ್ಮಿಕ ಬಣಗಳು ಮತ್ತು ಸಣ್ಣಪುಟ್ಟ ಗುಂಪಿನ ಎಲ್ಲಾ ಜನರನ್ನು, ಬ್ರಾಹ್ಮಣರ ಆಧಿಪತ್ಯದ ಅಡಿಗೆ ತರಲಾಯಿತು. ಅಲ್ಲಿಯ ವರೆಗೆ, ಬ್ರಾಹ್ಮಣರು ಪ್ರಮುಖ ಹಿಂದು ಜಾತಿಗಳ ಪೂಜಾರಿಗಳೆಂದು ಮಾತ್ರ ಹೇಳಿಕೊಳ್ಳುತ್ತಿದ್ದರು. ಶೂದ್ರರು ಮತ್ತುಳಿದ ಭಾರತೀಯರನ್ನು ದೂರವಿಡುವುದನ್ನು ಬಿಟ್ಟರೆ ಶೂದ್ರರ ಬಗ್ಗೆ ಮಾತನಾಡಲು ಎಂದೂ ಮುಂದೆ ಬಂದವರಲ್ಲ.

ಭಾರತದಲ್ಲಿ ವಾಸಮಾಡುವ ಎಲ್ಲಾ ಮುಸಲ್ಮಾನರಲ್ಲದವರನ್ನೂ, ಯಾವುದೇ ಪ್ರತ್ಯೇಕತೆ ಮಾಡದೆ, 'ಹಿಂದು' ಎಂಬ ಸಾಮಾನ್ಯಪದದಿಂದ ಗುರುತಿಸಿದ್ದರು! ಇದರರ್ಥ ಎಲ್ಲಾ ಮುಸಲ್ಮಾನರಲ್ಲದವರು ಮತ್ತೇನು ಆಗಿರಲಿಲ್ಲ. ಇಂತಹ ಸರಳವಾದ ವಿಷಯ ಮತ್ತ್ಯಾವುದೇ ಏಕೈಕ ಘಟನೆಗಿಂತ ಹೆಚ್ಚಾಗಿ ಭಾರತದ ಒಗ್ಗೂಡುವಿಕೆಗೆ ಸಹಾಯ ಮಾಡಿತು. ಆದರೆ ಕೋಟ್ಯಾಂತರ ಅಮಾಯಕ ಭಾರತೀಯರು ಇದೇ ಸಂದರ್ಭದಲ್ಲಿ ಪೂಜಾರಿ ವರ್ಗದ ಶಾಶ್ವತ ದಬ್ಬಾಳಿಕೆಗೆ ಒಳಪಟ್ಟರು. ಎಲ್ಲಾ ಭಾರತೀಯರು 'ಹಿಂದೂಗಳಾಗಿ' ಬಿಟ್ಟರು. ಅವರ ಧರ್ಮ 'ಹಿಂದು' ಧರ್ಮವಾಗಿ ಬಿಟ್ಟಿತು. ಬ್ರಾಹ್ಮಣರು ಇವರ ನಾಯಕರಾದರು.

'ಹಿಂದು' ಎನ್ನುವುದು ಪರದೇಶಿ ಶಬ್ದ. ಮುಸಲ್ಮಾನರು ಭಾರತಕ್ಕೆ ಬರುವ ಮುನ್ನ ರಚಿತವಾಗಿರುವ ಸಂಸ್ಕೃತದ ಯಾವುದೇ ಬರವಣಿಗೆಯಲ್ಲಿ ಹಿಂದೂಗಳು ಈ ಶಬ್ದವನ್ನು ಬಳಸಿಲ್ಲ. (ಪುಟ 22, ಯನ್ ಎಸ್ಸೇ ಆನ್ ಹಿಂದೂಯಿಸಂ, ಕೆಲ್ಕರ್)

'ಮುಸಲ್ಮಾನರು ಭಾರತಕ್ಕೆ ಬಂದಾಗ ಭಾರತದಲ್ಲಿ ವಾಸವಿದ್ದವರು ಮತ್ತು ಮುಸಲ್ಮಾನರಲ್ಲದವರನ್ನು ಹಿಂದೂಗಳು ಎಂದು ಕರೆದರು...ಇಸ್ಲಾಂ ಧರ್ಮವನ್ನು ಪರಿಗಣಿಸದ ಎಲ್ಲಾ ಜಾತಿ ಪಂಗಡಗಳು ಹಿಂದುಗಳಾದರು' (ಪುಟ 29-ಕೆಲ್ಕರ್)

ಇತಿಹಾಸದ ಸಾಮಾನ್ಯ ಘಟನೆಯೊಂದರ ಪರಿಣಾಮದಿಂದಾಗಿ ತಮ್ಮ ಯಾವುದೇ ಹಸ್ತಕ್ಷೇಪವಿಲ್ಲದೇ ವಿಚ್ಛಿದ್ರಕಾರಕ ಧಾರ್ಮಿಕ ಸಾಮಾಜಿಕ ವ್ಯವಸ್ಥೆ ರೂಪುಗೊಂಡಿತು, ಆನಂತರ ಮತ್ತೆ ದನಿಯೆತ್ತಲಾಗದೆ, ಬ್ರಾಹ್ಮಣರ ಹಂಗಿನಲ್ಲಿ ಇರಬೇಕಾಯಿತು. ಬ್ರಾಹ್ಮಣತ್ವ ಹಿಂದುತ್ವವಾಯಿತು, ಮೆಕ್ಕಾದ ಧರ್ಮಪ್ರವರ್ತಕನ ಅನುಯಾಯಿಗಳಲ್ಲದವರೆಲ್ಲರ ಧರ್ಮ ಇದಾಯಿತು. ಯಾರು ಅಲ್ಲಾಡಿಸದ ಈ ರೀತಿಯ ಏಕೈಕ ಧಾರ್ಮಿಕ ಪರಮಾಧಿಕಾರದ ಭದ್ರ ಕೋಟೆಯಲ್ಲಿ ಭಾರತದಾದ್ಯಂತ ಬ್ರಾಹ್ಮಣರು ಧರ್ಮದ ಅಗ್ರ ಒಡೆತನವನ್ನು ಸ್ಥಾಪಿಸಲು ಆರಂಭಿಸಿದರು' (ಸ್ವಾಮಿ ಧರ್ಮತೀರ್ಥ, ಪು. 123)

ಅವರು ಮೊದಲು ಏನು ಮಾಡಿದರು?

ಅಧಿಕಾರ ಹಿಡಿದ ಮೇಲೆ ಬ್ರಾಹ್ಮಣರು ಏನು ಮಾಡಿದರು ಎಂದು ಸ್ವಾಮಿ ಧರ್ಮತೀರ್ಥ ವಿವರಿಸಿದ್ದಾರೆ. ಹೊಸ ಪರಿಸ್ಥಿತಿಗಳಿಗೆ ಹೊಂದುವಂತಹ ಶಾಸ್ತ್ರಗಳನ್ನು ರಚಿಸುವುದು, ಅವರು ಹೇಳುತ್ತಾರೆ:

'ಬ್ರಾಹ್ಮಣತ್ವ ಪುನರುತ್ಥಾನದ ಮೊದಲ ಸಂಕೇತಗಳು, ಹಿಂದುನಂತೆ ಪುರಾತನ ಮಹರ್ಷಿಗಳಿಂದ ರಚಿಸಿಕೊಂಡವೆಂದು, ಪುರಾಣ, ಮತ್ತು ಉಳಿದ ಧಾರ್ಮಿಕ ಸಾಹಿತ್ಯದ

ಅನುಷ್ಠಾನ. ತಮ್ಮ ತತ್ವಗಳ ಅಸಮರ್ಥನೀಯತೆ ಮತ್ತು ಸಮಾಜದ ಒಳಿತಿಗಾಗಿ ಅವುಗಳನ್ನಾಧಾರಿಸಿ ನಿಯಮ ರಚಿಸಲಾಗದ ಅಪ್ರಯೋಜಕತೆ ಬಗ್ಗೆ ಪುರೋಹಿತರಿಗೆ ಪ್ರಜ್ಞೆ ಇದ್ದಿರಬೇಕು. ಏಕೆಂದರೆ ಅವರುಗಳು ಪುರಾತನ ಬರಹಗಾರರ ಹೆಸರಿನಲ್ಲಿ ಹೊಸ ಬರಹಗಳನ್ನು ರಚಿಸಿದರು ಮತ್ತು ಪುರಾತನ ಬರಹಗಳನ್ನು ತಮ್ಮ ವಾದಗಳಿಗೆ ಅನುಗುಣವಾಗಿ ಬದಲಾಯಿಸಿಕೊಂಡರು. ತಿದ್ದದೇ ಇರುವ, ಬದಲಾವಣೆ ಮಾಡದೇ ಇರುವ, ಹೊಸದಾಗಿ ಸೇರಿಸದೇ ಇರುವ ಯಾವ ಸಂಸ್ಕೃತ ಪಠ್ಯವೂ ಉಳಿದಿಲ್ಲ, ಇವರುಗಳು ಬಳಸಿಕೊಳ್ಳದೇ ಇರುವ ಅಥವಾ ಅವರ ಹೆಸರಿನಲ್ಲಿ ಬೆರಕೆ ಮಾಡದೇ ಇರುವ ಯಾವ ಪ್ರಸಿದ್ಧ ಋಷಿಯೂ ಉಳಿದಿಲ್ಲ, ಕಟ್ಟುಕತೆ, ಪುರಾಣ ಮತ್ತು ಕಾಲ್ಪನಿಕ ಇತಿಹಾಸ ಸೇರ್ಪಡೆಯಾಗದ ಯಾವ ಧರ್ಮ ಶಾಸ್ತ್ರವೂ ಉಳಿದಿಲ್ಲ, ಅತಿಪುರಾತನ ಧರ್ಮಶಾಸ್ತ್ರವಾದ ಋಗ್ವೇದವೂ ಕೂಡ ಅಪವಿತ್ರ ಸೇರ್ಪಡೆದಾರರ ಕೈಗಳಿಂದ ಮುಕ್ತವಾಗಿಲ್ಲ, ಋಗ್ವೇದದ ಹತ್ತನೆ ಕಾಂಡವನ್ನು ದೇವತೆಗಳ ರಚನೆಯೆಂದು ತೋರಿಸಿ ನಿಜವಾದ ಮತ್ತು ಅನಂತರದ ಹೆಸರುಗಳನ್ನು ಮರೆಮಾಚಲಾಗಿದೆ. ವಸ್ತುಸ್ಥಿತಿಯ ಸತ್ಯತೆ ಎಂದೂ ಕೂಡ ಬ್ರಾಹ್ಮಣ ಬರಹಗಾರರ ವಿಶೇಷತೆಯಾಗಿಲ್ಲ, ಆದ್ದರಿಂದಲೇ ನಂಬಿಕೆ ಅನರ್ಹ ಇತಿಹಾಸ ಸಂಸ್ಕೃತ ಭಾಷೆಯ ಸಾರ್ವಕಾಲಿಕ ಲಕ್ಷಣವಾಗಿಬಿಟ್ಟಿದೆ. ಅತ್ಯುತ್ತಮ ಲಕ್ಷಣಕಾರನಿಗೂ ಕೂಡ ಯಾವುದು ನಿಜ, ಪೊಳ್ಳಾವುದು ಎಂಬುದನ್ನು ಬೇರ್ಪಡಿಸಲು ಅಸಾಧ್ಯವಾಗಿದೆ. ಅಂದರೆ ವಸ್ತುಸ್ಥಿತಿ ಎಲ್ಲಿ ನಿಲ್ಲುತ್ತದೆ-ಕಟ್ಟುಕತೆ ಎಲ್ಲಿ ಆರಂಭವಾಗುತ್ತದೆ, ಧರ್ಮಶಾಸ್ತ್ರ ವಿಷಯಗಳ ಸಂದರ್ಭದಲ್ಲಂತೂ ಇದನ್ನು ಹೇಳಲೇಬೇಕಾಗಿಲ್ಲ (ಇದು ಬಹುತೇಕ ಸತ್ಯ) ಬ್ರಾಹ್ಮಣರ ಪುನರುಜ್ಜೀವನದ ಕಾಲವಂತೂ ಕಪಟ ಶಾಸ್ತ್ರ ಪುರಾಣಗಳಿಂದ ತುಂಬಿ ಹೋಗಿದೆ (ಧರ್ಮತೀರ್ಥ, ಪು.124)

ಆದ್ದರಿಂದ, ಸಾಮಾನ್ಯ ಜನರ ಸಂದರ್ಭದಲ್ಲಿ ಮುಸಲ್ಮಾನರ ಆಳ್ವಿಕೆಯ ಕಾಲವೂ ಕೂಡ ಬ್ರಾಹ್ಮಣರ ಆಳ್ವಿಕೆಯ ಕಾಲವೇ. ಅಕ್ಬರನ ಆಳ್ವಿಕೆಯ ಕೆಲ ಕಾಲವನ್ನು ಬಿಟ್ಟರೆ, ಬ್ರಿಟಿಷರು ಸಾಮಾನ್ಯ ಜನರ ರಕ್ಷಣೆಗೆ ಬರುವ ತನಕ, ಸಾಮಾನ್ಯ ಜನರು ಮುಸಲ್ಮಾನರ ಮತಾಂಧತೆಯ ಜತೆಗೆ ಬ್ರಾಹ್ಮಣರ ದಳ್ಳುರಿಯನ್ನು ಅನುಭವಿಸಬೇಕಾಯಿತು. ಆದರೆ ಬ್ರಿಟಿಷರ ಕಾಲದಲ್ಲೂ ಕೂಡ ಸಾಮಾನ್ಯ ಜನರು ಬ್ರಾಹ್ಮಣರ ದಳ್ಳುರಿಯನ್ನು ತಪ್ಪಿಸಿಕೊಳ್ಳಲಾಗಲಿಲ್ಲ, ಅದು ಇಂದಿಗೂ ಮುಂದುವರಿದೇ ಇದೆ. ಪ್ರಾಚೀನ ಭಾರತದಲ್ಲಿ ನಡೆದ ಬೌದ್ಧಮತದ ಅವನತಿಯೇ ಈ ಎಲ್ಲಾ ದುಷ್ಪರಿಣಾಮಗಳಿಗೆ ಕಾರಣ.

ಬ್ರಾಹ್ಮಣರ ಮತಾಂತರ ಉಪಾಯಗಳು/ ಮಾರ್ಗಗಳು:

ಸಾಮಾನ್ಯ ಭಾರತೀಯರ ಮೇಲೆ ಬ್ರಾಹ್ಮಣರು ನಡೆಸಿದ ಸಾಮಾಜಿಕ ನಿಯಂತ್ರಣ ಮತ್ತು ಅನುಕರಣೆಯ ವಿವಿಧ ಪ್ರಕಾರಗಳ ವರ್ಣಾತೀತ ಸ್ವರೂಪವನ್ನು ಎಚ್.ಎಚ್.ರಿಸ್ಲೆ ನೀಡಿದ್ದಾನೆ. ಅಷ್ಟೆಲ್ಲವನ್ನೂ ಇಲ್ಲಿ ಉದ್ಧರಿಸಬೇಕಾಗಿದೆ.

'ಬಹಿರಂಗವಾಗಿ ಮತಾಂತರಗೊಳಿಸುವುದು ಅಥವಾ ಬಲವಂತವಾಗಿ ಮತಾಂತರ ಮಾಡುವುದು ಬ್ರಾಹ್ಮಣ ಧರ್ಮ ತಿಳಿಯದ ವಿಷಯ. ಆದರೆ ಇದು ತನ್ನದೇ ಆದ ರೀತಿಯಲ್ಲಿ ಮತ್ತೆ ತುಂಬಾ ಸೂಕ್ಷ್ಮವಾದ ಪ್ರಕಾರದಲ್ಲಿ ಒಂದು ಗುರಿಯನ್ನು ಮುಟ್ಟುತ್ತದೆ. ನಮಗೆ ತಿಳಿದಿರುವ ಭೌತಿಕ ಜಗತ್ತಿನಿಂದ ಇದಕ್ಕೆ ಸ್ಪಷ್ಟವಾದ ಒಂದು ಹೋಲಿಕೆಯನ್ನು ಕಾಣುವುದು ಕಷ್ಟ, ಬ್ರಾಹ್ಮಣಮತ ಅಸ್ತಿತ್ವದಲ್ಲಿರುವ ಗುಂಪುಗಳನ್ನು ಅವುಗಳು ಇರುವಂತೆಯೇ ಬಿಟ್ಟು ಇಸ್ಲಾಂ ಧರ್ಮದಂತೆ ಎಲ್ಲಾ ಗುಂಪುಗಳನ್ನು ಒಂದು ಬೃಹತ್ ಗುಂಪಾಗಿ ಬೆಸೆಯುವ ಕೆಲಸ ಮಾಡದೆ, ಅಸಂಖ್ಯಾತ ಹೊಸ ಗುಂಪುಗಳನ್ನು ರಚಿಸಲು ಮುಂದಾಗುತ್ತದೆ; ಆದರೆ ಹಿಂದುತ್ವದ ಒಳಗಿರುವ ಪ್ರತಿಯೊಂದು ಬುಡಕಟ್ಟು ಕೂಡಲೇ ಅಥವಾ ಕ್ರಮೇಣವಾಗಿ ತನ್ನ ಆದಿವಾಸಿ ತತ್ವಗಳನ್ನು ಕೈಬಿಡುತ್ತದೆ. ಇನ್ನೊಂದು ಅರ್ಥದಲ್ಲಿ ಹೊಸ ಬ್ರಾಹ್ಮಣ ಅಂಶದ ಮುಖವಾಡವನ್ನು ಧರಿಸಿ ಕೊಳ್ಳುತ್ತದೆ. ಶ್ರೇಣಿಗಳು ನಿಜವಾಗಲೂ ಹಾಗೆಯೇ ಉಳಿಯುತ್ತವೆ; ಅಥವಾ ನೂರ್ಮಡಿಗೊಳ್ಳುತ್ತವೆ; ಅವುಗಳ ಪರಸ್ಪರ ಸ್ಥಾನಮಾನ ಬಹುತೇಕವಾಗಿ ಯಾವುದೇ ವ್ಯತ್ಯಾಸ ಹೊಂದುವುದಿಲ್ಲ; ಆದರೆ ಅವುಗಳ ಪಳಿಯುಳಿಕೆಗಳು ಹೆಚ್ಚಿನ ಸುಧಾರಿತ ರೂಪಾಂತರಗೊಳ್ಳುತ್ತವೆ.

ಒಂದರ ಮೇಲೊಂದರಂತೆ/ ಒಂದೊಂದಾಗಿ ಪುರಾತನ ಕುಲದೇವತೆ ಕಳಚಿಬೀಳುತ್ತದೆ; ಅಥವಾ ನಿಪುಣ ಮಾರ್ಗಗಳಿಂದ ಗೌರವಯುತವಾದ, ಆಗಲೆ ಚಾಲ್ತಿಯಲ್ಲಿರುವ ಪುರಾಣಗಳ ದೇವತೆಗಳಿಗಾಗಿ ಪರಿವರ್ತಿತವಾಗಿ ಬಿಡುತ್ತವೆ; ಆದಿವಾಸಿ ದೇವತೆ ಹೊಸ ಹೆಸರು ಪಡೆದುಕೊಳ್ಳುತ್ತದೆ; ಮತ್ತೆ ಹಿಂದು ದೇವತಾಗಣದ ಒಂದು ಬಲಿಷ್ಠ ದೇವತೆಯ ಅವತಾರದ ರೂಪದಲ್ಲಿ ಮೇಲ್ಪಂಕ್ತಿಗೆ ಸೇರ್ಪಡೆಯಾಗುತ್ತದೆ. ಬುಡಕಟ್ಟಿನ ನಾಯಕ ಒಬ್ಬ ಪುರೋಹಿತನನ್ನು ನೇಮಿಸುತ್ತಾನೆ. ಹೆಚ್ಚು ಕಡಿಮೆ ಒಂದು ಹೊಸ ಸಾಹಸಿವಂಶ ಪುರಾಣ ಆರಂಭಿಸುತ್ತಾನೆ. ಕಾಲ ಕ್ರಮೇಣ ರಜಪೂತರ ಒಬ್ಬ ಹೊಸ ವರ್ಗವಾಗಿ ಬೆಳೆದು ಬಿಡುತ್ತಾನೆ. ಅವನ ಜನಾಂಗ ಅವನನ್ನೇ ಹಿಂಬಾಲಿಸುತ್ತದೆ. ಸಮಾಜದ ಸ್ಥಾನಮಾನ ಕಾಪಾಡಲು ಅವರ ಹೆಂಗಸರನ್ನೂ ಮೊದಲು ತ್ಯಜಿಸಿ ಬಲಿಕೊಡುತ್ತಾರೆ. ತನ್ನೆಲ್ಲ ಕ್ರೌರ್ಯಗಳೊಂದಿಗೆ ಬಾಲ್ಯವಿವಾಹ ಜಾರಿಗೆ ಬರುತ್ತದೆ. ಬುಡಕಟ್ಟು ಜನಾಂಗದಲ್ಲಿ ಒಟ್ಟಾರೆಯಾಗಿ ಬಹಳ ಪ್ರಮುಖವಾದ ಮತ್ತು ಪ್ರಯೋಜನಕಾರಿಯಾದ ವಿಧವಾ ವಿವಾಹ ಮತ್ತು ವಿವಾಹ ವಿಚ್ಛೇದನೆ ಸಂಪೂರ್ಣವಾಗಿ ರದ್ದಾಗಿ ಬಿಡುತ್ತದೆ. ಜನರ ಜೀವನ ವ್ಯವಸ್ಥೆಯನ್ನೇ ಬುಡಮೇಲು ಮಾಡುವಂತಹ ಬದಲಾವಣೆಗಳು ಆಗುವಂತಹ ಕಾಲದಲ್ಲಿ ಏನೂ ಬದಲಾವಣೆ ಆಗುತ್ತಿಲ್ಲವೆಂಬ ಒಂದು ಕಾಲ್ಪನಿಕತೆ ಸೃಷ್ಟಿಯಾಗಿರುತ್ತದೆ ಮತ್ತು ಎಲ್ಲರೂ ನಂಬುತ್ತಾರೆ ಅಥವಾ ನಂಬುವಂತೆ ನಟಿಸುತ್ತಾರೆ (ಆದರೆ ಬಹಳ ಹಿಂದಿನಿಂದಲೂ ಸಾವು ಹೀಗೆ ಇದ್ದೆವು ನಮ್ಮಲ್ಲಿ ಏನೂ ಬದಲಾವಣೆ ಆಗಿಲ್ಲ). ಕುತೂಹಲದ ಸಂಗತಿಯೆಂದರೆ ಈ ಪ್ರೇರಣೆಗಳು ಇನ್ನೂ ಹೆಚ್ಚು ವೇಗವಾಗಿ ನಡೆಯುತ್ತಿವೆ ಮತ್ತು ದಾರಿಯ ವಿಸ್ತರಣೆಯಿಂದಾಗಿ ಕಳೆದ ಕೆಲವು ವರ್ಷಗಳಲ್ಲಿ ಇವುಗಳ ಕಾರ್ಯವ್ಯಾಪ್ತಿಯೂ ಕೂಡ ವಿಸ್ತಾರವಾಗುತ್ತಿದೆ.

'ಹೇಗೋ ಸಮಾಜದಲ್ಲಿ ಏಳಿಗೆ ಸಾಧಿಸಿ ಮತ್ತು ಸ್ವತಂತ್ರ ಭೂ ಒಡೆಯರಾದ ಮೇಲೆ ಆದಿವಾಸಿಗಳ ಪ್ರಮುಖರು ಮುಂದುವರೆದ ಜಾತಿಯೊಂದಕ್ಕೆ ತಮ್ಮನ್ನು ಸೇರ್ಪಡಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಅವರೆಲ್ಲ ರಜಪೂತರೆಂದು ಹೇಳಿಕೊಳ್ಳುತ್ತಾರೆ; ಮೊದಲು ಒಬ್ಬ ಬ್ರಾಹ್ಮಣ ಪುರೋಹಿತನನ್ನು ಹಿಡಿಯುತ್ತಾರೆ, ಅವನು ಇವರಿಗೆ ಒಟ್ಟು ಪುರಾಣದ ಪತ್ತೆ ಹಚ್ಚುತ್ತಾನೆ, ಆ ಬುಡಕಟ್ಟು ವಾಸ ಮಾಡುತ್ತಿರುವ ಸ್ಥಾನಕ್ಕೆ ಸಂಬಂಧಿಸಿದಂತೆ ಒಂದು 'ಪವಾಡ ಒದಗಿಸಿಕೊಡುತ್ತಾನೆ, ಮತ್ತೆ ಆ ಬುಡಕಟ್ಟಿನವರು ಇಲ್ಲಿಯವರೆಗೆ ಯಾರಿಗೂ ತಿಳಿಯದಿದ್ದ ಒಂದು ರಜಪೂತ ಜನಾಂಗಕ್ಕೆ ಸೇರಿದ ಪಂಗಡದವರು ಎಂದು ಕಂಡು ಹಿಡಿಯುತ್ತಾನೆ (ಹುಟ್ಟು ಹಾಕುತ್ತಾನೆ). ಆರಂಭದ ಅವಸ್ಥೆಯಲ್ಲಿ ಅವರುಗಳ ಹೆಣ್ಣು ಮಕ್ಕಳುಗಳಿಗೆ, ಮದುವೆ ಗಂಡುಗಳನ್ನು ಹುಡುಕುವುದು ಕಷ್ಟವಾಗುತ್ತದೆ. ಕಾರಣ ಅವರದೇ ಬುಡಕಟ್ಟಿನವರ ಜತೆ ಅವರನ್ನು ಮದುವೆ ಮಾಡುವುದಿಲ್ಲ ಮತ್ತು ತಾವು ಸೇರಿಕೊಂಡ ಹೊಸ ರಜಪೂತ ಜನಾಂಗದವರೂ ಕೂಡ ಇವರ ಜತೆ ವಿವಾಹ ಸಾಮಾನ್ಯವಾಗಿ ಸಂಬಂಧಗಳನ್ನು ಮಾಡುವುದಿಲ್ಲ, ಆದರೆ ಒಂದು ಅಥವಾ ಎರಡು ತಲೆಮಾರಿನ ನಂತರ ಅವರ ಪ್ರಯತ್ನಕ್ಕೆ ಪ್ರತಿಫಲ ದೊರೆಯುತ್ತದೆ. ಆಗ ಮದುವೆ ಸಂಬಂಧಗಳು ಶುರುವಾಗುತ್ತವೆ. ಇದು ನಿಜವಾದ ರಜಪೂತರ ಜತೆಯಲ್ಲಿ ಅಲ್ಲದಿದ್ದರೂ, ಅವರಂತೆಯೇ ರಜಪೂತರೆಂದು ಸೃಷ್ಟಿಸಿಕೊಂಡ ಸ್ವಲ್ಪ ಮುಂದುವರಿದ ಗುಂಪಿನವರ ಜತೆಯಂತೂ ಇದು ಸಾಧ್ಯವಾಗುತ್ತದೆ. ಹೀಗೆ ಒಂದು ರೀತಿಯ ರಕ್ತ ಬದಲಾವಣೆ ಆಗುತ್ತದೆ. ಅವರ ಬುಡಕಟ್ಟಿನ ಹೆಸರು ಸಂಪೂರ್ಣವಾಗಿ ಮರೆತು ಹೋಗಿರುತ್ತದೆ. ಇವರ ಜತೆಗೆ ಅವರನ್ನು ನಿಜವಾದ ಹಿಂದುಗಳಿಂದ ಪ್ರತ್ಯೇಕಿಸುವ ಎಲ್ಲಾ ಸಾಧ್ಯತೆಗಳು ಮತ್ತು ಯಾವುದೋ ಆರ್ಯರಲ್ಲಿದ್ದ ಗುಂಪಿಗೆ ಸೇರಿಸುವ ಸಾಧ್ಯತೆಗಳು ಇಲ್ಲವಾಗುತ್ತವೆ. ರಜಪೂತ ಜನಾಂಗದವರಲ್ಲಿ ಇವರು ಸಂಪೂರ್ಣವಾಗಿ ಬೆರೆತು ಹೋಗುತ್ತಾರೆ. ಅನಂತರ ಇವರು ಉನ್ನತ ಮಟ್ಟದ ಹಿಂದೂಗಳು ಎಂದು ತೋರ್ಪಡಿಸಿಕೊಳ್ಳುತ್ತಾರೆ. ಇದನ್ನು ಸ್ಥಳೀಯವಾಗಿ ಜನರು ಒಪ್ಪಿಕೊಳ್ಳುತ್ತಾರೆ. ಈ ಮತಾಂತರದ ಪ್ರಕ್ರಿಯೆ ಎಲ್ಲಾ ಹಂತಗಳನ್ನೂ, ಕುಟುಂಬದ ಪವಾಡ ಮತ್ತುಳಿದೆಲ್ಲ ಅಂಶಗಳನ್ನೂ ಚೋಟಾನಾಗಪುರದ ಪ್ರಮುಖ ಕುಟುಂಬಗಳನ್ನು ಬಳಸಿಕೊಂಡು ಉದಾಹರಣೆ ನೀಡಬಹುದಾಗಿದೆ.

'ಬಹಳಷ್ಟು ಆದಿವಾಸಿ ಕುಟುಂಬಗಳು ಹಿಂದೂ ಧಾರ್ಮಿಕ ಕಟ್ಟುಪಾಡುಗಳನ್ನು ಒಪ್ಪಿಕೊಳ್ಳುತ್ತಾರೆ. ಅವರ ಬುಡಕಟ್ಟು ಹೆಸರುಗಳನ್ನು ಕಳೆದುಕೊಂಡು ವೈಷ್ಣವರೋ, ರಮಾಯತ್ತರೋ ಹಾಗೆಯೇ ಯಾರೋ ಆಗಿಬಿಡುತ್ತಾರೆ. ಅಂತರವಿವಾಹ ಕಟ್ಟುಪಾಡುಗಳ ಮತ್ತು ಸ್ಥಳೀಯ ವಾಸ್ತವಾಂಶಗಳ ಮೇಲೆ ಒಂದು ವೇಳೆ ರಕ್ತ ಮಿಶ್ರಣವಾಗುತ್ತದೆಯೇ ಇಲ್ಲವೋ ಎಂದು ಹೇಳಲಾಗುವುದಿಲ್ಲ

ಒಟ್ಟಾರೆ ಹೇಳುವುದಾದರೆ, ಬುಡಕಟ್ಟಿನವರು ಎನ್ನುವ ಗುರುತು ಮಾತ್ರ ಸಂಪೂರ್ಣ ವಾಗಿ ಕಳೆದುಹೋಗುತ್ತದೆ. ಆದ್ದರಿಂದ ಇದನ್ನು ಕೂಡ ಸೇರ್ಪಡೆ ಒಂದು ಪ್ರಸ್ತಾಪ ಎಂದು ಹೇಳಬಹುದಾಗಿದೆ.

ಒಂದು ಆದಿವಾಸಿ ಬುಡಕಟ್ಟು ಅಥವಾ ಒಂದು ಬುಡಕಟ್ಟಿನ ಬಹುಭಾಗ ಹೊಸ ಜಾತಿಯ ಹೆಸರಿನಲ್ಲಿ ಹಿಂದುಧರ್ಮದ ಶ್ರೇಣಿಗೆ ಸೇರ್ಪಡೆ ಹೊಂದುತ್ತಾರೆ, ಇವರು ಯಾವುದೋ ಒಂದು ಪುರಾತನ ಸಂಬಂಧ ಹೇಳಿಕೊಂಡು ಹೀಗೆ ಹಿಂದೂ ಧರ್ಮಕ್ಕೆ ಸೇರಿಕೊಂಡಾಗ್ಯು ಕೂಡ ಪ್ರತಿಷ್ಠಿತ ಹಿಂದೂ ಜಾತಿಯ ಹೆಸರುಗಳಿಗೆ ಹೋಲಿಸಿ ಇವರು ಬೇರೆಯವರೇ ಎಂದು ಗುರುತಿಸಬಹುದಾಗಿದೆ. ಹೀಗೆ ರಂಗಪುರದ ಕೊಚ್‌ನ ಬಹುತೇಕ ವಾಸಿಗಳು ತಮ್ಮನ್ನು ತಾವು ಪಾದವಂಶಜರು ಅಥವಾ ಭಂಗ ಕ್ಷತ್ರಿಯರು ಎಂದು ಹೇಳಿಕೊಳ್ಳುತ್ತಾರೆ. ಈ ಹೆಸರು ತಾವು ಕ್ಷತ್ರಿಯರ ಒಂದು ಭಾಗವೆಂದು ಹಾಗೂ ಪರಶುರಾಮನ ಕ್ಷತ್ರಿಯ ದ್ವೇಷಕ್ಕೆ ಹೆದರಿ ನಾರ್ತ್ ಈಸ್ಟ್ ಪ್ರಾಂತ್ಯಕ್ಕೆ ಓಡಿ ಹೋದವರೆಂದು ಹೇಳಿಕೊಳ್ಳಲು ಅವರಿಗೆ ಅವಕಾಶ ಕಲ್ಪಿಸಿಕೊಡುತ್ತದೆ. ರಾಮನ ತಂದೆ ದಶರಥ ಮಹಾರಾಜನಿಂದ ತಮ್ಮ ವಂಶಪರಾಂಪರ್ಯವನ್ನು ಗುರುತಿಸಿಕೊಳ್ಳುತ್ತಾರೆ. ಬ್ರಾಹ್ಮಣ ಪುರೋಹಿತರನ್ನು ಇಟ್ಟುಕೊಂಡು, ಮದುವೆಗಳಲ್ಲಿ ಬ್ರಾಹ್ಮಣ ಶಾಸ್ತ್ರಗಳನ್ನು ಅನುಕರಣೆ ಮಾಡಿಕೊಂಡು, ಈಗ ಬ್ರಾಹ್ಮಣ ಪದ್ಧತಿಯ ಗೋತ್ರಗಳಿಗೆ ತಮ್ಮನ್ನೂ ಸೇರ್ಪಡಿಸಿಕೊಳ್ಳಲು ಆರಂಭಿಸಿದ್ದಾರೆ. ಗೋತ್ರಗಳಿಗೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಿಸಿದಂತೆ, ಗೋತ್ರದ ಒಳಗಡೆ ಮದುವೆ ನಿಷಿದ್ಧವಾಗಿರುವುದರಿಂದ ಒಂದು ರೀತಿಯ ಕುತೂಹಲಕಾರಿ ಪರಿವರ್ತನೆಯ ಹಂತದಲ್ಲಿದ್ದಾರೆ. ಒಂದು ಅಥವಾ ಎರಡು ತಲೆಮಾರಿನ ನಂತರ ಮತ್ತು ಪುರೋಹಿತರ ಬುದ್ಧಿವಂತಿಕೆ ಬೆಳೆದು, ನಿವಾರಿಸಬಹುದಾದ ವೈವಾಹಿಕ ವ್ಯವಸ್ಥೆಯಲ್ಲಿನ ಈ ಒಂದು ದ್ವೇಷವನ್ನು ಬಿಟ್ಟರೆ ಅವರನ್ನು ಆರ್ಯಹಿಂದುಗಳಿಂದ ಪ್ರತ್ಯೇಕಿಸುವ ಯಾವ ಅಂಶವು ದೊರಕುವುದಿಲ್ಲ, ಯಾವುದೇ ಹೊಸ ರಕ್ತ ಮಿಶ್ರವಾಗಿಲ್ಲ, ಮತ್ತು ರಾಜವಂಶಜರೆನ್ನುವ ಹೆಸರಿನ ಅಡಿಯಲ್ಲಿ ಕೊಚ್ ಜನರಾಗಿಯೇ ಅವರು ಉಳಿಯುತ್ತಾರೆ.

ಒಂದು ಸಂಪೂರ್ಣ ಆದಿವಾಸಿ ಬುಡಕಟ್ಟು ಅಥವಾ ಬುಡಕಟ್ಟಿನ ಒಂದು ಭಾಗ, ರಾಜವಂಶಿಗಳು ತಮ್ಮ ಬುಡಕಟ್ಟಿನ ಹೆಸರುಗಳನ್ನು ತೊರೆದು ಕ್ರಮೇಣವಾಗಿ ತಮ್ಮ ಬುಡಕಟ್ಟಿನ ಹೆಸರುಗಳನ್ನು ತೊರೆಯದೆ ಹಿಂದೂ ಧರ್ಮಕ್ಕೆ ಮತಾಂತರಗೊಂಡಿತು. ಪಶ್ಚಿಮ ಬಂಗಾಳದ ಭೂಮಿಜ್‌ರಲ್ಲಿ ಇದು ನಡೆಯುತ್ತಿದೆ. ಇಲ್ಲಿ ಶುದ್ಧ ದ್ರಾವಿಡ ಜನಾಂಗವೊಂದು ತಮ್ಮ ಭಾಷೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ; ಮತ್ತೀಗ ಬರೇ ಬೆಂಗಾಲಿ ಮಾತನಾಡುತ್ತಾರೆ; ಅವರ ದೇವರುಗಳ ಜತೆ ಹಿಂದೂ ದೇವರುಗಳನ್ನೂ ಪೂಜಿಸುತ್ತಾರೆ. (ಪದ್ಧತಿಯೆಂದರೆ ಬುಡಕಟ್ಟಿನ ದೇವರುಗಳನ್ನು ಹೆಂಗಸರುಗಳಿಗೆ ವಹಿಸಲಾಗುತ್ತಿತ್ತು);

> **'ಬಹಳಷ್ಟು ಆದಿವಾಸಿ ಕುಟುಂಬಗಳು ಹಿಂದೂ ಧಾರ್ಮಿಕ ಕಟ್ಟುಪಾಡುಗಳನ್ನು ಒಪ್ಪಿಕೊಳ್ಳುತ್ತಾರೆ. ಅವರ ಬುಡಕಟ್ಟು ಹೆಸರುಗಳನ್ನು ಕಳೆದುಕೊಂಡು ವೈಷ್ಣವರೋ, ರಮಾಯತ್ತರೋ ಹಾಗೆಯೇ ಯಾರೋ ಆಗಿಬಿಡುತ್ತಾರೆ. ಅಂತರವಿವಾಹ ಕಟ್ಟುಪಾಡುಗಳ ಮತ್ತು ಸ್ಥಳೀಯ ವಾಸ್ತವಾಂಶಗಳ ಮೇಲೆ ಒಂದು ವೇಳೆ ರಕ್ತ ಮಿಶ್ರಣವಾಗುತ್ತದೆಯೇ ಇಲ್ಲವೋ ಎಂದು ಹೇಳಲಾಗುವುದಿಲ್ಲ, ಒಟ್ಟಾರೆ ಹೇಳುವುದಾದರೆ, ಬುಡಕಟ್ಟಿನವರು ಎನ್ನುವ ಗುರುತು ಮಾತ್ರ ಸಂಪೂರ್ಣವಾಗಿ ಕಳೆದುಹೋಗುತ್ತದೆ. ಆದ್ದರಿಂದ ಇದನ್ನು ಕೂಡ ಸೇರ್ಪಡೆ ಒಂದು ಪ್ರಸ್ತಾಪ ಎಂದು ಹೇಳಬಹುದಾಗಿದೆ.**

ಮತ್ತೆ ಇವರಲ್ಲೇ ಮುಂದುವರೆದವರು ಬ್ರಾಹ್ಮಣರನ್ನು ಪುರೋಹಿತರನ್ನಾಗಿ ಬಳಸುತ್ತಾರೆ. ಇವರು ಮುಂಡಾಸ್ ಮತ್ತು ಸಂತಾಲ ಬುಡಕಟ್ಟುಗಳಿಗೆ ಹತ್ತಿರವಾಗಿ ಹೋಲುವಂತಹ ಬುಡಕಟ್ಟಿನ ಸಂಕೇತವಾದ ಅಂತರ ಜನಾಂಗ ವಿವಾಹ ಪದ್ಧತಿಯನ್ನು ಇನ್ನೂ ಉಳಿಸಿಕೊಂಡಿದ್ದಾರೆ. ಆದರೆ ಅವರು ತಮ್ಮ ಉಪ ಬುಡಕಟ್ಟುಗಳನ್ನು ಸೂಚಿಸುವ ಹೆಸರುಗಳನ್ನು ಮರೆಯುತ್ತಿದ್ದಾರೆ, ಬಹಳ ಬೇಗನೆ ಕ್ಷತ್ರಿಯ ಹೆಸರುಗಳನ್ನು ಆರಿಸಿಕೊಂಡು ತಮ್ಮ ಬುಡಕಟ್ಟಿನ ಹೆಸರುಗಳನ್ನೇ ಸಂಪೂರ್ಣವಾಗಿ ಕೈಬಿಡಬಹುದು. ಆ ವೇಳೆಗೆ ಈ ಬುಡಕಟ್ಟು ಒಂದು ಜಾತಿಯಾಗಿರುತ್ತದೆ, ತಮ್ಮ ನಿಜವಾದ ಮೂಲವನ್ನು ಸೂಚಿಸುವ ಎಲ್ಲಾ ಪದ್ಧತಿಗಳನ್ನೂ ಅವರು ಸಂಪೂರ್ಣವಾಗಿ ಕಿತ್ತೆಸೆಯುತ್ತಾ ಹೋಗುತ್ತಾರೆ. ಈ ಜನರ ದೈಹಿಕ ಗುಣಗಳು ಮಾತ್ರ ಹೇಗೋ ಉಳಿದುಕೊಳ್ಳುತ್ತವೆ. ಒಂದು ಜಾತಿಗೆ ಸಂಪೂರ್ಣ ಪರಿವರ್ತನೆಯಾದ ಮೇಲೆ, ಭೂಮಿಜರು, ಬುಡಕಟ್ಟಿನವರಾಗಿದ್ದಕ್ಕಿಂತಲೂ ಹೆಚ್ಚಾಗಿ ಕರಾರುವಾಕ್ಕಾಗಿ ಜನಾಂಗದ ಒಳಗೆ ವಿವಾಹ ಸಂಬಂಧ ಬೆಳೆಸುವವರಾಗುತ್ತಾರೆ ಮತ್ತು ಅವರ ದೈಹಿಕ ಗುಣ ಲಕ್ಷಣಗಳು ಅಂತರ ಜನಾಂಗದ ವಿವಾಹಗಳಿಂದ ಬದಲಾಗುವ ಸಾಧ್ಯತೆ ಇನ್ನೂ ತೀರ ಕಡಿಮೆ.

ಸ್ಥೂಲವಾಗಿ ಬಿಡಿಸಲಾಗಿರುವ ಬೆಳವಣಿಗೆಗಳ ಕೆಲ ಹಂತಗಳು ಶತಮಾನಗಳಿಂದ ನಡೆದು ಬರುತ್ತಿವೆ ಎಂದು ಭಾವಿಸಲು ಎಲ್ಲಾ ಕಾರಣಗಳಿವೆ. ಸಧ್ಯಕ್ಕೆ ಇದು ಮುಂದುವರೆದುಕೊಂಡು ಹೋಗುತ್ತಿರುವುದನ್ನು ಚೋಟನಾಗಪುರ, ಒರಿಸ್ಸಾದ ಗುಡ್ಡಗಾಡಿನ ಪ್ರದೇಶ ಮತ್ತು ಉತ್ತರ ಮತ್ತು ಪೂರ್ವ ಬಂಗಾಲದ ಕೆಲ ಭಾಗಗಳಲ್ಲಿ ಕೂಡಲೆ ನೋಡಲು ಸಿಗುತ್ತವೆ. ಇದಕ್ಕೂ ಮುಂಚೆ ಬಿಹಾರ ಮತ್ತು ಬಂಗಾಲದಲ್ಲಿ ಇದೇ ಪ್ರಮಾಣದಲ್ಲಿ ನಡೆದಿರಬಹುದು.

ಬಿಹಾರ್ ಮತ್ತು ಚೋಟಾನಾಗಪುರದಲ್ಲಿ ಕಂಡಂತಹ ಮೇಲ್ಜಾತಿಯವರ ಪದ್ಧತಿಗಳನ್ನು ಅನುಕರಿಸುವ ಒಲವು/ಪ್ರವೃತ್ತಿ ಬಂಗಾಲ ಮತ್ತು ಒರಿಸ್ಸಾ ಇನ್ನೂ ಪ್ರಬಲವಾಗಿ ನಡೆಯುತ್ತದೆ. ಉದಾಹರಣೆಗೆ, ಗೊಲ್ಲರು ಒರಿಸ್ಸಾಕ್ಕಿಂತ ಮಿಗಿಲಾಗಿ ಉನ್ನತ ಸ್ಥಾನದಲ್ಲಿದ್ದಾರೆ, ಅಲ್ಲದೆ ವಿಧವಾ ಮರುವಿವಾಹವನ್ನು ಕಟ್ಟುನಿಟ್ಟಾಗಿ ತಡೆಗಟ್ಟಿದ್ದಾರೆ. ಬಂಗಾಲದ ಉದ್ದಗಲಕ್ಕೆ 'ಕೈಬರ್ತಾರ್'ರು, ಬ್ರಾಹ್ಮಣರು ನೀರು ಕುಡಿಯುವಂತ ನಬಸಖರಿಗಿಂತ ಕೆಳಮಟ್ಟದಲ್ಲಿದ್ದರೂ, ತಮ್ಮ ಹೆಣ್ಣುಮಕ್ಕಳ ಬಾಲ್ಯವಿವಾಹ ಮಾಡುತ್ತಾರೆ. ಅಲ್ಲದೆ ವಿಧವೆಯರ ಮರುವಿವಾಹ ನಿಷೇಧಿಸುತ್ತಾರೆ. ಗೋಣಿ ಮತ್ತು ಚಾಪೆ ನೇಯುವ ಕಪಾಲಿಗಳು ಮತ್ತು ಚಂಡಾಲರು, ಮನುವಿನಿಂದ 'ಮಾನವರಲ್ಲೇ ಅತಿಕ್ರೂರಿ'ಗಳೆಂದು ಬರೆಸಿಕೊಂಡಿರುವವರು, ವಿಧವಾವಿವಾಹವನ್ನು ತೊರೆದಿದ್ದಾರೆ, ಅಲ್ಲದೆ ಈ ಪದ್ಧತಿ ಗಡೇರಿ, ರಿಶಿ, ಕೊಚ್ ಮಂಡ್ಯೆ ಮತ್ತು ಹಲವು ಆದಿವಾಸಿ ಮತ್ತು ಅರೆ ಆದಿವಾಸಿ ಜನಾಂಗಗಳಿಗೆ ಸೀಮಿತಗೊಂಡಂತೆ ಕಾಣಬರುತ್ತದೆ. ಈ ರೀತಿ ನಿಧಾನವಾಗಿ ಪದ್ಧತಿಗಳು ಹಬ್ಬುತ್ತಿರುವುದಕ್ಕೆ ಸಾಕ್ಷಾಧಾರಗಳು, ಗುರುತರವಾಗಿ ಆರ್ಯಜನಾಂಗದ ಲಕ್ಷಣಗಳಿಲ್ಲದ ರಂಗಪುರದ ರಾಜವಂಶಜರಲ್ಲಿ ಸಿಗುತ್ತವೆ. ಇವರು ತಮ್ಮ ಕೊಚ್ಚಾ ಬುಡಕಟ್ಟಿನ ಹೆಸರುಗಳನ್ನು ಇತ್ತೀಚೆಗೆ ಮಾತ್ರ ತೋರ್ಪಡಿಸಿಕೊಳ್ಳುತ್ತಾರೆ. ಅಲ್ಲದೆ ಅವರ ವಿಧವೆ ಯರಿಗೆ ಮರುವಿವಾಹ ಅವಕಾಶವಿದೆಯೇ ಎಂದು ಪ್ರಶ್ನಿಸಿ ದರೆ ಮಹಾನ್ ಕೋಪ ತೋರುತ್ತಾರೆ.

ನೋಡಲು ಕೊಚ್ಚಾರಂತೆ ಕಾಣುವ ದಿನಗೆಪುರದ ಪಾಲಿಯರನ್ನೂ ರಾಜವಂಶಪಾಲಿಯರು ಮತ್ತು ಬ್ಯಾಬಹಾರಿ ಅಥವಾ ಸಾಮಾನ್ಯ ಪಾಲಿಯರು ಎಂಬ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಸಾಮಾನ್ಯ ಪಾಲಿಯರು ವಿಧವಾವಿವಾಹ ಪದ್ಧತಿಯನ್ನು ಆಚರಿಸುತ್ತಾರೆ. ಆದರೆ ಸಂಕೋಚ ಪಡುತ್ತಾರೆ. ಈ ಬಗ್ಗೆ ಮತ್ತು ಇನ್ನಿತರ ವಿಷಯಗಳಲ್ಲಿ ಮೇಲ್ಜಾತಿಯವರ ಪದ್ಧತಿಗಳನ್ನು ಓಲುತ್ತಿದ್ದಾರೆ. ರಾಜವಂಶಿ ಪಾಲಿಯರು ಅವರ ಪುರೋಹಿತನೇ ಹೇಳುವಂತೆ ಪದಚ್ಯುತಗೊಂಡ ಬ್ರಾಹ್ಮಣರಂತೆ ಅವಿವೇಕದ ಅತಿರೇಕದಲ್ಲಿ ಕರಾರುವಾಕ್ಕಾಗಿ ನಡೆದುಕೊಳ್ಳುತ್ತಾರೆ; ಅವರಲ್ಲಿ ಶಿಕ್ಷಣ ಹೆಚ್ಚಾದಂತೆಲ್ಲ ತಮ್ಮ ಆಚರಣೆಗಳ ಮುಖವನ್ನು ನಿರಂತರವಾಗಿ ಮೇಲೆಕ್ಕೇರಿಸುತ್ತಾ ಹೋಗುತ್ತಾರೆ.

ಹಿಂದೂ ಧರ್ಮದ ಕೆಳಶ್ರೇಣಿ ನಿರಂತರವಾಗಿ ಮೇಲ್ಜಾತಿಯವರ ಪದ್ಧತಿಗಳಿಗೆ ಹೊಂದುಕೊಳ್ಳುತ್ತಿರುವ ಪ್ರವೃತ್ತಿ ಈಗ ಸ್ಪಷ್ಟ ಇದು ಒಂದು ಸ್ಪಷ್ಟವಾದ ಶೈಲಿಯನ್ನು ತಿಳಿಸುತ್ತಾ ಒಂದು ಹಂತದವರೆಗೆ ಕೆಳವರ್ಗದ ಹಿಂದೂಗಳು ಅನುಕರಣೆ ಮಾಡುತ್ತಿರುವುದನ್ನು ಸಾದರಪಡಿಸುತ್ತದೆ. ಅಲ್ಲದೇ ಇಡೀ ಬ್ರಾಹ್ಮಣ ಪದ್ಧತಿ ಈ ದಿಕ್ಕಿನಡೆಗೆ ಕೆಲಸ ಮಾಡುತ್ತಿದೆ. (ಹೆಚ್.ಹೆಚ್.ರಿಸ್ಲೆ, ದಿ ಟ್ರೈಬ್ಸ್ ಅಂಡ್ ಕ್ಯಾಸ್ಟ್ ಆಫ್ ಬೆಂಗಾಲ್, ಬೆಂಗಾಲ್ ಸೆಕ್ರೇಟೇರಿಯೇಟ್ ಪ್ರೆಸ್, ಕಲ್ಕತ್ತ 1891, ನಾಯರ್, 'ಡೈನಮಿಕ್ ಬ್ರಾಹ್ಮಿಣ್'ನಲ್ಲಿ ಬಳಸಿದ್ದಾರೆ) ಸಂ



ಜಯಪ್ರಕಾಶ್ ನಾರಾಯಣ ಒಂದು ಅಪೂರ್ಣಕ್ರಾಂತಿಯ ಕಥೆ

ಲೇ. ಡಿ.ಎಸ್. ನಾಗಭೂಷಣ

ಬೆಲೆ : ರೂ. 100/-

ಸಂಪೂರ್ಣ ಕ್ರಾಂತಿಯ ಹರಿಕಾರ ಜೆಪಿಯವರು ತಮ್ಮ ವಿಚಾರ ಮತ್ತು ಹೋರಾಟಗಳಿಗೆ ಪ್ರಾರಂಭಿಕ ಹಂತದಲ್ಲಿ ಯಶಸ್ಸನ್ನು ಕಂಡರೂ ನಂತರ ಅವರ ಎದುರೇ ಅಧಿಕಾರದ ಗದ್ದುಗೆ ಏರಿದವರ ಇಚ್ಛಾಶಕ್ತಿಯ ಕೊರತೆಯಿಂದಾಗಿ ಜೆಪಿ ಯವರ ಕಣ್ಣೆದುರೇ ಕ್ರಾಂತಿ ಅಪೂರ್ಣ ವಾದದ್ದು ಇತಿಹಾಸ. ಈ ಕುರಿತ ಅಪರೂಪದ ಕೃತಿ ಇದು.

ಪ್ರಕಾಶಕರು : ಲೋಹಿಯಾ ಪ್ರಕಾಶನ, 'ಕ್ಷಿತಿಜ', ಕಪ್ಪಗಲ್ಲು ರಸ್ತೆ ಗಾಂಧಿನಗರ, ಬಳ್ಳಾರಿ - 583 103

ದೇವಬಾಗ

ಲೇ. ಚಂದ್ರಶೇಖರ ಪಾಟೀಲ (ಚಂಪಾ)

ಬೆಲೆ ರೂ. 45/-

ತಮಗೆ ಹಿಡಿಸಿದ್ದನ್ನು ಅಪಾರವಾಗಿ ಪ್ರೀತಿ ಸುತ್ತಾ, ಹಿಡಿಸದ್ದನ್ನು ಮೂಲಾಜಿಲ್ಲದೆ ಖಂಡಿಸುತ್ತಾ ಕಳೆದ ನಾಲ್ಕೂವರೆ ದಶಕಗ ಳಿಂದಲೂ ಸಾಹಿತ್ಯ, ಸಂಘಟನೆ ಮತ್ತು ಜನ ಪರ ಚಳುವಳಿಗಳಲ್ಲಿನ ವಿಶಿಷ್ಟವ್ಯಕ್ತಿಯಾಗಿ ಜನಪ್ರಿಯರಾಗಿರುವ ಚಂದ್ರಶೇಖರ್ ಪಾಟೀಲ್ (ಚಂಪಾ)ರ 10ನೇ ಕವನ ಸಂಕಲನವಿದು. ಹಾಸ್ಯ, ವಿಡಂಬನೆಯ ಜತೆಗೆ ಮಾನವ ಸಹಜ ಸಂವೇದನೆಗಳಿಗೆ ಒತ್ತು ನೀಡಿರುವ ಕವನಗಳು ಇಲ್ಲಿವೆ.

ಪ್ರಕಾಶಕರು : ತನುಮನ ಪ್ರಕಾಶನ, 'ತೃಪ್ತಿ', 42, 'ಬಿ' ಬ್ಲಾಕ್, 3ನೇ ಅಡ್ಡರಸ್ತೆ ರಾಮಕೃಷ್ಣನಗರ, ಮೈಸೂರು-23



ಸಮಾಜಶಾಸ್ತ್ರಜ್ಞಡಾ|| ಅಂಬೇಡ್ಕರ್

ಲೇ. ಸಮತಾ ಬಿ. ದೇಶಮಾನೆ

ಬೆಲೆ ರೂ. 60/-

ಡಾ|| ಬಾಬಾಸಾಹೇಬ್ ಅಂಬೇಡ್ಕರ್ ರವರು ಜಗತ್ತಿನ ಶ್ರೇಷ್ಠ ವಿದ್ವಾಂಸರು. ಅವರ ವಿಚಾರ-ವಿದ್ವತ್ತು- ಪಾಂಡಿತ್ಯ ಹೋರಾಟ- ತ್ಯಾಗಗಳ ಕಾರಣದಿಂದಾಗಿ ಭಾರತದ ಅಸಂಖ್ಯಾತ ಶೋಷಿತರು ಸ್ವಾಭಿ ಮಾನದಿಂದ ತಲೆಎತ್ತಿ ನಡೆಯುವಂತಾ ಗಿದೆ. ಅಂತಹ ಅಂಬೇಡ್ಕರ್‌ರವರ ಜೀವನದ ಎಲ್ಲಾ ಹಂತಗಳನ್ನೂ ಸಂಕ್ಷಿಪ್ತವಾಗಿ ಪರಿಚಯಿಸುವ ಕಾರ್ಯವನ್ನು ಕೃತಿ ಮಾಡಿದೆ.

ಪ್ರಕಾಶಕರು : ಹೊಸದಿಕ್ಕು ಪ್ರಕಾಶನ, ನಂ. 22, ಡಾ|| ಟಿ.ಸಿ.ಎಂ. ರಾಯನ್ ರಸ್ತೆ ಬೆಂಗಳೂರು - 53



ಅದೃಷ್ಟದ ಹುಡುಗಿ

ಲೇ. ಬಾಲಸುಬ್ರಹ್ಮಣ್ಯ ಕಂಜರ್ಪಣೆ

ಬೆಲೆ ರೂ. 50/-

ಕತೆಗಾರ ಬಾಲಸುಬ್ರಹ್ಮಣ್ಯ ಕಂಜರ್ಪಣೆ ಯವರು ಬರೆದಿರುವ ಕತೆಗಳ ಸಂಕಲನ ವಿದು. ಕೃತಿಯಲ್ಲಿರುವ ಎಲ್ಲಾ ಕಥೆಗಳೂ ಈಗಾಗಲೇ ನಾಡಿನ ಜನಪ್ರಿಯ ದಿನ ಪತ್ರಿಕೆ ಗಳಲ್ಲಿ ಪ್ರಕಟಗೊಂಡಿದ್ದರೂ, ಬಾಲು ರವರು ಆಯ್ದುಕೊಂಡಿರುವ ವಸ್ತು ಪ್ರಸಂಗ, ಪಾತ್ರ ಹಾಗೂ ಕತೆಯನ್ನು ಹೆಣೆ ದಿರುವ ಧಾಟಿ ಓದುಗರನ್ನು ಆಕರ್ಷಿಸದೇ ಇರದು.

ಪ್ರಕಾಶಕರು : ಮಾರ್ಗದರ್ಶಿ ಪ್ರಕಾಶನ, ನಂ.3-1-40, ಕಮರ್ಶಿಯಲ್ ಕಟ್ಟಡ, ಮೊದಲನೇ ಮಹಡಿ, ಬಿಜೈ, ಮಂಗಳೂರು-4



ಕೆರೆಗೆ ಹಾರವಾದ ಬಂದಮ್ಮನ ಇತಿಹಾಸ

ಲೇ. ಎಸ್.ಆರ್.ಗುರುನಾಥ್

ಬೆಲೆ : ರೂ. 30/-

ಎಲ್ಲಾ ಕಾಲಕ್ಕೂ ಭಾರತೀಯ ಇತಿಹಾಸ ಕಾಲ್ಪನಿಕ-ಫ್ಯಾಂಟಸಿ ಸ್ವರೂಪದ ವಿಷಯ ಗಳನ್ನು ವೈಭವೀಕರಿಸುತ್ತಾ ನೆಲದ ಮೂಲ ಜನರ ಬದುಕು ಮತ್ತು ಸಂಸ್ಕೃತಿಯನ್ನು ಅಲಕ್ಷಿಸುತ್ತಾ ಬಂದಿದೆ. ಅಂತಹ ಅಲಕ್ಷಿತ ಸಮುದಾಯದಲ್ಲಿನ ಜೀವಪರ ಕಾಳಜಿಗಳಿಗೆ ಪ್ರತೀಕವಾದ ಬಂದೆಮ್ಮ ಮೂಲಕ ತಳಸಮುದಾಯಗಳ ಇತಿ ಹಾಸವನ್ನು ಸಂಶೋಧಿಸಿದ ಫಲವೇ ಈ ಕೃತಿ.

ಪ್ರಕಾಶಕರು : ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಹಿರಿಯೂರು ತಾಲೂಕು, ಚಿತ್ರದುರ್ಗ ಜಿಲ್ಲೆ-577545

ಮೆಲುದನಿ

ಲೇ. ರವಿಶಂಕರಶೆಟ್ಟಿ

ಬೆಲೆ : ರೂ. 25/-

ಕಾವ್ಯಕ್ಕೆ ಅಬ್ಬರದ ದನಿ ಸಲ್ಲ. ಅಲ್ಲಿ ಮೆಲುದನಿಯೇ ಭೂಷಣ ಎಂಬಂತೆ ತರುಣ ಕವಿ ರವಿಶಂಕರಶೆಟ್ಟಿಯವರು ಅನೇಕ ವಸ್ತುಗಳ ಜತೆಗೆ ಪ್ರತಿಮೆ, ಸಂಕೇತ, ರೂಪಕ, ಉಪಮೆ, ವಕ್ರೋಕ್ತಿ ಎಲ್ಲವನ್ನೂ ವಸ್ತುವನ್ನಾಗಿಸಿಕೊಂಡು ಬರೆ ದಿರುವ ಕವನ ಸಂಕಲನಗಳ ಕೃತಿ 'ಮೆಲು ದನಿ'. ಓದುಗರೊಂದಿಗೆಮುಖಾ-ಮುಖಿ ಯಾಗಬಯಸುವ ಈ ಕೃತಿ ತರುಣ ಕಾವ್ಯಪ್ರಿಯರಿಗೆ ಇಷ್ಟವಾಗ ಬಹುದು.

ಪ್ರಕಾಶಕರು : ಆಶಯ ಪ್ರಕಾಶನ, ಒಡಂಬೆಟ್ಟು ಬೇಕೂರು ಅಂಚೆ, ಉಪ್ಪಳ ಮಾರ್ಗ - 671 322



ಧರ್ಮ ಎಂದರೆ ಕೋಮುವಾದವೇ ?

ಧರ್ಮ ನಮಗೆ ಕೇವಲ ಯುಕ್ತಿಯ ಒಪ್ಪಿಗೆ ಮಾತು, ಮತ್ತೇನೂ ಅಲ್ಲ. ಯಾರು ಚೆನ್ನಾಗಿ ಮಾತನಾಡಬಲ್ಲರೋ ಅವರನ್ನು ಧಾರ್ಮಿಕರೆಂದು ಅನೇಕ ವೇಳೆ ಭಾವಿಸುವೆವು. ಆದರೆ ಧರ್ಮ ಅದಲ್ಲ. ಧರ್ಮವೆಂದರೆ ಕೇವಲ ಸುಂದರ ಪದಸಂಯೋಜನೆಯ ಮತ ಸಿದ್ಧಾಂತ ಎಂದು ತಿಳಿದಿರುವ ಮಾತಿನಮಲ್ಲರಿಂದ ಬಹುದೂರ ಹೋಗಬೇಕು. ಯಾರಿಗೆ ಧರ್ಮವೆಂದರೆ, ಯುಕ್ತಿಯ ಆಧಾರದ ಮೇಲೆ ಒಂದು ಒಪ್ಪಿಗೆ ಅಥವಾ ವಿರೋಧವನ್ನು ಸೂಚಿಸುವುದಾಗಿದೆಯೋ, ಯಾರಿಗೆ ತಮ್ಮ ಪುರೋಹಿತರು ಹೇಳುವ ಕೆಲವು ವಿಷಯಗಳನ್ನು ನಂಬಿಕೊಂಡಿರುವ ಕೆಲವು ಭಾವನೆ ಮತ್ತು ಮೂಢನಂಬಿಕೆಗೆ ಸಂಪೂರ್ಣ ಒಪ್ಪಿಗೆಯನ್ನು ಕೊಡುವುದಾಗಿದೆಯೋ ಅವರು ಅಂತಹ ಭಾವನೆಗಳಿಂದ ಪಾರಾಗಬೇಕು. ಅವುಗಳನ್ನೆಲ್ಲಾ ಮೀರಿ ಹೋಗಬೇಕು. ಮಾನವ ಕೋಟಿಯನ್ನು ಬೆಳಕಿನೆಡೆಗೆ ಮುಂದುವರೆಯುತ್ತಿರುವ ಒಂದು ಬೃಹತ್ ಜೀವಿಗಳ ವ್ಯೂಹ ಎಂದು ಭಾವಿಸಬೇಕು.

ಧರ್ಮ ಬಾಯಿ ಮಾತಲ್ಲ, ನಂಬಿಕೆಯಲ್ಲ, ಸಿದ್ಧಾಂತವಲ್ಲ ಅಥವಾ ಅದೊಂದು ಕೋಮುವಾರು ಭಾವನೆಯೂ ಅಲ್ಲ. ಧರ್ಮ ಕೋಮುಗಳಲ್ಲೂ ಸಂಘಗಳಲ್ಲೂ ಜೀವಿಸಲಾರದು. ಆತ್ಮನಿಗೂ ದೇವರಿಗೂ ಇರುವ ಸಂಬಂಧ ಇದು. ಇದನ್ನು ಒಂದು ಸಂಘವಾಗಿ ಹೇಗೆ ಮಾಡಬಹುದು? ಅನಂತರ ಇದೊಂದು ವ್ಯಾಪಾರವಾಗುವುದು. ಎಲ್ಲಿ ವ್ಯಾಪಾರ ದೃಷ್ಟಿ ಇದೆಯೋ, ಧರ್ಮದಲ್ಲಿ ವ್ಯಾಪಾರ ನಿಯಮಗಳಿವೆಯೋ ಅಲ್ಲಿ ಆಧ್ಯಾತ್ಮಿಕತೆ ಕೊನೆಗಾಣುವುದು. ಧರ್ಮ ದೇವಸ್ಥಾನ ಕಟ್ಟುವುದರಲ್ಲಿಲ್ಲ, ಅಥವಾ ಸಾಮಾಜಿಕ ಪೂಜೆಗೆ ಹೋಗುವುದರಲ್ಲಿಯೂ ಇಲ್ಲ. ಅದು ಗ್ರಂಥದಲ್ಲಿಲ್ಲ, ಮಾತಿನಲ್ಲಿಯೂ ಇಲ್ಲ, ಉಪವಾಸದಲ್ಲಿಯೂ ಇಲ್ಲ, ಅಥವಾ ಸಂಸ್ಥೆಯಲ್ಲಿಯೂ ಇಲ್ಲ. ಧರ್ಮವೆಂದರೆ ಸಾಕ್ಷಾತ್ಕಾರ. ಒಂದು ಕಣದಷ್ಟು ಧರ್ಮಾನುಷ್ಠಾನ ಮತ್ತು ಆತ್ಮ ಸಾಕ್ಷಾತ್ಕಾರ ಒಂದು ಮಣ ಮಾತಿಗಿಂತ ಮತ್ತು ಒಣ ಹೆಮ್ಮೆಗಿಂತ ಮೇಲು.

ಪ್ರತಿಯೊಂದು ಧರ್ಮದಲ್ಲಿಯೂ ಒಂದು ನಿಷೇಧದ ಭಾವನೆ ಇದೆ. ಪ್ರತಿಯೊಂದು ಧರ್ಮವೂ ಮಾನವರಲ್ಲಿರುವ ಯಾವುದೋ ಒಂದು ಸ್ವಭಾವವು ಬೆಳೆಯುವುದಕ್ಕೆ ಸಹಕಾರಿಯಾಗುವುದು ಮತ್ತು ಆ ಜನಾಂಗದಲ್ಲಿ ಹಿಂದೆ ಇಲ್ಲದ ಭಾವಗಳು ಬರದಂತೆ ನೋಡಿಕೊಳ್ಳುವುದು. ಆದ ಕಾರಣವೇ ಯಾವುದೋ ಒಂದು ಧರ್ಮ ಪ್ರಪಂಚಕ್ಕೆ ಅನ್ವಯಿಸುವ ಧರ್ಮವಾದರೆ ಅದು ಬಹಳ ಅಪಾಯಕರ. ಅದು ಮಾನವನನ್ನು ಅಧೋಗತಿಗೆ ತರುವುದು.

ಪ್ರತಿಯೊಬ್ಬರೂ ಒಂದೇ ಧರ್ಮಕ್ಕೆ ಸೇರಿ, ಒಂದೇ ಮಾರ್ಗವನ್ನು ಅನುಸರಿಸುವ ದುರ್ದಿನ ಪ್ರಪಂಚಕ್ಕೆ ಬರದಿರಲಿ. ಆಗ ಧರ್ಮ ಮತ್ತು ಆಧ್ಯಾತ್ಮಿಕ ಭಾವನೆ ನಾಶವಾಗುವುದು. ವೈವಿಧ್ಯವೇ ಜೀವನದ ರಹಸ್ಯ. ಇದು ಪೂರ್ಣ ನಾಶವಾದರೆ ಸೃಷ್ಟಿಯೇ ನಾಶವಾಗುವುದು. ಪ್ರಪಂಚದ ಧರ್ಮಗಳು ಪರಸ್ಪರ ವಿರೋಧವಲ್ಲ. ಅವೆಲ್ಲಾ ಒಂದು ಸನಾತನ ಧರ್ಮದ ಹಲವಾರು ಪ್ರತಿಬಿಂಬಗಳು. ಆ ಒಂದು ಸತ್ಯವನ್ನೇ ಕಾರ್ಯಕ್ಷೇತ್ರದ ಹಲವು ಭೂಮಿಕೆಗಳಲ್ಲಿ ಬೇರೆ ಬೇರೆ ಜನಾಂಗದವರಿಗೆ ಅವರವರ ಮನಸ್ಸಿಗೆ ರುಚಿಸುವಂತೆ ಉಪಯೋಗಿಸಿದೆ. ಎಂದಿಗೂ 'ನನ್ನ' ಧರ್ಮ ಎಂಬುದು ಇರಲಿಲ್ಲ. 'ಹಲವು' ಧರ್ಮ ಎಂದಿಗೂ ಇರಲಿಲ್ಲ. ಯಾವಾಗಲೂ ಇರುವುದು ಒಂದೇ ಧರ್ಮ. ಒಂದು ಸನಾತನ ಧರ್ಮ ಅನಾದಿ ಕಾಲದಿಂದಲೂ ಬಂದಿದೆ. ಅದೇ ಎಂದೆಂದಿಗೂ ಇರುವುದು. ಈ ಧರ್ಮವೇ ಹಲವು ದೇಶಗಳಲ್ಲಿ ಹಲವು ರೀತಿಗಳಲ್ಲಿ ವ್ಯಕ್ತವಾಗುತ್ತಾ ಹೋಗುವುದು. ಆದ ಕಾರಣ ನಾವು ಎಲ್ಲಾ ಧರ್ಮಗಳಿಗೂ ಗೌರವವನ್ನು ತೋರಬೇಕು. ಸಾಧ್ಯವಾದ ಮಟ್ಟಿಗೆ ನಾವು ಎಲ್ಲವನ್ನೂ ಸ್ವೀಕರಿಸಬೇಕು.

ಧರ್ಮ ಎಂದರೆ ಮತೀಯ ಭಾವನೆ ಕೆರಳಿಸುವಂತಹ ಕೋಮುವಾದ ಎಂದುಕೊಂಡು, ಈ ಬಗ್ಗೆ ಜನರನ್ನು ನಂಬಿಸಲು ವಿವೇಕಾನಂದ-ಅಂಬೇಡ್ಕರ್ ಮುಂತಾದ ಮಾನವ ಪ್ರೇಮಿಗಳನ್ನು ಮುಂದಿಡುತ್ತಿರುವ ಮೂರ್ಖ ಹಿಂದೂ ಮೂಲಭೂತವಾದಿಗಳ ಕುತಂತ್ರವನ್ನು ಬಯಲುಗೊಳಿಸುವಲ್ಲಿ 'ಧರ್ಮ ಬಾಯಿ ಮಾತಲ್ಲ, ಧರ್ಮ ಕೋಮು ಭಾವನೆಯೂ ಅಲ್ಲ' ಎಂಬುದು ವಿವೇಕಾನಂದರ ಸ್ಪಷ್ಟನುಡಿ.

ಸಂಗ್ರಹ : ಜ.ಹೊ. ನಾರಾಯಣಸ್ವಾಮಿ

ವೇದಾಂತಕ್ಕೆ ಮಾತ್ರ ವಿಶ್ವಧರ್ಮವಾಗುವ ಹಕ್ಕಿದೆ. ಇದಾಗಲೇ, ಪ್ರಪಂಚದಲ್ಲಿ ವಿಶ್ವಧರ್ಮವಾಗಿದೆ. ಏಕೆಂದರೆ ಇದು ವ್ಯಕ್ತಿಯನ್ನು ಬೋಧಿಸುವುದಿಲ್ಲ, ತತ್ವವನ್ನು ಬೋಧಿಸುವುದು. ಯಾವುದಾದರೂ ಒಂದು ವ್ಯಕ್ತಿಯ ಮೇಲೆ ನಿಂತ ಧರ್ಮವನ್ನು ಪ್ರಪಂಚದಲ್ಲಿರುವವರೆಲ್ಲ ಸಾರ್ವತ್ರಿಕವಾಗಿ ಸ್ವೀಕರಿಸಲಾರರು. ನಮ್ಮ ದೇಶದಲ್ಲೇ ಎಷ್ಟೋ ಪ್ರಖ್ಯಾತ ವ್ಯಕ್ತಿಗಳಿರುವರು. ಒಂದು ಸಣ್ಣ ಊರಿನಲ್ಲೇ ಎಷ್ಟೋ ಜನರನ್ನು ಆದರ್ಶ ವ್ಯಕ್ತಿಗಳನ್ನಾಗಿ ಆರಿಸಿಕೊಳ್ಳುವರು. ಇಡಿಯ ವಿಶ್ವಕ್ಕೆ ಒಬ್ಬ ಮಹಮ್ಮದ, ಕ್ರಿಸ್ತ ಅಥವಾ ಬುದ್ಧ ಒಂದು ಆದರ್ಶವೆಂದು ಹೇಗೆ ಒಪ್ಪಿಕೊಳ್ಳುವುದು? ಆ ಒಂದು ವ್ಯಕ್ತಿಯ ಪ್ರಮಾಣದ ಮೇಲೆ ಮಾತ್ರ ಎಲ್ಲಾ ನೀತಿ, ಧರ್ಮ, ಆಧ್ಯಾತ್ಮ ಹೇಗೆ ಇರಬಹುದು? ವೇದಾಂತ ಧರ್ಮಕ್ಕೆ ಅಂತಹ ಯಾವ ವ್ಯಕ್ತಿಯೂ ಪ್ರಮಾಣವೂ ಅನಾವಶ್ಯಕ. ಮನುಷ್ಯನಲ್ಲಿರುವ ಸನಾತನ ಪ್ರಕೃತಿಯೇ ಇದಕ್ಕೆ ಪ್ರಮಾಣ. ಇದರ ನೀತಿ ಮಾನವ ಜಾತಿಯ ಸನಾತನ ಆಧ್ಯಾತ್ಮಿಕ ಏಕತ್ವದ ಮೇಲೆಯೇ ನಿಂತಿದೆ. ಈ ಏಕತ್ವ ಹೊಸದಾಗಿ ಪಡೆಯುವಂತಹುದಲ್ಲ, ಇದಾಗಲೇ ನಮ್ಮದಾಗಿದೆ.

ಪ್ರಶ್ನೆ : ವೇದಾಂತ ಜಾತಿಯನ್ನು ಒಪ್ಪಿಕೊಳ್ಳುವುದೇ?

ಸ್ವಾಮೀಜಿ: ಜಾತಿ ಪದ್ಧತಿ ವೇದಾಂತಕ್ಕೆ ವಿರೋಧ...! ಜಾತಿ ಕೇವಲ ಸಾಮಾಜಿಕ ಆಚಾರ. ನಮ್ಮ ಮಹಾಗುರುಗಳೆಲ್ಲ ಅದನ್ನು ನಾಶ ಮಾಡಲು ಯತ್ನಿಸಿರುವರು. ಬೌದ್ಧರಿಂದ ಪ್ರಾರಂಭಿಸಿ ಇದುವರೆಗೆ ಎಲ್ಲರೂ ಜಾತಿಯನ್ನು ಹಳಿದಿರುವರು. ಆದರೆ ಪ್ರತಿಸಲವೂ ಜಾತಿಯ ಬಂಧನ ಜಾಸ್ತಿಯಾಗುತ್ತಾ ಬರುತ್ತಿದೆ. ಜಾತಿ ರಾಜಕೀಯ ಸಂಸ್ಥೆಯ ಒಂದು ಬೆಳವಣಿಗೆ. ಇದು ಅನುವಂಶಿಕವಾಗಿ ಬಂದ ವ್ಯಾಪಾರ ಸಂಸ್ಥೆ. ಯುರೋಪಿನೊಂದಿಗೆ ಆಗುತ್ತಿರುವ ವ್ಯಾಪಾರ ಸ್ಪರ್ಧೆ ಎಲ್ಲಾ ಬೋಧನೆಗಳಿಗಿಂತ ಹೆಚ್ಚಾಗಿ ಜಾತಿಯನ್ನು ನಿರ್ಮೂಲನ ಮಾಡಿದೆ.

ಪ್ರಶ್ನೆ : ವೇದದ ವೈಶಿಷ್ಟ್ಯವೇನು?

ಸ್ವಾಮೀಜಿ : ಅದರ ಒಂದು ವೈಶಿಷ್ಟ್ಯವೇ?, ಇದೊಂದೇ ಗ್ರಂಥ ವೇದಾತೀತವಾಗಿ ಹೋಗಿ ಎಂದು ಬೋಧಿಸುವುದು. ತಾವು ಕೇವಲ ಬಾಲ ಬುದ್ಧಿಯವರಿಗಾಗಿ ಮಾತ್ರ ಬರೆಯಲ್ಪಟ್ಟವುಗಳೆಂದು ಎನ್ನುವವು. ನೀವು ಬೆಳೆದಂತೆ ಅವನ್ನು ಮೀರಿ ಹೋಗಬೇಕು. ವೇದದಲ್ಲಿ ಎಲ್ಲಿಯೂ ಮಾನವ ಜನ್ಮತಃ ಪಾಪಿ ಎಂದು ಹೇಳಿಲ್ಲ. ಹಾಗೆ ಹೇಳುವುದು ಮಾನವ ಸ್ವಭಾವಕ್ಕೆ ಅನ್ಯಾಯ ಮಾಡಿದಂತೆ.

ಪ್ರತಿಯೊಂದು ಧರ್ಮವೂ ತಮ್ಮ ಸಿದ್ಧಾಂತವೇ ಸತ್ಯ ಎಂದು ಸಾಧಿಸುವುದು. ಇದು ಮಾತ್ರವಲ್ಲ, ಯಾರು ಇದನ್ನು ನಂಬುವುದಿಲ್ಲವೋ ಅವರು ಘೋರ ನರಕಕ್ಕೆ ಹೋಗಬೇಕು, ಎನ್ನುವುದು. ತಮ್ಮಂತೆ ಇತರರೂ ನಂಬುವಂತೆ ಬಲಾತ್ಕಾರ ಮಾಡುವುದಕ್ಕೂ, ಬಲ ಪ್ರಯೋಗಕ್ಕೂ ಕೆಲವರು ಹಿಂಜರಿಯುವುದಿಲ್ಲ. ಇದು ದುಷ್ಟತನದಿಂದ ಅಲ್ಲ; ಮತಭ್ರಾಂತಿ ಎಂಬ ಮಾನವನ ಮಿದುಳಿನ ಒಂದು ಜಾಡ್ಯದ ಪರಿಣಾಮದಿಂದ. ಈ ಮತಭ್ರಾಂತರು ತುಂಬಾ

ಪ್ರಾಮಾಣಿಕರು, ಮನುಷ್ಯರಲ್ಲ ನಿಷ್ಕಪಟಿಗಳು. ಆದರೆ ಅವರು ಹುಚ್ಚರಂತೆ ಜವಾಬ್ದಾರಿ ಇಲ್ಲದವರು. ಮತಭ್ರಾಂತಿ ಎಂಬುದೊಂದು ವಿಹಳ ಅಪಾಯಕರವಾದ ರೋಗ. ಮಾನವನ ಹೀನ ಸ್ವಭಾವವೆಲ್ಲ ಇದರಿಂದ ಜಾಗ್ರತವಾಗುವುದು. ಕೋಪಿಷ್ಠರು ಉದ್ವೇಗ ಪರವಶರಾಗಿ ವ್ಯಾಘ್ರಗಳಂತೆ ಆಗುವರು.

ಧರ್ಮದ ವಿಷಯದಲ್ಲಿ ಎರಡು ಅತಿರೇಕಗಳಿವೆ. ಒಬ್ಬನು ನಾಸ್ತಿಕ ಮತ್ತೊಬ್ಬನು ಧರ್ಮಾಂಧ. ನಾಸ್ತಿಕನಲ್ಲಿ ಸ್ವಲ್ಪ ಒಳ್ಳೆಯದು ಇದೆ. ಆದರೆ ಧರ್ಮಾಂಧನಾದರೋ ಕೇವಲ ಸ್ವಾರ್ಥಿ. ದೇವರ ಹೆಸರಿನಲ್ಲಿ ಏತಕ್ಕೆ ಇಷ್ಟೊಂದು ಅಶಾಂತಿ ಕಲಹ? ದೇವರ ಹೆಸರಿನಲ್ಲಿ ಹರಿಸಿರುವಷ್ಟು ರಕ್ತವನ್ನು ಬೇರಾವ ಕಾರಣದಿಂದಲೂ ಹರಿಸಿಲ್ಲ. ಏಕೆಂದರೆ ಜನರು ಧರ್ಮದ ಮೂಲಕ್ಕೆ ಹೋಗಲಿಲ್ಲ; ಅವರ ಪೂರ್ವಿಕ ಆಚಾರ ವ್ಯವಹಾರಗಳಿಗೆ ಒಪ್ಪಿಗೆ ನೀಡುವುದರಲ್ಲಿಯೇ ತೃಪ್ತರಾಗಿದ್ದರು. ಉಳಿದವರು ಕೂಡ ಹಾಗೆಯೇ ಮಾಡಬೇಕೆಂದು ತಿಳಿದಿದ್ದರು... ಕಪಟಿಯಾಗುವುದಕ್ಕಿಂತ ಖಂಡಿತವಾಗಿ ನಾಸ್ತಿಕನಾಗಿರುವುದು ಮೇಲು.

ಜಗತ್ತಿನಲ್ಲಿ ಯಾವುದಾದರೂ ಒಂದು ಸರ್ವಸಾಮಾನ್ಯವಾದ ಧರ್ಮವಿರಬೇಕಾದರೆ ಅದು ಯಾವ ಒಂದು ಕಾಲದ ಮತ್ತು ದೇಶದ ಮೇರೆಯನ್ನು ಮೀರಿರಬೇಕು. ಪ್ರತಿಯೊಬ್ಬರೂ ಕೂಡ ಮತ್ತೊಬ್ಬರ ಭಾವವನ್ನು ಹೀರಿಕೊಂಡು ವ್ಯಕ್ತಿತ್ವವನ್ನು ನಾಶಮಾಡಿಕೊಳ್ಳದೆ ತಮ್ಮ ಬೆಳವಣಿಗೆಯ ನಿಯಮದಂತೆ ಬೆಳೆಯಬೇಕು.

ನನ್ನ ದೃಷ್ಟಿಯಲ್ಲಿ ಗ್ರಂಥಗಳು ಒಳ್ಳೆಯದಕ್ಕಿಂತ ಹೆಚ್ಚು ಕೆಡುಕನ್ನು ಉಂಟುಮಾಡಿವೆ. ಹಲವು ದೋಷಯುಕ್ತ ಸಿದ್ಧಾಂತಗಳಿಗೆ ಅವೇ ಕಾರಣ. ಸಿದ್ಧಾಂತಗಳೆಲ್ಲ ಗ್ರಂಥದಿಂದ ಬರುವುವು. ಮತಾಂಧತೆ, ಅನ್ಯ ಧರ್ಮೀಯರನ್ನೂ ಹಿಂಸಿಸುವುದು, ಇವಕ್ಕೆಲ್ಲ ಗ್ರಂಥಗಳೇ ಕಾರಣ. ಇಂದಿನ ಕಾಲದಲ್ಲಿ ಗ್ರಂಥಗಳು ಎಲ್ಲ ಕಡೆಯಲ್ಲಿಯೂ ಕಪಟಿಗಳನ್ನೂ ಉಂಟುಮಾಡುತ್ತಿರುವುವು. ಹೊರದೇಶಗಳಲ್ಲಿಯೂ ಇರುವ ಕಪಟಿಗಳ ಸಂಖ್ಯೆಯನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಅದ್ಭುತ ಶಕ್ತಿಯುಳ್ಳ ಧರ್ಮಗಳು ಪ್ರಪಂಚಕ್ಕೆ ಒಳ್ಳೆಯದನ್ನು ಮಾಡುವುದಕ್ಕಿಂತ ಕೆಟ್ಟದ್ದನ್ನು ಮಾಡಿವೆ. ಇದಕ್ಕೆ ಕಾರಣ ಆ ಧರ್ಮಗಳ ಸಂಕುಚಿತ ಭಾವನೆ... ಎಲ್ಲಿಯವರೆವಿಗೆ ಧರ್ಮ ಎಲ್ಲೋ ಕೆಲವು ಆರಿಸಿದ ವ್ಯಕ್ತಿಗಳ ಕೈಯಲ್ಲಿ ಅಥವಾ ಕೆಲವು ಪುರೋಹಿತರ ಕೈಯಲ್ಲಿ ಇದ್ದಿತ್ತೋ ಆಗ ಧರ್ಮ, ದೇವಸ್ಥಾನ, ಚರ್ಚು, ಶಾಸ್ತ್ರ ಮೂಢನಂಬಿಕೆ ಆಚಾರ-ವ್ಯವಹಾರ ಇವುಗಳಲ್ಲಿತ್ತು, ಆದರೆ ನಾವು ಎಂದು ನಿಜವಾದ ಆಧ್ಯಾತ್ಮಿಕ ಸಮಷ್ಟಿ ಭಾವನೆಗೆ ಬರುವೆವೂ ಆಗ ಮಾತ್ರ ಧರ್ಮ ಸತ್ಯವಾಗುವುದು, ಬದುಕಿರುವುದು. ಅದು ನಮ್ಮ ಸ್ವಭಾವದಲ್ಲಿ ವ್ಯಕ್ತವಾಗುವುದು; ನಮ್ಮ ಪ್ರತಿಯೊಂದು ಕಾರ್ಯ ಕಲಾಪಗಳಲ್ಲಿಯೂ ಇರುವುದು; ನಮ್ಮ ಸಮಾಜದ ಅಂಗಾಂಗಗಳನ್ನು ಪ್ರವೇಶಿಸುವುದು, ಎಂದಿಗಿಂತ ಮಹಾಕಲ್ಯಾಣಪ್ರದವಾದ ಶಕ್ತಿಯಾಗುವುದು.

ಸ್ವತಂತ್ರವಾಗಿ ಆಲೋಚಿಸುವವರನ್ನು ನಾನು ನಂಬುತ್ತೇನೆ. ಸದ್ಗುರುಗಳಿಂದ ಸಂಪೂರ್ಣವಾಗಿ ಮುಕ್ತರಾಗಬೇಕೆಂಬ ಮಾತಿನಲ್ಲಿ ನಾನು ನಂಬುವೆನು. ಅವರಿಗೆ ಗೌರವವನ್ನೆಲ್ಲಾ ತೋರಿ-ಆದರೆ ಧರ್ಮವನ್ನು ಒಂದು ಸ್ವತಂತ್ರ ಆವಿಷ್ಕಾರವೆಂದು ಭಾವಿಸಿ. ಬಲಿ, ಮಂತ್ರೋಚ್ಚಾರಣೆ, ಮುದ್ರೆ, ಆಚಾರಗಳು, ಇವು ಧರ್ಮವಲ್ಲ, ಉಪನಿಷತ್ತು ಎಲ್ಲಾ ಯಾಗ ಯಜ್ಞಗಳನ್ನು ಖಂಡಿಸುವುದು, ಇವು ಕೆಲಸಕ್ಕೆ ಬಾರದವು ಎಂದು ಹೇಳುವುದು.

ನಿಜವಾದ ವಿಜ್ಞಾನ ಜೋಪಾನವಾಗಿರಿ ಎನ್ನುವುದು, ನಾವು ಹೇಗೆ ಧಾರ್ಮಿಕ ಪುರೋಹಿತರ ಹತ್ತಿರ ಜೋಪಾನವಾಗಿರಬೇಕೋ ಹಾಗೆಯೇ ವೈಜ್ಞಾನಿಕ ಪುರೋಹಿತರ ಹತ್ತಿರವೂ ಜೋಪಾನವಾಗಿರಬೇಕು. ಅಪನಂಬಿಕೆಯಿಂದ ಹೊರಡಿ. ಪ್ರತಿಯೊಂದನ್ನು ವಿಭಜನೆ ಮಾಡಿ, ಪರೀಕ್ಷೆ ಮಾಡಿ; ಅನಂತರ ಸ್ವೀಕರಿಸಿ, ಹೆಚ್ಚು ಬಳಕೆಯಲ್ಲಿರುವ ಆಧುನಿಕ ಕಾಲದ ಹಲವು ಭಾವನೆಗಳು ಇನ್ನೂ ಪರೀಕ್ಷೆಗೆ ಗುರಿಯಾಗಿಲ್ಲ.

ಧರ್ಮ ಮತ್ತು ತತ್ವದ ಕೊನೆಯ ಮಾತೇ ಅದ್ವೈತ. ಆ ಒಂದು ಸ್ಥಿತಿಯಿಂದ ಮಾತ್ರ ಎಲ್ಲಾ ಧರ್ಮಗಳನ್ನು ಪಂಗಡಗಳನ್ನು ಪ್ರೀತಿಯಿಂದ ನೋಡಬಹುದು. ಮುಂದಿನ ಬುದ್ಧಿವಂತರಾದ ಮಾನವರ ಧರ್ಮವದು ಎಂದು ನಾವು ನಂಬುತ್ತೇವೆ. ಹಿಂದೂಗಳು ಉಳಿದ ಜನಾಂಗಗಳೆಲ್ಲಕ್ಕಿಂತಲೂ ಬೇಗ ಅದನ್ನು ಕಂಡು ಹಿಡಿದರು ಎಂಬ ಕೀರ್ತಿಯನ್ನು ಹೊಂದಬಹುದು. ಏಕೆಂದರೆ ಅವರು ಯಹೂದ್ಯರು ಮತ್ತು ಅರಬ್ಬೀಯರಿಗಿಂತ ಪುರಾತನರು. ಆದರೂ ಕೂಡ ಅನುಷ್ಠಾನ ಅದ್ವೈತ-ಅಂದರೆ ಯಾವುದು ಎಲ್ಲಾ ಮಾನವನನ್ನು ತನ್ನ ಆತ್ಮವೆಂದು ತಿಳಿದು ಅದರಂತೆ ಅನುಸರಿಸುವುದು ಎಲ್ಲಾ ಹಿಂದೂಗಳಲ್ಲಿಯೂ ಇನ್ನೂ ಅಭಿವೃದ್ಧಿಯಾಗಬೇಕಾಗಿದೆ.

ಅದಲ್ಲದೆ ನನ್ನ ಅನುಭವವೇನೆಂದರೆ, ಈ ಸಮತ್ವವನ್ನು ಯಾವ ಮತವಾದರೂ ಆಗಲಿ ಸಾಧ್ಯವಾದಷ್ಟು ಅನುಷ್ಠಾನ ರೂಪಕ್ಕೆ ಇದರ ಗುಪ್ತ ಅರ್ಥ ಅಥವಾ ಅಂತರಂಗದಲ್ಲಿ ಹರಿಯುವ ನಿಯಮವನ್ನು ತಿಳಿಯದೇ ವ್ಯಕ್ತಪಡಿಸಿದ್ದರೆ ಅದು ಇಸ್ಲಾಂ ಧರ್ಮ. ಹಿಂದೂಗಳು ಈ ನಿಯಮವನ್ನು ಸ್ಪಷ್ಟವಾಗಿ ಅರಿತಿರುವರು. ಆದರೆ ಕಾರ್ಯರೂಪಕ್ಕೆ ತಂದಿಲ್ಲ.

ಆದುದರಿಂದ ಅನುಷ್ಠಾನದ ಇಸ್ಲಾಂ ಧರ್ಮದ ಸಹಾಯವಿಲ್ಲದೆ ವೇದಾಂತ ತತ್ವಗಳು ಎಷ್ಟು ಸೂಕ್ಷ್ಮವಾಗಿ ಅಮೋಘವಾಗಿದ್ದರೂ, ಮಾನವ ವರ್ಗದ ಬಹುಮಂದಿಗೆ ಪ್ರಯೋಜನವಿಲ್ಲವೆಂದು ನಾನು ದೃಢವಾಗಿ ನಂಬಿರುವೆನು. **ನಾವು ಮಾನವ ವರ್ಗವನ್ನು ಎಲ್ಲಿ ವೇದಗಳು, ಬೈಬಲ್, ಖೊರಾನ್ ಇಲ್ಲವೋ ಅಲ್ಲಿಗೆ ಕರೆದೊಯ್ಯಬೇಕು.** ಆದರೂ ಕೂಡ ವೇದ, ಬೈಬಲ್ ಮತ್ತು ಖೊರಾನ್‌ಗಳ ಐಕ್ಯತೆಯಿಂದ ಇದನ್ನು ಸಾಧಿಸಬೇಕಾಗಿದೆ. ಮಾನವ ವರ್ಗಕ್ಕೆ ಭಿನ್ನ ಧರ್ಮಗಳು ಏಕವಾದ ಒಂದೇ ಧರ್ಮದ ಅನಂತ ರೂಪಗಳೆಂಬುದನ್ನು ಕಲಿಯಬೇಕು. ಇದರಿಂದ ಪ್ರತಿಯೊಬ್ಬನೂ ತನಗೆ ಯಾವುದು ಉತ್ತಮ ಮಾರ್ಗವೋ ಅದನ್ನು ಆರಿಸಬಹುದು.

ನಮ್ಮ ಮಾತೃಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಮಿಲನವಾಗಬೇಕು. ವೇದಾಂತದ ಮಿದುಳು ಇಸ್ಲಾಮಿನ ದೇಹ ಇದೊಂದೇ ನಮ್ಮ ಪುರೋಗಮನಕ್ಕೆ ಹಾದಿ.

ನನ್ನ ಬಗೆಗಣ್ಣಿಗೆ ಇಂದಿನ ಗೊಂದಲ ಮತ್ತು ತಿಕ್ಕಾಟದಿಂದ ವೇದಾಂತದ ಮಿದುಳು ಮತ್ತು ಇಸ್ಲಾಮಿನ ದೇಹದಿಂದ ಕೂಡಿದ ತೇಜೋಮಯವಾದ, ಅಜೇಯವಾದ ಮುಂದಿನ ನಿಷ್ಕಳಂಕ ಭಾರತದ ಉದಯ ಕಾಣುವುದು.

ವಿಶ್ವಧರ್ಮ ಕೂಡ ಆಗಲೇ ಇದೆ. ಹಲವು ಧರ್ಮಗಳನ್ನು ಪ್ರಚಾರ ಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸುವ ಪಾದ್ರಿ ಮುಂತಾದವರು ಕೆಲವು ಕಾಲ ಮೌನವಾಗಿದ್ದರೆ ಆಗ ವಿಶ್ವಧರ್ಮವಿರುವುದು ನಿಮಗೆ ಗೋಚರವಾಗುವುದು. ಅವರು ಯಾವಾಗಲೂ ಇದನ್ನು ಕೆಡಿಸುತ್ತಿರುವರು. ಏಕೆಂದರೆ ಇದರಿಂದ ಅವರಿಗೆ ಪ್ರಯೋಜನ.

ಸ್ವಮತಾಭಿಮಾನ, ಅನ್ಯಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನ ಈ ಸುಂದರ ಜಗತ್ತನ್ನು ಬಹುಕಾಲದಿಂದಲೂ ಆವರಿಸಿಕೊಂಡಿರುವುವು. ಇವು ಜಗತ್ತನ್ನೆಲ್ಲಾ ಹಿಂಸೆಯಿಂದ ತುಂಬಿರುವುವು. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೇ ಇದ್ದರೆ ಮಾನವ ಜನಾಂಗ ಇಂದಿಗಿಂತಲೂ ಎಷ್ಟೋ ಮುಂದುವರಿದು ಹೋಗಬೇಕಾಗಿತ್ತು. ತಾನು ಹುಟ್ಟಿದ ಧರ್ಮವಲ್ಲದೆ ಬೇರಾವ ಧರ್ಮವೂ ಸತ್ಯವಲ್ಲ ಎಂಬ ಭಾವನೆ 19ನೇ ಶತಮಾನದ ಅಂತ್ಯಭಾಗದಲ್ಲಿ ಇನ್ನೂ ಇರುವುದು ನಮ್ಮ ದುರ್ಬಲತೆಗೆ ಸಾಕ್ಷಿ. ಇಂತಹ ಭಾವನೆಗಳನ್ನು ನಾವು ತ್ಯಜಿಸಬೇಕು.

ಬೇರೆ ಬೇರೆ ಮತಗಳಲ್ಲಿರುವ ಬೇರೆ ಬೇರೆ ಮುಖ್ಯವಾದ ನೀತಿಗಳ ವಿಷಯದಲ್ಲಿ ವ್ಯತ್ಯಾಸಗಳಿವೆ ಎಂಬುದು ನಿಜ. ಆದರೆ ಅವುಗಳಿಗೆಲ್ಲ ಒಂದು ಸಾಮಾನ್ಯ ಹಿನ್ನೆಲೆ ಇದೆ. ಅದೇ ದಯೆ, ಮಾತು ಮತ್ತು ನಡತೆಯಲ್ಲಿ ನಿಗ್ರಹ. ತನ್ನ ಮತವನ್ನು ಹೊಗಳಿ, ಇತರರದನ್ನು ತೆಗಳಕೂಡದು. ಪ್ರತಿಯೊಬ್ಬರಿಗೂ ಅವರವರಿಗೆ ಸಲ್ಲುವ ಗೌರವವನ್ನೂ ಕೊಡಬೇಕು. ಇತರ ಮತಗಳಿಗೆ ಸಹಾಯ ಮಾಡುವುದರಿಂದ ತನ್ನ ಮತಕ್ಕೆ ಸಹಾಯ ಮಾಡಿದಂತೆ ಆಗುವುದು. ಅದಕ್ಕೆ ವಿರೋಧವಾಗಿ ಪ್ರಯತ್ನ ಮಾಡಿದರೆ, ತನ್ನ ಮತಕ್ಕೇ ಅವನು ಸಹಾಯಮಾಡುವುದಿಲ್ಲ, ತನ್ನ ಮತದ ಮೇಲಿರುವ ಆಸಕ್ತಿಯಿಂದ ಅದನ್ನು ಮುಂದೆ ತರಬೇಕೆಂದು ಅನ್ಯ ಮತಗಳನ್ನು ತೆಗಳಿದರೆ ಅವನು ತನ್ನ ಮತಕ್ಕೆ ಕಳಂಕ ತರುವನು. ಆದ ಕಾರಣ ಸೌಹಾರ್ದ ಭಾವನೆಯೇ ಶ್ರೇಷ್ಠವಾದುದು. ಪ್ರತಿಯೊಬ್ಬರೂ ಇನ್ನೊಬ್ಬರ ಅಭಿಪ್ರಾಯಗಳಿಗೆ ಗೌರವವನ್ನು ಕೊಡಬೇಕು.... ಜನ ಯಾವ ಮತಕ್ಕೇ ಸೇರಿರಲಿ, ಪ್ರತಿಯೊಂದು ಮತದಲ್ಲಿಯೂ ಇರುವ ಮೂಲನೀತಿಗಳನ್ನು ಅನುಷ್ಠಾನಕ್ಕೆ ತಂದು, ಇತರರ ಮತಗಳಿಗೆ ಗೌರವವನ್ನು ಸಲ್ಲಿಸಬೇಕು. ಇದನ್ನು ಸಾಧಿಸುವುದಕ್ಕಾಗಿಯೇ, ಧರ್ಮ ಬೋಧಕರೂ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ಅಧಿಕಾರಿಗಳು ಕೆಲಸ ಮಾಡಬೇಕಾಗುವುದು.

ಮನುಷ್ಯನ ಹುಟ್ಟು, ಪುನರ್ಜನ್ಮ ಇತ್ಯಾದಿ

1) ಮನುಷ್ಯ ಎಲ್ಲಿಂದ ಬಂದಿದ್ದಾನೆ ಮತ್ತು ಎಲ್ಲಿಗೆ ಹೋಗುತ್ತಾನೆ?

ಈ ಪ್ರಶ್ನೆಗೆ ಮೂರು ರೀತಿಯಲ್ಲಿ ಉತ್ತರ ಕೊಡಲು ಸಾಧ್ಯ. ವ್ಯಕ್ತಿಯು ಸೃಷ್ಟಿಗೊಳ್ಳುವವರೆಗೆ ಅಸ್ತಿತ್ವದಲ್ಲೇ ಇರುವುದಿಲ್ಲ. ದೇವರ ಇಚ್ಛೆಯಿಂದ ವ್ಯಕ್ತಿ ರೂಪು ತಳೆಯುತ್ತಾನೆಂದು ದೇವರು ಅಥವಾ ದೇವರುಗಳಲ್ಲಿ ನಂಬಿಕೆಯಿಟ್ಟವರು ಭಾವಿಸುತ್ತಾರೆ. ಅವನು ತನ್ನ ಬದುಕನ್ನು ಸಾಗಿಸಿದ ಮೇಲೆ, ತನ್ನ ನಂಬಿಕೆ ಹಾಗೂ ಕಾರ್ಯಗಳಿಗನುಗುಣವಾಗಿ, ಚಿರಂತನ ಸ್ವರ್ಗ ಅಥವಾ ನರಕವನ್ನು ಪಡೆಯುತ್ತಾನೆಂದು ಅಂದುಕೊಳ್ಳುತ್ತಾನೆ. ಮತ್ತೆ ಕೆಲವರು, ಮಾನವತಾವಾದಿಗಳು ಹಾಗೂ ವಿಜ್ಞಾನಿಗಳು, ವ್ಯಕ್ತಿಯ ಪ್ರಾಕೃತಿಕ ಕಾರಣಗಳಿಂದ ಸಂಯೋಜನೆಗೊಂಡು ರೂಪು ತಳೆಯುತ್ತಾರೆ. ಬದುಕು ಮುಗಿಸಿದ ಮೇಲೆ, ಸಾವಿನಲ್ಲಿ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ ಎಂದು ಪ್ರತಿಪಾದಿಸುತ್ತಾರೆ. ಮೊದಲನೆಯ ವಿವರಣೆಯಿಂದ ಅನೇಕ ನೈತಿಕ ಸಮಸ್ಯೆಗಳು ಉದ್ಭವಿಸುತ್ತವೆ. ಒಳ್ಳೆಯವನಾದ ಒಬ್ಬನೇ ದೇವರು ನಮ್ಮೆಲ್ಲರನ್ನೂ ಸೃಷ್ಟಿಸುತ್ತಾನಾದರೆ, ಕೆಲವರು ಭಯಾನಕವಾದ ವೈಕಲ್ಯಗಳಿಂದ ಕೂಡಿ ಯಾಕೆ ಹುಟ್ಟುತ್ತಾರೆ, ಹಾಗೆಯೇ ಹುಟ್ಟಿಗೆ ಮುಂಚೆಯೇ ಕೆಲವು ಭ್ರೂಣದ ಹಂತದಲ್ಲೇ ಕೊನೆಗೊಳ್ಳುತ್ತವೆ ಅಥವಾ ಹುಟ್ಟುವಾಗಲೇ ಸತ್ತಿರುತ್ತವೆ, ಯಾಕೆ? ಈ ದೈವವಾದದಿಂದ ಉದ್ಭವಿಸುವ ಮತ್ತೊಂದು ಸಮಸ್ಯೆಯೆಂದರೆ, ಭೂಮಿಯ ಮೇಲಿನ ತನ್ನ ನಿರಂತರ ನರಕಶಿಕ್ಷೆಯನ್ನು ಯಾಕೆ ಅನುಭವಿಸಬೇಕು ಎಂಬುದು. ಈ ಅರವತ್ತು-ಎಪ್ಪತ್ತು ವರ್ಷಗಳ ಅವಧಿಯ ಕೆಟ್ಟ ಕೆಲಸ ಅಥವಾ ನಾಸ್ತಿಕತೆಗಾಗಿ ಕೊನೆಯಿರದ ಸಂಕಟ ಅನುಭವಿಸಬೇಕಾಗಿ ಬರುವುದು ಅನ್ಯಾಯ. ಅಂತೆಯೇ, ಅರವತ್ತು-ಎಪ್ಪತ್ತು ವರ್ಷಗಳಷ್ಟು ಅಲ್ಪಾವಧಿಯಲ್ಲಿ ಮಾಡಿದ ಸತ್ಕಾರ್ಯಗಳಿಗಾಗಿ ಚಿರಂತನ ಸ್ವರ್ಗಸುಖವನ್ನು ಪಡೆಯುವುದೂ ಪ್ರಮಾಣಾನುಗುಣವಾದುದಲ್ಲ. ಆ ದೃಷ್ಟಿಯಿಂದ ಎರಡನೆಯ ವಿವರಣೆಯೇ ಮೊದಲನೆಯದಕ್ಕಿಂತ ಹೆಚ್ಚು ಸಮಂಜಸವಾದದ್ದು. ಇದಕ್ಕೆ ಅನೇಕ ವೈಜ್ಞಾನಿಕ ಆಧಾರಗಳನ್ನು ಕಾಣಬಹುದಾದರೂ, ಇನ್ನೂ ಅನೇಕ ಪ್ರಮುಖ ಪ್ರಶ್ನೆಗಳಿಗೆ ಇದರಲ್ಲಿ ವಿವರಣೆ ದೊರೆಯುವುದಿಲ್ಲ. ರೇತಸ್ಸು (ಅಂಡಾಣು) ಮತ್ತು ರಜಸ್ಸು (ವೀರ್ಯಾಣು)ಗಳ ಒಂದೊಂದು ಜೀವಕಣಗಳು ಒಗ್ಗೂಡಿ ಉತ್ಪತ್ತಿಗೊಳ್ಳುವ ಅಸ್ತಿತ್ವದಲ್ಲಿ ಪ್ರಜ್ಞೆಯು ವಿಕಾಸಗೊಳ್ಳುವ ಅದ್ಭುತವನ್ನು ಹೇಗೆ ವಿವರಿಸುವುದು? ಈಗ ಪರಾಮನೋವಿಜ್ಞಾನವು ವಿಜ್ಞಾನದ ಒಂದು ಶಾಖೆಯೆಂದು ಪರಿಗಣಿತವಾಗಿದೆ. ದೂರಸಂವೇದನೆಯಂಥ ವಿಷಯಗಳನ್ನು ಭೌತವಾದದ ಮಾದರಿಯ ಮೂಲಕ ವಿವರಿಸುವುದು ಹೆಚ್ಚು ಹೆಚ್ಚು ಕಷ್ಟಕರವಾಗುತ್ತದೆ.

ಮನುಷ್ಯ ಬಂದದ್ದು ಎಲ್ಲಿಂದ ಮತ್ತು ಅವನು ಹೋಗುವುದು ಎಲ್ಲಿಗೆ ಎಂಬ ಪ್ರಶ್ನೆಗೆ ಬೌದ್ಧಧಮ್ಮವು ಅತ್ಯಂತ ಸಮರ್ಪಕವಾದ ವಿವರಣೆಯನ್ನು ನೀಡುತ್ತದೆ.

ಪರಸ್ಪರ ಪ್ರೀತಿ-ಗೌರವ ಶಾಂತಿ-ಸಮಾನತೆ ಮುಂತಾದ ಮಾನವೀಯ ಮೌಲ್ಯಗಳ ಪ್ರತೀಕವಾದ ಬೌದ್ಧಧಮ್ಮ ಜಗತ್ತಿನಲ್ಲೆಡೆ ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ ಅದರ ಮೂಲ ಸ್ವರೂಪ ಮತ್ತು ಆಚರಣೆಗಳನ್ನು ಕುರಿತ ತಿಳುವಳಿಕೆ ಕೂಡ ಅನಿವಾರ್ಯ. ಇದನ್ನು ಮನಗಂಡಿರುವ 'ಸಂವಾದ'ವು ಬುದ್ಧ ಜ್ಯೋತಿ ಪ್ರಕಾಶನ ಪ್ರಕಟಿಸಿರುವ ಪೂಜ್ಯ ಎಸ್. ಧಮ್ಮಿಕರವರ ಪುಸ್ತಕದ ಕನ್ನಡಾನುವಾದವನ್ನು ಓದುಗರಿಗಾಗಿ ನೀಡುತ್ತಿದೆ. ಅನುವಾದಿಸಿರುವವರು

○ ಡಾ|| ಪಿ.ವಿ. ನಾರಾಯಣ್

ನಾವು ಸತ್ತಾಗ, ನಮ್ಮ ಮನಸ್ಸು ಈ ಆಯುಸ್ಸಿನ ಅವಧಿಯಲ್ಲಿ ವಿಕಾಸಗೊಳಿಸಿಕೊಂಡು ಸ್ಥಿರಪಟ್ಟ ತನ್ನೆಲ್ಲ ಒಲವುಗಳು, ಅಪೇಕ್ಷೆಗಳು, ಸಾಮರ್ಥ್ಯಗಳು ಹಾಗೂ ಲಕ್ಷಣಗಳ ಸಮೇತ, ಮತ್ತೊಂದು ಫಲವಂತಿಕೆಗೊಂಡ ರೇತಸ್ಸಿನ (ಅಂಡಾಣು) ಕಣದಲ್ಲಿ ಪುನರ್ ಸ್ಥಾಪಿತವಾಗುತ್ತದೆ. ಹೀಗಾಗಿ ವ್ಯಕ್ತಿ ಬೆಳೆಯುತ್ತಾನೆ. ಮತ್ತೆ ಹುಟ್ಟಿ ಈಗಾಗಲೇ ದೃಢಪಟ್ಟ ತನ್ನ ಮನಃಸ್ವರೂಪವನ್ನು ಹೊಸ ಪರಿಸರದಲ್ಲಿ ಇನ್ನಷ್ಟು ವಿಕಾಸಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ. ವ್ಯಕ್ತಿತ್ವವು ವ್ಯಕ್ತಿಯ ಸ್ವಂತ ಪರಿಶ್ರಮ ಹಾಗೂ ಶಿಕ್ಷಣ, ತಾಯ್ತಂದೆಯರ ಪ್ರಭಾವ ಹಾಗೂ ಸಮಾಜದ ಪ್ರಭಾವದಿಂದ ಪುನರ್‌ರೂಪಿತವಾಗಿ, ಮತ್ತೆ ಮರಣಾನಂತರ ಮತ್ತೊಂದು ಹೊಸ ಫಲವಂತಿಕೆ ಪಡೆದ ರೇತಸ್ಸಿನ (ಅಂಡಾಣು) ಕಣವನ್ನು ಸೇರುತ್ತದೆ. ಈ ಬಗೆಯ ಜನನ-ಮರಣಗಳ ಚಕ್ರವು, ಅಂತಿಮವಾಗಿ ಅದರ ಅಸ್ತಿತ್ವಕ್ಕೆ ಕಾರಣವಾಗುವ ಪರಿಸ್ಥಿತಿ, ಎಲ್ಲ ಆಸೆ, ಅಜ್ಞಾನಗಳು ಸಂಪೂರ್ಣವಾಗಿ ಇಲ್ಲವಾಗುವವರೆಗೆ ಮುಂದುವರೆಯುತ್ತದೆ. ಹೀಗಾದ ಮೇಲೆ ಮತ್ತೆ ಹುಟ್ಟುವುದರ ಬದಲು, ಮನಸ್ಸು ನಿರ್ವಾಣ ಎಂಬ ಸ್ಥಿತಿಯನ್ನು ಪಡೆಯುತ್ತದೆ. ಇದೇ ಬೌದ್ಧಧಮ್ಮದ ಗುರಿ ಹಾಗೂ ಜೀವನದ ಉದ್ದೇಶ.

2) ಮನಸ್ಸು ಒಂದು ದೇಹದಿಂದ ಮತ್ತೊಂದಕ್ಕೆ ಹೇಗೆ ಹೋಗುತ್ತದೆ?

ಅದು ರೇಡಿಯೋ ತರಂಗಗಳ ಹಾಗಿರುವಂತೆ ಭಾವಿಸಿಕೊಳ್ಳಿ. ರೇಡಿಯೋ ತರಂಗಗಳು, ಮಾತುಗಳು ಅಥವಾ ಸಂಗೀತದಿಂದ ಆಗಿರುವುದಲ್ಲ, ಅವು ವಿವಿಧ ತರಂಗಾಂತರದಲ್ಲಿ ಪ್ರಸರಣಗೊಂಡು ಆಕಾಶದಲ್ಲಿ ಪಯಣಿಸಿ, ಮಾತುಗಳು ಹಾಗೂ ಸಂಗೀತಗಳ ರೂಪದಲ್ಲಿ ಪ್ರಸರಣಗೊಂಡಿರುವುದರಿಂದ ಆಕರ್ಷಿತವಾದ ರಿಸೀವರ್‌ಗಳ ಮೂಲಕ ಬಿತ್ತರಗೊಳ್ಳುತ್ತವೆ. ಮನಸ್ಸಿನ ವಿಚಾರದಲ್ಲೂ ಇದು ಸತ್ಯ. ಸಾವಿನ ನಂತರ, ಮನೋಶಕ್ತಿಯು ಆಕಾಶದಲ್ಲಿ ಪಯಣಿಸಿ, ಫಲವಂತಿಕೆಯಿಂದ ಕೂಡಿದ ರೇತಃಕಣದಿಂದ ಆಕರ್ಷಿತವಾಗಿ ಅದನ್ನು ಸೇರುತ್ತದೆ. ಭ್ರೂಣವು ಬೆಳೆದಂತೆಲ್ಲ, ಮಿದುಳಿನ ನಡುವೆ ಸೇರಿ ಅಲ್ಲಿಂದ ಹೊಸ ವ್ಯಕ್ತಿತ್ವವಾಗಿ ಬಿತ್ತರಗೊಳ್ಳುತ್ತದೆ.

3) ಪ್ರತಿಯೊಬ್ಬನೂ ಮತ್ತೆ ಮನುಷ್ಯನಾಗಿಯೇ ಜನ್ಮ ತಾಳುತ್ತಾನೆಯೇ?

ಇಲ್ಲ, ಒಬ್ಬನು ಮರಳಿ ಜನ್ಮ ಪಡೆಯಬಹುದಾದ ಅನೇಕ ಕ್ಷೇತ್ರಗಳಿವೆ. ಕೆಲವರು ಸ್ವರ್ಗದಲ್ಲಿ ಪುನರ್ಜನ್ಮ ಪಡೆಯುತ್ತಾರೆ, ಕೆಲವರು ನರಕದಲ್ಲಿ, ಕೆಲವರು ಹಸಿದ ಭೂತಗಳಾಗಿ ಹುಟ್ಟುತ್ತಾರೆ ಹೀಗೇ. ಸ್ವರ್ಗವೆಂಬುದು ಒಂದು ಸ್ಥಳವಲ್ಲ, ಅದೊಂದು ಅಸ್ತಿತ್ವದ ಸ್ಥಿತಿ. ಅಲ್ಲಿ ವ್ಯಕ್ತಿಯು ಸೂಕ್ಷ್ಮ ಶರೀರವನ್ನು ಪಡೆದಿರುತ್ತಾನೆ. ಅಲ್ಲಿ ಮನಸ್ಸು ಪಡೆಯುವ ಅನುಭವವೆಂದರೆ ಮುಖ್ಯವಾಗಿ ಆನಂದದ್ದು. ಕೆಲವು ಧರ್ಮಗಳಲ್ಲಿ ಸ್ವರ್ಗವನ್ನು ಶಾಶ್ವತ ಸ್ಥಿತಿ ಎಂದು ಭಾವಿಸುವುದರಿಂದ ಅಲ್ಲಿ ಪುನರ್ಜನ್ಮ ತಾಳಲು ತುಂಬ ಹೆಣಗಬೇಕು. ಆದರೆ ಅದು ಹಾಗಲ್ಲ, ಎಲ್ಲ ನಿಯಮಾಧೀನ ಸ್ಥಿತಿಗಳಂತೆ, ಸ್ವರ್ಗವೂ ಅಶಾಶ್ವತವಾದದ್ದು; ಅಲ್ಲಿನ ಜೀವಮಾನಾವಧಿ ಮುಗಿದ ಮೇಲೆ ವ್ಯಕ್ತಿಯು ಮತ್ತೆ ಮನುಷ್ಯನಾಗಿಯೇ ಮರುಹುಟ್ಟು ಪಡೆಯಬಹುದು. ಹಾಗೆಯೇ, ನರಕವೂ ಒಂದು ಸ್ಥಳವಲ್ಲ, ಅಸ್ತಿತ್ವದ ಒಂದು ಸ್ಥಿತಿ. ಅಲ್ಲಿಯೂ ವ್ಯಕ್ತಿಗೆ ಸೂಕ್ಷ್ಮ ಶರೀರವಿರುತ್ತದೆ. ಅಲ್ಲಿ ಮನಸ್ಸು ಅಮುಖ್ಯವಾಗಿ ಕಳವಳ ಮತ್ತು ದುಃಖಗಳನ್ನು ಅನುಭವಿಸುತ್ತದೆ. ಅಂತೆಯೇ ಹಸಿದ ಭೂತವಾಗಿರುವುದೂ ಅಸ್ತಿತ್ವದ ಒಂದು ಸ್ಥಿತಿಯೇ. ಅಲ್ಲಿ ಶರೀರ ಸೂಕ್ಷ್ಮವಾಗಿದ್ದು ಮನಸ್ಸನ್ನು ಆಸೆ ಮತ್ತು ಅತೃಪ್ತಿಗಳು ಕಾಡುತ್ತಿರುತ್ತವೆ.

ಅಂದರೆ, ಸ್ವರ್ಗವಾಸಿಗಳು ಪ್ರಮುಖವಾಗಿ ಆನಂದವನ್ನು ಅನುಭವಿಸಿದರೆ, ನರಕಜೀವಿಗಳು ಮತ್ತು

ಭೂತಗಳು ಮುಖ್ಯವಾಗಿ ಯಾತನೆಯನ್ನು ಹಾಗೂ ಮಾನವರು ಸಾಮಾನ್ಯವಾಗಿ ಇವೆರಡರ ಮಿಶ್ರಣವನ್ನು ಅನುಭವಿಸುತ್ತಾರೆ. ಹೀಗಾಗಿ, ಮಾನವನ ಹಾಗೂ ಇತರರ ಕ್ಷೇತ್ರಗಳಲ್ಲಿನ ಮುಖ್ಯ ವ್ಯತ್ಯಾಸವೆಂದರೆ, ಶರೀರದ ಸ್ವರೂಪ ಮತ್ತು ಅನುಭವದ ಗುಣಮಟ್ಟ.

4) ಪುನರ್ಜನ್ಮ ಎಲ್ಲಿ ಎಂಬುದನ್ನು ನಿರ್ಧರಿಸುವವರಾರು?

ಮತ್ತೆ ನಾವು ಎಲ್ಲಿ ಹುಟ್ಟುತ್ತೇವೆ ಹಾಗೂ ಎಂತಹ ಬದುಕನ್ನು ಪಡೆಯುತ್ತೇವೆ ಎಂಬುದನ್ನು ನಿರ್ಧರಿಸುವ ಏಕೈಕವಲ್ಲದಿದ್ದರೂ ಅತ್ಯಂತ ಪ್ರಮುಖವಾದ ಅಂಶವೆಂದರೆ, ಕಮ್ಮ. 'ಕಮ್ಮ' ಎಂದರೆ ಕ್ರಿಯೆ ಎಂದರ್ಥ; ಅಂದರೆ, ಉದ್ದೇಶಪೂರ್ವಕವಾದ ಮನಃಕ್ರಿಯೆಗಳು. ಬೇರೆ ರೀತಿ ಹೇಳುವುದಾದರೆ, ನಾವು ಹೇಗಿದ್ದೇವೆ ಎಂಬುದು ಬಹುವಾಗಿ ನಾವು ಹಿಂದೆ ಹೇಗೆ ಆಲೋಚಿಸಿದ್ದೇವೆ ಹಾಗೂ ನಡೆದುಕೊಂಡಿದ್ದೇವೆ ಎಂಬುದರಿಂದ ನಿರ್ಧಾರಿತವಾಗುತ್ತದೆ. ಹಾಗೆಯೇ, ಈಗ ನಾವು ಹೇಗೆ ಆಲೋಚಿಸುತ್ತೇವೆ ಮತ್ತು ನಡೆದುಕೊಳ್ಳುತ್ತೇವೆ ಎಂಬುದು ನಮ್ಮ ಭವಿಷ್ಯವನ್ನು ನಿರ್ಧರಿಸುತ್ತದೆ.

ಸೌಮ್ಯನೂ ಪ್ರೇಮಮಯಿಯೂ ಆದ ವ್ಯಕ್ತಿಯು ಸ್ವರ್ಗದಲ್ಲಿ ಮರುಹುಟ್ಟು ಪಡೆಯುತ್ತಾನೆ ಅಥವಾ ಹೆಚ್ಚಾಗಿ ಆನಂದಕರ ಅನುಭವಗಳನ್ನು ಹೊಂದುವ ಮನುಷ್ಯನಾಗಿ ಪುನರ್ಜನ್ಮ ತಾಳುತ್ತಾನೆ. ಕಳವಳ, ಚಿಂತೆ ಮತ್ತು ಅತ್ಯಂತ ಕ್ರೂರಿಯಾದ ವ್ಯಕ್ತಿಯು ನರಕದಲ್ಲಿಯೋ ಅಥವಾ ಹೆಚ್ಚು ಯಾತನಾಮಯವಾದ ಅನುಭವಗಳನ್ನು ಪಡೆಯುವ ಮನುಷ್ಯನಾಗಿಯೋ ಹುಟ್ಟುವ ಸಂಭವವಿರುತ್ತದೆ. ಯಾರು ಅತೀವ ದುರಾಸೆ, ದುಷ್ಟ ಭಾವನೆಗಳು ಹಾಗೂ ತೃಪ್ತಿಗೊಳ್ಳಲು ಸಾಧ್ಯವೇ ಇರದಂತಹ ಉರಿಯುವ ಮಹತ್ವಾಕಾಂಕ್ಷೆಗಳಿಂದ ಕೂಡಿರುತ್ತಾನೋ ಅಂತಹ ವ್ಯಕ್ತಿಯು ಹಸಿದ ಭೂತವಾಗಿಯೋ ಅಥವಾ ಆಸೆ-ಬಯಕೆಗಳಿಂದಾಗಿ ಹತಾಶೆಗೊಂಡ ಮನುಷ್ಯನಾಗಿಯೋ ಮರುಜನ್ಮ ಪಡೆಯುವ ಸಾಧ್ಯತೆಗಳಿರುತ್ತವೆ. ಈ ಜನ್ಮದಲ್ಲಿ ಎಂತಹ ಮಾನಸಿಕ ಹವ್ಯಾಸಗಳನ್ನು ಪ್ರಬಲವಾಗಿ ಬೆಳೆಸಿಕೊಂಡಿರುತ್ತೇವೆಯೋ ಅವೆಲ್ಲ ಮುಂದಿನ ಜನ್ಮದಲ್ಲಿ ಮತ್ತೆಯೂ ಮುಂದುವರಿಯುತ್ತವೆ. ಆದರೆ, ಬಹಳ ಮಂದಿ ಮತ್ತೆಯೂ ಮನುಷ್ಯರಾಗಿಯೇ ಹುಟ್ಟುತ್ತಾರೆ.

ಸೌಮ್ಯನೂ ಪ್ರೇಮಮಯಿಯೂ ಆದ ವ್ಯಕ್ತಿಯು ಸ್ವರ್ಗದಲ್ಲಿ ಮರುಹುಟ್ಟು ಪಡೆಯುತ್ತಾನೆ ಅಥವಾ ಹೆಚ್ಚಾಗಿ ಆನಂದಕರ ಅನುಭವಗಳನ್ನು ಹೊಂದುವ ಮನುಷ್ಯನಾಗಿ ಪುನರ್ಜನ್ಮ ತಾಳುತ್ತಾನೆ. ಕಳವಳ, ಚಿಂತೆ ಮತ್ತು ಅತ್ಯಂತ ಕ್ರೂರಿಯಾದ ವ್ಯಕ್ತಿಯು ನರಕದಲ್ಲಿಯೋ ಅಥವಾ ಹೆಚ್ಚು ಯಾತನಾಮಯವಾದ ಅನುಭವಗಳನ್ನು ಪಡೆಯುವ ಮನುಷ್ಯನಾಗಿಯೋ ಹುಟ್ಟುವ ಸಂಭವವಿರುತ್ತದೆ. ಯಾರು ಅತೀವ ದುರಾಸೆ, ದುಷ್ಟ ಭಾವನೆಗಳು ಹಾಗೂ ತೃಪ್ತಿಗೊಳ್ಳಲು ಸಾಧ್ಯವೇ ಇರದಂತಹ ಉರಿಯುವ ಮಹತ್ವಾಕಾಂಕ್ಷೆಗಳಿಂದ ಕೂಡಿರುತ್ತಾನೋ ಅಂತಹ ವ್ಯಕ್ತಿಯು ಹಸಿದ ಭೂತವಾಗಿಯೋ ಅಥವಾ ಆಸೆ-ಬಯಕೆಗಳಿಂದಾಗಿ ಹತಾಶೆಗೊಂಡ ಮನುಷ್ಯ ನಾಗಿಯೋ ಮರುಜನ್ಮ ಪಡೆಯುವ ಸಾಧ್ಯತೆಗಳಿರುತ್ತವೆ. ಈ ಜನ್ಮದಲ್ಲಿ ಎಂತಹ ಮಾನಸಿಕ ಹವ್ಯಾಸಗಳನ್ನು ಪ್ರಬಲ ವಾಗಿ ಬೆಳೆಸಿಕೊಂಡಿರುತ್ತೇವೆಯೋ ಅವೆಲ್ಲ ಮುಂದಿನ ಜನ್ಮದಲ್ಲಿ ಮತ್ತೆಯೂ ಮುಂದುವರಿಯುತ್ತವೆ. ಆದರೆ, ಬಹಳ ಮಂದಿ ಮತ್ತೆಯೂ ಮನುಷ್ಯರಾಗಿಯೇ ಹುಟ್ಟುತ್ತಾರೆ.

5) ಅಂದರೆ ನಾವು ನಮ್ಮ ಕಮ್ಮದಿಂದಲೇ ನಿರ್ಧರಿತರಾದವರಲ್ಲ, ಅದನ್ನು ನಾವು ಮಾರ್ಪಡಿಸಬಹುದು ಎಂದಂತಾಯಿತು?

ಖಂಡಿತ ಮಾರ್ಪಡಿಸಬಹುದು. ಅದರಿಂದಾಗಿಯೇ ಉದಾತ್ತ ಅಷ್ಟಾಂಗಿಕ ಪಥದಲ್ಲಿ ಪರಿಪೂರ್ಣ ಪ್ರಯತ್ನವೂ ಒಂದಾಗಿದೆ. ಅದು ನಮ್ಮ ಶ್ರದ್ಧೆ, ನಾವು ವಿನಿಯೋಗಿಸುವ ಶಕ್ತಿ ಮತ್ತು ನಮ್ಮ ಹವ್ಯಾಸಗಳು ಎಷ್ಟು ಗಟ್ಟಿ ಎಂಬುದನ್ನು ಅವಲಂಬಿಸಿದೆ. ಕೆಲವರು ತಮ್ಮ ಹಳೆಯ ಅಭ್ಯಾಸಗಳನ್ನು ಬದಲಿಸಿಕೊಳ್ಳಲು ಪ್ರಯತ್ನಿಸದೆಯೇ ಮುಂದುವರಿಸಿಕೊಂಡು ಅಸಂತೋಷಕರ ಪರಿಣಾಮಗಳಿಗೆ ಒಳಗಾಗುತ್ತಾರೆಂಬುದು ನಿಜ. ತಮ್ಮ ಕೆಟ್ಟ ಅಭ್ಯಾಸಗಳನ್ನು ಬದಲಿಸಿಕೊಳ್ಳದಿದ್ದರೆ ಸಂಕಷ್ಟಗಳನ್ನು ಅನುಭವಿಸುವುದು ಮುಂದುವರೆಯುತ್ತದೆ. ಅಂಥ ಕೆಟ್ಟ ಹವ್ಯಾಸಗಳನ್ನು ಹೆಚ್ಚು ಮುಂದುವರೆದಷ್ಟೂ ಅವುಗಳನ್ನು ಬದಲಿಸುವುದು ಹೆಚ್ಚು ಕಷ್ಟಕರವಾಗುತ್ತದೆ. ಇದನ್ನು ಅರಿತ ಬೌದ್ಧನು, ಅಸಂತೋಷಕರ ಪರಿಣಾಮದ ಅಭ್ಯಾಸಗಳನ್ನು ತೊರೆದು ಸಂತೋಷಕರವೂ ಸೌಖ್ಯಕರವೂ ಆದ ಪರಿಣಾಮಗಳುಳ್ಳ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಎಲ್ಲ ಅವಕಾಶಗಳನ್ನೂ ಬಳಸಿಕೊಳ್ಳುತ್ತಾನೆ. ಮನಸ್ಸಿನ ಕಾರ್ಯವಿಧಾನವನ್ನು ಮಾರ್ಪಡಿಸಿಕೊಳ್ಳಲು ಸಹಾಯಕವಾಗುವ ಒಂದು ತಂತ್ರವೆಂದರೆ ಧ್ಯಾನ; ಕೆಲವು ಬಗೆಯಲ್ಲಿ ಮಾತನಾಡುವುದು ಅಥವಾ ಮಾತನ್ನು ನಿಯಂತ್ರಿಸುವುದು ಮತ್ತು ಹಲವು ಬಗೆಯ ಕ್ರಿಯೆಗಳನ್ನು ಮಾಡುವುದು ಅಥವಾ ಅವನ್ನು ಮಾಡದಂತೆ ನಿಯಂತ್ರಿಸುವುದು ಮುಂತಾದವು ಧ್ಯಾನದಿಂದ ಸಾಧ್ಯವಾಗುತ್ತದೆ. ಬೌದ್ಧನೊಬ್ಬನ ಜೀವನವಿಡೀ, ಮನಸ್ಸನ್ನು ಶುದ್ಧಗೊಳಿಸುವ ಮತ್ತು ಮುಕ್ತಗೊಳಿಸುವ ತರಬೇತಿಯಿಂದ ಕೂಡಿರುತ್ತದೆ. ಉದಾಹರಣೆಗೆ, ಹಿಂದಿನ ಜನ್ಮದಲ್ಲಿ ನಿಮ್ಮ ವ್ಯಕ್ತಿತ್ವದಲ್ಲಿ ತಾಳ್ಮೆ ಮತ್ತು ಸಹಾನುಭೂತಿಗಳು ದೃಢಗೊಂಡ ಲಕ್ಷಣಗಳಾಗಿದ್ದರೆ, ಅಂಥ ಗುಣಗಳು ಈ ಜನ್ಮದಲ್ಲೂ ಮುಂದುವರೆಯುತ್ತವೆ. ಪ್ರಸ್ತುತ ಜನ್ಮದಲ್ಲೂ ಅವುಗಳನ್ನು ಬಲಪಡಿಸಿಕೊಂಡು, ಮುಂದಿನ ಜನ್ಮದಲ್ಲಿ ಆ ಗುಣಗಳು ಮತ್ತಷ್ಟು ಪ್ರಬಲವಾಗಿ ಬೇರೂರುತ್ತವೆ. ಬಲವಾಗಿ ಬೇರೂರಿದ ಅಭ್ಯಾಸಗಳನ್ನು ತೊಡೆದುಹಾಕುವುದು ಕಠಿಣ ಎಂಬ ಸರಳ ಸೂತ್ರವನ್ನು ಇದು ಆಧರಿಸಿದೆ.

ತಾಳ್ಮೆ ಮತ್ತು ಸಹಾನುಭೂತಿಗಳನ್ನು ಹೊಂದಿರುವಾಗ, ನೀವು ಇತರರಿಂದ ಸುಲಭವಾಗಿ ಪ್ರಕ್ಷುಬ್ಧಗೊಳ್ಳುವುದಿಲ್ಲ ನಿಮಗೆ ಮಾತ್ಸರ್ಯ ಕಡಿಮೆಯಾಗಿದ್ದು ಜನರು ನಿಮ್ಮನ್ನು ಇಷ್ಟಪಡುತ್ತಾರೆ ಹಾಗೂ ನಿಮ್ಮ ಅನುಭವಗಳು ಸಮಾಧಾನಕರವಾಗಿರುತ್ತವೆಂದು ಹೇಳಬಹುದು.

ಈಗ ಮತ್ತೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ನಿಮ್ಮ ಕಳೆದ ಜನ್ಮದ ಮಾನಸಿಕ ಅಭ್ಯಾಸಗಳಿಂದಾಗಿ ನೀವು ಈ ಜನ್ಮದಲ್ಲಿ ತಾಳ್ಮೆ ಮತ್ತು ಸಹಾನುಭೂತಿಗಳನ್ನು ಅಳವಡಿಸಿಕೊಂಡಿದ್ದೀರೆಂದು ಭಾವಿಸೋಣ. ಆದರೆ ಈ ಜನ್ಮದಲ್ಲಿ ಅವುಗಳನ್ನು ಬಲಪಡಿಸಿಕೊಳ್ಳುವುದನ್ನು ನೀವು ಅವಜ್ಞೆಮಾಡುತ್ತೀರಿ ಎಂದುಕೊಳ್ಳಿ. ಕ್ರಮೇಣ ಅವು ದುರ್ಬಲಗೊಂಡು ನುಸುಳಿ ಹೋಗುತ್ತವೆ; ಅದರಿಂದ ಮುಂದಿನ ಜನ್ಮದಲ್ಲಿ ಅವು ಸಂಪೂರ್ಣ ಕಣ್ಮರೆಯಾಗಿಬಿಡಬಹುದು. ತಾಳ್ಮೆ ಮತ್ತು ಸಹಾನುಭೂತಿಗಳು ಹೀಗೆ ಕಡಿಮೆಯಾದರೆ, ಈ ಜನ್ಮದಲ್ಲೇ ಅಥವಾ ಮುಂದಿನ ಜನ್ಮದಲ್ಲಿ ಅವುಗಳ ಜಾಗದಲ್ಲಿ ಕೋಪ ಮತ್ತು ಕ್ರೌರ್ಯಗಳು ನುಸುಳಬಹುದು; ಅದರಿಂದಾಗಿ ಇಂಥ ಸ್ವಭಾವದಿಂದ ಆಗುವ ದುಷ್ಪರಿಣಾಮದಿಂದ ಅಸಂತೋಷಕರ ಅನುಭವಗಳುಂಟಾಗಬಹುದು.

ಇನ್ನು ಕೊನೆಯದಾಗಿ ಮತ್ತೊಂದು ಉದಾಹರಣೆಯನ್ನು ನೋಡೋಣ. ಕಳೆದ ಜನ್ಮದಲ್ಲಿನ ನಿಮ್ಮ ಮಾನಸಿಕ ಅಭ್ಯಾಸಗಳಿಂದಾಗಿ ನೀವು ಈ ಜನ್ಮದಲ್ಲಿ ಕೋಪ ಮತ್ತು ಕ್ರೌರ್ಯಗಳೊಡನೆ ಹುಟ್ಟಿದ್ದೀರೆಂದು ಭಾವಿಸೋಣ. ಇವುಗಳಿಂದ ಅಸಂತೋಷಕರ ಅನುಭವಗಳೇ ಉಂಟಾಗುವುದೆಂಬುದನ್ನು ನೀವು ಅರಿತುಕೊಂಡು ಅವುಗಳನ್ನು ಮಾರ್ಪಡಿಸಿಕೊಳ್ಳಲು ಪ್ರಯತ್ನಿಸುವಿರಿ ಅಂದುಕೊಳ್ಳೋಣ. ಅವುಗಳ ಬದಲು ಉತ್ತಮ ಸ್ವಭಾವವನ್ನು ರೂಢಿಸಿಕೊಳ್ಳುವಿರಿ. ನಿಮ್ಮ ಪ್ರಯತ್ನಗಳು ಬಲವಾಗಿದ್ದರೆ ಆ ಕೆಟ್ಟ ಸ್ವಭಾವವು ಪೂರ್ತಿ ನಾಶವಾಗುವುದು ಸಾಧ್ಯ. ಅದರಿಂದ ನೀವು ಸುಲಭ ಕೋಪ ಮತ್ತು ಕ್ರೌರ್ಯಗಳಿಂದಾಗುವ ಅಸಂತೋಷಕರ ಅನುಭವಗಳಿಂದ ಸಂಪೂರ್ಣ ಪಾರಾಗುವಿರಿ. ಅವುಗಳನ್ನು ಕಡಿಮೆ ಮಾಡಿಕೊಳ್ಳುವುದು ಮಾತ್ರ ನಿಮಗೆ ಸಾಧ್ಯವಾದರೆ, ಮತ್ತೆ ಅವು ಮುಂದಿನ ಜನ್ಮದಲ್ಲಿ ತಲೆದೋರಿದಾಗ, ಸ್ವಲ್ಪ ಹೆಚ್ಚಿನ ಪ್ರಯತ್ನದಿಂದ ಅವುಗಳನ್ನು ಸಂಪೂರ್ಣವಾಗಿ ನಿವಾರಿಸಿಕೊಳ್ಳಬಹುದು. ಇದರಿಂದ ನೀವು ಅಸಂತೋಷಕರ ಪರಿಣಾಮಗಳಿಂದ ಮುಕ್ತರಾಗಬಹುದು.

(ಮುಂದುವರಿಯುವುದು)

ಪುಸ್ತಕ ಬೇಕಾದಲ್ಲಿ:

ಬುದ್ಧ ಜ್ಯೋತಿ ಪ್ರಕಾಶನ
ನೆರೆಗ್ಯಾತನಹಳ್ಳಿ, ಟಿ.ನರಸೀಪುರ ತಾಲ್ಲೂಕು
ಮೈಸೂರು ಜಿಲ್ಲೆ.
ಇವರಿಗೆ ಬರೆದು ತರಿಸಿಕೊಳ್ಳಬಹುದು

'SAMVADA' Kannada Monthly, NOVEMBER - 2003 RNI-KAR KAN/2002/9246 CPMG/KA/BGW-706/2003-05



ಸಂವಾದ

ವಾರ್ಷಿಕ ವಿಶೇಷಾಂಕ

ಸಹೃದಯರೆ,

ನಿಮ್ಮೆಲ್ಲರ ಪ್ರೀತಿ-ಅಭಿಮಾನ ಮತ್ತು ಸಹಕಾರದಿಂದಾಗಿ ತನ್ನೆಲ್ಲಾ ಅಡೆ-ತಡೆಗಳನ್ನು ಮೀರಿಯೂ ತಪ್ಪದೇ ತಮ್ಮ ಜತೆ ಸಂವಾದಿಸುತ್ತಿರುವ 'ಸಂವಾದ' ಮಾಸ ಪತ್ರಿಕೆಗೆ ಇದೀಗ ಒಂದು ವರ್ಷ ತುಂಬಿದ್ದು, ಅದರ ನೆನಪಿನಲ್ಲಿ 'ಸಂವಾದ ವಿಶೇಷಾಂಕ'ವೊಂದನ್ನು ಹೊರತರಲು ತೀರ್ಮಾನಿಸಿರುತ್ತೇವೆ.



ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು, ಮರೆಯಾಗುತ್ತಿರುವ ಜೀವನಕ್ರಮಗಳು, ತಲ್ಲಣಗೊಳ್ಳುತ್ತಿರುವ ಸಿದ್ಧಾಂತಗಳು, ಖಾಸಗೀಕರಣ ಗೊಂಡು ವ್ಯಕ್ತಿಸ್ವಾಮ್ಯಕ್ಕೆ ಒಳಪಡುತ್ತಿರುವ ಉದ್ಯಮಗಳು, ಅನುಕೂಲ ಸಿಂಧುಗಳಾಗುತ್ತಿರುವ ದಲಿತರು ಮತ್ತು ಶೂದ್ರರ ಮನಸ್ಸಿನಲ್ಲಿ ನಡೆಯುತ್ತಿರುವ ಚೌಕಾಸಿಗಳು, ಬಿಕ್ಕಟ್ಟಿಗೆ ಒಳಗಾಗುತ್ತಿರುವ ಬಹುರೂಪಿ ಸಂಸ್ಕೃತಿಯ ಜತೆಗೆ ಈ ನಾಡಿನ ಕೃಷಿ ಕಾರ್ಮಿಕರು, ವಿದ್ಯಾರ್ಥಿ ಯುವ ಜನರು, ಮಹಿಳೆಯರು, ಸಂಘ-ಸಂಸ್ಥೆಗಳು ಹಾಗೂ ಉದ್ಯೋಗಸ್ಥರು ಎದುರಿಸುತ್ತಿರುವ ಹೊಸ ಪರಿಕಲ್ಪನೆಗಳ ಸವಾಲುಗಳನ್ನು ಕುರಿತ ಲೇಖನ ಗಳನ್ನು 'ಸಂವಾದ ವಿಶೇಷಾಂಕ'ದಲ್ಲಿ ಪ್ರಕಟಿಸಲು ಯೋಜಿಸಲಾಗಿದೆ.

ಇಂಥ ಗಂಭೀರ ವಿಚಾರಗಳನ್ನೊಳಗೊಂಡ ವಿಶ್ಲೇಷಣಾತ್ಮಕ ಲೇಖನಗಳಲ್ಲದೆ ಕಥೆ, ಕವನ, ವಿಡಂಬನೆ, ವ್ಯಕ್ತಿ ಚಿತ್ರ, ಛಾಯಾಚಿತ್ರಗಳ ನುಡಿಬರಹ ಮುಂತಾದ ಲೇಖನಗಳನ್ನು ಬರೆದು ಕಳುಹಿಸಿಕೊಡುವುದರ ಮೂಲಕ 'ಸಂವಾದದ ವಿಶೇಷಾಂಕ' ಸುಂದರವಾಗಿ ಮೂಡಿಬರಲು ಸಹಕರಿಸಬೇಕೆಂದು ಕೋರುತ್ತೇವೆ.

ನಿಮ್ಮ ಲೇಖನಗಳು ನಮಗೆ ತಲುಪಲು ಕೊನೆಯ
ದಿನಾಂಕ : 30 -11-2003



ವಿಳಾಸ : ಸಂಪಾದಕರು, ಸಂವಾದ ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-*560 091*

* * * * *